# ಇಸ್ಲಾಮ್ ಧರ್ಮದ

# ಸಂಕ್ಷಿಪ್ತ ಪರಿಚಯ

## ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಲ್ಲಿರುವಂತೆ

ಇದು ಇಸ್ಲಾಮ್ ಧರ್ಮದ ಸಂಕ್ಷಿಪ್ತ ಪರಿಚಯವನ್ನು ಹೊಂದಿರುವ ಪ್ರಮುಖ ಪುಸ್ತಕವಾಗಿದೆ. ಇದು ಇಸ್ಲಾಮ್ ಧರ್ಮದ ಪ್ರಮುಖ ಮೂಲಾಧಾರಗಳು, ಬೋಧನೆಗಳು ಮತ್ತು ಸದ್ಗುಣಗಳನ್ನು ಅದರ ಮೂಲ ಆಧಾರ ಗ್ರಂಥಗಳಾದ ಪವಿತ್ರ ಕುರ್‌ಆನ್ ಮತ್ತು ಸುನ್ನತ್ (ಪ್ರವಾದಿಚರ್ಯೆ) ನಿಂದ ವಿವರಿಸುತ್ತದೆ. ಧರ್ಮವನ್ನು ಅನುಸರಿಸಿ ಜೀವಿಸಲು ಬದ್ಧರಾಗಿರುವ ಎಲ್ಲಾ ಮುಸ್ಲಿಮರು ಮತ್ತು ಮುಸ್ಲಿಮೇತರರಿಗೆ ಅವರದ್ದೇ ಭಾಷೆಯಲ್ಲಿ ವಿಭಿನ್ನ ಸಂದರ್ಭ ಹಾಗೂ ಸನ್ನಿವೇಶಗಳಿಗೆ ಅನುಗುಣವಾಗಿ ಎಲ್ಲಾ ಕಾಲ ಮತ್ತು ಸ್ಥಳಗಳಲ್ಲಿ ಈ ಪುಸ್ತಕವನ್ನು ನೀಡಲಾಗುತ್ತಿದೆ.

(ಪವಿತ್ರ ಕುರ್‌ಆನ್ ಮತ್ತು ಪ್ರವಾದಿಯವರ ಸುನ್ನತ್ ನಿಂದ ಪುರಾವೆಗಳನ್ನು ಒಳಗೊಂಡಿರುವ ಪ್ರತಿ)

شركاء التنفيذ:

دار الإسلام
جمعية الربوة
رواد الترجمة
المحتوى الإسلامي

يتاح طباعة هذا الإصدار ونشره بأي وسيلة مع الالتزام بالإشارة إلى المصدر وعدم التغيير في النص.

Telephone: +966114454900
ceo@rabwah.sa
P.O.BOX: 29465
RIYADH: 11557
www.islamhouse.com

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

## 1. ಇಸ್ಲಾಮ್ ಧರ್ಮವು ಮಾನವಕುಲಕ್ಕಿರುವ ಅಲ್ಲಾಹನ ಸಂದೇಶವಾಗಿದೆ. ಅದು ಶಾಶ್ವತವಾದ ದೈವಿಕ ಸಂದೇಶವಾಗಿದ್ದು ದೈವಿಕ ಸಂದೇಶಗಳಲ್ಲೇ ಕೊನೆಯದ್ದಾಗಿದೆ:

ಇಸ್ಲಾಮ್ ಧರ್ಮವು ಮಾನವಕುಲಕ್ಕಿರುವ ಅಲ್ಲಾಹನ ಸಂದೇಶವಾಗಿದೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನಾವು ತಮ್ಮನ್ನು ಸಂಪೂರ್ಣ ಮನುಷ್ಯರೆಡೆಗೆ ಶುಭವಾರ್ತೆ ತಿಳಿಸುವವರಾಗಿ ಮತ್ತು ಮುನ್ನೆಚ್ಚರಿಕೆ ನೀಡುವವರಾಗಿಯೇ ಕಳುಹಿಸಿರುವೆವು. ಆದರೆ ಜನರ ಪೈಕಿ ಹೆಚ್ಚಿನವರೂ ಅರಿಯುವುದಿಲ್ಲ." [ಸಬಅ್:28]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಹೇಳಿರಿ: ಓ ಮನುಷ್ಯರೇ! ಖಂಡಿತವಾಗಿಯೂ ನಾನು ನಿಮ್ಮೆಲ್ಲರೆಡೆಗೆ (ಕಳುಹಿಸಲಾಗಿರುವ) ಅಲ್ಲಾಹನ ಸಂದೇಶವಾಹಕನಾಗಿರುವೆನು." [ಅಲ್-ಅಅ್‌ರಾಫ್:158]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಜನರೇ! ನಿಮ್ಮ ಪ್ರಭುವಿನ ವತಿಯಿಂದ ಸತ್ಯದೊಂದಿಗೆ ಸಂದೇಶವಾಹಕರು ನಿಮ್ಮ ಬಳಿಗೆ ಬಂದಿರುವರು. ಆದ್ದರಿಂದ ವಿಶ್ವಾಸವಿಡಿರಿ ಅದು ನಿಮಗೆ ಒಳಿತಾಗಿದೆ. ನೀವು ನಿಷೇಧಿಸುವುದಾದರೆ ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅಲ್ಲಾಹನದ್ದಾಗಿವೆ. ಅಲ್ಲಾಹು ಎಲ್ಲವನ್ನು ಅರಿಯುವವನೂ ಯುಕ್ತಿಪೂರ್ಣನೂ ಆಗಿರುವನು." [ಅನ್ನಿಸಾ:170]

ಇಸ್ಲಾಮ್ ಧರ್ಮವು ಶಾಶ್ವತವಾದ ದೈವಿಕ ಸಂದೇಶವಾಗಿದೆ. ಅದು ದೈವಿಕ ಸಂದೇಶಗಳಲ್ಲೇ ಕೊನೆಯದ್ದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಮುಹಮ್ಮದ್ ರು ನಿಮ್ಮ ಪುರುಷರ ಪೈಕಿ ಯಾರ ತಂದೆಯೂ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳ

ಪೈಕಿ ಕಟ್ಟಕಡೆಯವರಾಗಿರುವರು. ಅಲ್ಲಾಹು ಎಲ್ಲಾ ವಿಷಯಗಳ ಬಗ್ಗೆ ಅರಿವುಳ್ಳವನಾಗಿರುವನು." [ಅಲ್-ಅಹ್‌ಝಾಬ್:40]

## 2. ಇಸ್ಲಾಮ್ ಧರ್ಮವು ಯಾವುದೇ ಒಂದು ಕುಲಕ್ಕೆ ಅಥವಾ ಜನತೆಗೆ ಸೀಮಿತವಾದ ಧರ್ಮವಲ್ಲ. ಬದಲಾಗಿ ಅದು ಸರ್ವ ಜನರಿಗಿರುವ ಅಲ್ಲಾಹನ ಧರ್ಮವಾಗಿದೆ:

ಇಸ್ಲಾಮ್ ಧರ್ಮವು ಯಾವುದೇ ಒಂದು ಕುಲಕ್ಕೆ ಅಥವಾ ಜನತೆಗೆ ಸೀಮಿತವಾದ ಧರ್ಮವಲ್ಲ. ಬದಲಾಗಿ ಅದು ಸರ್ವ ಜನರಿಗಿರುವ ಅಲ್ಲಾಹನ ಧರ್ಮವಾಗಿದೆ. ಪವಿತ್ರ ಕುರ್‌ಆನಿನಲ್ಲಿರುವ ಮೊಟ್ಟಮೊದಲ ಆದೇಶವು ಅಲ್ಲಾಹನ ಈ ವಚನವಾಗಿದೆ: "ಓ ಮನುಷ್ಯರೇ! ನೀವು ನಿಮ್ಮನ್ನು ಮತ್ತು ನಿಮ್ಮ ಪೂರ್ವಿಕರನ್ನು ಸೃಷ್ಟಿಸಿದ ನಿಮ್ಮ ಪ್ರಭುವನ್ನು ಆರಾಧಿಸಿರಿ. ಪ್ರಾಯಶಃ ನೀವು ಭಯಭಕ್ತಿ ಪಾಲಿಸುವವರಾಗಬಹುದು." [ಅಲ್-ಬಖರ:21]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಮನುಷ್ಯರೇ! ನಿಮ್ಮನ್ನು ಒಂದೇ ಶರೀರದಿಂದ ಸೃಷ್ಟಿಸಿರುವ ಮತ್ತು ಅದರಿಂದಲೇ ಅದರ ಸಂಗಾತಿಯನ್ನು ಸೃಷ್ಟಿಸಿರುವ ಹಾಗೂ ಅವರಿಬ್ಬರಿಂದಲೇ ಅನೇಕ ಪುರುಷರನ್ನೂ ಸ್ತ್ರೀಯರನ್ನೂ ಹಬ್ಬಿಸಿರುವ ನಿಮ್ಮ ಪ್ರಭುವನ್ನು ಭಯಪಡಿರಿ." [ಅನ್ನಿಸಾ:1]

ಇಬ್ನು ಉಮರ್ رضي الله عنهما ರಿಂದ ವರದಿ. ಪ್ರವಾದಿ صلى الله عليه وسلم ರವರು ಮಕ್ಕಾ ವಿಜಯದ ದಿನ ಜನರನ್ನುದ್ದೇಶಿಸಿ ಪ್ರವಚನ ಮಾಡುತ್ತಾ ಹೇಳಿದರು: **ಓ ಜನರೇ, ಖಂಡಿತವಾಗಿಯೂ ಅಲ್ಲಾಹನು ನಿಮ್ಮಿಂದ ಜಾಹಿಲಿಯ್ಯಾ ಕಾಲದ (ಇಸ್ಲಾಮೀ ಪೂರ್ವ ಕಾಲದ) ಅಹಂಭಾವವನ್ನು ಮತ್ತು ಪೂರ್ವಜರ ಹೆಸರಲ್ಲಿ ಜಂಭ ಕೊಚ್ಚುವುದರಿಂದ ತಡೆದಿದ್ದಾನೆ. ಜನರಲ್ಲಿರುವುದು ಎರಡೇ ವಿಧಗಳು: (1) ಧರ್ಮನಿಷ್ಠರು ಮತ್ತು ಸತ್ಕರ್ಮಿಗಳಾಗಿದ್ದು ಅಲ್ಲಾಹನ ದೃಷ್ಟಿಯಲ್ಲಿ ಗೌರವಾನ್ವಿತರಾಗಿರುವವರು ಮತ್ತು (2) ದುಷ್ಟರು ಹಾಗೂ ನತದೃಷ್ಟರಾಗಿದ್ದು**

**ಅಲ್ಲಾಹನ ದೃಷ್ಟಿಯಲ್ಲಿ ನಿಕೃಷ್ಟರಾಗಿರುವವರು. ಮನುಷ್ಯರೆಲ್ಲರೂ ಆದಮ್(عليه السلام)ರ ಮಕ್ಕಳು. ಅಲ್ಲಾಹನು ಆದಮರನ್ನು ಮಣ್ಣಿನಿಂದ ಸೃಷ್ಟಿಸಿದನು.**

**ಅಲ್ಲಾಹನು ಹೇಳುತ್ತಾನೆ: "ಓ ಮನುಷ್ಯರೇ! ಖಂಡಿತವಾಗಿಯೂ ನಾವು ನಿಮ್ಮನ್ನು ಒಂದು ಗಂಡು ಮತ್ತು ಒಂದು ಹೆಣ್ಣಿನಿಂದ ಸೃಷ್ಟಿಸಿರುವೆವು. ನೀವು ಪರಸ್ಪರ ಗುರುತಿಸುವುದಕ್ಕಾಗಿ ನಾವು ನಿಮ್ಮನ್ನು ವಿವಿಧ ಸಮುದಾಯ ಮತ್ತು ಜನಾಂಗಗಳನ್ನಾಗಿ ಮಾಡಿರುವೆವು. ಖಂಡಿತವಾಗಿಯೂ ಅಲ್ಲಾಹನ ಬಳಿ ನಿಮ್ಮ ಪೈಕಿ ಅತ್ಯಂತ ಗೌರವಾನ್ವಿತನು ನಿಮ್ಮ ಪೈಕಿ ಅತಿಹೆಚ್ಚು ಭಯಭಕ್ತಿ ಪಾಲಿಸುವವನಾಗಿರುವನು. ಖಂಡಿತವಾಗಿಯೂ ಅಲ್ಲಾಹು ಸರ್ವಜ್ಞನೂ ಸೂಕ್ಷ್ಮ ಜ್ಞಾನಿಯೂ ಆಗಿರುವನು."** [ಅಲ್-ಹುಜುರಾತ್:13] ಈ ಹದೀಸನ್ನು ಇಮಾಮ್ ತಿರ್ಮಿದಿ ವರದಿ ಮಾಡಿದ್ದಾರೆ (3270).

ನೀವು ಪವಿತ್ರ ಕುರ್‌ಆನಿನ ಆಜ್ಞೆಗಳಲ್ಲಿ ಅಥವಾ ಪ್ರವಾದಿ صلى الله عليه وسلم ರವರ ಆಜ್ಞೆಗಳಲ್ಲಿ, ಒಂದು ನಿರ್ದಿಷ್ಟ ಜನತೆ ಅಥವಾ ಪಂಗಡದ ವರ್ಣ, ದೇಶ ಅಥವಾ ಕುಲವನ್ನು ಪರಿಗಣಿಸುವಂತಹ ಒಂದು ಶಾಸನವನ್ನು ಕಾಣಲಾರಿರಿ.

## 3. ಇಸ್ಲಾಮ್ ಧರ್ಮವು ಗತ ಪ್ರವಾದಿಗಳು ಮತ್ತು ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಶಾಂತಿ ಇರಲಿ) ತಮ್ಮ ಸಮುದಾಯಗಳಿಗೆ ಬೋಧಿಸಿದ ಸಂದೇಶಗಳನ್ನು ಪೂರ್ತಿಗೊಳಿಸುವುದಕ್ಕಾಗಿ ಬಂದ ದೈವಿಕ ಸಂದೇಶವಾಗಿದೆ.

ಇಸ್ಲಾಮ್ ಧರ್ಮವು ಗತ ಪ್ರವಾದಿಗಳು ಮತ್ತು ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಶಾಂತಿ ಇರಲಿ) ತಮ್ಮ ಸಮುದಾಯಗಳಿಗೆ ಬೋಧಿಸಿದ ಸಂದೇಶಗಳನ್ನು ಪೂರ್ತಿಗೊಳಿಸುವುದಕ್ಕಾಗಿ ಬಂದ ದೈವಿಕ ಸಂದೇಶವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "(ಓ ಪ್ರವಾದಿಯವರೇ!) ನೂಹ್ ಮತ್ತು ಅವರ ನಂತರದ ಪ್ರವಾದಿಗಳಿಗೆ ನಾವು ದಿವ್ಯಸಂದೇಶ ನೀಡಿರುವಂತೆ ತಮಗೂ ನಾವು ದಿವ್ಯಸಂದೇಶ ನೀಡಿರುವೆವು. ಇಬ್ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಸಂತತಿಗಳಿಗೆ, ಈಸಾ, ಅಯ್ಯೂಬ್, ಯೂನುಸ್, ಹಾರೂನ್, ಸುಲೈಮಾನ್ ಮುಂತಾದವರಿಗೂ ನಾವು ದಿವ್ಯಸಂದೇಶ ನೀಡಿರುವೆವು. ದಾವೂದರಿಗೆ ನಾವು ಝಬೂರನ್ನು ನೀಡಿರುವೆವು." [ಅನ್ನಿಸಾ:163]

ಅಲ್ಲಾಹನು ಪ್ರವಾದಿ ಮುಹಮ್ಮದ್ صلى الله عليه وسلم ರವರಿಗೆ ದಿವ್ಯಸಂದೇಶವಾಗಿ ನೀಡಿದ ಈ ಧರ್ಮವು, ಗತ ಸಂದೇಶವಾಹಕರಿಗೆ ಧರ್ಮ ನಿಯಮವನ್ನಾಗಿ ಮಾಡಿದ ಮತ್ತು ಅವರಿಗೆ ಆದೇಶಿಸಿದ ಅದೇ ಧರ್ಮವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನೂಹ್‌ರಿಗೆ ಆದೇಶಿಸಿರುವುದನ್ನು, ತಮಗೆ ದಿವ್ಯ ಸಂದೇಶವಾಗಿ ನೀಡಿರುವುದನ್ನು, ಇಬ್ರಾಹೀಮ್, ಮೂಸಾ, ಈಸಾ ಮುಂತಾದವರಿಗೆ ನಾವು ಆದೇಶಿಸಿರುವುದನ್ನು -ಅಂದರೆ ನೀವು ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಅದರಲ್ಲಿ ಭಿನ್ನರಾಗದಿರಿ ಎಂಬ ವಿಷಯವನ್ನು- ಅವನು ನಿಮಗೆ ಧರ್ಮನಿಯಮವಾಗಿ ನಿರ್ದೇಶಿಸಿರುವನು. ನೀವು ಆ ಬಹುದೇವವಿಶ್ವಾಸಿಗಳನ್ನು ಯಾವುದರೆಡೆಗೆ ಆಹ್ವಾನಿಸುತ್ತಿರುವಿರೋ ಅದು ಅವರಿಗೆ ಅತಿಭಾರವಾಗಿ ಕಾಣುತ್ತಿದೆ. ಅಲ್ಲಾಹು ಅವನಿಚ್ಛಿಸುವವರನ್ನು ಅವನ ಬಳಿಗೆ ಆರಿಸಿಕೊಳ್ಳುವನು. ವಿನಮ್ರತೆಯೊಂದಿಗೆ ಮರಳುವವರನ್ನು ಅವನು ತನ್ನೆಡೆಗಿರುವ ಮಾರ್ಗದಲ್ಲಿ ಮುನ್ನಡೆಸುವನು." [ಅಶ್ಶೂರಾ:13]

ಅಲ್ಲಾಹನ ಪ್ರವಾದಿ ಮುಹಮ್ಮದ್ صلى الله عليه وسلم ರವರಿಗೆ ನೀಡಿದ ಈ ದಿವ್ಯಸಂದೇಶಗಳು, ತಿರುಚುವಿಕೆಗೆ ಒಳಗಾಗುವುದಕ್ಕೆ ಮುಂಚಿನ ಸ್ಥಿತಿಯಲ್ಲಿದ್ದ ತೌರಾತ್ ಮತ್ತು ಇಂಜೀಲ್‌ಗಳಂತಹ ಪೂರ್ವ ದೈವಿಕ ಗ್ರಂಥಗಳನ್ನು ದೃಢೀಕರಿಸುತ್ತವೆ. "ನಾವು ತಮಗೆ ದಿವ್ಯಸಂದೇಶವಾಗಿ ನೀಡಿರುವ ಗ್ರಂಥವು ಸತ್ಯವೇ ಆಗಿದೆ. ಅದರ ಮುಂಚಿನ (ಗ್ರಂಥಗಳನ್ನು)

ಅದು ದೃಢೀಕರಿಸುತ್ತದೆ. ಖಂಡಿತವಾಗಿಯೂ ಅಲ್ಲಾಹು ತನ್ನ ದಾಸರ ಬಗ್ಗೆ ಸೂಕ್ಷ್ಮವಾಗಿ ಅರಿಯುವವನೂ, ವೀಕ್ಷಿಸುವವನೂ ಆಗಿರುವನು." [ಫಾತಿರ್:31]

## 4. ಎಲ್ಲಾ ಸಂದೇಶವಾಹಕರ ಧರ್ಮವು ಒಂದೇ ಆಗಿದೆ. ಆದರೆ ಅವರ ಧಾರ್ಮಿಕ ಶಾಸನಗಳು ವಿಭಿನ್ನವಾಗಿವೆ:

ಎಲ್ಲಾ ಸಂದೇಶವಾಹಕರ ಧರ್ಮವು ಒಂದೇ ಆಗಿದೆ. ಆದರೆ ಅವರ ಧಾರ್ಮಿಕ ಶಾಸನಗಳು ವಿಭಿನ್ನವಾಗಿವೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "(ಓ ಪ್ರವಾದಿಯವರೇ!) ತಮಗೆ ನಾವು ಗ್ರಂಥವನ್ನು ಸತ್ಯದೊಂದಿಗೆ ಅವತೀರ್ಣಗೊಳಿಸಿರುವೆವು. ಅದು ತನ್ನ ಮುಂದಿರುವ ಗ್ರಂಥಗಳನ್ನು ದೃಢೀಕರಿಸುತ್ತದೆ ಮತ್ತು ಅವುಗಳನ್ನು ಸಂರಕ್ಷಿಸುತ್ತದೆ. ಆದ್ದರಿಂದ ಅಲ್ಲಾಹು ಅವತೀರ್ಣಗೊಳಿಸಿರುವುದಕ್ಕೆ ಅನುಗುಣವಾಗಿ ತಾವು ಅವರ ಮಧ್ಯೆ ತೀರ್ಪು ನೀಡಿರಿ. ತಮಗೆ ತಲುಪಿದ ಸತ್ಯವನ್ನು ತೊರೆದು ತಾವು ಅವರ ದೇಹೇಚ್ಛೆಗಳನ್ನು ಅನುಸರಿಸದಿರಿ. ನಿಮ್ಮಲ್ಲಿ ಪ್ರತಿಯೊಂದು ಸಮುದಾಯಕ್ಕೂ ನಾವು ಒಂದೊಂದು ನಿಯಮಸಂಹಿತೆ ಮತ್ತು ಕರ್ಮಮಾರ್ಗವನ್ನು ಮಾಡಿಕೊಟ್ಟಿರುವೆವು. ಅಲ್ಲಾಹು ಇಚ್ಛಿಸಿದ್ದರೆ ಅವನು ನಿಮ್ಮನ್ನು ಒಂದೇ ಸಮುದಾಯವನ್ನಾಗಿ ಮಾಡುತ್ತಿದ್ದನು. ಆದರೆ ಅವನು ನಿಮಗೆ ದಯಪಾಲಿಸಿರುವುದರಲ್ಲಿ ನಿಮ್ಮನ್ನು ಪರೀಕ್ಷಿಸಲು (ಇಚ್ಛಿಸುವನು). ಆದ್ದರಿಂದ ನೀವು ಸತ್ಕರ್ಮಗಳೆಡೆಗೆ ಸ್ಪರ್ಧಿಸಿ ಧಾವಿಸಿರಿ. ನಿಮ್ಮೆಲ್ಲರ ಮರಳುವಿಕೆಯು ಅಲ್ಲಾಹನ ಬಳಿಗೇ ಆಗಿದೆ. ಆಗ ಅವನು ನಿಮಗೆ ನೀವು ಭಿನ್ನರಾಗಿರುವ ವಿಷಯಗಳ ಬಗ್ಗೆ ತಿಳಿಸಿಕೊಡುವನು." [ಅಲ್-ಮಾಇದ:48]

ಪ್ರವಾದಿ صلى الله عليه وسلم ರವರು ಹೇಳಿದರು: "ಇಹಲೋಕದಲ್ಲೂ ಪರಲೋಕದಲ್ಲೂ ಮರ್ಯಮರ ಪುತ್ರ ಈಸಾರಿಗೆ ಇತರೆಲ್ಲಾ ಜನರಿಗಿಂತ ಹೆಚ್ಚು ನಿಕಟನಾಗಿರುವವನು ನಾನು. ಪ್ರವಾದಿಗಳೆಲ್ಲರು ಪಿತೃ ಸಂಬಂಧದ ಸಹೋದರರು. ಅವರ ತಾಯಂದಿರು ಬೇರೆ ಬೇರೆ.

**ಅವರೆಲ್ಲರ ಧರ್ಮವು ಒಂದೇ."** ಈ ಹದೀಸನ್ನು ಇಮಾಮ್ ಬುಖಾರಿ ವರದಿ ಮಾಡಿದ್ದಾರೆ (3443).

## 5. ನೂಹ್,ಇಬ್ರಾಹೀಮ್,ಮೂಸಾ, ಸುಲೈಮಾನ್, ದಾವೂದ್, ಈಸಾ عليهم السلام ಮುಂತಾದ ಸಂದೇಶವಾಹಕರೆಲ್ಲರೂ ಆಮಂತ್ರಿಸಿದಂತೆ ಇಸ್ಲಾಮ್ ಧರ್ಮವು ಕೂಡ, ಸರ್ವಲೋಕಗಳ ಪರಿಪಾಲಕನು ಅಲ್ಲಾಹನು ಮಾತ್ರ, ಅವನೇ ಸೃಷ್ಟಿಕರ್ತನು, ಅನ್ನದಾತನು, ಜೀವ ನೀಡುವವನು, ಮರಣ ನೀಡುವವನು, ಆಧಿಪತ್ಯದ ಒಡೆಯನು ಮತ್ತು ಅವನೇ ಕಾರ್ಯಗಳನ್ನು ನಿಯಂತ್ರಿಸುವವನು, ಮತ್ತು ಅವನೇ ಅಪಾರ ದಯೆಯುಳ್ಳವನು, ಅತ್ಯಧಿಕ ಕರುಣೆ ತೋರುವವನು ಎಂಬ ವಿಶ್ವಾಸದೆಡೆಗೆ ಆಮಂತ್ರಿಸುತ್ತದೆ.

ನೂಹ್,ಇಬ್ರಾಹೀಮ್,ಮೂಸಾ, ಸುಲೈಮಾನ್, ದಾವೂದ್, ಈಸಾ عليهم السلام ಮುಂತಾದ ಸಂದೇಶವಾಹಕರೆಲ್ಲರೂ ಆಮಂತ್ರಿಸಿದಂತೆ ಇಸ್ಲಾಮ್ ಧರ್ಮವು ಕೂಡ, ಸರ್ವಲೋಕಗಳ ಪರಿಪಾಲಕನು ಅಲ್ಲಾಹನು ಮಾತ್ರ, ಅವನೇ ಸೃಷ್ಟಿಕರ್ತನು, ಅನ್ನದಾತನು, ಜೀವ ನೀಡುವವನು, ಮರಣ ನೀಡುವವನು, ಆಧಿಪತ್ಯದ ಒಡೆಯನು ಮತ್ತು ಅವನೇ ಕಾರ್ಯಗಳನ್ನು ನಿಯಂತ್ರಿಸುವವನು, ಮತ್ತು ಅವನೇ ಅಪಾರ  ದಯೆಯುಳ್ಳವನು, ಅತ್ಯಧಿಕ ಕರುಣೆ ತೋರುವವನು ಎಂಬ ವಿಶ್ವಾಸದೆಡೆಗೆ ಆಮಂತ್ರಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಜನರೇ! ಅಲ್ಲಾಹು ನಿಮಗೆ ದಯಪಾಲಿಸಿರುವ ಅವನ ಅನುಗ್ರಹವನ್ನು ಸ್ಮರಿಸಿರಿ. ಆಕಾಶದಿಂದಲೂ ಭೂಮಿಯಿಂದಲೂ ನಿಮಗೆ ಅನ್ನಾಧಾರವನ್ನು ಒದಗಿಸುವ ಅಲ್ಲಾಹನ ಹೊರತಾದ ಬೇರೆ ಸೃಷ್ಟಿಕರ್ತನಿರುವನೇ?**

**ಅವನ ಹೊರತು ಅನ್ಯ ಆರಾಧ್ಯರಿಲ್ಲ. ಆದರೂ ನೀವು ತಪ್ಪಿಸಲ್ಪಡುತ್ತಿರುವುದು ಹೇಗೆ?"** [ಫಾತಿರ್:3]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೇಳಿರಿ: ಆಕಾಶದಿಂದ ಮತ್ತು ಭೂಮಿಯಿಂದ ನಿಮಗೆ ಅನ್ನಾಧಾರವನ್ನು ಒದಗಿಸುವವನು ಯಾರು? ಶ್ರವಣವನ್ನೂ ದೃಷ್ಟಿಯನ್ನೂ ಅಧೀನದಲ್ಲಿರಿಸಿದವನು ಯಾರು? ನಿರ್ಜೀವಿಯಿಂದ ಜೀವಿಯನ್ನು ಮತ್ತು ಜೀವಿಯಿಂದ ನಿರ್ಜೀವಿಯನ್ನು ಹೊರತರುವವನು ಯಾರು? ಕಾರ್ಯನಿಯಂತ್ರಣ ಮಾಡುವವನು ಯಾರು? ಅವರು ಹೇಳುವರು: 'ಅಲ್ಲಾಹು' ಹೇಳಿರಿ: ಆದರೂ ನೀವು ಭಯಭಕ್ತಿ ಪಾಲಿಸಲಾರಿರೇ?"** [ಯೂನುಸ್:31]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಥವಾ, ಸೃಷ್ಟಿಯನ್ನು ಆರಂಭಿಸಿ ತರುವಾಯ ಅದನ್ನು ಪುನರಾವರ್ತಿಸುವವನು ಮತ್ತು ಆಕಾಶದಿಂದ ಹಾಗೂ ಭೂಮಿಯಿಂದ ನಿಮಗೆ ಅನ್ನಾಧಾರಗಳನ್ನು ಒದಗಿಸುವವನು (ಉತ್ತಮನೋ?) (ಅಥವಾ ಅವರ ಆರಾಧ್ಯರೋ?) ಅಲ್ಲಾಹನೊಂದಿಗೆ ಅನ್ಯ ಆರಾಧ್ಯರಿರುವರೇ? (ಓ ಪ್ರವಾದಿಯವರೇ!) ಹೇಳಿರಿ: ನೀವು ಸತ್ಯವಂತರಾಗಿದ್ದರೆ ನಿಮ್ಮಲ್ಲಿರುವ ಪುರಾವೆಯನ್ನು ತನ್ನಿರಿ."** [ಅನ್ನಮ್ಲ್:64]

ಏಕೈಕನಾದ ಅಲ್ಲಾಹನನ್ನು ಮಾತ್ರ ಆರಾಧಿಸಬೇಕು ಎಂಬುದರ ಕಡೆಗೆ (ಜನರನ್ನು) ಆಮಂತ್ರಿಸುವುದಕ್ಕಾಗಿ ಎಲ್ಲಾ ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಕಳುಹಿಸಲಾಗಿತ್ತು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ತಾಗೂತನ್ನು ವರ್ಜಿಸಿರಿ (ಎಂದು ಬೋಧಿಸುವ ಸಲುವಾಗಿ) ಖಂಡಿತವಾಗಿಯೂ ನಾವು ಪ್ರತಿಯೊಂದು ಸಮುದಾಯಕ್ಕೂ ಸಂದೇಶವಾಹಕರನ್ನು ಕಳುಹಿಸಿರುವೆವು. ತರುವಾಯ ಅವರಲ್ಲಿ ಕೆಲವರನ್ನು ಅಲ್ಲಾಹು ಸನ್ಮಾರ್ಗದಲ್ಲಿ ಸೇರಿಸಿದನು. ಅವರಲ್ಲಿ ಕೆಲವರ ಮೇಲೆ ಪಥಭ್ರಷ್ಟತೆಯು ಸ್ಥಿರವಾಯಿತು. ಆದ್ದರಿಂದ ನೀವು ಭೂಮಿಯಲ್ಲಿ ಸಂಚರಿಸಿರಿ ಮತ್ತು ಸತ್ಯನಿಷೇಧಿಗಳ ಪರ್ಯಾವಸಾನವು ಹೇಗಿತ್ತೆಂಬುದನ್ನು ನೋಡಿರಿ."** [ಅನ್ನಹ್ಲ್:36]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನನ್ನ ಹೊರತು ಅನ್ಯ ಆರಾಧ್ಯರಿಲ್ಲ. ಆದ್ದರಿಂದ ನನ್ನನ್ನು ಆರಾಧಿಸಿರಿ ಎಂಬ ದಿವ್ಯಸಂದೇಶವನ್ನು ನೀಡಿಯೇ ಹೊರತು ತಮಗಿಂತ ಮುಂಚೆ ಯಾವುದೇ ಸಂದೇಶವಾಹಕರನ್ನೂ ನಾವು ಕಳುಹಿಸಿಲ್ಲ."** [ಅಲ್-ಅಂಬಿಯಾ:25]

ನೂಹ್‌ರ ಮಾತನ್ನು ಉಲ್ಲೇಖಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಓ ನನ್ನ ಜನರೇ! ನೀವು ಅಲ್ಲಾಹನನ್ನು ಆರಾಧಿಸಿರಿ. ಅವನ ಹೊರತು ನಿಮಗೆ ಅನ್ಯ ಆರಾಧ್ಯರಿಲ್ಲ. ಭಯಾನಕವಾದ ದಿನವೊಂದರ ಶಿಕ್ಷೆಯನ್ನು ಖಂಡಿತವಾಗಿಯೂ ನಾನು ನಿಮ್ಮ ಮೇಲೆ ಭಯಪಡುತ್ತಿರುವೆನು."** [ಅಲ್-ಅಲ್‌ರಾಫ್:59]

ಖಲೀಲುಲ್ಲಾಹಿ ಇಬ್ರಾಹೀಮ್ عليه السلام ರ ಮಾತನ್ನು ಉಲ್ಲೇಖಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಇಬ್ರಾಹೀಮ್‌ರನ್ನು ಸಹ (ನಾವು ಕಳುಹಿಸಿದೆವು). ಅವರು ತಮ್ಮ ಜನರೊಂದಿಗೆ ಹೇಳಿದ ಸಂದರ್ಭ: ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ಅವನನ್ನು ಭಯಪಡಿರಿ. ನೀವು ಅರಿತವರಾಗಿದ್ದರೆ ಅದು ನಿಮಗೆ ಉತ್ತಮವಾಗಿದೆ."** [ಅಲ್-ಅನ್ಕಬೂತ್:16]

ಸ್ವಾಲಿಹ್ عليه السلام ರ ಮಾತನ್ನು ಉಲ್ಲೇಖಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಅವರು ಹೇಳಿದರು: ಓ ನನ್ನ ಜನರೇ! ನೀವು ಅಲ್ಲಾಹನನ್ನು ಆರಾಧಿಸಿರಿ. ಅವನ ಹೊರತು ನಿಮಗೆ ಅನ್ಯ ಆರಾಧ್ಯರಿಲ್ಲ. ನಿಮ್ಮ ಪ್ರಭುವಿನ ವತಿಯಿಂದ ನಿಮ್ಮೆಡೆಗೆ ಸ್ಪಷ್ಟವಾದ ಒಂದು ಪುರಾವೆಯು ಬಂದಿದೆ. ಇದು ನಿಮಗೆ ದೃಷ್ಟಾಂತವಾಗಿರುವ ಅಲ್ಲಾಹನ ಒಂಟೆಯಾಗಿದೆ. ಆದ್ದರಿಂದ ಅದನ್ನು ಬಿಟ್ಟುಬಿಡಿರಿ. ಅದು ಅಲ್ಲಾಹನ ಭೂಮಿಯಲ್ಲಿ (ಮೇಯ್ದು) ತಿನ್ನಲಿ. ಅದಕ್ಕೆ ಯಾವುದೇ ಹಾನಿಯನ್ನೂ ಮಾಡದಿರಿ. ಹಾಗೇನಾದರೂ ಮಾಡಿದರೆ ಯಾತನಾಮಯ ಶಿಕ್ಷೆಯು ನಿಮ್ಮನ್ನು ಹಿಡಿದುಕೊಳ್ಳುವುದು."** [ಅಲ್-ಅಲ್‌ರಾಫ್-:73]

ಶುಐಬ್ عليه السلام ರ ಮಾತನ್ನು ಉಲ್ಲೇಖಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಮದ್ಯನ್ ಜನಾಂಗದೆಡೆಗೆ ಅವರ ಸಹೋದರ ಶುಐಬ್‌ರನ್ನು (ನಾವು ಕಳುಹಿಸಿದೆವು). ಅವರು ಹೇಳಿದರು: 'ಓ ನನ್ನ ಜನರೇ! ನೀವು ಅಲ್ಲಾಹನನ್ನು ಆರಾಧಿಸಿರಿ. ನಿಮಗೆ ಅವನ ಹೊರತು ಅನ್ಯ ಆರಾಧ್ಯರಿಲ್ಲ. ಖಂಡಿತವಾಗಿಯೂ ನಿಮ್ಮ ಪ್ರಭುವಿನ ವತಿಯಿಂದ ಸ್ಪಷ್ಟವಾದ ಪುರಾವೆಯು**

ನಿಮ್ಮೆಡೆಗೆ ಬಂದಿದೆ. ಆದ್ದರಿಂದ ನೀವು ಅಳತೆ ಮತ್ತು ತೂಕವನ್ನು ಪೂರ್ತಿಯಾಗಿ ಕೊಡಿರಿ. ಜನರಿಗೆ ಅವರ ಸಾಮಗ್ರಿಗಳನ್ನು ಕಡಿಮೆಗೊಳಿಸದಿರಿ. ಭೂಮಿಯಲ್ಲಿ ಸುಧಾರಣೆಯನ್ನುಂಟುಮಾಡಿದ ಬಳಿಕ ಅಲ್ಲಿ ವಿನಾಶವನ್ನುಂಟುಮಾಡದಿರಿ. ನೀವು ವಿಶ್ವಾಸಿಗಳಾಗಿದ್ದರೆ ಅದು ನಿಮಗೆ ಉತ್ತಮವಾಗಿದೆ." [ಅಲ್-ಅಅ್‌ರಾಫ್:85]

ಅಲ್ಲಾಹು ಮೊಟ್ಟಮೊದಲು (ನೇರವಾಗಿ) ಸಂಭಾಷಣೆ ಮಾಡಿದ ಮೂಸಾ عليه السلام ರೊಡನೆ ಅಲ್ಲಾಹನು ಹೇಳುತ್ತಾನೆ: "ನಾನು ತಮ್ಮನ್ನು ಆರಿಸಿರುವೆನು. ಆದ್ದರಿಂದ ದಿವ್ಯಸಂದೇಶ ನೀಡಲಾಗುವುದನ್ನು ತಾವು ಕಿವಿಗೊಟ್ಟು ಆಲಿಸಿರಿ.(13) ಖಂಡಿತವಾಗಿಯೂ ಅಲ್ಲಾಹು ನಾನೇ ಆಗಿರುವೆನು. ನನ್ನ ಹೊರತು ಅನ್ಯ ಆರಾಧ್ಯರಿಲ್ಲ. ಆದ್ದರಿಂದ ತಾವು ನನ್ನನ್ನು ಆರಾಧಿಸಿರಿ ಮತ್ತು ನನ್ನನ್ನು ಸ್ಮರಿಸುವುದಕ್ಕಾಗಿ ನಮಾಝನ್ನು ಸಂಸ್ಥಾಪಿಸಿರಿ.(14)" [ತ್ವಾಹಾ:13-14]

ಅಲ್ಲಾಹನು ಮೂಸಾ عليه السلام ರ ಕುರಿತು ತಿಳಿಸುತ್ತಾ ಅವರು ಅಲ್ಲಾಹನಲ್ಲಿ ಅಭಯ ಯಾಚಿಸುತ್ತಾ ಹೀಗೆ ಹೇಳಿದರು ಎನ್ನುತ್ತಾನೆ: "ವಿಚಾರಣಾ ದಿನದಲ್ಲಿ ವಿಶ್ವಾಸವಿಡದ ಸರ್ವ ಅಹಂಕಾರಿಗಳಿಂದಲೂ ನನ್ನ ಪ್ರಭು ಮತ್ತು ನಿಮ್ಮ ಪ್ರಭುವೂ ಆಗಿರುವವನೊಂದಿಗೆ ನಾನು ಅಭಯವನ್ನು ಯಾಚಿಸುತ್ತಿರುವೆನು." [ಗಾಫಿರ್:27]

ಅಲ್ಲಾಹನು ಮಸೀಹ್ ಈಸಾ عليه السلام ರ ಕುರಿತು ತಿಳಿಸುತ್ತಾ ಅವರು ಹೀಗೆ ಹೇಳಿದರು ಎನ್ನುತ್ತಾನೆ: "ಖಂಡಿತವಾಗಿಯೂ ಅಲ್ಲಾಹು ನನ್ನ ಮತ್ತು ನಿಮ್ಮ ಪ್ರಭುವಾಗಿರುವನು. ಆದ್ದರಿಂದ ಅವನನ್ನು ಆರಾಧಿಸಿರಿ. ಇದು ನೇರವಾದ ಮಾರ್ಗವಾಗಿದೆ." [ಆಲಿ ಇಮ್ರಾನ್:51]

ಅಲ್ಲಾಹನು ಪುನಃ ಮಸೀಹ್ ಈಸಾ عليه السلام ರ ಕುರಿತು ತಿಳಿಸುತ್ತಾ ಅವರು ಹೀಗೆ ಹೇಳಿದರು ಎನ್ನುತ್ತಾನೆ: "ಓ ಇಸ್ರಾಈಲ್ ಸಂತತಿಗಳೇ! ನೀವು ನನ್ನ ಮತ್ತು ನಿಮ್ಮ ಪ್ರಭುವಾದ ಅಲ್ಲಾಹುವನ್ನು ಆರಾಧಿಸಿರಿ. ಯಾರು ಅಲ್ಲಾಹನೊಂದಿಗೆ ಸಹಭಾಗಿತ್ವ ಮಾಡುವನೋ ಖಂಡಿತವಾಗಿಯೂ ಅಲ್ಲಾಹು ಅವನಿಗೆ ಸ್ವರ್ಗವನ್ನು ನಿಷಿದ್ಧಗೊಳಿಸಿರುವನು ಮತ್ತು ನರಕಾಗ್ನಿಯು ಅವನ ವಾಸಸ್ಥಳವಾಗಿದೆ. ಅಕ್ರಮಿಗಳಿಗೆ ಸಹಾಯಕರಾಗಿ ಯಾರೂ ಇರಲಾರರು." [ಅಲ್-ಮಾಇದ:72]

ಅಷ್ಟೇ ಅಲ್ಲ, ತೌರಾತ್ ಮತ್ತು ಇಂಜೀಲ್‌ನಲ್ಲೂ (ತೋರ ಮತ್ತು ಬೈಬಲ್) ಕೂಡ ಏಕೈಕನಾದ ಅಲ್ಲಾಹನನ್ನು ಮಾತ್ರ ಆರಾಧಿಸಬೇಕೆಂದು ಒತ್ತಿ ಹೇಳಲಾಗಿದೆ. ಬೈಬಲ್‌ನ ಧರ್ಮೋಪದೇಶಕಾಂಡದಲ್ಲಿ ಮೂಸಾ عليه السلام ರ ಈ ಕೆಳಗಿನ ಮಾತನ್ನು ಉಲ್ಲೇಖಿಸಲಾಗಿದೆ: "ಇಸ್ರಾಯೀಲರೇ ಕೇಳಿರಿ. ನಮ್ಮ ಆರಾಧ್ಯನಾದ ಕರ್ತನು ಏಕೈಕ ಕರ್ತನು."

ಬೈಬಲ್‌ನ ಮಾರ್ಕನ ಸುವಾರ್ತೆಯಲ್ಲಿ ಏಕದೇವವಿಶ್ವಾಸದ ಬಗ್ಗೆ ಒತ್ತಿ ಹೇಳಲಾಗಿದೆ. ಈಸಾ ಮಸೀಹ್ عليه السلام ರವರು ಹೇಳಿದರು: "ಮೊಟ್ಟಮೊದಲನೆಯ ಆಜ್ಞೆ: ಓ ಇಸ್ರಾಯೀಲರೇ ಕೇಳಿರಿ, ನಮ್ಮ ಆರಾಧ್ಯನಾದ ಕರ್ತನು ಏಕೈಕ ಕರ್ತನು."

ಜನರನ್ನು ಏಕದೇವವಿಶ್ವಾಸದೆಡೆಗೆ ಆಮಂತ್ರಿಸಬೇಕೆಂಬ ಈ ಮಹಾನ್ ಧ್ಯೇಯದೊಂದಿಗೆ ಎಲ್ಲಾ ಸಂದೇಶವಾಹಕರನ್ನು ಕಳುಹಿಸಲಾಗಿದೆ ಎಂದು ಸರ್ವಶಕ್ತನಾದ ಅಲ್ಲಾಹನು ಸ್ಪಷ್ಟವಾಗಿ ವಿವರಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ತಾಗೂತನ್ನು ವರ್ಜಿಸಿರಿ (ಎಂದು ಬೋಧಿಸುವ ಸಲುವಾಗಿ) ಖಂಡಿತವಾಗಿಯೂ ನಾವು ಪ್ರತಿಯೊಂದು ಸಮುದಾಯಕ್ಕೂ ಸಂದೇಶವಾಹಕರನ್ನು ಕಳುಹಿಸಿರುವೆವು. ತರುವಾಯ ಅವರಲ್ಲಿ ಕೆಲವರನ್ನು ಅಲ್ಲಾಹು ಸನ್ಮಾರ್ಗದಲ್ಲಿ ಸೇರಿಸಿದನು. ಅವರಲ್ಲಿ ಕೆಲವರ ಮೇಲೆ ಪಥಭ್ರಷ್ಟತೆಯು ಸ್ಥಿರವಾಯಿತು. ಆದ್ದರಿಂದ ನೀವು ಭೂಮಿಯಲ್ಲಿ ಸಂಚರಿಸಿರಿ ಮತ್ತು ಸತ್ಯನಿಷೇಧಿಗಳ ಪರ್ಯಾವಸಾನವು ಹೇಗಿತ್ತೆಂಬುದನ್ನು ನೋಡಿರಿ."** [ಅನ್ನಹ್ಲ್:36].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ಅಲ್ಲಾಹನ ಹೊರತು ನೀವು ಕರೆದು ಪ್ರಾರ್ಥಿಸುತ್ತಿರುವುದರ ಬಗ್ಗೆ ನೀವು ಚಿಂತಿಸಿ ನೋಡಿರುವಿರಾ? ಅವರು ಭೂಮಿಯಲ್ಲಿ ಏನನ್ನು ಸೃಷ್ಟಿಸಿರುವರೆಂದು ನನಗೆ ತೋರಿಸಿಕೊಡಿ. ಅಥವಾ ಆಕಾಶಗಳ ಸೃಷ್ಟಿಯಲ್ಲಿ ಅವರಿಗೆ ಏನಾದರೂ ಸಹಭಾಗಿತ್ವವಿದೆಯೇ? ನೀವು ಸತ್ಯವಂತರಾಗಿದ್ದರೆ**

ಇದಕ್ಕಿಂತ ಮುಂಚಿನ ಯಾವುದಾದರೂ ಗ್ರಂಥವನ್ನು ಅಥವಾ ಜ್ಞಾನದ ಕುರುಹನ್ನು ನನ್ನ ಬಳಿಗೆ ತನ್ನಿರಿ." [ಅಲ್-ಅಹ್ಕಾಫ್:4]

ಶೇಕ್ ಸಅದಿ رحمه الله ಹೇಳುತ್ತಾರೆ: "ಬಹುದೇವಾರಾಧಕರ ಬಹುದೇವತ್ವದ ವಾದವು ಯಾವುದೇ ಪುರಾವೆ ಅಥವಾ ಆಧಾರವನ್ನು ಆಧರಿಸಿಲ್ಲ ಎಂದು ಇದರಿಂದ ತಿಳಿದುಬರುತ್ತದೆ. ಅವರು ಅವಲಂಬಿಸಿರುವುದು ಕೇವಲ ಸುಳ್ಳು ಊಹೆಗಳು, ನಿರರ್ಥಕ ಅಭಿಪ್ರಾಯಗಳು ಮತ್ತು ಭ್ರಷ್ಟ ಬುದ್ಧಿಯನ್ನಾಗಿದೆ. ಅವರ ಸ್ಥಿತಿಗತಿಗಳನ್ನು ಪರಿಶೋಧಿಸಿದರೆ, ಅವರ ಜ್ಞಾನ ಮತ್ತು ಕರ್ಮಗಳನ್ನು ಅವಲೋಕಿಸಿದರೆ, ಮತ್ತು ಅವರು ಜೀವನಪೂರ್ತಿ ಯಾರ ಆರಾಧನೆಯಲ್ಲಿ ಕಳೆದರೋ ಅವರು (ಅಂದರೆ ಅಲ್ಲಾಹೇತರ ಆರಾಧ್ಯರು) ಇಹಲೋಕದಲ್ಲಿ ಅಥವಾ ಪರಲೋಕದಲ್ಲಿ ಅವರಿಗೆ ಏನಾದರೂ ಲಾಭವನ್ನುಂಟು ಮಾಡಿದ್ದಾರೆಯೇ ಎಂಬುದನ್ನು ನೋಡಿದರೆ ಅವರ ಬುದ್ಧಿಯ ಭ್ರಷ್ಟತೆಯು ನಿಮಗೆ ಮನದಟ್ಟಾಗಬಹುದು." [ತಯ್ಸೀರುಲ್ ಕರೀಮಿಲ್ ಮನ್ನಾನ್ :779.]

## 6. ಸರ್ವಶಕ್ತನಾದ ಅಲ್ಲಾಹನೇ ಸೃಷ್ಟಿಕರ್ತನು. ಆರಾಧನೆಗೆ ಅವನು ಮಾತ್ರ ಅರ್ಹನು. ಅವನೊಡನೆ ಇತರ ಯಾರನ್ನೂ ಆರಾಧಿಸುವಂತಿಲ್ಲ.

ಅಲ್ಲಾಹನು ಮಾತ್ರ ಆರಾಧನೆಗೆ ಅರ್ಹನು. ಅವನೊಡನೆ ಇತರ ಯಾರನ್ನೂ ಆರಾಧಿಸುವಂತಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಮನುಷ್ಯರೇ! ನೀವು ನಿಮ್ಮನ್ನು ಮತ್ತು ನಿಮ್ಮ ಪೂರ್ವಿಕರನ್ನು ಸೃಷ್ಟಿಸಿದ ನಿಮ್ಮ ಪ್ರಭುವನ್ನು ಆರಾಧಿಸಿರಿ. ನೀವು ಭಯಭಕ್ತಿ ಪಾಲಿಸುವವರಾಗಲು ಬಹುದು.(21) ನಿಮಗೋಸ್ಕರ ಭೂಮಿಯನ್ನು ಹಾಸನ್ನಾಗಿ ಮತ್ತು ಆಕಾಶವನ್ನು ಮೇಲ್ಛಾವಣಿಯನ್ನಾಗಿ ಮಾಡಿಕೊಟ್ಟಿರುವ, ಹಾಗೂ ಆಕಾಶದಿಂದ ನೀರನ್ನು ಇಳಿಸಿ ತನ್ಮೂಲಕ ನಿಮಗೆ ಭಕ್ಷ್ಯಯೋಗ್ಯ ಫಲಗಳನ್ನು ಉತ್ಪಾದಿಸಿಕೊಟ್ಟಿರುವ (ಪ್ರಭುವನ್ನು

**ಆರಾಧಿಸಿರಿ). ಆದ್ದರಿಂದ (ಇವೆಲ್ಲವನ್ನೂ) ಅರಿತವರಾಗಿದ್ದೂ ಸಹ ನೀವು ಅಲ್ಲಾಹನಿಗೆ ಪ್ರತಿಸ್ಪರ್ಧಿಗಳನ್ನು ಮಾಡದಿರಿ.(22)"** [ಅಲ್-ಬಖರ:21-22]

ನಮ್ಮನ್ನು ಸೃಷ್ಟಿಸಿದವನು, ನಮ್ಮ ಹಿಂದಿನ ಪೀಳಿಗೆಗಳನ್ನು ಸೃಷ್ಟಿಸಿದವನು, ಭೂಮಿಯನ್ನು ನಮಗೆ ಹಾಸಿಗೆಯನ್ನಾಗಿ ಮಾಡಿದವನು, ಆಕಾಶದಿಂದ ನಮಗೆ ಮಳೆಯನ್ನು ಸುರಿಸಿದವನು ಮತ್ತು ಅದರಿಂದ ನಮಗೆ ಆಹಾರವಾಗಿ ಹಣ್ಣುಗಳನ್ನು ಉತ್ಪಾದಿಸಿದವನು ಯಾರೋ ಅವನು ಮಾತ್ರ ಆರಾಧನೆಗೆ ಅರ್ಹನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಜನರೇ! ಅಲ್ಲಾಹು ನಿಮಗೆ ದಯಪಾಲಿಸಿರುವ ಅವನ ಅನುಗ್ರಹವನ್ನು ಸ್ಮರಿಸಿರಿ. ಆಕಾಶದಿಂದಲೂ ಭೂಮಿಯಿಂದಲೂ ನಿಮಗೆ ಅನ್ನಾಧಾರವನ್ನು ಒದಗಿಸಲು ಅಲ್ಲಾಹನ ಹೊರತು ಬೇರೆ ಸೃಷ್ಟಿಕರ್ತನಿರುವನೇ? ಅವನ ಹೊರತು ಅನ್ಯ ಆರಾಧ್ಯರಿಲ್ಲ. ಆದರೂ ನೀವು ತಪ್ಪಿಸಲ್ಪಡುತ್ತಿರುವುದು ಹೇಗೆ?"** [ಫಾತಿರ್:3]

ಸೃಷ್ಟಿಸುವವನು ಮತ್ತು ಅನ್ನಾಧಾರ ನೀಡುವವನು ಯಾರೋ ಅವನು ಮಾತ್ರ ಆರಾಧನೆಗೆ ಅರ್ಹನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹಾಗಿರುವವನೇ ನಿಮ್ಮ ಪ್ರಭುವಾದ ಅಲ್ಲಾಹು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಸರ್ವ ವಸ್ತುಗಳ ಸೃಷ್ಟಿಕರ್ತನಾಗಿರುವನು. ಆದ್ದರಿಂದ ಅವನನ್ನು ಆರಾಧಿಸಿರಿ. ಅವನು ಸಕಲ ವಿಷಯಗಳ ಮೇಲೂ ಕಾರ್ಯನಿರ್ವಾಹಕನಾಗಿರುವನು."** [ಅಲ್-ಅನ್‌ಆಮ್:102]

ಅಲ್ಲಾಹನ ಹೊರತು ಆರಾಧಿಸಲಾಗುವ ಯಾರೂ/ಯಾವುದೂ ಆರಾಧನೆಗೆ ಅರ್ಹವಲ್ಲ. ಏಕೆಂದರೆ ಅವರು ಭೂಮಿ ಮತ್ತು ಆಕಾಶಗಳಲ್ಲಿ ಒಂದು ಅಣು ತೂಕದ ವಸ್ತುವಿನ ಮೇಲೂ ಒಡೆತನವನ್ನು ಹೊಂದಿಲ್ಲ. ಅವರು ಯಾವುದೇ ವಿಷಯದಲ್ಲೂ ಅಲ್ಲಾಹನಿಗೆ ಸಹಭಾಗಿಗಳಲ್ಲ, ಸಹಾಯಕರಲ್ಲ, ಮತ್ತು ಬೆಂಬಲ ನೀಡುವವರೂ ಅಲ್ಲ. ಹೀಗಿರುವಾಗ

ಅಲ್ಲಾಹನೊಂದಿಗೆ ಅವರನ್ನು ಕರೆದು ಪ್ರಾರ್ಥಿಸುವುದಾದರೂ ಹೇಗೆ? ಅವನೊಂದಿಗೆ ಅವರನ್ನು ಸಹಭಾಗಿಯನ್ನಾಗಿ ಮಾಡುವುದಾದರೂ ಹೇಗೆ?

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೇಳಿರಿ: ಅಲ್ಲಾಹನ ಹೊರತು ನೀವು ವಾದಿಸುತ್ತಿರುವ ಎಲ್ಲರನ್ನೂ ಕರೆದು ಪ್ರಾರ್ಥಿಸಿರಿ. ಆಕಾಶಗಳಲ್ಲಾಗಲಿ ಭೂಮಿಯಲ್ಲಾಗಲಿ ಒಂದು ಅಣುವಿನ ತೂಕದಷ್ಟು ಕೂಡ ಅವರು ಸ್ವಾಧೀನಪಡಿಸಲಾರರು. ಅವೆರಡರಲ್ಲಿ ಅವರಿಗೆ ಯಾವುದೇ ಸಹಭಾಗಿತ್ವವೂ ಇಲ್ಲ. ಅವರ ಪೈಕಿ ಅವನಿಗೆ ಸಹಾಯಕರಾಗಿ ಯಾರೂ ಇಲ್ಲ."** [ಸಬಅ್:22]

ಈ ಎಲ್ಲಾ ಸೃಷ್ಟಿಗಳನ್ನು ಸೃಷ್ಟಿಸಿದವನು ಮತ್ತು ಅವುಗಳನ್ನು ಶೂನ್ಯದಿಂದ ಅಸ್ತಿತ್ವಕ್ಕೆ ತಂದವನು ಸರ್ವಶಕ್ತನಾದ ಅಲ್ಲಾಹನೇ ಆಗಿದ್ದಾನೆ. ಅವುಗಳ ಅಸ್ತಿತ್ವವು ಅವನ ಅಸ್ತಿತ್ವಕ್ಕೆ, ಅವನ ಪ್ರಭುತ್ವಕ್ಕೆ ಮತ್ತು ಅವನ ಆರಾಧನಾರ್ಹತೆಗೆ ಪುರಾವೆಗಳಾಗಿವೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವನು ನಿಮ್ಮನ್ನು ಮಣ್ಣಿನಿಂದ ಸೃಷ್ಟಿಸಿದನು. ತರುವಾಯ ಅಗೋ! ನೀವು (ಜಗತ್ತಿನಾದ್ಯಂತ) ವ್ಯಾಪಿಸುವ ಮಾನವಕುಲವಾಗಿ ಬಿಟ್ಟಿರಿ. ಇದು ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿದೆ.(20) ನೀವು ಸಮಾಧಾನಪೂರ್ವಕ ಒಂದುಗೂಡುವುದಕ್ಕಾಗಿ ನಿಮ್ಮಿಂದಲೇ ನಿಮಗೆ ಜೋಡಿಗಳನ್ನು ಸೃಷ್ಟಿಸಿರುವುದು ಮತ್ತು ನಿಮ್ಮ ಮಧ್ಯೆ ಪ್ರೇಮವನ್ನೂ, ಕರುಣೆಯನ್ನೂ ಹಾಕಿ ಕೊಟ್ಟಿರುವುದು ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿದೆ. ಖಂಡಿತವಾಗಿಯೂ ಅದರಲ್ಲಿ ಚಿಂತಿಸುವ ಜನರಿಗೆ ದೃಷ್ಟಾಂತಗಳಿವೆ.(21) ಆಕಾಶಗಳ ಮತ್ತು ಭೂಮಿಯ ಸೃಷ್ಟಿಯೂ, ನಿಮ್ಮ ಭಾಷೆಗಳಲ್ಲಿ ಮತ್ತು ವರ್ಣಗಳಲ್ಲಿರುವ ವ್ಯತ್ಯಾಸವೂ ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿದೆ. ಖಂಡಿತವಾಗಿಯೂ ಅದರಲ್ಲಿ ಅರಿವುಳ್ಳ ಜನರಿಗೆ ದೃಷ್ಟಾಂತಗಳಿವೆ.(22) ರಾತ್ರಿಯಲ್ಲೂ ಹಗಲಲ್ಲೂ ನೀವು ನಿದ್ರಿಸುವುದು ಹಾಗೂ ಅವನ ಅನುಗ್ರಹದಿಂದ ನೀವು ಅನ್ನಾಧಾರವನ್ನು ಅರಸುವುದು ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿದೆ. ಖಂಡಿತವಾಗಿಯೂ ಅದರಲ್ಲಿ ಆಲಿಸಿ ಅರ್ಥಮಾಡಿಕೊಳ್ಳುವ ಜನರಿಗೆ ದೃಷ್ಟಾಂತಗಳಿವೆ.(23) ಭಯವನ್ನು ಮತ್ತು ನಿರೀಕ್ಷೆಯನ್ನು ಹುಟ್ಟಿಸುತ್ತಾ ನಿಮಗೆ ಮಿಂಚನ್ನು ತೋರಿಸಿಕೊಡುವುದು**

ಹಾಗೂ ಆಕಾಶದಿಂದ ಮಳೆಯನ್ನು ಸುರಿಸಿ ತನ್ಮೂಲಕ ಭೂಮಿಗೆ ಅದು ನಿರ್ಜೀವವಾದ ಬಳಿಕ ಜೀವವನ್ನು ನೀಡುವುದು ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿದೆ. ಖಂಡಿತವಾಗಿಯೂ ಆಲೋಚಿಸುವ ಜನರಿಗೆ ಅದರಲ್ಲಿ ದೃಷ್ಟಾಂತಗಳಿವೆ.(24) ಆಕಾಶ ಮತ್ತು ಭೂಮಿಯು ಅವನ ಆಜ್ಞೆ ಪ್ರಕಾರ ಅಸ್ತಿತ್ವದಲ್ಲಿರುವುದು ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿದೆ. ತರುವಾಯ ಅವನು ಭೂಮಿಯಿಂದ ನಿಮ್ಮನ್ನು ಒಂದೇ ಒಂದು ಕರೆಯನ್ನು ಕರೆದರೆ, ಅಗೋ! ನೀವು ಹೊರಬರುವಿರಿ.(25) ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲರೂ ಅವನ ಅಧೀನದಲ್ಲಿರುವರು. ಎಲ್ಲರೂ ಅವನಿಗೆ ಶರಣಾಗತರಾಗಿರುವರು.(26) ಸೃಷ್ಟಿಯನ್ನು ಆರಂಭಿಸುವವನು ಅವನಾಗಿರುವನು. ತರುವಾಯ ಅವನು ಅದನ್ನು ಪುನರಾವರ್ತಿಸುವನು. ಅದು ಅವನ ಮಟ್ಟಿಗೆ ಅತ್ಯಂತ ಸುಲಭವಾಗಿದೆ." [ಅರ್ರೂಮ್:20 - 27].

ನಮ್ರೂದ್ ರಾಜನು ತನ್ನ ಪರಿಪಾಲಕ ಪ್ರಭುವಿನ ಅಸ್ತಿತ್ವವನ್ನು ನಿರಾಕರಿಸಿದಾಗ ಪ್ರವಾದಿ ಇಬ್ರಾಹೀಮ್ عليه السلام ಹೀಗೆ ಹೇಳಿದರೆಂದು ಅಲ್ಲಾಹನು (ಪವಿತ್ರ ಕುರ್‌ಆನ್‌ನಲ್ಲಿ) ಉಲ್ಲೇಖಿಸಿದ್ದಾನೆ: "ಇಬ್ರಾಹೀಮ್ ಹೇಳಿದರು: ಅಲ್ಲಾಹು ಸೂರ್ಯನನ್ನು ಪೂರ್ವದಿಕ್ಕಿನಿಂದ ತರುತ್ತಾನೆ. ತಾವು ಅದನ್ನು ಪಶ್ಚಿಮದಿಂದ ತನ್ನಿರಿ. ಆಗ ಆ ಸತ್ಯನಿಷೇಧಿಯು ನಿರುತ್ತರನಾದನು. ಅಕ್ರಮಿಗಳಾದ ಜನರನ್ನು ಅಲ್ಲಾಹು ಸನ್ಮಾರ್ಗಕ್ಕೆ ಸೇರಿಸಲಾರನು." [ಅಲ್-ಬಖರ:258].

ಅದೇ ರೀತಿ, ತನಗೆ ಮಾರ್ಗದರ್ಶನ ಮಾಡಿದವನು, ಆಹಾರ-ಪಾನೀಯಗಳನ್ನು ನೀಡಿದವನು, ತಾನು ರೋಗಿಯಾದಾಗ ಗುಣಪಡಿಸಿದವನು ಮತ್ತು ಜೀವನ-ಮರಣಗಳನ್ನು ನೀಡುವವನು ಅಲ್ಲಾಹನೇ ಆಗಿದ್ದಾನೆಂದು ಇಬ್ರಾಹೀಮ್ عليه السلام ರು ತಮ್ಮ ಜನತೆಗೆ ಆಧಾರಸಹಿತ ತೋರಿಸಿಕೊಟ್ಟರು. ಅವರ ಮಾತನ್ನು ಉಲ್ಲೇಖಿಸುತ್ತಾ ಅಲ್ಲಾಹನು ಹೇಳುತ್ತಾನೆ: "ಅಂದರೆ ನನ್ನನ್ನು ಸೃಷ್ಟಿಸಿ ನನಗೆ ಮಾರ್ಗದರ್ಶನ ಮಾಡುತ್ತಿರುವವನು.(78) ನನಗೆ ಅನ್ನವನ್ನೂ ಪಾನೀಯವನ್ನೂ ನೀಡುವವನು.(79) ನಾನು ಕಾಯಿಲೆ ಬಿದ್ದರೆ ನನಗೆ ಸೌಖ್ಯವನ್ನು ನೀಡುವವನು.(80) ನನ್ನನ್ನು ಮೃತಪಡಿಸುವವನು ಮತ್ತು ತರುವಾಯ ನನಗೆ ಜೀವವನ್ನು ನೀಡುವವನು.(81)" [ಅಶ್ಶುಅರಾ:78 - 81]

ಅಲ್ಲಾಹನು ಮೂಸಾ عليه السلام ರವರ ಮಾತನ್ನು ಉಲ್ಲೇಖಿಸುತ್ತಾ, ಅವರು ಫಿರ್‌ಔನನ ಜೊತೆ ವಾದ ಮಾಡುವಾಗ ತನ್ನ ಪಾಲಕ ಪ್ರಭು ಯಾರು ಎನ್ನುವುದನ್ನು ಹೀಗೆ ವಿವರಿಸಿದರೆಂದು ಹೇಳುತ್ತಾನೆ: **"ಪ್ರತಿಯೊಂದು ವಸ್ತುವಿಗೂ ಅದರ ಗುಣಲಕ್ಷಣವನ್ನು ನೀಡಿ ತರುವಾಯ (ಅದಕ್ಕೆ) ಮಾರ್ಗದರ್ಶನ ಮಾಡಿದವನಾರೋ ಅವನೇ ನಮ್ಮ ಪ್ರಭು."** [ತ್ವಾಹಾ:50]

ಅಲ್ಲಾಹನನ್ನು ಮಾತ್ರ ಆರಾಧಿಸಬೇಕು ಮತ್ತು ಅವನನ್ನು ನಿರಾಕರಿಸಬಾರದು ಎಂಬ ಕಾರಣದಿಂದ ಅಲ್ಲಾಹನು ಭೂಮಿ ಮತ್ತು ಆಕಾಶಗಳಲ್ಲಿರುವುದೆಲ್ಲವನ್ನೂ ಮನುಷ್ಯನಿಗೆ ಅಧೀನಪಡಿಸಿಕೊಟ್ಟನು ಮತ್ತು ಅವನನ್ನು ತನ್ನ ಅನುಗ್ರಹಗಳಿಂದ ಆವರಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಕಾಶಗಳಲ್ಲಿರುವುದನ್ನು ಮತ್ತು ಭೂಮಿಯಲ್ಲಿರುವುದನ್ನು ಅಲ್ಲಾಹು ನಿಮಗೆ ಅಧೀನಪಡಿಸಿಕೊಟ್ಟಿರುವನು ಎಂಬುದನ್ನು ನೀವು ಕಂಡಿಲ್ಲವೇ? ಗೋಚರ ಮತ್ತು ಅಗೋಚರವಾಗಿರುವ ತನ್ನ ಅನುಗ್ರಹಗಳನ್ನು ಅವನು ನಿಮಗೆ ನೆರವೇರಿಸಿಕೊಟ್ಟಿರುವನು. ಯಾವುದೇ ಅರಿವೋ, ಮಾರ್ಗದರ್ಶನವೋ, ಪ್ರಕಾಶ ಬೀರುವ ಗ್ರಂಥವೋ ಇಲ್ಲದೆ ಅಲ್ಲಾಹನ ಬಗ್ಗೆ ತರ್ಕಿಸುವವರು ಜನರಲ್ಲಿರುವರು."** [ಲುಖ್ಮಾನ್:20].

ಅಲ್ಲಾಹನು ಭೂಮ್ಯಾಕಾಶಗಳಲ್ಲಿರುವ ಎಲ್ಲವನ್ನೂ ಮನುಷ್ಯನಿಗೆ ಹೇಗೆ ಅಧೀನಪಡಿಸಿ ಕೊಟ್ಟಿದ್ದಾನೋ, ಅದೇ ರೀತಿ ಮನುಷ್ಯನನ್ನು ಸೃಷ್ಟಿಸಿ ಅವನಿಗೆ ಅಗತ್ಯವಿರುವ ಕಿವಿ, ಕಣ್ಣು, ಹೃದಯ ಮುಂತಾದ ಎಲ್ಲವನ್ನೂ ಕೊಟ್ಟಿರುವನು. ಇದು ಮನುಷ್ಯನು ಅವನಿಗೆ ಪ್ರಯೋಜನ ನೀಡುವ ಮತ್ತು ಅವನ ಒಡೆಯ ಹಾಗೂ ಸೃಷ್ಟಿಕರ್ತನ ಬಗ್ಗೆ ಪುರಾವೆಯನ್ನು ಒದಗಿಸುವ ಜ್ಞಾನವನ್ನು ಪಡೆಯುವುದಕ್ಕಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ಏನನ್ನೂ ಅರಿತಿರದಂತಹ ಸ್ಥಿತಿಯಲ್ಲಿ ಅಲ್ಲಾಹು ನಿಮ್ಮನ್ನು ನಿಮ್ಮ ತಾಯಂದಿರ ಉದರಗಳಿಂದ ಹೊರತಂದನು. ನಿಮಗೆ ಅವನು ಶ್ರವಣವನ್ನು, ದೃಷ್ಟಿಗಳನ್ನು, ಮತ್ತು ಹೃದಯಗಳನ್ನು ನೀಡಿದನು. ನೀವು ಕೃತಜ್ಞತೆ ಸಲ್ಲಿಸುವವರಾಗುವ ಸಲುವಾಗಿ."** [ಅನ್ನಹ್ಲ್:78].

ಸರ್ವಶಕ್ತನಾದ ಅಲ್ಲಾಹನು ಈ ಎಲ್ಲಾ ಜಗತ್ತುಗಳನ್ನು ಸೃಷ್ಟಿಸಿದನು. ಅವನು ಮಾನವನನ್ನೂ ಸೃಷ್ಟಿಸಿದನು ಮತ್ತು ಅವನಿಗೆ ಅಗತ್ಯವಿರುವ ಎಲ್ಲ ಅಂಗಗಳನ್ನು ಮತ್ತು ಶಕ್ತಿ ಸಾಮರ್ಥ್ಯವನ್ನು ನೀಡಿದನು. ನಂತರ ಅಲ್ಲಾಹನನ್ನು ಆರಾಧಿಸಲು ಮತ್ತು ಭೂಮಿಯಲ್ಲಿ ಜೀವಿಸಲು ಅವನಿಗೆ ಸಹಾಯ ಮಾಡುವ ಎಲ್ಲವನ್ನೂ ಒದಗಿಸಿದನು. ನಂತರ ಭೂಮ್ಯಾಕಾಶಗಳಲ್ಲಿರುವ ಎಲ್ಲವನ್ನೂ ಅವನಿಗೆ ಅಧೀನಗೊಳಿಸಿದನು.

ಅಲ್ಲಾಹನು ತನ್ನ ಆರಾಧನಾರ್ಹತೆಯನ್ನು ಅನಿವಾರ್ಯಗೊಳಿಸುವ ತನ್ನ ಪ್ರಭುತ್ವಕ್ಕೆ ಪುರಾವೆಯಾಗಿ ಈ ಮಹಾನ್ ಸೃಷ್ಟಿಗಳನ್ನು ತೋರಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೇಳಿರಿ: ಆಕಾಶದಿಂದ ಮತ್ತು ಭೂಮಿಯಿಂದ ನಿಮಗೆ ಅನ್ನಾಧಾರವನ್ನು ಒದಗಿಸುವವನು ಯಾರು? ಶ್ರವಣವನ್ನೂ ದೃಷ್ಟಿಯನ್ನೂ ಅಧೀನದಲ್ಲಿರಿಸಿದವನು ಯಾರು? ನಿರ್ಜೀವಿಯಿಂದ ಜೀವಿಯನ್ನು ಮತ್ತು ಜೀವಿಯಿಂದ ನಿರ್ಜೀವಿಯನ್ನು ಹೊರತರುವವನು ಯಾರು? ಕಾರ್ಯನಿಯಂತ್ರಣ ಮಾಡುವವನು ಯಾರು? ಅವರು ಹೇಳುವರು: 'ಅಲ್ಲಾಹು'. ಹೇಳಿರಿ: ಆದರೂ ನೀವು ಭಯಭಕ್ತಿ ಪಾಲಿಸಲಾರಿರೇ?"** [ಯೂನುಸ್:31].

ಸತ್ಯವಂತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: 'ಅಲ್ಲಾಹನ ಹೊರತು ನೀವು ಕರೆದು ಪ್ರಾರ್ಥಿಸುತ್ತಿರುವುದರ ಬಗ್ಗೆ ನೀವು ಚಿಂತಿಸಿ ನೋಡಿರುವಿರಾ? ಅವರು ಭೂಮಿಯಲ್ಲಿ ಏನನ್ನು ಸೃಷ್ಟಿಸಿರುವರೆಂದು ನನಗೆ ತೋರಿಸಿಕೊಡಿ. ಅಥವಾ ಆಕಾಶಗಳ ಸೃಷ್ಟಿಯಲ್ಲಿ ಅವರಿಗೆ ಏನಾದರೂ ಸಹಭಾಗಿತ್ವವಿದೆಯೇ? ನೀವು ಸತ್ಯವಂತರಾಗಿದ್ದರೆ ಇದಕ್ಕಿಂತ ಮುಂಚಿನ ಯಾವುದಾದರೂ ಗ್ರಂಥವನ್ನು ಅಥವಾ ಜ್ಞಾನದ ಕುರುಹನ್ನು ನನ್ನ ಬಳಿಗೆ ತನ್ನಿರಿ."** [ಅಲ್-ಅಹ್ಕಾಫ್:4].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ಕಾಣುವಂತಹ ಯಾವುದೇ ಸ್ಥಂಭಗಳಿಲ್ಲದೆ ಅವನು ಆಕಾಶಗಳನ್ನು ಸೃಷ್ಟಿಸಿರುವನು. ಭೂಮಿಯು ನಿಮ್ಮೊಂದಿಗೆ ಅಲುಗಾಡದಿರಲು ಅವನು ಅದರಲ್ಲಿ ಅಚಲ ಪರ್ವತಗಳನ್ನು ಸ್ಥಾಪಿಸಿರುವನು. ಸರ್ವವಿಧದ**

ಜೀವಿಗಳನ್ನೂ ಅವನು ಅದರಲ್ಲಿ ಹಬ್ಬಿಸಿರುವನು. ಆಕಾಶದಿಂದ ನಾವು (ಮಳೆ)ನೀರನ್ನು ಸುರಿಸಿದೆವು. ತರುವಾಯ ಅದರಲ್ಲಿ ಉತ್ಕೃಷ್ಟವಾದ ಸರ್ವ (ಸಸ್ಯ) ಜೋಡಿಗಳನ್ನು ನಾವು ಬೆಳೆಸಿದೆವು. ಇವೆಲ್ಲವೂ ಅಲ್ಲಾಹನ ಸೃಷ್ಟಿಯಾಗಿವೆ. ಆದರೆ ಅವನಲ್ಲದ ಇತರರು ಏನನ್ನು ಸೃಷ್ಟಿಸಿರುವರು ಎಂಬುದನ್ನು ನನಗೆ ತೋರಿಸಿಕೊಡಿರಿ. ಅಲ್ಲ, ಅಕ್ರಮಿಗಳು ಸ್ಪಷ್ಟವಾದ ಪಥಭ್ರಷ್ಟತೆಯಲ್ಲಿರುವರು." [ಲುಖ್ಮಾನ್:10,11].

ಸತ್ಯವಂತನಾದ ಅಲ್ಲಾಹನು ಹೇಳುತ್ತಾನೆ: "ಅಥವಾ, ಯಾವುದೇ ವಸ್ತುವಿನಿಂದಲೂ ಅಲ್ಲದೆ ಅವರು ಸೃಷ್ಟಿಸಲ್ಪಟ್ಟಿರುವರೇ? ಅಥವಾ, ಸ್ವತಃ ಅವರೇ ಸೃಷ್ಟಿಕರ್ತರಾಗಿರುವರೇ? ಅಥವಾ, ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವರು ಅವರಾಗಿರುವರೇ? ಅಲ್ಲ, ಅವರು ದೃಢವಾಗಿ ವಿಶ್ವಾಸವಿಡುವುದಿಲ್ಲ. ಅಥವಾ, ತಮ್ಮ ಪ್ರಭುವಿನ ಖಜಾನೆಗಳು ಅವರ ಬಳಿಯಿವೆಯೇ? ಅಥವಾ ಅಧಿಕಾರ ಚಲಾಯಿಸುವವರು ಅವರಾಗಿರುವರೇ?" [ಅತ್ತೂರ್:35-37].

ಶೇಖ್ ಸಅದೀ ಹೇಳುತ್ತಾರೆ: ಸತ್ಯವನ್ನು ಸ್ವೀಕರಿಸುವುದು ಅಥವಾ ಬುದ್ಧಿ ಮತ್ತು ಧರ್ಮದ ಅನಿವಾರ್ಯತೆಯಿಂದ ಹೊರಗುಳಿಯುವುದರ ಹೊರತು ಅವರಿಗೆ ಬೇರಾವುದೂ ಸಾಧ್ಯವಾಗದ ವಿಷಯದಲ್ಲಿ ಇದು ಅವರಿಗಿರುವ ಪುರಾವೆಯಾಗಿದೆ. [ತಫ್ಸೀರ್ ಇಬ್ನು ಸಅದಿ: 816.]

## 7. ಜಗತ್ತಿನಲ್ಲಿ ನಾವು ಕಾಣುತ್ತಿರುವ ಮತ್ತು ಕಾಣದೇ ಇರುವ ಎಲ್ಲದರ ಸೃಷ್ಟಿಕರ್ತ ಅಲ್ಲಾಹನಾಗಿದ್ದಾನೆ. ಅವನ ಹೊರತು ಇತರ ಎಲ್ಲವೂ ಅವನ ಸೃಷ್ಟಿಗಳಾಗಿವೆ. ಅಲ್ಲಾಹನು ಆರು ದಿನಗಳಲ್ಲಿ ಭೂಮಿ ಮತ್ತು ಆಕಾಶಗಳನ್ನು ಸೃಷ್ಟಿಸಿದನು.

ಜಗತ್ತಿನಲ್ಲಿ ನಾವು ಕಾಣುತ್ತಿರುವ ಮತ್ತು ಕಾಣದೇ ಇರುವ ಎಲ್ಲದರ ಸೃಷ್ಟಿಕರ್ತ ಅಲ್ಲಾಹನಾಗಿದ್ದಾನೆ. ಅವನ ಹೊರತು ಇತರ ಎಲ್ಲವೂ ಅವನ ಸೃಷ್ಟಿಗಳಾಗಿವೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "(ಓ ಪ್ರವಾದಿಯವರೇ!) ಕೇಳಿರಿ: ಆಕಾಶಗಳ ಮತ್ತು ಭೂಮಿಯ ಪ್ರಭು ಯಾರು? ಹೇಳಿರಿ: ಅಲ್ಲಾಹು. ಹೇಳಿರಿ: ಆದರೂ ಅವನನ್ನು ಬಿಟ್ಟು, ಸ್ವತಃ ತಮಗೇ ಯಾವುದೇ ಲಾಭವನ್ನೂ, ಹಾನಿಯನ್ನೂ ಸ್ವಾಧೀನದಲ್ಲಿಟ್ಟುಕೊಳ್ಳದಂತಹ ರಕ್ಷಕರನ್ನು ನೀವು ಮಾಡಿಕೊಂಡಿರುವಿರಾ? ಕೇಳಿರಿ: ಕುರುಡನೂ ದೃಷ್ಟಿಯುಳ್ಳವನೂ ಸಮಾನರಾಗುವರೇ? ಅಥವಾ ಅಂಧಕಾರಗಳು ಮತ್ತು ಪ್ರಕಾಶವು ಸಮಾನವಾಗುವುದೇ? ಅಥವಾ ಅವರು ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿ ಮಾಡಿರುವವರು, ಅವನು ಸೃಷ್ಟಿಸುವಂತೆಯೇ ಸೃಷ್ಟಿಸಿ (ಎರಡೂ ಕಡೆಯ) ಸೃಷ್ಟಿಗಳನ್ನು ಅವರಿಗೆ ಗುರುತಿಸಲು ಸಾಧ್ಯವಾಗದೇ ಹೋಯಿತೇ?' ಹೇಳಿರಿ: ಸರ್ವ ವಸ್ತುಗಳ ಸೃಷ್ಟಿಕರ್ತನು ಅಲ್ಲಾಹನಾಗಿರುವನು. ಅವನು ಏಕದೇವನೂ ಸರ್ವಾಧಿಕಾರಿಯೂ ಆಗಿರುವನು." [ಅರ್‍ರಅ್‌ದ್:16]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನೀವು ಅರಿಯದಿರುವುದನ್ನೂ ಅವನು ಸೃಷ್ಟಿಸುವನು." [ಅನ್ನಹ್ಲ್:8].

ಅಲ್ಲಾಹನು ಆರು ದಿನಗಳಲ್ಲಿ ಭೂಮಿ ಮತ್ತು ಆಕಾಶಗಳನ್ನು ಸೃಷ್ಟಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಆಕಾಶಗಳನ್ನು ಮತ್ತು ಭೂಮಿಯನ್ನು ಆರು ದಿನಗಳಲ್ಲಿ ಸೃಷ್ಟಿಸಿದವನು ಅವನಾಗಿರುವನು. ತರುವಾಯ ಅವನು ಅರ್ಶಿನ ಮೇಲೆ

ಮುಸ್ತವಿಯಾದನು. ಭೂಮಿಯನ್ನು ಪ್ರವೇಶಿಸುವ, ಅದರಿಂದ ಹೊರಹೋಗುವ, ಆಕಾಶದಿಂದ ಇಳಿಯುವ ಮತ್ತು ಅದರೆಡೆಗೆ ಏರಿಹೋಗುವ ಎಲ್ಲವನ್ನೂ ಅವನು ಅರಿಯುವನು. ನೀವೆಲ್ಲೇ ಇದ್ದರೂ ಅವನು ನಿಮ್ಮ ಜೊತೆಗಿರುವನು. ಅಲ್ಲಾಹು ನೀವು ಮಾಡುತ್ತಿರುವುದನ್ನು ವೀಕ್ಷಿಸುವವನಾಗಿರುವನು." [ಅಲ್-ಹದೀದ್:4]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಆಕಾಶಗಳನ್ನು, ಭೂಮಿಯನ್ನು ಮತ್ತು ಅವುಗಳ ಮಧ್ಯೆಯಿರುವವುಗಳನ್ನು ನಾವು ಆರು ದಿನಗಳಲ್ಲಿ ಸೃಷ್ಟಿಸಿರುವೆವು. ನಮ್ಮನ್ನು ಯಾವುದೇ ದಣಿವೂ ಸ್ಪರ್ಶಿಸಲಿಲ್ಲ." [ಕ್ವಾಫ್:38].

## 8. ಸರ್ವಶಕ್ತನಾದ ಅಲ್ಲಾಹನಿಗೆ ಅವನ ಆಧಿಪತ್ಯದಲ್ಲಿ, ಅವನ ಸೃಷ್ಟಿಯಲ್ಲಿ, ಅವನ ಕಾರ್ಯನಿಯಂತ್ರಣದಲ್ಲಿ ಅಥವಾ ಅವನ ಆರಾಧನೆಯಲ್ಲಿ ಯಾವುದೇ ಭಾಗೀದಾರರಿಲ್ಲ.

ಸರ್ವಶಕ್ತನಾದ ಅಲ್ಲಾಹನಿಗೆ ಅವನ ಆಧಿಪತ್ಯದಲ್ಲಿ, ಅವನ ಸೃಷ್ಟಿಯಲ್ಲಿ, ಅವನ ಕಾರ್ಯನಿಯಂತ್ರಣದಲ್ಲಿ ಅಥವಾ ಅವನ ಆರಾಧನೆಯಲ್ಲಿ ಯಾವುದೇ ಭಾಗೀದಾರರಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "(ಓ ಪ್ರವಾದಿಯವರೇ!) ಹೇಳಿರಿ: ಅಲ್ಲಾಹನ ಹೊರತು ನೀವು ಕರೆದು ಪ್ರಾರ್ಥಿಸುತ್ತಿರುವುದರ ಬಗ್ಗೆ ನೀವು ಚಿಂತಿಸಿ ನೋಡಿರುವಿರಾ? ಅವರು ಭೂಮಿಯಲ್ಲಿ ಏನನ್ನು ಸೃಷ್ಟಿಸಿರುವರೆಂದು ನನಗೆ ತೋರಿಸಿಕೊಡಿ. ಅಥವಾ ಆಕಾಶಗಳ ಸೃಷ್ಟಿಯಲ್ಲಿ ಅವರಿಗೆ ಏನಾದರೂ ಸಹಭಾಗಿತ್ವವಿದೆಯೇ? ನೀವು ಸತ್ಯವಂತರಾಗಿದ್ದರೆ ಇದಕ್ಕಿಂತ ಮುಂಚಿನ ಯಾವುದಾದರೂ ಗ್ರಂಥವನ್ನು ಅಥವಾ ಜ್ಞಾನದ ಕುರುಹನ್ನು ನನ್ನ ಬಳಿಗೆ ತನ್ನಿರಿ." [ಅಲ್-ಅಹ್ಕಾಫ್:4].

ಶೇಖ್ ಸಅ್‌ದಿ رحمه الله ರವರು ಹೇಳುತ್ತಾರೆ: "ಅರ್ಥಾತ್: ಓ ಪ್ರವಾದಿಯವರೇ, ಯಾವುದೇ ಲಾಭವನ್ನೋ, ಹಾನಿಯನ್ನೋ, ಜೀವನವನ್ನೋ, ಮರಣವನ್ನೋ, ಅಥವಾ

ಪುನರುತ್ಥಾನವನ್ನೋ, ಅಧೀನದಲ್ಲಿಟ್ಟುಕೊಳ್ಳದ ವಿಗ್ರಹಗಳನ್ನು ಮತ್ತು ಪ್ರತಿಸ್ಪರ್ಧಿಗಳನ್ನು ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿ ಮಾಡುವ ಇವರೊಂದಿಗೆ – ಅವರ ವಿಗ್ರಹಗಳ ಅಸಮರ್ಥತೆಯನ್ನು ಮತ್ತು ಆರಾಧನೆಯ ಯಾವುದೇ ಅಂಶಕ್ಕೂ ಅವರು ಅರ್ಹರಲ್ಲ ಎಂಬುದನ್ನು ಅವರಿಗೆ ವಿವರಿಸಿಕೊಡುತ್ತಾ ಕೇಳಿರಿ: **"ಅವರು ಭೂಮಿಯಲ್ಲಿ ಏನನ್ನು ಸೃಷ್ಟಿಸಿರುವರೆಂದು ನನಗೆ ತೋರಿಸಿಕೊಡಿ. ಅಥವಾ ಆಕಾಶಗಳ ಸೃಷ್ಟಿಯಲ್ಲಿ ಅವರಿಗೆ ಏನಾದರೂ ಸಹಭಾಗಿತ್ವವಿದೆಯೇ?"**

ಅವರು ಭೂಮಿ ಮತ್ತು ಆಕಾಶಕಾಯಗಳಲ್ಲಿ ಏನನ್ನಾದರೂ ಸೃಷ್ಟಿಸಿದ್ದಾರೆಯೇ? ಅವರು ಪರ್ವತಗಳನ್ನು ಸೃಷ್ಟಿಸಿದ್ದಾರೆಯೇ? ಅವರು ನದಿಗಳನ್ನು ಹರಿಸಿದ್ದಾರೆಯೇ? ಅವರು ಯಾವುದಾದರೂ ಪ್ರಾಣಿಗೆ ಪುನರ್ಜೀವ ನೀಡಿದ್ದಾರೆಯೇ? ಅವರು ಯಾವುದಾದರೂ ಮರಗಳನ್ನು ಬೆಳೆಸಿದ್ದಾರೆಯೇ? ಇವುಗಳಲ್ಲಿ ಯಾವುದನ್ನಾದರೂ ಸೃಷ್ಟಿಸಲು ಅವರಲ್ಲಿ ಯಾರಾದರೂ (ಅಲ್ಲಾಹನಿಗೆ) ಸಹಾಯ ಮಾಡಿದ್ದಾರೆಯೇ? ಯಾವುದೂ ಇಲ್ಲವೆಂದು ಇತರರಿಗಿಂತ ಹೆಚ್ಚಾಗಿ ಸ್ವತಃ ಅವರೇ ಒಪ್ಪಿಕೊಳ್ಳುತ್ತಾರೆ. ಅಲ್ಲಾಹನ ಹೊರತಾದ ಇತರ ಯಾವುದೇ ವಸ್ತುಗಳಿಗೆ ಆರಾಧನೆ ಸಲ್ಲಿಸುವುದು ವ್ಯರ್ಥವೆಂಬುದಕ್ಕೆ ಇದು ತರ್ಕಬದ್ಧವಾದ ಸುಸ್ಪಷ್ಟ ಪುರಾವೆಯಾಗಿದೆ.

ನಂತರ ಇದಕ್ಕೆ ಧಾರ್ಮಿಕವಾದ ಪುರಾವೆಯಿರುವುದನ್ನು ನಿಷೇಧಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಇದಕ್ಕಿಂತ ಮುಂಚಿನ ಯಾವುದಾದರೂ ಗ್ರಂಥವನ್ನು ತಿನ್ನಿರಿ."** (ಅಂದರೆ) ಬಹುದೇವಾರಾಧನೆಯ ಕಡೆಗೆ ಆಹ್ವಾನಿಸುವಂತಹ ಗ್ರಂಥವನ್ನು. **"ಅಥವಾ ಜ್ಞಾನದ ಕುರುಹನ್ನು ನನ್ನ ಬಳಿಗೆ ತನ್ನಿರಿ."** (ಅಂದರೆ) ಪ್ರವಾದಿಗಳು ಬಹುದೇವಾರಾಧನೆಯನ್ನು ಆದೇಶಿಸಿದ್ದಾರೆ ಎನ್ನುವುದಕ್ಕೆ ಅನುವಂಶಿಕವಾಗಿ ಪಡೆದ ಜ್ಞಾನದ ಕುರುಹನ್ನು. ಬಹುದೇವಾರಾಧನೆಗಿರುವ ಯಾವುದೇ ಪುರಾವೆಯನ್ನು ಯಾವುದೇ ಒಬ್ಬ ಪ್ರವಾದಿಯಿಂದಲೂ ತಂದು ತೋರಿಸಲು ಅವರಿಗೆ ಸಾಧ್ಯವಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಬದಲಾಗಿ, ಎಲ್ಲಾ ಸಂದೇಶವಾಹಕರು ತಮ್ಮ ಪಾಲಕ ಪ್ರಭುವಿನ ಏಕತ್ವದ (ತೌಹೀದ್) ಕಡೆಗೆ ಕರೆ ನೀಡಿದರು ಮತ್ತು ಬಹುದೇವಾರಾಧನೆಯನ್ನು ವಿರೋಧಿಸಿದರು ಎಂದು ನಾವು ಖಚಿತವಾಗಿ ಮತ್ತು

ಖಾತ್ರಿಯಾಗಿ ತಿಳಿದಿದ್ದೇವೆ. ಇದು ಅವರಿಂದ ಪಡೆದ ಜ್ಞಾನದ ಕುರುಹುಗಳಲ್ಲೇ ಅತಿದೊಡ್ಡದಾಗಿದೆ. [ತಫ್ಸೀರ್ ಇಬ್ನು ಸಅದಿ: 779.]

ಸರ್ವಶಕ್ತನಾದ ಅಲ್ಲಾಹನು ಆಧಿಪತ್ಯದ ಒಡೆಯನಾಗಿರುವನು. ಅವನ ಅಧಿಪತ್ಯದಲ್ಲಿ ಅವನಿಗೆ ಯಾವುದೇ ಸಹಭಾಗಿಗಳಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೇಳಿರಿ: ಓ ಆಧಿಪತ್ಯದ ಒಡೆಯನಾಗಿರುವ ಅಲ್ಲಾಹನೇ! ನೀನಿಚ್ಛಿಸುವವರಿಗೆ ನೀನು ಆಧಿಪತ್ಯವನ್ನು ನೀಡುವೆ ಮತ್ತು ನೀನಿಚ್ಛಿಸುವವರಿಂದ ನೀನು ಆಧಿಪತ್ಯವನ್ನು ತೆಗೆದುಬಿಡುವೆ. ನೀನಿಚ್ಛಿಸುವವರನ್ನು ನೀನು ಗೌರವಿಸುವೆ ಮತ್ತು ನೀನಿಚ್ಛಿಸುವವರನ್ನು ನೀನು ಅವಮಾನ ಮಾಡುವೆ. ಒಳಿತಿರುವುದು ನಿನ್ನ ಕೈಯಲ್ಲಾಗಿದೆ. ಖಂಡಿತವಾಗಿಯೂ ನೀನು ಸಕಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿರುವೆ."** [ಆಲಿ ಇಮ್ರಾನ್:26].

ಪುನರುತ್ಥಾನದ ದಿನ ಸಂಪೂರ್ಣ ಅಧಿಕಾರವು ಕೇವಲ ಅಲ್ಲಾಹನಿಗೆ ಮಾತ್ರವೆಂದು ವಿವರಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಅದು ಅವರು ಬಯಲಿಗೆ ಬರುವ ದಿನವಾಗಿದೆ. ಅವರಿಗೆ ಸಂಬಂಧಿಸಿದ ಯಾವುದೇ ವಿಷಯವೂ ಅಲ್ಲಾಹನಿಂದ ಮರೆಯಾಗಿರಲಾರದು. ಇಂದು ರಾಜಾಧಿಕಾರವು ಯಾರಿಗೆ? ಏಕನೂ ಸರ್ವಾಧಿಕಾರಿಯೂ ಆಗಿರುವ ಅಲ್ಲಾಹನಿಗೆ."** [ಗಾಫಿರ್:16].

ಸರ್ವಶಕ್ತನಾದ ಅಲ್ಲಾಹನಿಗೆ ಅವನ ಅಧಿಪತ್ಯದಲ್ಲಿ, ಅವನ ಸೃಷ್ಟಿಯಲ್ಲಿ, ಅವನ ಕಾರ್ಯನಿಯಂತ್ರಣದಲ್ಲಿ, ಅಥವಾ ಅವನ ಆರಾಧನೆಯಲ್ಲಿ, ಅವನಿಗೆ ಯಾವುದೇ ಸಹಭಾಗಿಗಳಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೇಳಿರಿ: ಸಂತತಿಯನ್ನು ಮಾಡಿಕೊಳ್ಳದಿರುವ, ಆಧಿಪತ್ಯದಲ್ಲಿ ಸಹಭಾಗಿಯಿಲ್ಲದಿರುವ ಮತ್ತು ನಿಂದ್ಯತೆಯಿಂದ ರಕ್ಷಿಸಿಕೊಳ್ಳಲು ಯಾವುದೇ ರಕ್ಷಕನ ಅಗತ್ಯವಿಲ್ಲದಿರುವ ಅಲ್ಲಾಹನಿಗೆ ಸ್ತುತಿ. ಅವನನ್ನು ಸರಿಯಾದ ವಿಧದಲ್ಲಿ ಮಹತ್ವೀಕರಿಸಿರಿ."** [ಅಲ್-ಇಸ್ರಾ:111].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಕಾಶಗಳ ಮತ್ತು ಭೂಮಿಯ ಆಧಿಪತ್ಯವು ಯಾರಿಗಾಗಿದೆಯೋ ಅವನಾಗಿರುವನು (ಕುರ್‌ಆನನ್ನು ಅವತೀರ್ಣಗೊಳಿಸಿದವನು). ಅವನು ಸಂತತಿಯನ್ನು ಮಾಡಿಕೊಂಡವನಲ್ಲ. ಆಧಿಪತ್ಯದಲ್ಲಿ ಅವನೊಂದಿಗೆ ಯಾವುದೇ ಸಹಭಾಗಿಗಳಿಲ್ಲ. ಅವನು ಪ್ರತಿಯೊಂದು ವಸ್ತುವನ್ನೂ ಸೃಷ್ಟಿಸಿ ಅದನ್ನು ಯಥಾವತ್ತಾಗಿ ವ್ಯವಸ್ಥೆಗೊಳಿಸಿರುವನು."** [ಅಲ್-ಫುರ್ಖಾನ್:2].

ಅವನು ಸಾಮ್ರಾಟನು ಮತ್ತು ಅವನ ಹೊರತಾದ ಎಲ್ಲವೂ ಅವನ ಪ್ರಜೆಗಳು. ಅವನು ಸೃಷ್ಟಿಕರ್ತನು ಮತ್ತು ಅವನ ಹೊರತಾದ ಎಲ್ಲವೂ ಅವನ ಸೃಷ್ಟಿಗಳು. ಅವನು ಕಾರ್ಯನಿಯಂತ್ರಕನು. ಇಂತಹ ವಿಶೇಷತೆಯು ಯಾರಲ್ಲಿ ಇದೆಯೋ ಅವನನ್ನು ಆರಾಧಿಸುವುದು ಕಡ್ಡಾಯವಾಗಿದೆ. ಅವನ ಹೊರತಾಗಿರುವವರನ್ನು ಆರಾಧಿಸುವುದು ಬುದ್ಧಿಯ ಅಪೂರ್ಣತೆಯಾಗಿದೆ ಮತ್ತು ಇಹಲೋಕ ಹಾಗೂ ಪರಲೋಕ ಜೀವನವನ್ನು ನಾಶಗೊಳಿಸುವ ಬಹುದೇವಾರಾಧನೆಯಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ಯಹೂದರೋ ಕ್ರೈಸ್ತರೋ ಆದರೆ ಮಾತ್ರ ಸನ್ಮಾರ್ಗ ಪಡೆದವರಾಗುವಿರಿ ಎಂದು ಅವರು ಹೇಳುವರು. ಹೇಳಿರಿ: ಅಲ್ಲ; (ನಾವು ಅನುಸರಿಸಬೇಕಾದುದು) ಶುದ್ಧಮನಸ್ಕರಾಗಿರುವ ಇಬ್ರಾಹೀಮ್‌ರ ಮಾರ್ಗವನ್ನಾಗಿದೆ. ಅವರು ಬಹುದೇವಾರಾಧಕರ ಪೈಕಿ ಸೇರಿದವರಾಗಿರಲಿಲ್ಲ."** [ಅಲ್-ಬಖರ:135].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಸಾತ್ವಿಕನಾಗಿರುತ್ತಾ ಯಾರು ತನ್ನ ಮುಖವನ್ನು ಅಲ್ಲಾಹನಿಗೆ ಶರಣಾಗಿಸುವನೋ ಮತ್ತು ಸತ್ಯಮಾರ್ಗದಲ್ಲಿ ದೃಢವಾಗಿ ನೆಲೆನಿಂತು ಇಬ್ರಾಹೀಮ್‌ರ ಮಾರ್ಗವನ್ನು ಅನುಸರಿಸುವನೋ ಅವನಿಗಿಂತಲೂ ಉತ್ತಮ ಧರ್ಮನಿಷ್ಠೆಯುಳ್ಳವನು ಇನ್ನಾರಿರುವನು? ಅಲ್ಲಾಹು ಇಬ್ರಾಹೀಮ್‌ರನ್ನು ಆಪ್ತಮಿತ್ರರನ್ನಾಗಿ ಮಾಡಿಕೊಂಡಿರುವನು."** [ಅನ್ನಿಸಾ:125].

ಯಾರು ಇಬ್ರಾಹೀಮ್ ಖಲೀಲ್ عليه السلام ರ ಮಾರ್ಗವನ್ನು ತೊರೆದು ಅನ್ಯ ಮಾರ್ಗವನ್ನು ಅನುಸರಿಸುತ್ತಾನೋ ಅವನು ಸ್ವತಃ ಅವನನ್ನೇ ಮೂರ್ಖನನ್ನಾಗಿ ಮಾಡಿದ್ದಾನೆ ಎಂದು ಸತ್ಯವಂತನಾದ ಅಲ್ಲಾಹನು ವಿವರಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಸ್ವತಃ ತನ್ನನ್ನೇ ಮೂರ್ಖನನ್ನಾಗಿ ಮಾಡಿಕೊಂಡವನ ಹೊರತು ಇಬ್ರಾಹೀಮ್‌ರ ಮಾರ್ಗದಿಂದ ವಿಮುಖನಾಗುವವನು ಯಾರಿರುವನು? ನಾವು ಅವರನ್ನು (ಇಬ್ರಾಹೀಮ್‌ರನ್ನು) ಇಹಲೋಕದಲ್ಲಿ ವಿಶೇಷವಾಗಿ ಆರಿಸಿರುವೆವು. ಪರಲೋಕದಲ್ಲಿ ಅವರು ಸಜ್ಜನರಲ್ಲೇ ಸೇರಿದವರಾಗಿರುವರು."** [ಅಲ್-ಬಖರ:130].

## 9. ಪರಮ ಪಾವನನಾದ ಅಲ್ಲಾಹನು ಯಾರಿಂದಲೂ ಜನಿಸಿಲ್ಲ ಮತ್ತು ಯಾರಿಗೂ ಜನ್ಮ ನೀಡಿಲ್ಲ. ಅವನಿಗೆ ಸರಿಸಮಾನರಾಗಿ, ಸರಿಸಾಟಿಯಾಗಿ ಯಾರೂ ಇಲ್ಲ.

ಪರಮ ಪಾವನನಾದ ಅಲ್ಲಾಹನು ಯಾರಿಂದಲೂ ಜನಿಸಿಲ್ಲ ಮತ್ತು ಯಾರಿಗೂ ಜನ್ಮ ನೀಡಿಲ್ಲ. ಅವನಿಗೆ ಸರಿಸಮಾನರಾಗಿ, ಸರಿಸಾಟಿಯಾಗಿ ಯಾರೂ ಇಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ಅವನು ಅಲ್ಲಾಹು! ಏಕಮೇವನಾಗಿರುವನು.(1) ಅಲ್ಲಾಹು ನಿರಪೇಕ್ಷಕನಾಗಿರುವನು.(2) ಅವನು (ಯಾರಿಗೂ) ಜನ್ಮವನ್ನು ನೀಡಿಲ್ಲ. ಅವನು (ಯಾರದೇ ಸಂತತಿಯಾಗಿ) ಜನಿಸಿದವನೂ ಅಲ್ಲ.(3) ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ.(4)"** [ಅಲ್-ಇಖ್ಲಾಸ್:1-4]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವನು ಆಕಾಶಗಳ, ಭೂಮಿಯ ಮತ್ತು ಅವೆರಡರ ಮಧ್ಯೆಯಿರುವವುಗಳ ಪ್ರಭುವಾಗಿರುವನು. ಆದ್ದರಿಂದ ಅವನನ್ನು (ಮಾತ್ರ)**

ಆರಾಧಿಸಿರಿ ಮತ್ತು ಅವನ ಆರಾಧನೆಯಲ್ಲಿ ತಾವು ತಾಳ್ಮೆಯಿಂದ ಅಚಲರಾಗಿ ನಿಲ್ಲಿರಿ. ಅವನಿಗೆ ಸರಿಸಮಾನರಾಗಿರುವ ಯಾರನ್ನಾದರೂ ತಾವು ಅರಿತಿರುವಿರಾ?" [ಮರ್ಯಮ್:65]

ಸತ್ಯವಂತನಾದ ಅಲ್ಲಾಹನು ಹೇಳುತ್ತಾನೆ: "(ಅವನು) ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನು. ಅವನು ನಿಮ್ಮಿಂದಲೇ ನಿಮಗೆ ಜೋಡಿಗಳನ್ನು ಮಾಡಿಕೊಟ್ಟಿರುವನು. ಅವನು ಜಾನುವಾರುಗಳಿಂದಲೂ ಜೋಡಿಗಳನ್ನು (ಮಾಡಿರುವನು). ತನ್ಮೂಲಕ ಅವನು ನಿಮ್ಮನ್ನು ಸೃಷ್ಟಿಸಿ ಅಧಿಕಗೊಳಿಸುವನು. ಅವನಿಗೆ ಹೋಲಿಕೆಯಾಗಿ ಯಾವುದೂ ಇಲ್ಲ. ಅವನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ವೀಕ್ಷಿಸುವವನೂ ಆಗಿರುವನು." [ಅಶ್ಶೂರಾ:11]

## 10. ಸರ್ವಶಕ್ತನಾದ ಅಲ್ಲಾಹನು ಯಾವ ವಸ್ತುವಿನಲ್ಲೂ ಅವತರಿಸುವುದಿಲ್ಲ. ಅವನ ಸೃಷ್ಟಿಯಲ್ಲಿ ಯಾವ ರೂಪದಲ್ಲೂ ಅವನು ಪ್ರತ್ಯಕ್ಷನಾಗುವುದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಯಾವ ವಸ್ತುವಿನಲ್ಲೂ ಅವತರಿಸುವುದಿಲ್ಲ. ಅವನ ಸೃಷ್ಟಿಯಲ್ಲಿ ಯಾವ ರೂಪದಲ್ಲೂ ಅವನು ಪ್ರತ್ಯಕ್ಷನಾಗುವುದಿಲ್ಲ. ಅವನು ಯಾವ ವಸ್ತುವಿನೊಂದಿಗೂ ಲೀನವಾಗುವುದಿಲ್ಲ. ಏಕೆಂದರೆ ಅಲ್ಲಾಹನು ಸೃಷ್ಟಿಕರ್ತನು ಮತ್ತು ಅವನ ಹೊರತಾಗಿರುವುದೆಲ್ಲವೂ ಸೃಷ್ಟಿಗಳು. ಅವನು ಶಾಶ್ವತನು ಮತ್ತು ಅವನ ಹೊರತಾಗಿರುವುದೆಲ್ಲವೂ ನಶ್ವರ. ಎಲ್ಲಾ ವಸ್ತುಗಳು ಅವನ ಆಧಿಪತ್ಯದಲ್ಲಿದೆ ಮತ್ತು ಅವನೇ ಅದರ ಒಡೆಯನಾಗಿದ್ದಾನೆ. ಅಲ್ಲಾಹನು ತನ್ನ ಸೃಷ್ಟಿಯಲ್ಲಿ ಸೇರಿದ ಯಾವ ವಸ್ತುವಿನಲ್ಲೂ ಅವತರಿಸುವುದಿಲ್ಲ. ಅವನ ಸೃಷ್ಟಿಯಲ್ಲಿ ಸೇರಿದ ಯಾವ ವಸ್ತುವೂ ಆ ಪರಮ ಪಾವನನ ಅಸ್ತಿತ್ವದಲ್ಲಿ ಅವತರಿಸುವುದಿಲ್ಲ. ಸರ್ವಶಕ್ತನಾದ ಅಲ್ಲಾಹನು ಎಲ್ಲಾ ವಸ್ತುಗಳಿಗಿಂತಲೂ ದೊಡ್ಡವನು. ಎಲ್ಲಾ ವಸ್ತುಗಳಿಗಿಂತಲೂ ಮಹಾನನು.

ಅಲ್ಲಾಹನು ಈಸಾ ಮಸೀಹರಲ್ಲಿ ಅವತರಿಸಿದ್ದಾನೆ ಎಂದು ವಾದಿಸುವವರನ್ನು ಖಂಡಿಸುತ್ತಾ ಅಲ್ಲಾಹನು ಹೇಳುತ್ತಾನೆ: "ಮರ್ಯಮ್‌ರ ಪುತ್ರ ಮಸೀಹನೇ ಅಲ್ಲಾಹು ಎಂದು ಹೇಳಿದವರು ಖಂಡಿತವಾಗಿಯೂ ಅವಿಶ್ವಾಸಿಗಳಾಗಿರುವರು. (ಓ ಪ್ರವಾದಿಯವರೇ!) ತಾವು

ಹೇಳಿರಿ: ಮರ್ಯಮ್‌ರ ಪುತ್ರ ಮಸೀಹರನ್ನು, ಅವರ ತಾಯಿಯನ್ನು ಮತ್ತು ಭೂಮಿಯಲ್ಲಿರುವ ಸರ್ವರನ್ನೂ ಅಲ್ಲಾಹು ನಾಶ ಮಾಡಲು ಬಯಸಿದರೆ ಅವನ ಯಾವುದೇ ನಿರ್ಧಾರದಲ್ಲಿ ಪ್ರಭಾವ ಬೀರಲು ಯಾರಿಗೆ ಸಾಧ್ಯವಿದೆ? ಆಕಾಶಗಳಲ್ಲಿ, ಭೂಮಿಯಲ್ಲಿ ಮತ್ತು ಅವೆರಡರ ಮಧ್ಯೆಯಿರುವ ಎಲ್ಲದರ ಆಧಿಪತ್ಯವೂ ಅಲ್ಲಾಹನಿಗಿರುವುದಾಗಿದೆ. ಅವನಿಚ್ಛಿಸುವುದನ್ನು ಅವನು ಸೃಷ್ಟಿಸುವನು. ಅಲ್ಲಾಹು ಸರ್ವ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿರುವನು." [ಅಲ್-ಮಾಇದ:17]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಪೂರ್ವ ಮತ್ತು ಪಶ್ಚಿಮವು ಅಲ್ಲಾಹನದ್ದಾಗಿವೆ. ಆದ್ದರಿಂದ ನೀವು ಎತ್ತ ತಿರುಗಿ ಪ್ರಾರ್ಥಿಸಿದರೂ ಅಲ್ಲಿ ಅಲ್ಲಾಹನ ಮುಖವಿದೆ. ಖಂಡಿತವಾಗಿಯೂ ಅಲ್ಲಾಹು ಅಪಾರ ಸಾಮರ್ಥ್ಯವುಳ್ಳವನೂ, ಸರ್ವಜ್ಞನೂ ಆಗಿರುವನು.(115) ಅಲ್ಲಾಹು ಸಂತತಿಯನ್ನು ಮಾಡಿಕೊಂಡಿರುವನು ಎಂದು ಅವರು ಹೇಳುವರು. ಅವನು ಪರಮಪಾವನನು! ಅಲ್ಲ; ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನದ್ದಾಗಿವೆ. ಎಲ್ಲರೂ ಅವನಿಗೆ ಶರಣಾದವರಾಗಿರುವರು(116) ಯಾವುದೇ ಪೂರ್ವ ಮಾದರಿಯೂ ಇಲ್ಲದೆ ಆಕಾಶಗಳನ್ನು ಮತ್ತು ಭೂಮಿಯನ್ನು ನಿರ್ಮಿಸಿದವನು. ಅವನೊಂದು ವಿಷಯವನ್ನು ತೀರ್ಮಾನಿಸಿದರೆ ಅದರೊಂದಿಗೆ 'ಉಂಟಾಗು' ಎಂದು ಮಾತ್ರ ಹೇಳುವನು; ತಕ್ಷಣ ಅದುಂಟಾಗುವುದು!(117)" [ಅಲ್-ಬಖರ:115-117]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಪರಮ ದಯಾಮಯನು ಒಂದು ಸಂತತಿಯನ್ನು ಮಾಡಿಕೊಂಡಿರುವನೆಂದು ಅವರು ಹೇಳಿರುವರು.(88) (ಓ ಜನರೇ!) ನೀವು ಮಾಡಿರುವುದು ಖಂಡಿತವಾಗಿಯೂ ಒಂದು ಗುರುತರವಾದ ಕೃತ್ಯವಾಗಿದೆ.(89) ಅದರಿಂದಾಗಿ ಆಕಾಶಗಳು ಒಡೆದು ಛಿದ್ರವಾಗಿ, ಭೂಮಿಯು ಬಿರುಕು ಬಿಟ್ಟು, ಪರ್ವತಗಳು ನುಚ್ಚುನೂರಾಗಿ ಬೀಳುವಂತಾಗುವುದು.(90) ಪರಮ ದಯಾಮಯನಿಗೆ ಸಂತತಿಯಿದೆಯೆಂದು ಅವರು ವಾದಿಸಿದ ಕಾರಣದಿಂದಾಗಿ.(91) ಸಂತತಿಯನ್ನು ಮಾಡಿಕೊಳ್ಳುವುದು ಪರಮ ದಯಾಮಯನಿಗೆ ಯುಕ್ತವಾದುದಲ್ಲ.(92) ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಯಾವುದೇ ವ್ಯಕ್ತಿಯೂ ಪರಮ ದಯಾಮಯನ ಬಳಿಗೆ ಒಬ್ಬ ದಾಸನಾಗಿಯೇ ಹೊರತು ಬರಲಾರನು.(93) ಖಂಡಿತವಾಗಿಯೂ ಅವನು ಅವರನ್ನು ನಿಖರವಾಗಿ ಎಣಿಸಿರುವನು.(94) ಪುನರುತ್ಥಾನ

ದಿನದಂದು ಅವರೆಲ್ಲರೂ ಅವನ ಬಳಿಗೆ ಒಂಟಿಯಾಗಿಯೇ ಬರುವರು.(95)" [ಮರ್ಯಮ್:88-95]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹು! ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಎಂದೆಂದಿಗೂ ಜೀವಿಸಿರುವವನೂ ಎಲ್ಲವನ್ನೂ ನಿಯಂತ್ರಿಸುವವನೂ ಆಗಿರುವನು. ತೂಕಡಿಕೆಯಾಗಲಿ, ನಿದ್ರೆಯಾಗಲಿ ಅವನನ್ನು ಬಾಧಿಸದು. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನದ್ದಾಗಿವೆ. ಅವನ ಅನುಮತಿಯ ವಿನಾ ಅವನ ಬಳಿ ಶಿಫಾರಸ್ಸು ಮಾಡುವವನು ಯಾರಿರುವನು? ಅವರ ಮುಂದಿರುವುದನ್ನೂ, ಅವರ ಹಿಂದಿರುವುದನ್ನೂ ಅವನು ಅರಿಯುತ್ತಾನೆ. ಅವನ ಜ್ಞಾನದಿಂದ ಅವನು ಇಚ್ಛಿಸಿರುವುದನ್ನಲ್ಲದೆ (ಬೇರೇನನ್ನೂ) ಸೂಕ್ಷ್ಮವಾಗಿ ಅರಿಯಲು ಅವರಿಗೆ ಸಾಧ್ಯವಿಲ್ಲ. ಅವನ ಕುರ್ಸೀ ಆಕಾಶಗಳನ್ನು ಮತ್ತು ಭೂಮಿಯನ್ನು ಆವರಿಸಿಕೊಂಡಿದೆ. ಅವುಗಳ ಸಂರಕ್ಷಣೆಯು ಅವನಿಗೆ ಕಿಂಚಿತ್ತೂ ಭಾರವಿರುವುದಲ್ಲ. ಅವನು ಉನ್ನತನೂ, ಮಹಾನನೂ ಆಗಿರುವನು." [ಅಲ್-ಬಖರ:255]

ಯಾರ ಸ್ಥಿತಿ ಹೀಗಿದೆಯೋ ಮತ್ತು ಯಾರ ಸೃಷ್ಟಿಗಳ ಸ್ಥಿತಿ ಹೀಗಿದೆಯೋ ಇವರಿಬ್ಬರು ಪರಸ್ಪರ ಅವತರಿಸುತ್ತಾರೆಂದು ಹೇಳುವುದು ಹೇಗೆ ಸಾಧ್ಯ? ಅವರನ್ನು ಅವನು ಸಂತತಿಯಾಗಿ ಸ್ವೀಕರಿಸಿದ್ದಾನೆಂದು ಹೇಳುವುದು ಹೇಗೆ ಸಾಧ್ಯ? ಅವರನ್ನು ಅವನೊಡನೆ ಆರಾಧ್ಯರನ್ನಾಗಿ ಮಾಡಿಕೊಳ್ಳುವುದು ಹೇಗೆ ಸಾಧ್ಯ?

## 11. ಸರ್ವಶಕ್ತನಾದ ಅಲ್ಲಾಹನು ತನ್ನ ದಾಸರೊಂದಿಗೆ ಅತ್ಯಧಿಕ ದಯೆಯುಳ್ಳವನೂ, ಅಪಾರ ಕರುಣೆಯುಳ್ಳವನೂ ಆಗಿರುವನು. ಈ ಕಾರಣದಿಂದಲೇ ಅವನು ಸಂದೇಶವಾಹಕರನ್ನು ಕಳುಹಿಸಿದನು ಮತ್ತು ಗ್ರಂಥಗಳನ್ನು ಅವತೀರ್ಣಗೊಳಿಸಿದನು.

ಸರ್ವಶಕ್ತನಾದ ಅಲ್ಲಾಹನು ತನ್ನ ದಾಸರೊಂದಿಗೆ ಅತ್ಯಧಿಕ ದಯೆಯುಳ್ಳವನೂ, ಅಪಾರ ಕರುಣೆಯುಳ್ಳವನೂ ಆಗಿರುವನು. ಅವನಿಗೆ ತನ್ನ ದಾಸರೊಂದಿಗೆ ಕರುಣೆಯಿರುವುದರಿಂದಲೇ ಅವನು ಅವರನ್ನು ಸತ್ಯನಿಷೇಧ ಹಾಗೂ ಸಹಭಾಗಿತ್ವದ ಅಂಧಕಾರಗಳಿಂದ ಏಕದೇವವಿಶ್ವಾಸ ಮತ್ತು ಸನ್ಮಾರ್ಗದ ಪ್ರಕಾಶದೆಡೆಗೆ ಹೊರತರಲು ಅವರೆಡೆಗೆ ಸಂದೇಶವಾಹಕರನ್ನು ಕಳುಹಿಸಿದನು ಮತ್ತು ಗ್ರಂಥಗಳನ್ನು ಅವತೀರ್ಣಗೊಳಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಿಮ್ಮನ್ನು ಅಂಧಕಾರಗಳಿಂದ ಪ್ರಕಾಶದೆಡೆಗೆ ಹೊರತರುವ ಸಲುವಾಗಿ ತನ್ನ ದಾಸನ ಮೇಲೆ ಸ್ಪಷ್ಟವಾದ ದೃಷ್ಟಾಂತಗಳನ್ನು ಇಳಿಸಿಕೊಡುವವನು ಅವನಾಗಿರುವನು. ಖಂಡಿತವಾಗಿಯೂ ಅಲ್ಲಾಹು ನಿಮ್ಮೊಂದಿಗೆ ಅತ್ಯಂತ ದಯೆಯುಳ್ಳವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಅಲ್-ಹದೀದ್:9]

ಸರ್ವಶಕ್ತ ಅಲ್ಲಾಹನು ಹೇಳುತ್ತಾನೆ: **"ಸರ್ವಲೋಕದವರಿಗೆ ಒಂದು ಕಾರುಣ್ಯವಾಗಿಯೇ ಹೊರತು ನಾವು ತಮ್ಮನ್ನು ಕಳುಹಿಸಿಲ್ಲ."** [ಅಲ್-ಅಂಬಿಯಾ:107]

ಖಂಡಿತವಾಗಿಯೂ ತಾನು ಪಾಪಗಳನ್ನು ಕ್ಷಮಿಸುವವನು ಮತ್ತು ಅಪಾರ ಕರುಣೆ ತೋರುವನಾಗಿದ್ದೇನೆಂದು ತನ್ನ ದಾಸರಿಗೆ ತಿಳಿಸಬೇಕೆಂದು ಅಲ್ಲಾಹನು ಅವನ ಸಂದೇಶವಾಹಕರಿಗೆ ಆಜ್ಞಾಪಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಖಂಡಿತವಾಗಿಯೂ ನಾನು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವೆನೆಂದು ನನ್ನ ದಾಸರಿಗೆ ತಿಳಿಸಿಕೊಡಿರಿ."** [ಅಲ್-ಹಿಜ್ರ್:49].

ಅವನ ಕೃಪೆ ಮತ್ತು ಕರುಣೆಯಿಂದಲೇ ಅವನು ತನ್ನ ದಾಸರ ಕಷ್ಟವನ್ನು ನಿವಾರಿಸುತ್ತಾನೆ ಮತ್ತು ಅವರಿಗೆ ಒಳಿತನ್ನು ವರ್ಷಿಸುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹು ತಮಗೇನಾದರೂ ಹಾನಿಯನ್ನು ಮಾಡುವುದಾದರೆ ಅವನ ಹೊರತು ಅದನ್ನು ನಿವಾರಿಸುವವರಾರೂ ಇಲ್ಲ. ಅವನು ತಮಗೇನಾದರೂ ಒಳಿತನ್ನು ಉದ್ದೇಶಿಸುವುದಾದರೆ ಅವನ ಅನುಗ್ರಹವನ್ನು ತಡೆಯುವವರಾರೂ ಇಲ್ಲ. ಅವನು ತನ್ನ ದಾಸರ ಪೈಕಿ ಅವನಿಚ್ಛಿಸುವವರಿಗೆ ಅದನ್ನು (ಅನುಗ್ರಹವನ್ನು) ನೀಡುವನು. ಅವನು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಯೂನುಸ್:107].

## 12. ಅಲ್ಲಾಹು ಮಹಾ ಕರುಣಾಮಯಿಯಾದ ಪ್ರಭು. ಪುನರುತ್ಥಾನದ ದಿನ ಎಲ್ಲಾ ಸೃಷ್ಟಿಗಳನ್ನು ಅವರ ಸಮಾಧಿಗಳಿಂದ ಎಬ್ಬಿಸಿದಾಗ ಅವನೊಬ್ಬನೇ ಅವರನ್ನು ವಿಚಾರಣೆ ಮಾಡುವನು. ನಂತರ ಪ್ರತಿಯೊಬ್ಬರಿಗೂ ಅವರು ಮಾಡಿರುವ ಒಳಿತು ಅಥವಾ ಕೆಡುಕಿನ ಪ್ರತಿಫಲ ನೀಡುವನು. ಯಾರು ಸತ್ಯವಿಶ್ವಾಸಿಯಾಗಿರುತ್ತಾ ಸತ್ಕಾರ್ಯವೆಸಗುತ್ತಾನೋ ಅವನಿಗೆ ಶಾಶ್ವತವಾದ ಸ್ವರ್ಗೋದ್ಯಾನಗಳಿವೆ ಮತ್ತು ಯಾರು ಸತ್ಯವಿಶ್ವಾಸವನ್ನು ನಿರಾಕರಿಸಿ ದುಷ್ಕೃತ್ಯಗಳನ್ನು ಮಾಡುತ್ತಾನೋ ಅವನಿಗೆ ಪರಲೋಕದಲ್ಲಿ ಭಯಾನಕ ಶಿಕ್ಷೆ ಇದೆ.

ಅಲ್ಲಾಹು ಮಹಾ ಕರುಣಾಮಯಿಯಾದ ಪ್ರಭು. ಪುನರುತ್ಥಾನದ ದಿನ ಎಲ್ಲಾ ಸೃಷ್ಟಿಗಳನ್ನು ಅವರ ಸಮಾಧಿಗಳಿಂದ ಎಬ್ಬಿಸಿದಾಗ ಅವನೊಬ್ಬನೇ ಅವರನ್ನು ವಿಚಾರಣೆ ಮಾಡುವನು. ನಂತರ ಪ್ರತಿಯೊಬ್ಬರಿಗೂ ಅವರು ಮಾಡಿರುವ ಒಳಿತು ಅಥವಾ ಕೆಡುಕಿನ ಪ್ರತಿಫಲ ನೀಡುವನು. ಯಾರು ಸತ್ಯವಿಶ್ವಾಸಿಯಾಗಿರುತ್ತಾ ಸತ್ಕಾರ್ಯವೆಸಗುತ್ತಾನೋ ಅವನಿಗೆ ಶಾಶ್ವತವಾದ ಸ್ವರ್ಗೋದ್ಯಾನಗಳಿವೆ ಮತ್ತು ಯಾರು ಸತ್ಯವಿಶ್ವಾಸವನ್ನು ನಿರಾಕರಿಸಿ ದುಷ್ಕೃತ್ಯಗಳನ್ನು ಮಾಡುತ್ತಾನೋ ಅವನಿಗೆ ಪರಲೋಕದಲ್ಲಿ ಭಯಾನಕ ಶಿಕ್ಷೆ ಇದೆ.

ಸರ್ವಶಕ್ತನಾದ ಅಲ್ಲಾಹನು ತನ್ನ ಪರಿಪೂರ್ಣ ನ್ಯಾಯ, ಯುಕ್ತಿ ಮತ್ತು ತನ್ನ ಸೃಷ್ಟಿಗಳ ಮೇಲಿರುವ ಮಹಾ ಕರುಣೆಯಿಂದಾಗಿ ಭೂಲೋಕವನ್ನು ಕರ್ಮಭೂಮಿಯನ್ನಾಗಿ ಮಾಡಿದನು ಮತ್ತು ಪರಲೋಕವನ್ನು ಪ್ರತಿಫಲ ಮತ್ತು ವಿಚಾರಣೆಯ ಸ್ಥಳವನ್ನಾಗಿ ಮಾಡಿದನು. ಇದು ಸತ್ಕಾರ್ಯವೆಸಗುವವನು ತನ್ನ ಸತ್ಕಾರ್ಯದ ಪ್ರತಿಫಲ ಪಡೆಯಲೆಂದಾಗಿದೆ ಮತ್ತು ದುಷ್ಕೃತ್ಯವೆಸಗುವವನು, ಅನ್ಯಾಯ ಮಾಡುವವನು ಮತ್ತು ಅಲ್ಲಾಹನ ಆದೇಶಗಳನ್ನು ಉಲ್ಲಂಘಿಸುವವನು ತನ್ನ ಅನ್ಯಾಯ ಮತ್ತು ಉಲ್ಲಂಘನೆಯ ಶಿಕ್ಷೆ ಪಡೆಯಲೆಂದಾಗಿದೆ. ಕೆಲವರು ಈ ವಿಷಯವನ್ನು ಅಲ್ಲಗಳೆಯುವುದರಿಂದಾಗಿ, ಪುನರುತ್ಥಾನವು ಸತ್ಯವಾಗಿದೆ

ಅದರಲ್ಲಿ ಸಂಶಯವೇ ಇಲ್ಲ ಎಂಬುದನ್ನು ಸೂಚಿಸುವ ಬಹಳಷ್ಟು ಪುರಾವೆಗಳನ್ನು ಅಲ್ಲಾಹು ನೆಲೆಗೊಳಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಭೂಮಿಯು ಒಣಗಿ ಬರಡಾಗಿರುವುದಾಗಿ ತಾವು ಕಾಣುವಿರಿ. ತರುವಾಯ ನಾವು ಅದರ ಮೇಲೆ ನೀರನ್ನು ಸುರಿಸಿದರೆ ಅದಕ್ಕೆ ಸಂಚಲನವುಂಟಾಗುವುದು ಮತ್ತು ಅದು ಬೆಳೆಯತೊಡಗುವುದು. ಇದು ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿದೆ. ಅದಕ್ಕೆ ಜೀವವನ್ನು ನೀಡಿದವನು ಖಂಡಿತವಾಗಿಯೂ ಮೃತಪಟ್ಟವರಿಗೂ ಜೀವವನ್ನು ನೀಡುವನು. ಖಂಡಿತವಾಗಿಯೂ ಅವನು ಸಕಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿರುವನು."** [ಫುಸ್ಸಿಲತ್:39].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಜನರೇ! ಪುನರುತ್ಥಾನದ ಬಗ್ಗೆ ನಿಮಗೆ ಸಂದೇಹವಿದ್ದರೆ (ಚಿಂತಿಸಿರಿ). ಖಂಡಿತವಾಗಿಯೂ ನಾವು ನಿಮ್ಮನ್ನು ಮಣ್ಣಿನಿಂದ, ತರುವಾಯ ವೀರ್ಯದಿಂದ, ತರುವಾಯ ರಕ್ತಪಿಂಡದಿಂದ, ತರುವಾಯ ರೂಪ ನೀಡಲ್ಪಟ್ಟಿರುವ ಮತ್ತು ರೂಪ ನೀಡಲ್ಪಡದಿರುವ ಮಾಂಸ ಮುದ್ದೆಯಿಂದ ಸೃಷ್ಟಿಸಿರುವೆವು. ನಾವು ನಿಮಗೆ ವಿವರಿಸಿಕೊಡುವ ಸಲುವಾಗಿ (ಇದನ್ನು ಹೇಳುತ್ತಿರುವೆವು). ನಾವಿಚ್ಛಿಸುವುದನ್ನು ನಿಶ್ಚಿತವಾದ ಒಂದು ಅವಧಿಯ ತನಕ ನಾವು ಗರ್ಭಾಶಯಗಳಲ್ಲಿ ಇರಿಸುವೆವು. ತರುವಾಯ ನಿಮ್ಮನ್ನು ಶಿಶುವಾಗಿ ಹೊರತರುವೆವು. ತರುವಾಯ ನೀವು ನಿಮ್ಮ ಪೂರ್ಣಶಕ್ತಿಯನ್ನು ತಲುಪುವವರೆಗೆ (ಅವನು ನಿಮ್ಮನ್ನು ಪೋಷಿಸುವನು). ನಿಮ್ಮ ಪೈಕಿ (ಬೇಗನೇ) ಮರಣಹೊಂದುವವರಿದ್ದಾರೆ. ಅರಿವು ಪಡೆದ ಬಳಿಕ ಏನನ್ನೂ ಅರಿತಿರದವರಾಗುವಂತೆ ಅತ್ಯಂತ ಬಲಹೀನವಾದ ಪ್ರಾಯದೆಡೆಗೆ ಮರಳಿಸಲಾಗುವವರೂ ನಿಮ್ಮಲ್ಲಿದ್ದಾರೆ. ಭೂಮಿಯು ಒಣಗಿ ನಿರ್ಜೀವವಾಗಿರುವುದನ್ನು ತಾವು ಕಾಣುವಿರಿ. ತರುವಾಯ ನಾವು ಅದರ ಮೇಲೆ (ಮಳೆ)ನೀರನ್ನು ಸುರಿಸಿದರೆ ಅದಕ್ಕೆ ಪುಳಕವುಂಟಾಗಿ ಅದು ಬೆಳವಣಿಗೆ ಹೊಂದುತ್ತದೆ ಮತ್ತು ಸುಂದರವಾದ ಸರ್ವ ಸಸ್ಯಗಳನ್ನೂ ಅದು ಹೊರತರುತ್ತದೆ."** [ಅಲ್-ಹಜ್ಜ್:5]

ಸತ್ಯವಂತನಾದ ಅಲ್ಲಾಹು ಈ ಸೂಕ್ತಿಯಲ್ಲಿ ಪುನರುತ್ಥಾನಕ್ಕೆ ಪುರಾವೆಯಾಗಿ ಮೂರು ತರ್ಕಬದ್ಧವಾದ ಪುರಾವೆಗಳನ್ನು ಪ್ರಸ್ತಾಪಿಸಿದ್ದಾನೆ:

1. ಅಲ್ಲಾಹನು ಮನುಷ್ಯನನ್ನು ಪ್ರಪ್ರಥಮವಾಗಿ ಮಣ್ಣಿನಿಂದ ಸೃಷ್ಟಿಸಿದನು. ಮನುಷ್ಯನನ್ನು ಮಣ್ಣಿನಿಂದ ಸೃಷ್ಟಿಸಿದವನಿಗೆ ಮನುಷ್ಯನು ಮಣ್ಣಾದ ಬಳಿಕ ಮತ್ತೆ ಅವನಿಗೆ ಜೀವ ನೀಡುವ ಸಾಮರ್ಥ್ಯವಿದೆ.

2. ಮನುಷ್ಯನನ್ನು ವೀರ್ಯದಿಂದ ಸೃಷ್ಟಿಸಿದವನಿಗೆ ಮನುಷ್ಯನ ಮರಣಾನಂತರ ಮತ್ತೆ ಜೀವ ನೀಡುವ ಸಾಮರ್ಥ್ಯವಿದೆ.

3. ಭೂಮಿಯನ್ನು ಒಣಗಿ ಬರಡಾದ ಬಳಿಕ ಮಳೆ ನೀರಿನಿಂದ ಜೀವಂತಗೊಳಿಸು ವವನಿಗೆ ಮನುಷ್ಯರನ್ನು ಅವರ ಮರಣಾನಂತರ ಜೀವಂತಗೊಳಿಸುವ ಸಾಮರ್ಥ್ಯವಿದೆ. ಈ ಸೂಕ್ತಿಯಲ್ಲಿ ಕುರ್‌ಆನ್‌ನ ಪವಾಡಕ್ಕೆ ಅತಿದೊಡ್ಡ ಪುರಾವೆ ಇದೆ. ಈ ಚಿಕ್ಕ ಸೂಕ್ತಿಯಲ್ಲಿ ಒಂದು ದೊಡ್ಡ ವಿಷಯದ ಕುರಿತು ಮೂರು ತರ್ಕಬದ್ಧವಾದ, ಕಣ್ಣಿಗೆ ರಾಚುವಂತಹ ಪುರಾವೆಗಳನ್ನು ಹೇಗೆ ಒಟ್ಟುಗೂಡಿಸಲಾಗಿದೆ (ಎಂದು ನೋಡಿರಿ!)

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಗ್ರಂಥಗಳ ಹಾಳೆಗಳನ್ನು ಸುರುಳಿಯಾಗಿ ಸುತ್ತುವಂತೆ ನಾವು ಆಕಾಶವನ್ನು ಸುತ್ತುವ ದಿನ. ಸೃಷ್ಟಿಯನ್ನು ಮೊದಲ ಬಾರಿಗೆ ಆರಂಭಿಸಿದಂತೆ ನಾವದನ್ನು ಪುನರಾವರ್ತಿಸುವೆವು. ಅದು ನಮ್ಮ ಮೇಲಿನ ಹೊಣೆಯಾಗಿರುವ ಒಂದು ವಾಗ್ದಾನವಾಗಿದೆ. ಖಂಡಿತವಾಗಿಯೂ ನಾವು (ಅದನ್ನು) ಜಾರಿಗೆ ತಂದೇ ತರುವೆವು."** [ಅಲ್-ಅಂಬಿಯಾ:104]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವನು ನಮಗೊಂದು ಉಪಮೆಯನ್ನು ನೀಡಿರುವನು ಮತ್ತು ತನ್ನ ಸೃಷ್ಟಿಯನ್ನೇ ಮರೆತಿರುವನು. ಅವನು ಹೇಳಿದನು: ಕೊಳೆತ ಮೂಳೆಗಳಿಗೆ ಜೀವ ನೀಡುವವನಾರು?(78) ಹೇಳಿರಿ: ಅದನ್ನು ಮೊದಲ ಬಾರಿ ಸೃಷ್ಟಿಸಿದವನೇ ಅದಕ್ಕೆ ಜೀವವನ್ನು ನೀಡುವನು. ಅವನು ಸಕಲ ಸೃಷ್ಟಿಗಳ ಬಗ್ಗೆ ಅರಿವುಳ್ಳವನಾಗಿರುವನು."** [ಯಾಸೀನ್:79].

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ: **"ಸೃಷ್ಟಿಸಲು ಅತಿಕ್ಲಿಷ್ಟಕರವಾಗಿರುವುದು ನಿಮ್ಮನ್ನೇ ಅಥವಾ ಆಕಾಶವನ್ನೇ? ಅವನು ಅದನ್ನು (ಆಕಾಶವನ್ನು) ನಿರ್ಮಿಸಿರುವನು.(27) ಅದರ ಛಾವಣಿಯನ್ನು ಅವನು ಏರಿಸಿರುವನು ಮತ್ತು ಅದನ್ನು ವ್ಯವಸ್ಥಿತಗೊಳಿಸಿದನು.(28) ಅದರ ರಾತ್ರಿಯನ್ನು ಅವನು ಕತ್ತಲನ್ನಾಗಿ ಮಾಡಿದನು ಮತ್ತು ಅದರ ಹಗಲನ್ನು ಅವನು ಪ್ರತ್ಯಕ್ಷಗೊಳಿಸಿದನು.(29) ಅದರ ನಂತರ ಅವನು ಭೂಮಿಯನ್ನು ವಿಕಸನಗೊಳಿಸಿದನು.(30) ಅದರಿಂದ ಅದರ ನೀರನ್ನೂ, ಸಸ್ಯಜಾಲಗಳನ್ನೂ ಅವನು ಹೊರತಂದನು.(31) ಅವನು ಪರ್ವತಗಳನ್ನು ದೃಢವಾಗಿ ಸ್ಥಾಪಿಸಿದನು.(32)"** [ಅನ್ನಾಝಿಆತ್:27-32]

ಮನುಷ್ಯನ ಸೃಷ್ಟಿಯು ಭೂಮ್ಯಾಕಾಶಗಳ ಮತ್ತು ಅವುಗಳಲ್ಲಿರುವ ವಸ್ತುಗಳ ಸೃಷ್ಟಿಗಿಂತ ಹೆಚ್ಚು ಸಂಕೀರ್ಣವಲ್ಲ ಎಂದು ಸತ್ಯವಂತನಾದ ಅಲ್ಲಾಹನು ವಿವರಿಸಿದ್ದಾನೆ. ಭೂಮ್ಯಾಕಾಶಗಳನ್ನು ಸೃಷ್ಟಿಸಲು ಸಾಮರ್ಥ್ಯವಿರುವವನು ಮನುಷ್ಯನನ್ನು ಮತ್ತೊಮ್ಮೆ ಮರುಸೃಷ್ಟಿಸಲು ಅಸಮರ್ಥನಲ್ಲ.

## 13. ಸರ್ವಶಕ್ತನಾದ ಅಲ್ಲಾಹನು ಆದಮರನ್ನು ಮಣ್ಣಿನಿಂದ ಸೃಷ್ಟಿಸಿದನು. ಅವರ ನಂತರ ಅವರ ಸಂತತಿಯು ಅಭಿವೃದ್ಧಿಯಾಗುವಂತೆ ಮಾಡಿದನು. ಆದ್ದರಿಂದ ಎಲ್ಲಾ ಮಾನವರು ತಮ್ಮ ಮೂಲದಲ್ಲಿ ಸಮಾನರು. ಯಾವುದೇ ಒಂದು ವರ್ಗಕ್ಕೆ ಇನ್ನೊಂದು ವರ್ಗಕ್ಕಿಂತ, ಯಾವುದೇ ಒಂದು ಜನತೆಗೆ ಇನ್ನೊಂದು ಜನತೆಗಿಂತ ಶ್ರೇಷ್ಠತೆಯಿಲ್ಲ, ಧರ್ಮನಿಷ್ಠೆಯನ್ನು ಹೊರತುಪಡಿಸಿ.

ಸರ್ವಶಕ್ತನಾದ ಅಲ್ಲಾಹನು ಆದಮರನ್ನು ಮಣ್ಣಿನಿಂದ ಸೃಷ್ಟಿಸಿದನು. ಅವರ ನಂತರ ಅವರ ಸಂತತಿಯು ಅಭಿವೃದ್ಧಿಯಾಗುವಂತೆ ಮಾಡಿದನು. ಆದ್ದರಿಂದ ಎಲ್ಲಾ ಮಾನವರು ತಮ್ಮ ಮೂಲದಲ್ಲಿ ಸಮಾನರು. ಯಾವುದೇ ಒಂದು ವರ್ಗಕ್ಕೆ ಇನ್ನೊಂದು ವರ್ಗಕ್ಕಿಂತ,

ಯಾವುದೇ ಒಂದು ಜನತೆಗೆ ಇನ್ನೊಂದು ಜನತೆಗಿಂತ ಶ್ರೇಷ್ಠತೆಯಿಲ್ಲ, ಧರ್ಮನಿಷ್ಠೆಯನ್ನು ಹೊರತುಪಡಿಸಿ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಮನುಷ್ಯರೇ! ಖಂಡಿತವಾಗಿಯೂ ನಾವು ನಿಮ್ಮನ್ನು ಒಂದು ಗಂಡು ಮತ್ತು ಒಂದು ಹೆಣ್ಣಿನಿಂದ ಸೃಷ್ಟಿಸಿರುವೆವು. ನೀವು ಪರಸ್ಪರ ಗುರುತಿಸುವುದಕ್ಕಾಗಿ ನಾವು ನಿಮ್ಮನ್ನು ವಿವಿಧ ಸಮುದಾಯ ಮತ್ತು ಜನಾಂಗಗಳನ್ನಾಗಿ ಮಾಡಿರುವೆವು. ಖಂಡಿತವಾಗಿಯೂ ಅಲ್ಲಾಹುವಿನ ಬಳಿ ನಿಮ್ಮ ಪೈಕಿ ಅತ್ಯಂತ ಗೌರವಾನ್ವಿತನು ನಿಮ್ಮ ಪೈಕಿ ಅತಿಹೆಚ್ಚು ಭಯಭಕ್ತಿ ಪಾಲಿಸುವವನಾಗಿರುವನು. ಖಂಡಿತವಾಗಿಯೂ ಅಲ್ಲಾಹು ಸರ್ವಜ್ಞನೂ ಸೂಕ್ಷ್ಮ ಜ್ಞಾನಿಯೂ ಆಗಿರುವನು." [ಅಲ್-ಹುಜುರಾತ್:13]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹು ನಿಮ್ಮನ್ನು ಮಣ್ಣಿನಿಂದ, ತರುವಾಯ ವೀರ್ಯದಿಂದ ಸೃಷ್ಟಿಸಿದನು. ತರುವಾಯ ಅವನು ನಿಮ್ಮನ್ನು ಜೋಡಿಗಳನ್ನಾಗಿ ಮಾಡಿದನು. ಅವನ ಅರಿವಿನ ಪ್ರಕಾರವಲ್ಲದೆ ಯಾವುದೇ ಹೆಣ್ಣು ಗರ್ಭ ಧರಿಸುವುದಾಗಲಿ ಹಡೆಯುವುದಾಗಲಿ ಮಾಡಲಾರಳು. ದೀರ್ಘಾಯುಸ್ಸು ನೀಡಲಾದ ಯಾವುದೇ ವ್ಯಕ್ತಿಗೂ ಆಯುಸ್ಸನ್ನು ಹೆಚ್ಚಿಸಲಾಗುವುದಾಗಲಿ ಅಥವಾ ಅವನ ಆಯುಸ್ಸನ್ನು ಕುಗ್ಗಿಸಲಾಗುವುದಾಗಲಿ ಒಂದು ದಾಖಲೆಯಲ್ಲಿರುವ ಪ್ರಕಾರವಲ್ಲದೆ ನಡೆಯಲಾರದು. ಖಂಡಿತವಾಗಿಯೂ ಅದು ಅಲ್ಲಾಹನ ಮಟ್ಟಿಗೆ ಅತಿಸುಲಭವಾಗಿದೆ." [ಫಾತಿರ್:11]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನಿಮ್ಮನ್ನು ಮಣ್ಣಿನಿಂದ, ತರುವಾಯ ವೀರ್ಯದಿಂದ, ತರುವಾಯ ಭ್ರೂಣದಿಂದ ಸೃಷ್ಟಿಸಿದವನು ಅವನಾಗಿರುವನು. ತರುವಾಯ ಅವನು ನಿಮ್ಮನ್ನು ಒಂದು ಶಿಶುವನ್ನಾಗಿ ಹೊರತರುವನು. ತರುವಾಯ ನೀವು ನಿಮ್ಮ ಪೂರ್ಣ ಶಕ್ತಿಯನ್ನು ಪಡೆಯುವುದಕ್ಕಾಗಿ ಮತ್ತು ತರುವಾಯ ನೀವು ವೃದ್ಧರಾಗುವುದಕ್ಕಾಗಿ. ನಿಮ್ಮ ಪೈಕಿ ಕೆಲವರು ಮೊದಲೇ ಮೃತಪಡುವರು. ನಿಶ್ಚಿತ ಅವಧಿಯನ್ನು ನೀವು ತಲುಪುವುದಕ್ಕಾಗಿ ಮತ್ತು ನೀವು ಚಿಂತಿಸಲೂ ಬಹುದು ಎಂಬುದಕ್ಕಾಗಿ." [ಗಾಫಿರ್:67]

ತಾನು ಆದಮರನ್ನು ನೈಸರ್ಗಿಕ ಆಜ್ಞೆಯೊಂದಿಗೆ ಸೃಷ್ಟಿಸಿದಂತೆ ಈಸಾ ಮಸೀಹರನ್ನೂ ನೈಸರ್ಗಿಕ ಆಜ್ಞೆಯಿಂದ ಸೃಷ್ಟಿಸಿದ್ದೇನೆಂದು ವಿವರಿಸುತ್ತಾ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹನ ಮಟ್ಟಿಗೆ ಈಸಾರವರ ಉಪಮೆಯು ಆದಮ್‌ರ ಉಪಮೆಯಂತಿದೆ. ಅವರನ್ನು (ಆದಮ್‌ರ ರೂಪವನ್ನು) ಅವನು ಮಣ್ಣಿನಿಂದ ಸೃಷ್ಟಿಸಿದನು. ತರುವಾಯ ಅದರೊಂದಿಗೆ ಉಂಟಾಗು ಎಂದನು. ತಕ್ಷಣ ಅವರು (ಆದಮ್) ಉಂಟಾದರು."** [ಆಲಿ ಇಮ್ರಾನ್:59].

ಮನುಷ್ಯರೆಲ್ಲರೂ ಸಮಾನರು, ಧರ್ಮನಿಷ್ಠೆಯಿಂದಲೇ ಹೊರತು ಅವರಲ್ಲಿ ಒಬ್ಬರಿಗೆ ಇನ್ನೊಬ್ಬರ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ ಎಂದು ಪ್ರವಾದಿ صلى الله عليه وسلم ವಿವರಿಸಿದ್ದನ್ನು ಎರಡನೇ ಪ್ಯಾರದಲ್ಲಿ ಈಗಾಗಲೇ ಪ್ರಸ್ತಾಪಿಸಲಾಗಿದೆ.

## 14. ಪ್ರತಿಯೊಂದು ಮಗುವೂ ಪ್ರಕೃತಿಯಲ್ಲೇ ಹುಟ್ಟುತ್ತದೆ.

ಪ್ರತಿಯೊಂದು ಮಗುವೂ ಪ್ರಕೃತಿಯಲ್ಲೇ ಹುಟ್ಟುತ್ತದೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆದ್ದರಿಂದ (ಸತ್ಯದಲ್ಲಿ) ನೇರವಾಗಿ ನೆಲೆಗೊಂಡು ತಾವು ತಮ್ಮ ಮುಖವನ್ನು ಧರ್ಮದೆಡೆಗೆ ತಿರುಗಿಸಿರಿ. ಅದು ಅಲ್ಲಾಹು ಮನುಷ್ಯರನ್ನು ಯಾವ ಪ್ರಕೃತಿಯಲ್ಲಿ ಸೃಷ್ಟಿಸಿದನೋ ಆ ಪ್ರಕೃತಿಯಾಗಿದೆ. ಅಲ್ಲಾಹನ ಸೃಷ್ಟಿ ನಿಯಮಕ್ಕೆ ಯಾವುದೇ ಬದಲಾವಣೆಯಿಲ್ಲ. ಅದೇ ನೇರವಾದ ಧರ್ಮ. ಆದರೆ ಮನುಷ್ಯರ ಪೈಕಿ ಹೆಚ್ಚಿನವರೂ ಅರಿತುಕೊಳ್ಳಲಾರರು."** [ಅರ್ರೂಮ್:30].

ಹನೀಫೀಯತ್ ಅಂದರೆ ಇಬ್ರಾಹೀಮ್ ಖಲೀಲರ عليه السلام ಋಜು ಮಾರ್ಗ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ತರುವಾಯ, ನಾವು ತಮಗೆ ಸತ್ಯಮಾರ್ಗ ದಲ್ಲಿ (ವಿಚಲಿತನಾಗದೆ) ನೆಲೆಗೊಂಡಿರುವ ಇಬ್ರಾಹೀಮ್‌ರ ಮಾರ್ಗವನ್ನು ಅನುಸರಿಸಿರಿ ಎಂದು**

ದಿವ್ಯಸಂದೇಶವನ್ನು ನೀಡಿದೆವು. ಅವರು ಬಹುದೇವಾರಾಧಕರಲ್ಲಿ ಸೇರಿದವರಾಗಿರಲಿಲ್ಲ." [ಅನ್ನಹ್ಲ್:123]

ಪ್ರವಾದಿ صلي الله عليه وسلم ರವರು ಹೇಳಿದರು: "ಪ್ರತಿಯೊಂದು ಮಗುವೂ ಪ್ರಕೃತಿಯಲ್ಲಿಯೇ (ಇಸ್ಲಾಮಿನಲ್ಲಿಯೇ) ಹುಟ್ಟುತ್ತದೆ. ಆದರೆ ಆನಂತರ ಅವರ ತಂದೆ-ತಾಯಿಗಳು ಅವವನ್ನು ಯಹೂದಿಯಾಗಿಯೋ ಕ್ರೈಸ್ತನಾಗಿಯೋ ಅಗ್ನಿಯಾರಾಧಕನಾಗಿಯೋ ಮಾಡಿ ಬಿಡುತ್ತಾರೆ. ಇದು ಹೇಗೆಂದರೆ ಜಾನುವಾರುಗಳು ಹುಟ್ಟುವಾಗ ಪೂರ್ಣ ರೂಪದಲ್ಲಿ ಹುಟ್ಟುವಂತೆ. ಯಾವುದೇ ಜಾನುವಾರು ಅಂಗವೈಕಲ್ಯದಿಂದ ಹುಟ್ಟುವುದು ನೀವು ನೋಡಿದ್ದೀರಾ?"

ನಂತರ ಅಬೂ ಹುರೈರಾ ಈ ಕುರ್‌ಆನ್ ಸೂಕ್ತಿಯನ್ನು ಪಠಿಸಿದರು: "ಅದು ಅಲ್ಲಾಹು ಮನುಷ್ಯರನ್ನು ಯಾವ ಪ್ರಕೃತಿಯಲ್ಲಿ ಸೃಷ್ಟಿಸಿದನೋ ಆ ಪ್ರಕೃತಿಯಾಗಿದೆ. ಅಲ್ಲಾಹನ ಸೃಷ್ಟಿ ನಿಯಮಕ್ಕೆ ಯಾವುದೇ ಬದಲಾವಣೆಯಿಲ್ಲ. ಅದೇ ನೇರವಾದ ಧರ್ಮ. ಆದರೆ ಮನುಷ್ಯರ ಪೈಕಿ ಹೆಚ್ಚಿನವರೂ ಅರಿತುಕೊಳ್ಳಲಾರರು." [ಅರ್ರೂಮ್:30] [ಸಹೀಹುಲ್ ಬುಖಾರಿ 4775.]

ಪ್ರವಾದಿ صلي الله عليه وسلم ರವರು ಹೇಳಿದರು: "ಕೇಳಿರಿ, ನೀವು ಅರಿಯದ್ದನ್ನು ನಿಮಗೆ ಕಲಿಸಲು ನನ್ನ ಪರಿಪಾಲಕ ಪ್ರಭು (ಅಲ್ಲಾಹನು) ನನಗೆ ಆಜ್ಞಾಪಿಸಿದ್ದಾನೆ ಮತ್ತು ಅಲ್ಲಾಹನು ಇಂದು ನನಗೆ ಅದರ ಜ್ಞಾನವನ್ನು ನೀಡಿದ್ದಾನೆ. (ಅಲ್ಲಾಹನು ಹೇಳಿದನು): ನಾನು ನನ್ನ ದಾಸನಿಗೆ ನೀಡಿರುವ ಸಂಪತ್ತೆಲ್ಲವೂ ಅವನಿಗೆ ಹಲಾಲ್ (ಧರ್ಮಸಮ್ಮತ) ಆಗಿದೆ. ನಾನು ನನ್ನ ಎಲ್ಲಾ ದಾಸರನ್ನು ಏಕನಿಷ್ಠೆಯುಳ್ಳವರಾಗಿ ಸೃಷ್ಟಿಸಿದೆನು. ಆದರೆ ಸೈತಾನರು ಅವರ ಬಳಿಗೆ ಬಂದು ಅವರನ್ನು ಅವರ ಧರ್ಮದಿಂದ ದೂರಗೊಳಿಸಿದರು. ನಾನು ಅವರಿಗೆ ಧರ್ಮಸಮ್ಮತ ಮಾಡಿರುವುದನ್ನು ಅವರು (ಸೈತಾನರು) ಅವರಿಗೆ ನಿಷಿದ್ಧಗೊಳಿಸಿದರು. ನಾನು ಯಾವುದೇ ಆಧಾರ ಪ್ರಮಾಣವನ್ನು ಇಳಿಸದ ವಸ್ತುಗಳನ್ನು ನನ್ನ ಜೊತೆ ಸಹಭಾಗಿಯನ್ನಾಗಿ ಮಾಡಲು ಅವರು (ಸೈತಾನರು) ಅವರಿಗೆ ಆಜ್ಞಾಪಿಸಿದರು." [ಮುಸ್ಲಿಮ್:2865.]

## 15. ಮನುಷ್ಯರಲ್ಲಿ ಯಾರು ತಪ್ಪು ಮಾಡುವವನಾಗಿ ಅಥವಾ ಇತರರ ತಪ್ಪಿಗೆ ಹೊಣೆಗಾರನಾಗಿ ಹುಟ್ಟುವುದಿಲ್ಲ:

ಮನುಷ್ಯರಲ್ಲಿ ಯಾರು ತಪ್ಪು ಮಾಡುವವನಾಗಿ ಅಥವಾ ಇತರರ ತಪ್ಪಿಗೆ ಹೊಣೆಗಾರನಾಗಿ ಹುಟ್ಟುವುದಿಲ್ಲ. ಆದಮ್ عليه السلام ರು ದೈವಾಜ್ಞೆಗೆ ವಿರುದ್ಧವಾಗಿ ವರ್ತಿಸಿ, ಅವರು ಮತ್ತು ಅವರ ಪತ್ನಿ ಹವ್ವಾ ಆ ಮರದಿಂದ ತಿಂದಾಗ, ಅವರು ವಿಷಾದ ವ್ಯಕ್ತಪಡಿಸಿ ಪಶ್ಚಾತ್ತಾಪ ಪಟ್ಟರು ಹಾಗೂ ಅಲ್ಲಾಹನಲ್ಲಿ ಕ್ಷಮೆಯಾಚಿಸಿದರು ಎಂದು ಅಲ್ಲಾಹನು ನಮಗೆ ತಿಳಿಸಿದ್ದಾನೆ. ನಂತರ ಅಲ್ಲಾಹನು ಅವರೊಡನೆ ಕೆಲವು ಅತ್ಯುತ್ತಮ ಪದಗಳನ್ನು ಹೇಳಬೇಕೆಂದು ತಿಳಿಸಿದಾಗ, ಅವರು ಆ ಪದಗಳನ್ನು ಹೇಳಿದರು. ಆಗ ಅಲ್ಲಾಹನು ಅವರಿಬ್ಬರ ಪಶ್ಚಾತ್ತಾಪವನ್ನು ಸ್ವೀಕರಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಆದಮ್! ತಾವು ಮತ್ತು ತಮ್ಮ ಸಂಗಾತಿ ಸ್ವರ್ಗದಲ್ಲಿ ವಾಸಿಸಿರಿ ಮತ್ತು ಅದರಲ್ಲಿ ನೀವಿಚ್ಛಿಸಿದಲ್ಲಿಂದ ಇಬ್ಬರೂ ಯಥೇಷ್ಟವಾಗಿ ತಿನ್ನಿರಿ. ಆದರೆ ಈ ಮರವನ್ನು ನೀವು ಸಮೀಪಿಸದಿರಿ. ಹಾಗೇನಾದರೂ ಆದರೆ ನೀವಿಬ್ಬರೂ ಅತಿಕ್ರಮಿಗಳಾಗಿ ಬಿಡುವಿರಿ ಎಂದು ನಾವು ಆದೇಶಿಸಿದೆವು.(35) ಆದರೆ ಸೈತಾನನು ಅವರನ್ನು ಅದರಿಂದ ವ್ಯತಿಚಲನೆಗೊಳಿಸಿದನು ಮತ್ತು ಅವರಿಬ್ಬರೂ ಸವಿಯುತ್ತಿದ್ದ (ಸುಖಾನುಭೂತಿ) ಯಿಂದ ಅವರನ್ನು ಹೊರಗಟ್ಟಿದನು. ನಾವು (ಅವರೊಂದಿಗೆ) ಹೇಳಿದೆವು: ನೀವು ಇಳಿದು ಹೋಗಿರಿ. ನಿಮ್ಮಲ್ಲಿ ಕೆಲವರು ಕೆಲವರಿಗೆ ಶತ್ರುಗಳಾಗಿರುವರು. ಒಂದು ನಿರ್ದಿಷ್ಟ ಕಾಲದವರೆಗೆ ನಿಮಗೆ ಭೂಮಿಯಲ್ಲಿ ವಾಸಸ್ಥಳ ಮತ್ತು ಜೀವನ ಸೌಕರ್ಯಗಳು ಇರುವುವು.(36) ತರುವಾಯ ಆದಮ್ ತಮ್ಮ ಪ್ರಭುವಿನಿಂದ ಕೆಲವು ವಚನಗಳನ್ನು ಪಡೆದರು. (ಆ ವಚನಗಳ ಮೂಲಕ ಪಶ್ಚಾತ್ತಾಪಪಟ್ಟ) ಆದಮ್‌ರಿಗೆ ಅಲ್ಲಾಹು ಪಾಪಮುಕ್ತಿಯನ್ನು ದಯಪಾಲಿಸಿದನು. ಅವನು (ಅಲ್ಲಾಹು) ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು.(37) ನಾವು ಹೇಳಿದೆವು: ನೀವೆಲ್ಲರೂ ಇಲ್ಲಿಂದ ಇಳಿದು ಹೋಗಿರಿ. ತರುವಾಯ ನನ್ನ ವತಿಯ ಮಾರ್ಗದರ್ಶನವು ನಿಮ್ಮ ಬಳಿಗೆ ಬರುವಾಗ ಆ ನನ್ನ ಮಾರ್ಗದರ್ಶನವನ್ನು ಯಾರು**

ಅನುಸರಿಸುವನೋ, ಅವರು ಭಯಪಡಬೇಕಾಗಿಲ್ಲ; ಅವರು ದುಃಖಿಸಬೇಕಾಗಿಯೂ ಇಲ್ಲ.(38)" [ಅಲ್-ಬಖರ:35-38]

ಅಲ್ಲಾಹನು ಆದಮ್ عليه السلام ರ ಪಶ್ಚಾತ್ತಾಪವನ್ನು ಸ್ವೀಕರಿಸಿರುವುದರಿಂದ ಅವರನ್ನು ಪಾಪ ಮಾಡಿದವರೆಂದು ಪರಿಗಣಿಸಲಾಗುವುದಿಲ್ಲ. ಅದೇ ರೀತಿ ಅವರ ಸಂತಾನವು ಪಶ್ಚಾತ್ತಾಪದಿಂದ ನಿವಾರಣೆಯಾದ ಆ ಪಾಪವನ್ನು ವಾರೀಸಾಗಿ ಪಡೆಯುವುದಿಲ್ಲ. ಮೂಲಭೂತ ತತ್ವದ ಪ್ರಕಾರ ಒಬ್ಬ ವ್ಯಕ್ತಿಯು ಬೇರೊಬ್ಬನ ಪಾಪಭಾರವನ್ನು ಹೊರುವುದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಪ್ರತಿಯೊಬ್ಬನೂ ತಾನು ಮಾಡಿರುವ ಕರ್ಮಕ್ಕೆ ತಾನೇ ಹೊಣೆಗಾರನಾಗಿರುವನು. ಭಾರವನ್ನು ಹೊರುವ ಯಾರೂ ಇನ್ನೊಬ್ಬನ ಭಾರವನ್ನು ಹೊರಲಾರನು. ತರುವಾಯ ನಿಮ್ಮ ಮರಳುವಿಕೆಯು ನಿಮ್ಮ ಪ್ರಭುವಿನೆಡೆಗಾಗಿದೆ. ಯಾವ ವಿಷಯದಲ್ಲಿ ನೀವು ಭಿನ್ನರಾಗಿದ್ದಿರೋ ಅದರ ಬಗ್ಗೆ ಅವನು ನಿಮಗೆ ತಿಳಿಸಿಕೊಡುವನು." [ಅಲ್-ಅನ್‌ಆಮ್:164].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಯಾರಾದರೂ ಸನ್ಮಾರ್ಗವನ್ನು ಪಡೆಯುವುದಾದರೆ ಅವನದನ್ನು ಪಡೆಯುವುದು ಅವನದೇ ಒಳಿತಿಗಾಗಿದೆ. ಯಾರಾದರೂ ಪಥಭ್ರಷ್ಟನಾಗುವುದಾದರೆ ಅವನ ಕೆಡುಕಿಗಾಗಿಯೇ ಅವನು ಪಥಭ್ರಷ್ಟನಾಗುತ್ತಾನೆ. ಪಾಪಭಾರವನ್ನು ಹೊರುವ ಯಾರೂ ಬೇರೊಬ್ಬನ ಪಾಪಭಾರವನ್ನು ಹೊರಲಾರನು. ಒಬ್ಬ ಸಂದೇಶವಾಹಕರನ್ನು ಕಳುಹಿಸುವ ತನಕ ನಾವು (ಯಾರನ್ನೂ) ಶಿಕ್ಷಿಸಲಾರೆವು." [ಅಲ್-ಇಸ್ರಾ:15]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಪಾಪಭಾರವನ್ನು ಹೊರುವ ಯಾರೂ ಇನ್ನೊಬ್ಬನ ಪಾಪಭಾರವನ್ನು ಹೊರಲಾರನು. ಭಾರದಿಂದಾಗಿ ಕಷ್ಟಪಡುವ ಒಬ್ಬನು ತನ್ನ ಭಾರವನ್ನು ಹೊರಲು (ಯಾರನ್ನಾದರೂ) ಕರೆಯುವುದಾದರೆ ಅದರಿಂದ ಏನನ್ನೂ ವಹಿಸಿಕೊಳ್ಳಲಾಗದು. (ಆತ ಕರೆಯುವುದು) ನಿಕಟ ಸಂಬಂಧಿಕನನ್ನಾದರೂ ಸರಿಯೇ. ತಮ್ಮ ಮುನ್ನೆಚ್ಚರಿಕೆಯು ಫಲ ನೀಡುವುದು ತಮ್ಮ ಪ್ರಭುವನ್ನು ಅಗೋಚರವಾಗಿ ಭಯಪಡುವವರಿಗೆ

ಮತ್ತು ನಮಾಝನ್ನು ಸಂಸ್ಥಾಪಿಸುವವರಿಗೆ ಮಾತ್ರವಾಗಿದೆ. ಯಾರು ಪರಿಶುದ್ಧತೆಯನ್ನು ಪಾಲಿಸುವನೋ ಅವನು ಪರಿಶುದ್ಧತೆಯನ್ನು ಪಾಲಿಸುವುದು ಸ್ವತಃ ಅವನ ಒಳಿತಿಗೇ ಆಗಿದೆ. ಮರಳುವಿಕೆಯು ಅಲ್ಲಾಹನೆಡೆಗಾಗಿದೆ." [ಫಾತಿರ್:18]

## 16. ಮನುಷ್ಯರನ್ನು ಸೃಷ್ಟಿಸಿದ ಪರಮೋಚ್ಛ ಉದ್ದೇಶ: ಅಲ್ಲಾಹನನ್ನು ಮಾತ್ರ ಆರಾಧಿಸುವುದಾಗಿದೆ:

ಮನುಷ್ಯರನ್ನು ಸೃಷ್ಟಿಸಿದ ಪರಮೋಚ್ಛ ಉದ್ದೇಶ: ಅಲ್ಲಾಹನನ್ನು ಮಾತ್ರ ಆರಾಧಿಸುವುದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನನ್ನನ್ನು ಆರಾಧಿಸುವುದಕ್ಕಾಗಿಯೇ ವಿನಾ ನಾನು ಜಿನ್ನ್‌ಗಳನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿಲ್ಲ." [ಅದ್ದಾರಿಯಾತ್:56].

## 17. ಇಸ್ಲಾಂ ಧರ್ಮವು ಮನುಷ್ಯನನ್ನು -ಸ್ತ್ರೀ ಪುರುಷರನ್ನು- ಗೌರವಿಸಿದೆ. ಅವನ ಎಲ್ಲಾ ಹಕ್ಕುಗಳ ಸಂಪೂರ್ಣ ಹೊಣೆಯನ್ನು ವಹಿಸಿಕೊಂಡಿದೆ. ಅವನ ಎಲ್ಲಾ ಆಯ್ಕೆಗಳು, ಕೆಲಸಗಳು ಮತ್ತು ವ್ಯವಹಾರಗಳಿಗೆ ಅವನನ್ನು ಜವಾಬ್ದಾರನನ್ನಾಗಿ ಮಾಡಿದೆ. ತನಗೆ ಹಾನಿ ಮಾಡುವ ಅಥವಾ ಇತರರಿಗೆ ಹಾನಿ ಮಾಡುವ ಯಾವುದೇ ಕಾರ್ಯಕ್ಕೆ ಅವನನ್ನು ಹೊಣೆಗಾರನನ್ನಾಗಿ ಮಾಡುತ್ತದೆ.

ಇಸ್ಲಾಂ ಧರ್ಮವು ಮನುಷ್ಯನನ್ನು -ಸ್ತ್ರೀ ಪುರುಷರನ್ನು- ಗೌರವಿಸಿದೆ. ಸರ್ವಶಕ್ತನಾದ ಅಲ್ಲಾಹನು ಮನುಷ್ಯನನ್ನು ಭೂಮಿಯಲ್ಲಿ ಅವನ ಉತ್ತರಾಧಿಕಾರಿಯಾಗಲೆಂದು ಸೃಷ್ಟಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನಾನು ಭೂಮಿಯಲ್ಲಿ ಒಬ್ಬ 'ಖಲೀಫಃ'ನನ್ನು ನಿಯೋಗಿಸಲಿರುವೆನು ಎಂದು ತಮ್ಮ ಪ್ರಭು ಮಲಕ್‌ಗಳೊಂದಿಗೆ ಹೇಳಿದ ಸಂದರ್ಭ(ವನ್ನು ಸ್ಮರಿಸಿರಿ)." [ಅಲ್-ಬಖರ:30]

ಈ ಗೌರವವು ಆದಮರ ಎಲ್ಲಾ ಮಕ್ಕಳಿಗೂ ಅನ್ವಯವಾಗುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ನಾವು ಆದಮ್ ಸಂತತಿಗಳನ್ನು ಗೌರವಿಸಿರುವೆವು. ಅವರನ್ನು ನಾವು ಸಮುದ್ರದಲ್ಲೂ, ನೆಲದಲ್ಲೂ ವಾಹನದಲ್ಲಿ ವಹಿಸಿರುವೆವು. ವಿಶಿಷ್ಟ ವಸ್ತುಗಳಿಂದ ಅವರಿಗೆ ನಾವು ಅನ್ನಾಧಾರವನ್ನು ಒದಗಿಸಿರುವೆವು. ನಾವು ಸೃಷ್ಟಿಸಿದವುಗಳ ಪೈಕಿ ಹೆಚ್ಚಿನವರಿಗಿಂತಲೂ ಅವರಿಗೆ ನಾವು ವಿಶೇಷ ಶ್ರೇಷ್ಠತೆಯನ್ನು ದಯಪಾಲಿಸಿರುವೆವು." [ಅಲ್ ಇಸ್ರಾ:70]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ನಾವು ಮನುಷ್ಯನನ್ನು ಅತ್ಯುತ್ತಮ ರಚನೆಯೊಂದಿಗೆ ಸೃಷ್ಟಿಸಿರುವೆವು." [ಅತ್ತೀನ್:4].

ಅಲ್ಲಾಹನ ಹೊರತು ಬೇರೊಬ್ಬ ಆರಾಧ್ಯನಿಗೆ, ಅಥವಾ ಮುಖಂಡನಿಗೆ, ಅಥವಾ ಅನುಸರಿಸ್ಪಡುವವನಿಗೆ ತನ್ನನ್ನು ತಾನೇ ಒಬ್ಬ ನಿಂದ್ಯ ಹಿಂಬಾಲಕನಾಗಿ ಮಾಡಿಕೊಳ್ಳುವುದನ್ನು ಅಲ್ಲಾಹನು ಮನುಷ್ಯನಿಗೆ ನಿಷೇಧಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹೇತರರನ್ನು ಅವನಿಗೆ ಪ್ರತಿಸ್ಪರ್ಧಿಗಳನ್ನಾಗಿ ಮಾಡುವ ಕೆಲವು ಜನರಿರುವರು. ಅಲ್ಲಾಹುವನ್ನು ಪ್ರೀತಿಸುವಂತೆಯೇ ಅವರು ಅವರನ್ನೂ (ಅಲ್ಲಾಹೇತರರನ್ನೂ) ಪ್ರೀತಿಸುವರು. ಆದರೆ ಸತ್ಯವಿಶ್ವಾಸಿಗಳು ಅಲ್ಲಾಹನಲ್ಲಿ ಗಾಢವಾದ ಪ್ರೀತಿಯನ್ನು ಹೊಂದಿರುವರು. ಅಕ್ರಮಿಗಳು ಪರಲೋಕ ಶಿಕ್ಷೆಯನ್ನು ಕಣ್ಣಾರೆ ಕಾಣುವ ಸಂದರ್ಭ, ಶಕ್ತಿಸಾಮರ್ಥ್ಯವೆಲ್ಲವೂ ಸಂಪೂರ್ಣವಾಗಿ ಅಲ್ಲಾಹನಿಗೇ ಆಗಿದೆ ಮತ್ತು ಖಂಡಿತವಾಗಿಯೂ ಅಲ್ಲಾಹು ಕಠೋರವಾಗಿ ಶಿಕ್ಷಿಸುವವನಾಗಿರುವನು ಎಂಬುದನ್ನು ಕಾಣುತ್ತಿದ್ದರೆ (ಎಷ್ಟು ಚೆನ್ನಾಗಿರುತ್ತಿತ್ತು!) ಅನುಸರಿಸಲ್ಪಟ್ಟವರು (ನಾಯಕರು) ಅನುಸರಿಸಿದವರನ್ನು (ಅನುಯಾಯಿಗಳನ್ನು) ಬಿಟ್ಟು ದೂರ ಸರಿಯುವ ಮತ್ತು ಅವರು ಶಿಕ್ಷೆಯನ್ನು ಕಣ್ಣಾರೆ

**ಕಾಣುವ ಹಾಗೂ ಅವರು ಪರಸ್ಪರ ಹೊಂದಿರುವ ಸಂಬಂಧಗಳು ಮುರಿದು ಬೀಳುವ ಸಂದರ್ಭ!"** [ಅಲ್-ಬಖರ:165,166]

ಪುನರುತ್ಥಾನದ ದಿನ ಅಸತ್ಯದ ಮುಂದಾಳುಗಳು ಮತ್ತು ಅವರ ಹಿಂಬಾಲಕರ ಸ್ಥಿತಿಯನ್ನು ವಿವರಿಸುತ್ತಾ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಹಂಕಾರಪಟ್ಟವರು ಬಲಹೀನರೆಂದು ಗಣಿಸಲಾದವರೊಂದಿಗೆ ಹೇಳುವರು: ಮಾರ್ಗದರ್ಶನವು ನಿಮ್ಮ ಬಳಿಗೆ ಬಂದ ಬಳಿಕ ನಾವು ನಿಮ್ಮನ್ನು ಅದರಿಂದ ತಡೆದಿರುವೆವೇ? ಅಲ್ಲ. ನೀವು ಅಪರಾಧಿಗಳೇ ಆಗಿದ್ದಿರಿ.(32) ಬಲಹೀನರೆಂದು ಗಣಿಸಲಾದವರು ಅಹಂಕಾರ ಪಟ್ಟವರೊಂದಿಗೆ ಹೇಳುವರು: ಅಲ್ಲ, ಇದು ನಾವು ಅಲ್ಲಾಹನಲ್ಲಿ ಅವಿಶ್ವಾಸವಿಡಲು ಮತ್ತು ಅವನೊಂದಿಗೆ ಪ್ರತಿಸ್ಪರ್ಧಿಗಳನ್ನು ಸ್ಥಾಪಿಸಲು ನೀವು ನಮ್ಮೊಂದಿಗೆ ಆದೇಶಿಸುತ್ತಿದ್ದ ಸಂದರ್ಭಗಳಲ್ಲಿ (ನೀವು) ರಾತ್ರಿ ಹಗಲು ನಡೆಸುತ್ತಿದ್ದ ಕುತಂತ್ರದ ಫಲವಾಗಿದೆ. ಶಿಕ್ಷೆಯನ್ನು ಕಾಣುವಾಗ ಅವರು ವಿಷಾದವನ್ನು ಮನಸ್ಸಿನಲ್ಲಿ ಬಚ್ಚಿಡುವರು. ನಾವು ಸತ್ಯನಿಷೇಧಿಗಳ ಕೊರಳುಗಳಲ್ಲಿ ಸಂಕೋಲೆಗಳನ್ನು ಇಡುವೆವು. ಅವರು ಮಾಡಿರುವುದರ ಪ್ರತಿಫಲವನ್ನೇ ವಿನಾ ಇನ್ನೇನನ್ನಾದರೂ ಅವರಿಗೆ ನೀಡಲಾಗುವುದೇ?(33)"** [ಸಬಅ್:32-33]

ಜನರನ್ನು ದುರ್ಮಾರ್ಗಕ್ಕೆ ಆಮಂತ್ರಿಸುವವರು ಮತ್ತು (ದುರ್ಮಾರ್ಗದ) ಮುಖಂಡರು ಪುನರುತ್ಥಾನ ದಿನ ತಮ್ಮ ಪಾಪದ ಹೊರೆಯನ್ನು ಮತ್ತು ತಾವು ಯಾವುದೇ ಜ್ಞಾನವಿಲ್ಲದೆ ದುರ್ಮಾರ್ಗಕ್ಕೆ ತಳ್ಳಿದ ಜನರ ಪಾಪದ ಹೊರೆಯನ್ನು ಹೊರುವಂತೆ ಮಾಡಿದ್ದು ಸರ್ವಶಕ್ತನಾದ ಅಲ್ಲಾಹನ ನ್ಯಾಯದ ಸಂಪೂರ್ಣತೆಯಲ್ಲಿ ಸೇರಿದ್ದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ಅಂತ್ಯದಿನದಂದು ತಮ್ಮ ಪಾಪಭಾರವನ್ನು ಪೂರ್ಣವಾಗಿ ಹೊರಲು ಮತ್ತು ಯಾವುದೇ ಜ್ಞಾನವಿಲ್ಲದೆ ಅವರು ಯಾರನ್ನೆಲ್ಲ ದಾರಿಗೆಡಿಸಿರುವರೋ ಅವರ ಪಾಪದ ಒಂದು ಭಾಗವನ್ನು ಹೊರಲು (ಅದು ಕಾರಣ ವಾಗುವುದು). ಅರಿಯಿರಿ! ಅವರು ಹೊರುವ ಆ ಭಾರವು ಎಷ್ಟು ನಿಕೃಷ್ಟವಾದುದು!"** [ಅನ್ನಹ್ಲ್:25].

ಇಸ್ಲಾಂ ಧರ್ಮವು ಇಹಲೋಕದಲ್ಲೂ ಪರಲೋಕದಲ್ಲೂ ಮಾನವನ ಎಲ್ಲಾ ಹಕ್ಕುಗಳನ್ನು ಸಂರಕ್ಷಿಸುತ್ತದೆ. ಇಸ್ಲಾಂ ಧರ್ಮವು ಸಂರಕ್ಷಿಸಿದ ಮತ್ತು ಸ್ಪಷ್ಟಪಡಿಸಿದ ಅತ್ಯಂತ

ದೊಡ್ಡ ಹಕ್ಕು ಯಾವುದೆಂದರೆ: ದಾಸರ ಮೇಲಿರುವ ಅಲ್ಲಾಹನ ಹಕ್ಕು ಮತ್ತು ಅಲ್ಲಾಹನ ಮೇಲಿರುವ ದಾಸರ ಹಕ್ಕು.

ಮುಆದ್ رضي الله عنه ರವರು ಹೇಳುತ್ತಾರೆ: ನಾನು ಪ್ರವಾದಿ صلي الله عليه وسلم ರವರ ಹಿಂದೆ ಸವಾರಿ ಮಾಡುತ್ತಿದ್ದೆ. ಆಗ ಅವರು ಹೇಳಿದರು: **"ಓ ಮುಆದ್!"** ನಾನು ಹೇಳಿದೆ: "ನಾನು ಹಾಜರಿದ್ದೇನೆ." ಅವರು ಹೀಗೆ ಮೂರು ಬಾರಿ ಪುನರಾವರ್ತಿಸಿದರು. (ನಂತರ ಕೇಳಿದರು): **"ದಾಸರ ಮೇಲೆ ಅಲ್ಲಾಹನಿಗಿರುವ ಹಕ್ಕು ಏನೆಂದು ನಿಮಗೆ ತಿಳಿದಿದೆಯೇ?"** ನಾನು ಇಲ್ಲ ಎಂದು ಉತ್ತರಿಸಿದೆ. ಅವರು ಹೇಳಿದರು: **"ದಾಸರ ಮೇಲೆ ಅಲ್ಲಾಹನಿಗಿರುವ ಹಕ್ಕು ಏನೆಂದರೆ, ಅಲ್ಲಾಹನನ್ನು ಮಾತ್ರ ಆರಾಧಿಸುವುದು ಮತ್ತು ಅವನೊಂದಿಗೆ ಯಾರನ್ನೂ ಸಹಭಾಗಿಗಳಾಗಿ ಮಾಡದಿರುವುದು."** ನಂತರ ಅವರು ಸ್ವಲ್ಪ ದೂರ ಸಂಚರಿಸಿದರು. ನಂತರ ಹೇಳಿದರು: **"ಓ ಮುಆದ್!"** ನಾನು ಹೇಳಿದೆ: "ನಾನು ಹಾಜರಿದ್ದೇನೆ." ಅವರು ಕೇಳಿದರು: **"ದಾಸರು ಇದನ್ನು ನೆರವೇರಿಸಿದರೆ (ಅಂದರೆ ಅಲ್ಲಾಹನನ್ನು ಮಾತ್ರ ಆರಾಧಿಸಿ ಅವನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡದಿದ್ದರೆ) ಅಲ್ಲಾಹನ ಮೇಲೆ ದಾಸರಿಗಿರುವ ಹಕ್ಕು ಏನೆಂದು ನಿಮಗೆ ತಿಳಿದಿದೆಯೇ?"** (ನಾನು ಇಲ್ಲವೆಂದು ಉತ್ತರಿಸಿದಾಗ ಅವರು ಹೇಳಿದರು): **"ಅದು ಅವರನ್ನು ಶಿಕ್ಷಿಸದಿರುವುದು."** [ಸಹೀಹುಲ್ ಬುಖಾರಿ (6840).]

ಇಸ್ಲಾಂ ಧರ್ಮವು ಮನುಷ್ಯನ ನೈಜ ಧರ್ಮ, ಅವನ ಸಂತತಿ, ಅವನ ಸಂಪತ್ತು ಮತ್ತು ಅವನ ಘನತೆಯನ್ನು ಸಂರಕ್ಷಿಸುತ್ತದೆ.

ಪ್ರವಾದಿ صلي الله عليه وسلم ರವರು ಹೇಳಿದರು: **"ಖಂಡಿತವಾಗಿಯೂ ನಿಮ್ಮ ಈ ನಗರದಲ್ಲಿ, ನಿಮ್ಮ ಈ ತಿಂಗಳಲ್ಲಿ, ನಿಮ್ಮ ಈ ದಿನಕ್ಕೆ ಎಷ್ಟು ಪಾವಿತ್ರ್ಯತೆಯಿದೆಯೋ ಅಷ್ಟೇ ಪಾವಿತ್ರ್ಯತೆಯನ್ನು ಅಲ್ಲಾಹನು ನಿಮ್ಮ ರಕ್ತ, ನಿಮ್ಮ ಸಂಪತ್ತು ಮತ್ತು ನಿಮ್ಮ ಘನತೆಗಳಿಗೆ ನೀಡಿದ್ದಾನೆ."** [ಸಹೀಹುಲ್ ಬುಖಾರಿ (6501).]

ಒಂದು ಲಕ್ಷಕ್ಕೂ ಮಿಕ್ಕಿ ಸಹಾಬಾಗಳು ಸೇರಿದ್ದ ವಿದಾಯದ ಹಜ್ಜ್ ಯಾತ್ರೆಯಲ್ಲಿ ಪ್ರವಾದಿ صلي الله عليه وسلم ರವರು ಈ ಮಹಾನ್ ಕರಾರನ್ನು ಘೋಷಿಸಿದರು. ಇದರ

ಅರ್ಥವನ್ನು ಪುನರಾವರ್ತಿಸಿದರು ಮತ್ತು ವಿದಾಯದ ಹಜ್ಜ್‌ನ ಬಲಿದಾನದ ದಿನದಂದು ಅದನ್ನು ಒತ್ತಿ ಹೇಳಿದರು. ಮನುಷ್ಯನ ಎಲ್ಲಾ ಆಯ್ಕೆಗಳಿಗೆ, ಕೆಲಸ-ಕಾರ್ಯಗಳಿಗೆ ಮತ್ತು ವ್ಯವಹಾರಗಳಿಗೆ ಇಸ್ಲಾಂ ಅವನನ್ನು ಜವಾಬ್ದಾರನನ್ನಾಗಿ ಮಾಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಪ್ರತಿಯೊಬ್ಬ ವ್ಯಕ್ತಿಗೂ ಅವನ ಶಕುನವನ್ನು ನಾವು ಅವನ ಕೊರಳಿನಲ್ಲಿಯೇ ಬಂಧಿಸಿರುವೆವು. ಪುನರುತ್ಥಾನ ದಿನದಂದು ನಾವು ಅವನಿಗೋಸ್ಕರ ಒಂದು ಗ್ರಂಥವನ್ನು ಹೊರತರುವೆವು. ಅವನು ಅದನ್ನು ತೆರೆದಿಟ್ಟಿರುವುದಾಗಿ ಕಾಣುವನು."** [ಅಲ್-ಇಸ್ರಾ:13].

ಅಂದರೆ ಅವನು ಮಾಡಿರುವ ಒಳಿತು ಅಥವಾ ಕೆಡುಕನ್ನು ಅಲ್ಲಾಹನು ಅವನೊಡನೆ ಬಂಧಿಸಿಡುತ್ತಾನೆ. ಅದು ಅವನನ್ನು ಮೀರಿ ಇತರರೆಡೆಗೆ ಹೋಗುವುದಿಲ್ಲ. ಇತರರ ಕಾರ್ಯಕ್ಕೆ ಅವನು ವಿಚಾರಣೆಗೆ ಒಳಪಡುವುದಿಲ್ಲ ಮತ್ತು ಅವನ ಕಾರ್ಯಕ್ಕೆ ಇತರರು ವಿಚಾರಣೆಗೆ ಒಳಪಡುವುದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಮನುಷ್ಯನೇ! ನೀನು ನಿನ್ನ ಪ್ರಭುವಿನೆಡೆಗೆ ಕಠಿಣ ಪರಿಶ್ರಮ ಮಾಡಿ ತೆರಳುವವನಾಗಿರುವೆ ಮತ್ತು ಅವನನ್ನು ಭೇಟಿಯಾಗುವವನಾಗಿರುವೆ."** [ಅಲ್-ಇನ್ಶಿಖಾಖ್ :6]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಯಾರಾದರೂ ಸತ್ಕರ್ಮವೆಸಗಿದರೆ ಅದರ ಒಳಿತು ಅವನಿಗೇ ಆಗಿದೆ. ಯಾರಾದರೂ ದುಷ್ಕರ್ಮವೆಸಗಿದರೆ ಅದರ ದೋಷವೂ ಅವನಿಗೇ ಆಗಿದೆ. ತಮ್ಮ ಪ್ರಭು (ತನ್ನ) ದಾಸರೊಂದಿಗೆ ಅನ್ಯಾಯವೆಸಗುವವನೇ ಅಲ್ಲ."** [ಫುಸ್ಸಿಲತ್:46]

ಮನುಷ್ಯನು ತನಗೆ ಹಾನಿ ಮಾಡುವ ಅಥವಾ ಇತರರಿಗೆ ಹಾನಿ ಮಾಡುವ ಯಾವುದೇ ಕಾರ್ಯಕ್ಕೆ ಇಸ್ಲಾಂ ಧರ್ಮವು ಅವನನ್ನು ಹೊಣೆಗಾರನನ್ನಾಗಿ ಮಾಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಯಾರು ಪಾಪವನ್ನು ಗಳಿಸುವನೋ ಅವನದನ್ನು ಗಳಿಸುವುದು ಸ್ವತಃ ತನಗೆ ದೋಷಕರವಾಗಿಯೇ ಆಗಿದೆ. ಅಲ್ಲಾಹು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುವನು." [ಅನ್ನಿಸಾ:111]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅದರ ನಿಮಿತ್ತ ನಾವು ಇಸ್ರಾಈಲ್ ಸಂತತಿಗಳಿಗೆ ಈ ರೀತಿ ವಿಧಿ ನೀಡಿದೆವು: ಒಬ್ಬನನ್ನು ಕೊಂದಿರುವುದಕ್ಕೆ ಪ್ರತಿಯಾಗಿ ಅಥವಾ ಭೂಮಿಯಲ್ಲಿ ಕ್ಷೋಭೆ ಮಾಡಿರುವುದಕ್ಕಾಗಿ ವಿನಾ ಒಬ್ಬ ವ್ಯಕ್ತಿಯನ್ನು ಯಾರಾದರೂ ಹತ್ಯೆ ಮಾಡಿದರೆ ಅದು ಸಂಪೂರ್ಣ ಮನುಷ್ಯಕುಲವನ್ನು ಹತ್ಯೆ ಮಾಡಿರುವುದಕ್ಕೆ ಸಮಾನವಾಗಿದೆ. ಒಬ್ಬ ವ್ಯಕ್ತಿಯ ಜೀವವನ್ನು ಯಾರಾದರೂ ಉಳಿಸಿದರೆ ಅದು ಸಂಪೂರ್ಣ ಮನುಷ್ಯಕುಲದ ಜೀವವನ್ನು ಉಳಿಸಿರುವುದಕ್ಕೆ ಸಮಾನವಾಗಿದೆ." [ಅಲ್-ಮಾಇದ:32].

ಪ್ರವಾದಿ صلى الله عليه وسلم ರವರು ಹೇಳಿದರು: "ಯಾವುದೇ ಮನುಷ್ಯನನ್ನು ಅನ್ಯಾಯವಾಗಿ ಕೊಲೆ ಮಾಡಲಾದರೆ, ಅದರ ರಕ್ತದ ಒಂದು ಭಾಗ (ಪಾಪ) ಆದಮರ ಮೊದಲ ಮಗನ ಮೇಲೆ ಇರುತ್ತದೆ. ಏಕೆಂದರೆ ಕೊಲ್ಲುವುದನ್ನು ಮೊಟ್ಟಮೊದಲು ಆರಂಭಿಸಿದ್ದು ಅವನಾಗಿದ್ದನು.” [ಸಹೀಹ್ ಮುಸ್ಲಿಮ್: (5150).]

## 18. ಕರ್ಮ, ಹೊಣೆಗಾರಿಕೆ, ಪ್ರತಿಫಲ ಮತ್ತು ಬಹುಮಾನದ ವಿಷಯದಲ್ಲಿ ಇಸ್ಲಾಂ ಸ್ತ್ರೀ-ಪುರುಷರನ್ನು ಸಮಾನವಾಗಿ ವೀಕ್ಷಿಸುತ್ತದೆ.

ಕರ್ಮ, ಹೊಣೆಗಾರಿಕೆ, ಪ್ರತಿಫಲ ಮತ್ತು ಬಹುಮಾನದ ವಿಷಯದಲ್ಲಿ ಇಸ್ಲಾಂ ಧರ್ಮವು ಸ್ತ್ರೀ-ಪುರುಷರನ್ನು ಸಮಾನರನ್ನಾಗಿ ಮಾಡಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಗಂಡಾಗಲಿ ಹೆಣ್ಣಾಗಲಿ ಯಾರು ಸತ್ಯವಿಶ್ವಾಸಿಯಾಗಿದ್ದು ಸತ್ಕರ್ಮವೆಸಗುತ್ತಾನೋ ಅಂತಹವರು ಸ್ವರ್ಗವನ್ನು ಪ್ರವೇಶಿಸುವರು. ಅವರೊಂದಿಗೆ ಕಿಂಚಿತ್ತೂ ಅನ್ಯಾಯವೆಸಗಲಾಗದು." [ಅನ್ನಿಸಾ:124]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಗಂಡಾಗಲಿ, ಹೆಣ್ಣಾಗಲಿ ಸತ್ಯವಿಶ್ವಾಸಿಯಾಗಿರುತ್ತಾ ಯಾರು ಸತ್ಕರ್ಮಗಳನ್ನು ಮಾಡುವರೋ ಖಂಡಿತವಾಗಿಯೂ ನಾವು ಆ ವ್ಯಕ್ತಿಗೆ ಉತ್ತಮವಾದ ಬದುಕನ್ನು ನೀಡುವೆವು. ಅವರು ಮಾಡುತ್ತಿರುವ ಕರ್ಮಗಳಲ್ಲಿ ಅತ್ಯುತ್ತಮವಾಗಿರುವುದಕ್ಕೆ ಅನುಗುಣವಾಗಿ ನಾವು ಅವರಿಗಿರುವ ಪ್ರತಿಫಲವನ್ನು ನೀಡುವೆವು." [ಅನ್ನಹ್ಲ್:97]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಯಾರಾದರೂ ಒಂದು ಕೆಡುಕನ್ನು ಮಾಡಿದರೆ ಅದಕ್ಕೆ ಸಮಾನವಾದ ಪ್ರತಿಫಲವನ್ನೇ ಅವನಿಗೆ ನೀಡಲಾಗುವುದು. ಪುರುಷನಾಗಿರಲಿ, ಸ್ತ್ರೀಯಾಗಿರಲಿ ಯಾರು ಸತ್ಯವಿಶ್ವಾಸಿಯಾಗಿದ್ದುಕೊಂಡು ಸತ್ಕರ್ಮವೆಸಗುವರೋ ಅವರು ಸ್ವರ್ಗವನ್ನು ಪ್ರವೇಶಿಸುವರು. ಅವರಿಗೆ ಅಲ್ಲಿ ಲೆಕ್ಕವಿಲ್ಲದೆ ಅನ್ನಾಧಾರವನ್ನು ಒದಗಿಸಲಾಗುವುದು." [ಗಾಫಿರ್:40].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "(ಅಲ್ಲಾಹನಿಗೆ) ಶರಣಾಗಿರುವ ಪುರುಷರು ಮತ್ತು ಸ್ತ್ರೀಯರು, ವಿಶ್ವಾಸಿಗಳಾಗಿರುವ ಪುರುಷರು ಮತ್ತು ಸ್ತ್ರೀಯರು, ಭಯಭಕ್ತಿಯುಳ್ಳ ಪುರುಷರು ಮತ್ತು ಸ್ತ್ರೀಯರು, ಸತ್ಯಸಂಧರಾಗಿರುವ ಪುರುಷರು ಮತ್ತು ಸ್ತ್ರೀಯರು, ತಾಳ್ಮೆ ವಹಿಸುವ ಪುರುಷರು ಮತ್ತು ಸ್ತ್ರೀಯರು, ವಿನಮ್ರರಾಗಿರುವ ಪುರುಷರು ಮತ್ತು ಸ್ತ್ರೀಯರು, ದಾನಧರ್ಮ ಮಾಡುವ ಪುರುಷರು ಮತ್ತು ಸ್ತ್ರೀಯರು, ಉಪವಾಸವನ್ನಾಚರಿಸುವ ಪುರುಷರು ಮತ್ತು ಸ್ತ್ರೀಯರು, ತಮ್ಮ ಗುಪ್ತಾಂಗಗಳನ್ನು ಸಂರಕ್ಷಿಸುವ ಪುರುಷರು ಮತ್ತು ಸ್ತ್ರೀಯರು, ಅಲ್ಲಾಹನನ್ನು ಹೇರಳವಾಗಿ ಸ್ಮರಿಸುವ ಪುರುಷರು ಮತ್ತು ಸ್ತ್ರೀಯರು. ಇವರಿಗೆ ಅಲ್ಲಾಹು ಪಾಪ ಮುಕ್ತಿಯನ್ನು ಮತ್ತು ಮಹಾ ಪ್ರತಿಫಲವನ್ನು ಸಿದ್ಧಗೊಳಿಸಿರುವನು." [ಅಲ್-ಅಹ್‌ಝಾಬ್:35]

## 19. ಇಸ್ಲಾಮ್ ಧರ್ಮವು ಮಹಿಳೆಯನ್ನು ಗೌರವಿಸುತ್ತದೆ. ಮಹಿಳೆಯರನ್ನು ಪುರುಷರ ಸಮಾನಾರ್ಧವೆಂದು ಪರಿಗಣಿಸುತ್ತದೆ. ಪುರುಷನು ಸಾಮರ್ಥ್ಯವುಳ್ಳವನಾಗಿದ್ದರೆ ಖರ್ಚು ಮಾಡುವುದನ್ನು ಅವನಿಗೆ ಕಡ್ಡಾಯಗೊಳಿಸುತ್ತದೆ. ಮಗಳ ಖರ್ಚು-ವೆಚ್ಚಗಳನ್ನು ತಂದೆ ಭರಿಸುವುದು, ತಾಯಿಯ ಖರ್ಚು-ವೆಚ್ಚಗಳನ್ನು ಮಗನು, ಅವನು ಪ್ರೌಢನಾಗಿದ್ದರೆ, ಭರಿಸುವುದು ಮತ್ತು ಹೆಂಡತಿಯ ಖರ್ಚು-ವೆಚ್ಚಗಳನ್ನು ಗಂಡ ಭರಿಸುವುದು ಕಡ್ಡಾಯವಾಗಿದೆ.

ಇಸ್ಲಾಂ ಮಹಿಳೆಯರನ್ನು ಪುರುಷರ ಸಮಾನಾರ್ಧವೆಂದು ಪರಿಗಣಿಸುತ್ತದೆ.

ಪ್ರವಾದಿ صلى الله عليه وسلم ರವರು ಹೇಳಿದರು: **"ಖಂಡಿತವಾಗಿಯೂ ಮಹಿಳೆಯರು (ಇಸ್ಲಾಮಿ ತತ್ವದರ್ಶನಗಳಲ್ಲಿ) ಪುರುಷರಂತೆಯೇ ಇದ್ದಾರೆ."** [ತಿರ್ಮಿದಿ:113]

ತಾಯಿಯ ಖರ್ಚು-ವೆಚ್ಚಗಳನ್ನು ನೋಡಿಕೊಳ್ಳುವುದನ್ನು ಇಸ್ಲಾಂ ಧರ್ಮವು ಮಗನಿಗೆ—ಅವನಿಗೆ ಅದರ ಸಾಮರ್ಥ್ಯವಿದ್ದರೆ—ಕಡ್ಡಾಯಗೊಳಿಸಿರುವುದು ಇಸ್ಲಾಂ ಧರ್ಮವು ಮಹಿಳೆಯರಿಗೆ ನೀಡಿದ ಗೌರವಗಳಲ್ಲಿ ಸೇರಿದೆ.

ಪ್ರವಾದಿ صلى الله عليه وسلم ರವರು ಹೇಳಿದರು: **"ಕೊಡುವ ಕೈ ಶ್ರೇಷ್ಠವಾಗಿದೆ. ನೀವು ಖರ್ಚು ಮಾಡಬೇಕಾಗಿ ಬಂದಾಗ ಮೊಟ್ಟಮೊದಲನೆಯದಾಗಿ ನಿಮ್ಮ ತಾಯಿ, ನಂತರ ನಿಮ್ಮ ತಂದೆ, ನಂತರ ನಿಮ್ಮ ಸಹೋದರಿ, ನಂತರ ನಿಮ್ಮ ಸಹೋದರ, ನಂತರ ನಿಮಗೆ ಹತ್ತಿರವಿರುವವರಿಂದ ಪ್ರಾರಂಭಿಸಿ."** ಈ ಹದೀಸನ್ನು ಇಮಾಮ್ ಅಹ್ಮದ್ ವರದಿ ಮಾಡಿದ್ದಾರೆ. ಇನ್‌ಶಾ ಅಲ್ಲಾಹ್, ಶೀರ್ಷಿಕೆ ಸಂಖ್ಯೆ (29) ರಲ್ಲಿ ತಂದೆ ತಾಯಿಯರ ಸ್ಥಾನಮಾನದ ಕುರಿತು ವಿವರಿಸಲಾಗುವುದು.

ಹೆಂಡತಿಯ ಖರ್ಚು-ವೆಚ್ಚಗಳನ್ನು ನೋಡಿಕೊಳ್ಳುವುದನ್ನು ಗಂಡನಿಗೆ—ಅವನಿಗೆ ಅದರ ಸಾಮರ್ಥ್ಯವಿದ್ದರೆ—ಕಡ್ಡಾಯಗೊಳಿಸಿರುವುದು ಇಸ್ಲಾಂ ಧರ್ಮವು ಮಹಿಳೆಯರಿಗೆ ನೀಡಿದ ಗೌರವಗಳಲ್ಲಿ ಸೇರಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಸಾಮರ್ಥ್ಯವಿರುವವನು ತನ್ನ ಸಾಮರ್ಥ್ಯದಿಂದ ಖರ್ಚಿಗೆ ನೀಡಲಿ. ಯಾರಿಗಾದರೂ ತನ್ನ ಅನ್ನಾಧಾರವು ಇಕ್ಕಟ್ಟಾದರೆ ಅಲ್ಲಾಹು ಅವನಿಗೆ ನೀಡಿರುವುದರಿಂದ ಅವನು ಖರ್ಚಿಗೆ ನೀಡಲಿ. ಅಲ್ಲಾಹು ಅವನಿಗೆ ನೀಡಿರುವುದನ್ನೇ ವಿನಾ (ಕೊಡಬೇಕೆಂದು) ಯಾರನ್ನೂ ಅವನು ಬಲವಂತಪಡಿಸಲಾರನು. ಅಲ್ಲಾಹು ಇಕ್ಕಟ್ಟಿನ ಬಳಿಕ ಅನುಕೂಲತೆಯನ್ನು ಮಾಡಿಕೊಡುವನು."** [ಅತ್ತಲಾಖ್:7]

ಒಬ್ಬ ವ್ಯಕ್ತಿ ಪ್ರವಾದಿ صلى الله عليه وسلم ರೊಡನೆ ಕೇಳಿದರು: "ಗಂಡನ ಮೇಲೆ ಹೆಂಡತಿಗೆ ಇರುವ ಹಕ್ಕುಗಳು ಯಾವುವು?" ಪ್ರವಾದಿ صلى الله عليه وسلم ರವರು ಉತ್ತರಿಸಿದರು: **"ನೀವು ತಿನ್ನುವಾಗ ಅವಳಿಗೂ ತಿನ್ನಿಸುವುದು ಮತ್ತು ನೀನು ಉಡುವಾಗ ಅವಳಿಗೂ ಉಡಿಸುವುದು. ಅವಳ ಮುಖಕ್ಕೆ ಹೊಡೆಯಬಾರದು ಮತ್ತು ಅವಳನ್ನು ಕೀಳಾಗಿ ಕಾಣಬಾರದು."** [ಈ ಹದೀಸನ್ನು ಇಮಾಮ್ ಅಹ್ಮದ್ ರವರು ವರದಿ ಮಾಡಿದ್ದಾರೆ.]

ಗಂಡಂದಿರ ಮೇಲೆ ಹೆಂಡತಿಯರಿಗೆ ಇರುವ ಕೆಲವು ಹಕ್ಕುಗಳನ್ನು ವಿವರಿಸುತ್ತಾ ಪ್ರವಾದಿ صلى الله عليه وسلم ರವರು ಹೇಳುತ್ತಾರೆ. **"ಅವರಿಗೆ ನಿಮ್ಮ ಮೇಲೆ ಶಿಷ್ಟಾಚಾರಕ್ಕನುಗುಣವಾಗಿ ಅವರ ಆಹಾರ ಮತ್ತು ಉಡುಪುಗಳನ್ನು ಒದಗಿಸಬೇಕಾದುದು ಕಡ್ಡಾಯವಾಗಿದೆ."** [ಸಹೀಹ್ ಮುಸ್ಲಿಮ್]

ಪ್ರವಾದಿ صلى الله عليه وسلم ರವರು ಹೇಳಿದರು: **"ಒಬ್ಬ ವ್ಯಕ್ತಿ ಯಾರಿಗೆ ಆಹಾರ ಮತ್ತು ಉಡುಪುಗಳನ್ನು ಒದಗಿಸಬೇಕೋ ಅದನ್ನು ಒದಗಿಸದಿರುವುದು ಅವನು ಪಾಪಿಯಾಗುವುದಕ್ಕೆ ಯಥೇಷ್ಟ ಸಾಕು."** [ಈ ಹದೀಸನ್ನು ಇಮಾಮ್ ಅಹ್ಮದ್ ರವರು ವರದಿ ಮಾಡಿದ್ದಾರೆ.]

ಖತ್ತಾಬೀ ರವರು ಹೇಳುತ್ತಾರೆ: "ಯಾರಿಗೆ ಆಹಾರ ಮತ್ತು ಉಡುಪುಗಳನ್ನು ಒದಗಿಸಬೇಕೋ ಎಂದರೆ ಯಾರಿಗೆ ಆಹಾರ ಮತ್ತು ಉಡುಪುಗಳನ್ನು ಒದಗಿಸುವ ಅವನ

ಹೊಣೆಗಾರಿಕೆಯಾಗಿದೆಯೋ ಎಂದರ್ಥ. ಇದು ಪ್ರವಾದಿ صلي الله عليه وسلم ರವರು ದಾನ ಧರ್ಮ ಮಾಡುವವನೊಂದಿಗೆ ಹೀಗೆ ಹೇಳಿದಂತಿದೆ: **"ನಿನ್ನ ಕುಟುಂಬಕ್ಕೆ ಸಾಕಾಗುವಷ್ಟು ಆಹಾರಗಳು ಇಲ್ಲದಿರುವಾಗ, ನೀನು ಪುಣ್ಯವನ್ನು ಆಶಿಸುತ್ತಾ ಅದನ್ನು ದಾನ ಮಾಡಬೇಡ. ಏಕೆಂದರೆ ನೀನು ನಿನ್ನ ಕುಟುಂಬಕ್ಕೆ ಒದಗಿಸದಿರುವುದರಿಂದ ಅದು (ಆ ದಾನವು) ಪಾಪವಾಗಿ ಬದಲಾಗುತ್ತದೆ."**

ಮಗಳ ಖರ್ಚು-ವೆಚ್ಚಗಳನ್ನು ನೋಡಿಕೊಳ್ಳುವುದನ್ನು ತಂದೆಗೆ ಕಡ್ಡಾಯಗೊಳಿಸಿರುವುದು ಇಸ್ಲಾಂ ಧರ್ಮವು ಮಹಿಳೆಯರಿಗೆ ನೀಡಿದ ಗೌರವಗಳಲ್ಲಿ ಸೇರಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ತಾಯಂದಿರು ತಮ್ಮ ಶಿಶುಗಳಿಗೆ ಎರಡು ವರ್ಷ ಪೂರ್ತಿಯಾಗಿ ಮೊಲೆಯುಣಿಸಲಿ. ಇದು (ಶಿಶುವಿನ) ಸ್ತನಪಾನವನ್ನು ಪೂರ್ತಿಗೊಳಿಸಲು ಇಚ್ಛಿಸುವವರಿಗಾಗಿದೆ. ಅವರಿಗೆ (ಮೊಲೆಯುಣಿಸುವ ತಾಯಂದಿರಿಗೆ) ಶಿಷ್ಟಾಚಾರಕ್ಕೆ ಅನುಗುಣವಾಗಿ ಆಹಾರ ಮತ್ತು ಉಡುಪುಗಳನ್ನು ಒದಗಿಸಬೇಕಾದುದು ಶಿಶುವಿನ ತಂದೆಯ ಕರ್ತವ್ಯವಾಗಿದೆ."** [ಅಲ್-ಬಖರ:233].

ಆದ್ದರಿಂದ ಶಿಷ್ಟಾಚಾರಕ್ಕನುಗುಣವಾಗಿ ಮಗುವಿಗೆ ಆಹಾರ ಮತ್ತು ಉಡುಪುಗಳನ್ನು ಒದಗಿಸಬೇಕಾದುದು ಮಗುವಿನ ತಂದೆಯ ಕರ್ತವ್ಯವಾಗಿದೆ ಎಂದು ಅಲ್ಲಾಹು ವಿವರಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ನಿಮಗಾಗಿ (ಶಿಶುವಿಗೆ) ಸ್ತನಪಾನ ಮಾಡುವುದಾದರೆ ಅವರಿಗೆ ಅವರ ಪ್ರತಿಫಲವನ್ನು ಕೊಡಿರಿ."** [ಅತ್ತಲಾಖ್:6]

ಮಗುವಿಗೆ ಸ್ತನಪಾನ ಮಾಡಿಸಿದರೆ ಅದರ ವೇತನ ನೀಡುವುದನ್ನು ಅಲ್ಲಾಹನು ತಂದೆಯ ಮೇಲೆ ಕಡ್ಡಾಯಗೊಳಿಸಿದ್ದಾನೆ. ಮಗುವಿನ ಪಾಲನೆ ಪೋಷಣೆಯ ಜವಾಬ್ದಾರಿ ತಂದೆಯದ್ದೆಂದು ಇದು ಸೂಚಿಸುತ್ತದೆ. ಮಗು ಗಂಡು ಮತ್ತು ಹೆಣ್ಣು ಎರಡೂ ಆಗಿರಬಹುದು. ಕೆಳಗಿನ ಹದೀಸಿನಲ್ಲಿ ಹೆಂಡತಿ ಮತ್ತು ಅವಳ ಮಕ್ಕಳ ಪಾಲನೆ ಪೋಷಣೆಯ ಜವಾಬ್ದಾರಿ ತಂದೆಯದ್ದು ಎನ್ನುವುದಕ್ಕೆ ಪುರಾವೆಯಿದೆ.

ಆಯಿಶಾ رضي الله عنها ರವರಿಂದ ವರದಿ. ಹಿಂದ್ رضي الله عنها ರವರು ಪ್ರವಾದಿ صلى الله عليه وسلم ರವರೊಡನೆ ಕೇಳಿದರು: "ಅಬೂ ಸುಫ್ಯಾನ್ ಮಹಾ ಜಿಪುಣ. ಅವರ ಹಣವನ್ನು (ಅವರಿಗೆ ತಿಳಿಯದೆ) ನಾನು ತೆಗೆದುಕೊಳ್ಳಬಹುದೇ?" ಪ್ರವಾದಿ صلى الله عليه وسلم ರವರು ಉತ್ತರಿಸಿದರು: **"ನಿಮಗೆ ಮತ್ತು ನಿಮ್ಮ ಮಕ್ಕಳಿಗೆ ಅಗತ್ಯವಿದ್ದಷ್ಟು ಶಿಷ್ಟಾಚಾರಕ್ಕನುಗುಣವಾಗಿ ತೆಗೆದುಕೊಳ್ಳಿ."** [ಈ ಹದೀಸನ್ನು ಇಮಾಮ್ ಬುಖಾರಿ ರವರು ವರದಿ ಮಾಡಿದ್ದಾರೆ.]

ಹೆಣ್ಣುಮಕ್ಕಳು ಮತ್ತು ಸಹೋದರಿಯರಿಗೆ ಖರ್ಚು ಮಾಡುವುದರ ಶ್ರೇಷ್ಠತೆಯನ್ನು ಪ್ರವಾದಿ صلى الله عليه وسلم ರವರು ವಿವರಿಸಿದ್ದಾರೆ. ಪ್ರವಾದಿ صلى الله عليه وسلم ರವರು ಹೇಳುತ್ತಾರೆ: **"ಇಬ್ಬರು ಅಥವಾ ಮೂವರು ಹೆಣ್ಣು ಮಕ್ಕಳನ್ನು, ಅಥವಾ ಇಬ್ಬರು ಅಥವಾ ಮೂವರು ಸಹೋದರಿಯರನ್ನು – ಅವರು ಮದುವೆ ಅಥವಾ ಮರಣದ ಮೂಲಕ ತನ್ನಿಂದ ಬೇರ್ಪಡುವ ತನಕ, ಅಥವಾ ತಾನು ನಿಧನನಾಗಿ ಅವರಿಂದ ಬೇರ್ಪಡುವ ತನಕ – ಯಾರು ಲಾಲನೆ-ಪಾಲನೆ ಮಾಡಿ ಬೆಳೆಸುತ್ತಾರೋ ನಾನು ಮತ್ತು ಅವನು (ಸ್ವರ್ಗದಲ್ಲಿ) ಈ ರೀತಿ ಇರುತ್ತೇವೆ."** ನಂತರ ಅವರು ತಮ್ಮ ತೋರು ಬೆರಳು ಮತ್ತು ಮಧ್ಯದ ಬೆರಳನ್ನು ಜೋಡಿಸಿ ತೋರಿಸಿದರು. [ಅಸ್ಸಿಲ್ಸಿಲತು-ಸ್ಸಹೀಹ 296.]

## 20. ಮರಣ ಎಂದರೆ  ಶಾಶ್ವತ ವಿನಾಶವಲ್ಲ. ಬದಲಾಗಿ ಅದು ಕರ್ಮಭೂಮಿಯಿಂದ ಪ್ರತಿಫಲದ ಭೂಮಿಗೆ ಸಾಗುವುದಾಗಿದೆ. ಮರಣವು ದೇಹ ಮತ್ತು ಆತ್ಮವನ್ನು ಒಳಗೊಂಡಿದೆ. ಆತ್ಮದ ಮರಣ ಎಂದರೆ ಆತ್ಮವು ದೇಹದಿಂದ ಬೇರ್ಪಟ್ಟು ಪುನರುತ್ಥಾನದ ದಿನದಂದು ಪುನರ್ಜೀವಗೊಳ್ಳುವಾಗ ದೇಹಕ್ಕೆ ಮರಳುತ್ತದೆ. ಮರಣದ ನಂತರ ಆತ್ಮವು ಮತ್ತೊಂದು ದೇಹಕ್ಕೆ ಸಾಗುವುದಿಲ್ಲ. ಅಥವಾ ಇನ್ನೊಂದು ದೇಹದ ಆತ್ಮವಾಗಿ ಮಾರ್ಪಡುವುದಿಲ್ಲ.

ಮರಣ ಎಂದರೆ  ಶಾಶ್ವತ ವಿನಾಶವಲ್ಲ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ನಿಮ್ಮ ವಿಷಯದಲ್ಲಿ ಹೊಣೆ ವಹಿಸಿಕೊಡಲಾದ ಮರಣದ ಮಲಕ್ ನಿಮ್ಮನ್ನು ಮೃತಪಡಿಸುವರು. ತರುವಾಯ ನಿಮ್ಮನ್ನು ನಿಮ್ಮ ಪ್ರಭುವಿನೆಡೆಗೆ ಮರಳಿಸಲಾಗುವುದು."** [ಅಸ್ಸಜ್ದ:11]

ಮರಣವು ದೇಹ ಮತ್ತು ಆತ್ಮವನ್ನು ಒಳಗೊಂಡಿದೆ. ಆತ್ಮದ ಮರಣ ಎಂದರೆ ಆತ್ಮವು ದೇಹದಿಂದ ಬೇರ್ಪಟ್ಟು ಪುನರುತ್ಥಾನದ ದಿನದಂದು ಪುನರ್ಜೀವಗೊಳ್ಳುವಾಗ ದೇಹಕ್ಕೆ ಮರಳುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹು ಆತ್ಮಗಳನ್ನು ಅವುಗಳ ಮರಣ ವೇಳೆಯಲ್ಲಿ ಪೂರ್ಣವಾಗಿ ವಹಿಸಿಕೊಳ್ಳುವನು. ಮೃತಪಡದವುಗಳನ್ನು (ಮರಣವನ್ನು ವಿಧಿಸಲ್ಪಡದವುಗಳನ್ನು) ಅವುಗಳ ನಿದ್ರಾವೇಳೆಯಲ್ಲಿ (ವಹಿಸಿಕೊಳ್ಳುವನು). ತರುವಾಯ ಯಾವೆಲ್ಲ ಆತ್ಮಗಳ ಮೇಲೆ ಅವನು ಮರಣವನ್ನು ವಿಧಿಸಿರುವನೋ ಅವುಗಳನ್ನು ಅವನು ಹಿಡಿದಿಟ್ಟುಕೊಳ್ಳುವನು. ಉಳಿದವುಗಳನ್ನು ಒಂದು ನಿಶ್ಚಿತ ಅವಧಿಯವರೆಗೆ ಅವನು ಬಿಟ್ಟುಬಿಡುವನು. ಖಂಡಿತವಾಗಿಯೂ ಚಿಂತಿಸುವ ಜನರಿಗೆ ಇದರಲ್ಲಿ ದೃಷ್ಟಾಂತಗಳಿವೆ."** [ಅಝ್ಝುಮರ್:42]

ಪ್ರವಾದಿ صلي الله عليه وسلم ರವರು ಹೇಳಿದರು: **"ಖಂಡಿತವಾಗಿಯೂ ಆತ್ಮವನ್ನು ವಶಪಡಿಸಲಾದಾಗ, ದೃಷ್ಟಿ ಅದನ್ನು ಹಿಂಬಾಲಿಸುತ್ತದೆ."** [ಮುಸ್ಲಿಮ್ 920.]

ಮರಣದ ನಂತರ ಮನುಷ್ಯನು ಕರ್ಮಭೂಮಿಯಿಂದ ಪ್ರತಿಫಲದ ಭೂಮಿಗೆ ಸಾಗುತ್ತಾನೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಿಮ್ಮೆಲ್ಲರ ಮರಳುವಿಕೆಯು ಅವನೆಡೆಗೇ ಆಗಿರುವುದು. ಇದು ಅಲ್ಲಾಹನ ಸತ್ಯ ವಾಗ್ದಾನವಾಗಿದೆ. ಖಂಡಿತವಾಗಿಯೂ ಅವನು ಸೃಷ್ಟಿಯನ್ನು ಆರಂಭಿಸುವನು ಮತ್ತು ವಿಶ್ವಾಸವಿಟ್ಟವರಿಗೆ ಹಾಗೂ ಸತ್ಕರ್ಮವೆಸಗಿದವರಿಗೆ ನ್ಯಾಯಬದ್ಧ ಪ್ರತಿಫಲವನ್ನು ನೀಡುವ ಸಲುವಾಗಿ ತರುವಾಯ ಅವನು ಅದನ್ನು ಪುನರಾವರ್ತಿಸುವನು. ಸತ್ಯನಿಷೇಧಿಗಳಾರೋ, ಅವರು ಸತ್ಯವನ್ನು ನಿಷೇಧಿಸಿರುವುದರ ಫಲವಾಗಿ ಅವರಿಗೆ ಕುದಿಯುವ ಪಾನೀಯ ಮತ್ತು ಯಾತನಾಮಯವಾದ ಶಿಕ್ಷೆಯಿದೆ."** [ಯೂನುಸ್:4].

ಮರಣದ ನಂತರ ಆತ್ಮವು ಮತ್ತೊಂದು ದೇಹಕ್ಕೆ ಸಾಗುವುದಿಲ್ಲ. ಅಥವಾ ಇನ್ನೊಂದು ದೇಹದ ಆತ್ಮವಾಗಿ ಮಾರ್ಪಡುವುದಿಲ್ಲ. ಅದು ಇನ್ನೊಂದು ದೇಹದ ಆತ್ಮವಾಗಿ ಮಾರ್ಪಡುತ್ತದೆ ಎನ್ನುವ ವಾದಕ್ಕೆ ತರ್ಕಬದ್ಧವಾದ ಅಥವಾ ಅನುಭವವೇದ್ಯವಾದ ಪುರಾವೆಯಿಲ್ಲ. ಪ್ರವಾದಿಗಳಿಂದ ಬಂದ ಯಾವುದೇ ಧಾರ್ಮಿಕ ಜ್ಞಾನದಲ್ಲೂ ಈ ನಂಬಿಕೆಗೆ ಸಾಕ್ಷಿಯಿಲ್ಲ.

## 21. ಇಸ್ಲಾಂ ಧರ್ಮವು ಸತ್ಯವಿಶ್ವಾಸದ ಪ್ರಮುಖ ಮೂಲಭೂತ ತತ್ವಗಳ ಮೇಲೆ ವಿಶ್ವಾಸವಿಡಬೇಕೆಂದು ಆಹ್ವಾನಿಸುತ್ತದೆ. ಅವು ಅಲ್ಲಾಹನಲ್ಲಿ ವಿಶ್ವಾಸವಿಡುವುದು, ಅವನ ಮಲಕ್‌ಗಳಲ್ಲಿ (ದೇವಚರರು) ವಿಶ್ವಾಸವಿಡುವುದು, ವಿರೂಪಗೊಳ್ಳುವುದಕ್ಕೆ ಮುಂಚಿನ ಸ್ಥಿತಿಯಲ್ಲಿದ್ದ ತೌರಾತ್, ಇಂಜೀಲ್ ಮತ್ತು ಝಬೂರ್ ಮುಂತಾದ ದೈವಿಕ ಗ್ರಂಥಗಳಲ್ಲಿ ವಿಶ್ವಾಸವಿಡುವುದು, ಕುರ್‌ಆನ್‌ನಲ್ಲಿ ವಿಶ್ವಾಸವಿಡುವುದು, ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು, ಅವರಲ್ಲಿ ಕೊನೆಯವರಾದ ಅಂದರೆ ಪ್ರವಾದಿಗಳಲ್ಲಿ ಮತ್ತು ಸಂದೇಶವಾಹಕರಲ್ಲಿ ಅಂತಿಮರಾದ ಪ್ರವಾದಿ ಮುಹಮ್ಮದ್‌ರಲ್ಲಿ ವಿಶ್ವಾಸವಿಡುವುದು ಮತ್ತು ಅಂತ್ಯದಿನದಲ್ಲಿ ವಿಶ್ವಾಸವಿಡುವುದು. ಇಹಲೋಕದಲ್ಲೇ ಎಲ್ಲವೂ ಕೊನೆಗೊಳ್ಳುವುದಾಗಿದ್ದರೆ ನಮ್ಮ ಜೀವನ ಮತ್ತು ಅಸ್ತಿತ್ವವೆಲ್ಲವೂ ಅಸಂಬದ್ಧವಾಗಿರುತ್ತಿತ್ತು ಎಂದು ನಮಗೆ ತಿಳಿದಿದೆ. ಅದೇ ರೀತಿ ವಿಧಿ ಮತ್ತು ನಿರ್ಣಯದಲ್ಲಿ ವಿಶ್ವಾಸವಿಡುವುದು.

ಇಸ್ಲಾಂ ಧರ್ಮವು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರು ಆಹ್ವಾನಿಸಿದಂತೆಯೇ ಸತ್ಯವಿಶ್ವಾಸದ ಪ್ರಮುಖ ಮೂಲಭೂತ ತತ್ವಗಳ ಮೇಲೆ ವಿಶ್ವಾಸವಿಡಬೇಕೆಂದು ಆಹ್ವಾನಿಸುತ್ತದೆ. ಅವುಗಳೆಂದರೇ:

**ಮೊದಲನೆಯದಾಗಿ:** ಅಲ್ಲಾಹನ ಮೇಲೆ ವಿಶ್ವಾಸವಿಡುವುದು. ಅಂದರೆ ಅವನೇ ರಬ್ಬ್ (ಪ್ರಭು), ಸೃಷ್ಟಿಕರ್ತ, ಜೀವನಾಧಾರ ನೀಡುವವನು ಮತ್ತು ಈ ಜಗತ್ತನ್ನು ನಿಯಂತ್ರಿಸುವವನು ಎಂದು ವಿಶ್ವಾಸವಿಡುವುದು. ಆರಾಧನೆಗೆ ಅವನು ಮಾತ್ರ ಅರ್ಹನು, ಅವನ ಹೊರತಾದವರನ್ನು ಆರಾಧಿಸುವುದು ವ್ಯರ್ಥ, ಅವನ ಹೊರತು ಇತರ ಆರಾಧ್ಯರೆಲ್ಲರೂ ಮಿಥ್ಯ,

ಆರಾಧನೆಗಳನ್ನು ಸ್ವೀಕರಿಸಲು ಯೋಗ್ಯನಾಗಿರುವುದು ಅವನು ಮಾತ್ರ, ಅವನಿಗೆ ಅರ್ಪಿಸಿದರೆ ಮಾತ್ರ ಆರಾಧನೆ ಸಿಂಧುವಾಗುತ್ತದೆ ಎಂದು ವಿಶ್ವಾಸವಿಡುವುದು. ಇವುಗಳ ಪುರಾವೆಗಳನ್ನು ಶೀರ್ಷಿಕೆ ಸಂಖ್ಯೆ (8) ಈಗಾಗಲೇ ವಿವರಿಸಲಾಗಿದೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಕುರ್ಆನಿನ ಅನೇಕ ವ್ಯತಿರಿಕ್ತ ಸೂಕ್ತಿಗಳಲ್ಲಿ ಈ ಪ್ರಮುಖ ಮೂಲತತ್ವಗಳನ್ನು ಉಲ್ಲೇಖಿಸಿದ್ದಾನೆ. ಅವುಗಳಲ್ಲೊಂದು ಸರ್ವಶಕ್ತನಾದ ಅಲ್ಲಾಹನ ಈ ವಚನ: **"ತಮ್ಮ ಪ್ರಭುವಿನ ವತಿಯಿಂದ ತಮಗೆ ಅವತೀರ್ಣಗೊಳಿಸಲಾಗಿರುವುದರಲ್ಲಿ ಸಂದೇಶವಾಹಕರು ವಿಶ್ವಾಸವಿಟ್ಟಿರುವರು. (ತರುವಾಯ) ಸತ್ಯವಿಶ್ವಾಸಿಗಳು ಸಹ ವಿಶ್ವಾಸವಿಟ್ಟಿರುವರು. ಅವರೆಲ್ಲರೂ ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ ಮತ್ತು ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಟ್ಟಿರುವರು. ಅವನ ಸಂದೇಶವಾಹಕರ ಪೈಕಿ ಯಾರ ನಡುವೆಯೂ ನಾವು ವ್ಯತ್ಯಾಸ ಕಲ್ಪಿಸಲಾರೆವು (ಎಂಬುದು ಅವರ ನಿಲುವಾಗಿದೆ). ನಾವು ಆಲಿಸಿರುವೆವು ಮತ್ತು ಅನುಸರಿಸಿರುವೆವು, ನಮ್ಮ ಪ್ರಭೂ! ನಮಗೆ ಪಾಪಮುಕ್ತಿಯನ್ನು ದಯಪಾಲಿಸು, (ನಮ್ಮ) ಮರಳುವಿಕೆಯು ನಿನ್ನ ಬಳಿಗೇ ಆಗಿದೆ ಎಂದು ಅವರು ಹೇಳುವರು."** [ಅಲ್-ಬಖರ:285].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ನಿಮ್ಮ ಮುಖಗಳನ್ನು ಪೂರ್ವದೆಡೆಗೆ ಅಥವಾ ಪಶ್ಚಿಮದೆಡೆಗೆ ತಿರುಗಿಸುವುದಲ್ಲ ಪುಣ್ಯ. ಆದರೆ ಅಲ್ಲಾಹನಲ್ಲಿ, ಅಂತ್ಯದಿನದಲ್ಲಿ, ಮಲಕ್‌ಗಳಲ್ಲಿ, ಗ್ರಂಥದಲ್ಲಿ ಮತ್ತು ಪ್ರವಾದಿಗಳಲ್ಲಿ ವಿಶ್ವಾಸವಿಡುವವನು, ಸಂಪತ್ತಿನ ಮೇಲೆ ಪ್ರೀತಿಯಿದ್ದೂ ಅದನ್ನು ಸಂಬಂಧಿಕರಿಗೆ, ಅನಾಥರಿಗೆ, ನಿರ್ಗತಿಕರಿಗೆ, ದಾರಿಹೋಕನಿಗೆ, ಯಾಚಿಸಿ ಬರುವವರಿಗೆ ಮತ್ತು ಗುಲಾಮ ವಿಮೋಚನೆಗೆ ವ್ಯಯಿಸುವವನು, ನಮಾಝನ್ನು ಸಂಸ್ಥಾಪಿಸುವವನು, ಝಕಾತ್ ನೀಡುವವನು, ಕರಾರು ಮಾಡಿದರೆ ಅದನ್ನು ನೆರವೇರಿಸುವವನು ಮತ್ತು ದಾರಿದ್ರ್ಯ, ಸಂಕಷ್ಟ ಹಾಗೂ ಯುದ್ಧದ ಸಂದರ್ಭಗಳಲ್ಲಿ ತಾಳ್ಮೆ ವಹಿಸುವವರು ಯಾರೋ ಅವರೇ ಪುಣ್ಯವಂತರು. ಸತ್ಯವನ್ನು ಪಾಲಿಸಿದವರು ಅವರೇ ಆಗಿರುವರು ಮತ್ತು ಭಯಭಕ್ತಿಯುಳ್ಳವರೂ ಅವರೇ ಆಗಿರುವರು."** [ಅಲ್-ಬಖರ:177].

ಈ ಮೂಲತತ್ವಗಳ ಮೇಲೆ ವಿಶ್ವಾಸವಿಡಲು ಅಲ್ಲಾಹನು ಆಹ್ವಾನಿಸಿದ್ದಾನೆ ಮತ್ತು ಯಾರು ಇವುಗಳನ್ನು ನಿಷೇಧಿಸುತ್ತಾರೋ ಅವರು ಖಂಡಿತವಾಗಿಯೂ ವಿದೂರವಾದ ಪಥಭ್ರಷ್ಟತೆಯಲ್ಲಿದ್ದಾರೆಂದು ವಿವರಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಸತ್ಯವಿಶ್ವಾಸಿಗಳೇ! ಅಲ್ಲಾಹನಲ್ಲಿಯೂ, ಅವನ ಸಂದೇಶವಾಹಕರಲ್ಲಿಯೂ, ಅವನ ಸಂದೇಶವಾಹಕರಿಗೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲಿಯೂ ಮತ್ತು ಅವರಿಗಿಂತ ಮುಂಚೆ ಅವತೀರ್ಣಗೊಳಿಸಿದ ಗ್ರಂಥದಲ್ಲಿಯೂ ವಿಶ್ವಾಸವಿಡಿರಿ. ಯಾರು ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ, ಅವನ ಸಂದೇಶವಾಹಕರಲ್ಲಿ ಮತ್ತು ಅಂತ್ಯದಿನದಲ್ಲಿ ಅವಿಶ್ವಾಸವಿಡುತ್ತಾನೋ ಖಂಡಿತವಾಗಿಯೂ ಅವನು ವಿದೂರವಾದ ಪಥಭ್ರಷ್ಟತೆಯಲ್ಲಿರುವನು."** [ಅನ್ನಿಸಾ:136].

ಉಮರ್ ಬಿನ್ ಖತ್ತಾಬ್ رضي الله عنه ರವರಿಂದ ವರದಿಯಾದ ಹದೀಸಿನಲ್ಲಿ ಹೀಗಿದೆ: ಅವರು ಹೇಳುತ್ತಾರೆ: ಒಂದು ದಿನ ನಾವು ಪ್ರವಾದಿ صلي الله عليه وسلم ರವರೊಂದಿಗೆ ಕುಳಿತಿರುವಾಗ ಶುಭ್ರ ಬಿಳಿ ಬಣ್ಣದ ಉಡುಪು ಧರಿಸಿದ, ಕಡುಗಪ್ಪು ಬಣ್ಣದ ಕೂದಲಿನ ವ್ಯಕ್ತಿಯೊಬ್ಬರು ಪ್ರತ್ಯಕ್ಷರಾದರು. ಪ್ರಯಾಣದ ಯಾವುದೇ ಕುರುಹು ಅವರಲ್ಲಿ ಗೋಚರಿಸುತ್ತಿರಲಿಲ್ಲ. ನಮ್ಮಲ್ಲಿ ಯಾರಿಗೂ ಅವರ ಪರಿಚಯವಿರಲಿಲ್ಲ. ಆ ವ್ಯಕ್ತಿ ತಮ್ಮ ಮೊಣಕಾಲನ್ನು ಪ್ರವಾದಿ ಮುಹಮ್ಮದ್ صلي الله عليه وسلم ರವರ ಮೊಣಕಾಲಿಗೆ ಜೋಡಿಸಿ ಕುಳಿತು ತಮ್ಮ ಅಂಗೈಗಳನ್ನು ಪ್ರವಾದಿ صلي الله عليه وسلم ರವರ ತೊಡೆಗಳ ಮೇಲಿಟ್ಟು ಕೇಳಿದರು: "ಓ ಮುಹಮ್ಮದ್! ನನಗೆ ಇಸ್ಲಾಮಿನ ಬಗ್ಗೆ ತಿಳಿಸಿರಿ". ಪ್ರವಾದಿ صلي الله عليه وسلم ರವರು ಹೇಳಿದರು: **"ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕನ್ನು ಹೊಂದಿದವರಾಗಿ ಅನ್ಯರಿಲ್ಲ ಮತ್ತು ಮುಹಮ್ಮದ್ صلي الله عليه وسلم ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ಸಾಕ್ಷಿ ವಹಿಸುವುದು, ನಮಾಝನ್ನು ಸಂಸ್ಥಾಪಿಸುವುದು, ಝಕಾತ್ ನೀಡುವುದು, ರಮದಾನ್ ತಿಂಗಳಲ್ಲಿ ಉಪವಾಸ ಆಚರಿಸುವುದು ಮತ್ತು ತಲುಪಲು ಸಾಧ್ಯವಾದರೆ ಅಲ್ಲಾಹನು ಭವನಕ್ಕೆ ಹಜ್ಜ್ ನಿರ್ವಹಿಸುವುದು."** ಆ ವ್ಯಕ್ತಿ ಹೇಳಿದರು: "ತಾವು ಹೇಳಿದ್ದು ಸತ್ಯ".

ಆ ವ್ಯಕ್ತಿ ಪ್ರಶ್ನಿಸುವುದು ಮತ್ತು ಸತ್ಯವೆಂದು ದೃಢೀಕರಿಸುವುದು ನಮಗೆ ತುಂಬಾ ಅಚ್ಚರಿಯನ್ನುಂಟು ಮಾಡಿತು. ಆ ವ್ಯಕ್ತಿ ಕೇಳಿದರು: "ಈಮಾನ್‌ನ ಬಗ್ಗೆ ನನಗೆ ತಿಳಿಸಿಕೊಡಿರಿ." ಪ್ರವಾದಿ صلى الله عليه وسلم ರವರು ಹೇಳಿದರು: **"ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ, ಅವನ ಸಂದೇಶವಾಹಕರಲ್ಲಿ, ಅಂತ್ಯ ದಿನದಲ್ಲಿ, ಮತ್ತು ವಿಧಿಯಲ್ಲಿ ಅದರ ಒಳಿತು ಮತ್ತು ಕೆಡುಕುಗಳಲ್ಲಿ ವಿಶ್ವಾಸವಿಡುವುದು."**

ಆ ವ್ಯಕ್ತಿ ಹೇಳಿದರು: "ಇಹ್ಸಾನ್‌ನ ಬಗ್ಗೆ ತಿಳಿಸಿಕೊಡಿರಿ". ಪ್ರವಾದಿ صلى الله عليه وسلم ಹೇಳಿದರು: **"ಅಲ್ಲಾಹನನ್ನು ನೀನು ನೋಡುತ್ತಿರುವಂತೆ ಅವನನ್ನು ನೀನು ಆರಾಧಿಸುವುದು. ಅವನನ್ನು ನೀನು ನೋಡಲು ಸಾಧ್ಯವಿಲ್ಲವಾದರೂ ಅವನು ನಿನ್ನನ್ನು ನೋಡುತ್ತಿದ್ದಾನೆಂದು ಭಾವಿಸಿ ಆರಾಧಿಸುವುದು."** [ಸಹೀಹ್ ಮುಸ್ಲಿಮ್ 8.]

ಈ ಹದೀಸಿನಲ್ಲಿ ಜಿಬ್ರೀಲ್ عليه السلام ರು ಪ್ರವಾದಿ ಮುಹಮ್ಮದ್ صلى الله عليه وسلم ರ ಬಳಿ ಬಂದು ಧರ್ಮದ ದರ್ಜೆಗಳ ಬಗ್ಗೆ ಪ್ರಶ್ನಿಸಿದರು. ಅವು: ಇಸ್ಲಾಮ್, ಈಮಾನ್ ಮತ್ತು ಇಹ್ಸಾನ್‌ಗಳಾಗಿವೆಯೆಂದು ಪ್ರವಾದಿ ಮುಹಮ್ಮದ್ صلى الله عليه وسلم ರವರು ಉತ್ತರಿಸಿದರು. ನಂತರ ಪ್ರವಾದಿ صلى الله عليه وسلم ರವರು ತಮ್ಮ ಸಹಾಬಾಗಳಿಗೆ ಅವರು ಜಿಬ್ರೀಲ್ ನಿಮಗೆ ನಿಮ್ಮ ಧರ್ಮವನ್ನು ಕಲಿಸಲು ಬಂದಿದ್ದರು ಎಂದು ತಿಳಿಸಿದರು.

ಇದುವೇ ದೈವಿಕ ಸಂದೇಶವಾದ ಇಸ್ಲಾಮ್. ಜಿಬ್ರೀಲ್ عليه السلام ರು ಇದನ್ನು (ಅಲ್ಲಾಹನಿಂದ) ತಂದರು ಮತ್ತು ಪ್ರವಾದಿ ಮುಹಮ್ಮದ್ صلى الله عليه وسلم ರವರು ಅದನ್ನು ಜನರಿಗೆ ತಲುಪಿಸಿದರು. ಅವರ ಸಹಾಬಾಗಳು ಅದನ್ನು ಸಂರಕ್ಷಿಸಿದರು ಮತ್ತು ತಮ್ಮ ನಂತರದ ಜನರಿಗೆ ತಲುಪಿಸಿದರು.

**ಎರಡನೆಯದು:** ಮಲಕ್‌ಗಳ ಮೇಲೆ ವಿಶ್ವಾಸವಿಡುವುದು. ಅವರದ್ದು ಅಗೋಚರ ಜಗತ್ತು. ಅಲ್ಲಾಹನು ಅವರನ್ನು ಸೃಷ್ಟಿಸಿದನು ಮತ್ತು ಅವರಿಗೆ ಒಂದು ನಿರ್ದಿಷ್ಟ ರೂಪವನ್ನು ನೀಡಿದನು. ಅವರಿಗೆ ದೊಡ್ಡ ದೊಡ್ಡ ಕಾರ್ಯಗಳನ್ನು ವಹಿಸಿಕೊಟ್ಟನು. ಅವರ ಕಾರ್ಯಗಳಲ್ಲಿ

ಅತೀ ಶ್ರೇಷ್ಠವಾದದ್ದು ಸಂದೇಶವಾಹಕರು ಮತ್ತು ಪ್ರವಾದಿಗಳಿಗೆ ಅಲ್ಲಾಹನ ಸಂದೇಶಗಳನ್ನು ತಲುಪಿಸುವುದು. ಮಲಕ್‌ಗಳಲ್ಲಿ ಅತಿಶ್ರೇಷ್ಠರು ಜಿಬ್ರೀಲ್ عليه السلام ರವರು.

ಜಿಬ್ರೀಲ್ عليه السلام ರವರು ಸಂದೇಶವಾಹಕರ ಬಳಿಗೆ ದಿವ್ಯಸಂದೇಶವನ್ನು ತರುತ್ತಿದ್ದರು ಎನ್ನುವುದಕ್ಕೆ ಪುರಾವೆ ಅಲ್ಲಾಹನ ಈ ವಚನ: **"ತನ್ನ ದಾಸರ ಪೈಕಿ ತಾನಿಚ್ಛಿಸುವವರ ಮೇಲೆ ತನ್ನ ಆಜ್ಞೆ ಪ್ರಕಾರ ಅವನು (ಸತ್ಯಸಂದೇಶವಾಗಿರುವ) ಚೈತನ್ಯದೊಂದಿಗೆ ಮಲಕ್‌ಗಳನ್ನು ಇಳಿಸುವನು. ನನ್ನ ಹೊರತು ಅನ್ಯ ಆರಾಧ್ಯರಿಲ್ಲ, ಆದ್ದರಿಂದ ನನ್ನನ್ನು ಭಯಪಡಿರಿ ಎಂದು ಜನರಿಗೆ ಮುನ್ನೆಚ್ಚರಿಕೆ ನೀಡಿರಿ (ಎಂಬ ಸಂದೇಶದೊಂದಿಗೆ)."** [ಅನ್ನಹ್ಲ್:2].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಇದು (ಕುರ್‌ಆನ್) ಸರ್ವಲೋಕಗಳ ಪ್ರಭು ಅವತೀರ್ಣಗೊಳಿಸಿದ್ದಾಗಿದೆ.(192) ವಿಶ್ವಾಸಾರ್ಹ ಆತ್ಮನು (ಜಿಬ್ರೀಲ್) ಅದರೊಂದಿಗೆ ಇಳಿದನು.(193) ತಮ್ಮ ಹೃದಯದಲ್ಲಿ (ಇಳಿದಿರುವರು) ತಾವು ಮುನ್ನೆಚ್ಚರಿಕೆ ನೀಡುವವರಲ್ಲಿ ಸೇರಿದವರಾಗುವ ಸಲುವಾಗಿ.(194) ಸ್ಪಷ್ಟವಾದ ಅರಬಿ ಭಾಷೆಯಲ್ಲಿ (ಅದು ಅವತೀರ್ಣಗೊಂಡಿದೆ).(195) ಖಂಡಿತವಾಗಿಯೂ ಅದು ಪೂರ್ವಕಾಲದವರ ಗ್ರಂಥಗಳಲ್ಲಿ ರುವುದಾಗಿದೆ.(196)"** [ಅಶ್ಶುಅರಾ:192 - 196].

**ಮೂರನೆಯದು:** ವಿರೂಪಗೊಳ್ಳುವುದಕ್ಕೆ ಮುಂಚಿನ ಸ್ಥಿತಿಯಲ್ಲಿದ್ದ ತೌರಾತ್, ಇಂಜೀಲ್ ಮತ್ತು ಝಬೂರ್ ಮುಂತಾದ ದೈವಿಕ ಗ್ರಂಥಗಳಲ್ಲಿ ಹಾಗೂ ಪವಿತ್ರ ಕುರ್‌ಆನ್‌ನಲ್ಲಿ ವಿಶ್ವಾಸವಿಡುವುದು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಸತ್ಯವಿಶ್ವಾಸಿಗಳೇ! ಅಲ್ಲಾಹನಲ್ಲಿಯೂ, ಅವನ ಸಂದೇಶವಾಹಕರಲ್ಲಿಯೂ, ಅವನ ಸಂದೇಶವಾಹಕರಿಗೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲಿಯೂ ಮತ್ತು ಅವರಿಗಿಂತ ಮುಂಚೆ ಅವತೀರ್ಣಗೊಳಿಸಿದ ಗ್ರಂಥದಲ್ಲಿಯೂ ವಿಶ್ವಾಸವಿಡಿರಿ. ಯಾರು ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ, ಅವನ**

ಸಂದೇಶವಾಹಕರಲ್ಲಿ ಮತ್ತು ಅಂತ್ಯದಿನದಲ್ಲಿ ಅವಿಶ್ವಾಸವಿಡುತ್ತಾನೋ ಖಂಡಿತವಾಗಿಯೂ ಅವನು ವಿದೂರವಾದ ಪಥಭ್ರಷ್ಟತೆಯಲ್ಲಿರುವನು." [ಅನ್ನಿಸಾ:136].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಪೂರ್ವಗ್ರಂಥಗಳನ್ನು ದೃಢೀಕರಿಸುತ್ತಾ ಅವನು ತಮಗೆ ಈ ಗ್ರಂಥವನ್ನು ಸತ್ಯದೊಂದಿಗೆ ಅವತೀರ್ಣಗೊಳಿಸಿರುವನು. ಇದಕ್ಕಿಂತ ಮುಂಚೆ ಅವನು ಮಾನವರಿಗೆ ಸನ್ಮಾರ್ಗದರ್ಶಿಯಾಗಿ ತೌರಾತ್ ಮತ್ತು ಇಂಜೀಲನ್ನೂ ಅವತೀರ್ಣಗೊಳಿಸಿದ್ದನು.(3) ಸತ್ಯಾಸತ್ಯತೆಗಳ ವಿವೇಚನೆಗಿರುವ ಆಧಾರಪ್ರಮಾಣವನ್ನೂ ಅವನು ಅವತೀರ್ಣಗೊಳಿಸಿರುವನು. ಖಂಡಿತವಾಗಿಯೂ ಅಲ್ಲಾಹನ ದೃಷ್ಟಾಂತಗಳನ್ನು ನಿಷೇಧಿಸಿದವರಾರೋ ಅವರಿಗೆ ಕಠಿಣವಾದ ಶಿಕ್ಷೆಯಿದೆ. ಅಲ್ಲಾಹು ಪ್ರತಾಪಶಾಲಿಯೂ, ಶಿಕ್ಷಾಕ್ರಮ ಕೈಗೊಳ್ಳುವವನೂ ಆಗಿರುವನು.(4)" [ಆಲಿ ಇಮ್ರಾನ್: 3-4].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ತಮ್ಮ ಪ್ರಭುವಿನ ವತಿಯಿಂದ ತಮಗೆ ಅವತೀರ್ಣಗೊಳಿಸಲಾಗಿರುವುದರಲ್ಲಿ ಸಂದೇಶವಾಹಕರು ವಿಶ್ವಾಸವಿಟ್ಟಿರುವರು. (ತರುವಾಯ) ಸತ್ಯವಿಶ್ವಾಸಿಗಳು ಸಹ ವಿಶ್ವಾಸವಿಟ್ಟಿರುವರು. ಅವರೆಲ್ಲರೂ ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ ಮತ್ತು ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಟ್ಟಿರುವರು. ಅವನ ಸಂದೇಶವಾಹಕರ ಪೈಕಿ ಯಾರ ನಡುವೆಯೂ ನಾವು ವ್ಯತ್ಯಾಸ ಕಲ್ಪಿಸಲಾರೆವು (ಎಂಬುದು ಅವರ ನಿಲುವಾಗಿದೆ). ನಾವು ಆಲಿಸಿರುವೆವು ಮತ್ತು ಅನುಸರಿಸಿರುವೆವು, ನಮ್ಮ ಪ್ರಭೂ! ನಮಗೆ ಪಾಪಮುಕ್ತಿಯನ್ನು ದಯಪಾಲಿಸು, (ನಮ್ಮ) ಮರಳುವಿಕೆಯು ನಿನ್ನ ಬಳಿಗೇ ಆಗಿದೆ ಎಂದು ಅವರು ಹೇಳುವರು." [ಅಲ್-ಬಖರ:285].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "(ಓ ಪ್ರವಾದಿಯವರೇ!) ಹೇಳಿರಿ: 'ಅಲ್ಲಾಹನಲ್ಲಿ, ನಮಗೆ ಅವತೀರ್ಣಗೊಂಡಿರುವುದರಲ್ಲಿ (ಕುರ್‌ಆನ್‌ನಲ್ಲಿ), ಇಬ್ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಸಂತತಿಗಳಿಗೆ ಅವತೀರ್ಣಗೊಂಡಿರುವುದರಲ್ಲಿ, ಮೂಸಾ, ಈಸಾ ಹಾಗೂ ಇತರ ಪ್ರವಾದಿಗಳಿಗೆ ಅವರ ಪ್ರಭುವಿನ ವತಿಯಿಂದ

ನೀಡಲಾಗಿರುವುದರಲ್ಲಿ ನಾವು ವಿಶ್ವಾಸವಿಟ್ಟಿರುವೆವು. ಅವರ ಪೈಕಿ ಯಾರ ನಡುವೆಯೂ ನಾವು ವ್ಯತ್ಯಾಸ ಕಲ್ಪಿಸಲಾರೆವು. ನಾವು ಅಲ್ಲಾಹನಿಗೆ ಶರಣಾದವರಾಗಿರುವೆವು." [ಆಲಿ ಇಮ್ರಾನ್:84]

**ನಾಲ್ಕನೆಯದು:** ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು. ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು, ಅವರೆಲ್ಲರೂ ತಮ್ಮ ತಮ್ಮ ಜನತೆಗೆ ಅಲ್ಲಾಹನ ಸಂದೇಶಗಳನ್ನು, ಧರ್ಮವನ್ನು ಮತ್ತು ಧಾರ್ಮಿಕ ಶಾಸನಗಳನ್ನು ತಲುಪಿಸುವುದಕ್ಕಾಗಿ ಅಲ್ಲಾಹನ ಬಳಿಯಿಂದ ಬಂದ ಸಂದೇಶವಾಹಕರಾಗಿದ್ದಾರೆ ಎಂದು ವಿಶ್ವಾಸವಿಡುವುದು ಕಡ್ಡಾಯವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಹೇಳಿರಿ: ಅಲ್ಲಾಹನಲ್ಲಿ, ಅವನ ವತಿಯಿಂದ ನಮಗೆ ಅವತೀರ್ಣಗೊಂಡಿರುವುದರಲ್ಲಿ, ಇಬ್ರಾಹೀಮ್‌ರಿಗೆ, ಇಸ್ಮಾಈಲ್‌ರಿಗೆ, ಇಸ್‌ಹಾಕ್‌ರಿಗೆ, ಯಅ್‌ಕೂಬ್‌ರಿಗೆ ಮತ್ತು ಯಅ್‌ಕೂಬ್‌ರ ಸಂತತಿಗೆ ಅವತೀರ್ಣಗೊಂಡಿರುವುದರಲ್ಲಿ, ಮೂಸಾ ಮತ್ತು ಈಸಾರಿಗೆ ನೀಡಲಾಗಿರುವುದರಲ್ಲಿ, ಸರ್ವ ಪ್ರವಾದಿಗಳಿಗೆ ಅವರ ಪ್ರಭುವಿನಿಂದ ನೀಡಲಾಗಿರುವುದರಲ್ಲಿ (ಸಂದೇಶದಲ್ಲಿ) ನಾವು ವಿಶ್ವಾಸವಿಟ್ಟಿರುವೆವು. ಅವರ ಪೈಕಿ ಯಾರ ಮಧ್ಯೆಯೂ ನಾವು ತಾರತಮ್ಯ ಮಾಡಲಾರೆವು. ನಾವು ಅವನಿಗೆ (ಅಲ್ಲಾಹನಿಗೆ) ಸಂಪೂರ್ಣ ಶರಣಾದವರಾಗಿರುವೆವು." [ಅಲ್-ಬಖರ:136].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ತಮ್ಮ ಪ್ರಭುವಿನ ವತಿಯಿಂದ ತಮಗೆ ಅವತೀರ್ಣಗೊಳಿಸಲಾಗಿರುವುದರಲ್ಲಿ ಸಂದೇಶವಾಹಕರು ವಿಶ್ವಾಸವಿಟ್ಟಿರುವರು. (ತರುವಾಯ) ಸತ್ಯವಿಶ್ವಾಸಿಗಳು ಸಹ ವಿಶ್ವಾಸವಿಟ್ಟಿರುವರು. ಅವರೆಲ್ಲರೂ ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ ಮತ್ತು ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಟ್ಟಿರುವರು. ಅವನ ಸಂದೇಶವಾಹಕರ ಪೈಕಿ ಯಾರ ನಡುವೆಯೂ ನಾವು ವ್ಯತ್ಯಾಸ ಕಲ್ಪಿಸಲಾರೆವು (ಎಂಬುದು ಅವರ ನಿಲುವಾಗಿದೆ). ನಾವು ಆಲಿಸಿರುವೆವು ಮತ್ತು ಅನುಸರಿಸಿರುವೆವು, ನಮ್ಮ ಪ್ರಭೂ! ನಮಗೆ ಪಾಪಮುಕ್ತಿಯನ್ನು ದಯಪಾಲಿಸು, (ನಮ್ಮ) ಮರಳುವಿಕೆಯು ನಿನ್ನ ಬಳಿಗೇ ಆಗಿದೆ ಎಂದು ಅವರು ಹೇಳುವರು." [ಅಲ್-ಬಖರ:285].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“(ಓ ಪ್ರವಾದಿಯವರೇ!) ಹೇಳಿರಿ: ‘ಅಲ್ಲಾಹನಲ್ಲಿ, ನಮಗೆ ಅವತೀರ್ಣಗೊಂಡಿರುವುದರಲ್ಲಿ (ಕುರ್‌ಆನ್‌ನಲ್ಲಿ), ಇಬ್ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಯಅ್‌ಕೂಬ್ ಸಂತತಿಗಳಿಗೆ ಅವತೀರ್ಣಗೊಂಡಿರುವುದರಲ್ಲಿ, ಮೂಸಾ, ಈಸಾ ಹಾಗೂ ಇತರ ಪ್ರವಾದಿಗಳಿಗೆ ಅವರ ಪ್ರಭುವಿನ ವತಿಯಿಂದ ನೀಡಲಾಗಿರುವುದರಲ್ಲಿ ನಾವು ವಿಶ್ವಾಸವಿಟ್ಟಿರುವೆವು. ಅವರ ಪೈಕಿ ಯಾರ ನಡುವೆಯೂ ನಾವು ವ್ಯತ್ಯಾಸ ಕಲ್ಪಿಸಲಾರೆವು. ನಾವು ಅಲ್ಲಾಹನಿಗೆ ಶರಣಾದವರಾಗಿರುವೆವು.”** [ಆಲಿ ಇಮ್ರಾನ್:84].

ಅವರಲ್ಲಿ ಕೊನೆಯವರಾದ ಅಂದರೆ ಪ್ರವಾದಿಗಳಲ್ಲಿ ಮತ್ತು ಸಂದೇಶವಾಹಕರಲ್ಲಿ ಅಂತಿಮರಾದ ಪ್ರವಾದಿ ಮುಹಮ್ಮದ್‌ರಲ್ಲಿ ವಿಶ್ವಾಸವಿಡುವುದು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಅಲ್ಲಾಹು ಪ್ರವಾದಿಗಳಿಂದ ಕರಾರು ಪಡೆದ ಸಂದರ್ಭ(ವನ್ನು ಸ್ಮರಿಸಿರಿ). ನಾನು ನಿಮಗೆ ಗ್ರಂಥವನ್ನು ಮತ್ತು ಜ್ಞಾನವನ್ನು ನೀಡಿ, ತರುವಾಯ ನಿಮ್ಮ ಬಳಿಯಿರುವುದನ್ನು ದೃಢೀಕರಿಸುತ್ತಾ ಓರ್ವ ಸಂದೇಶವಾಹಕರು ನಿಮ್ಮ ಬಳಿ ಬಂದರೆ ನೀವು ಖಂಡಿತವಾಗಿಯೂ ಅವರಲ್ಲಿ ವಿಶ್ವಾಸವಿಡಬೇಕು ಮತ್ತು ಅವರಿಗೆ ಸಹಾಯ ಮಾಡಬೇಕು. (ತರುವಾಯ) ಅವನು (ಅವರೊಂದಿಗೆ) ಕೇಳಿದನು: ನೀವಿದನ್ನು ಒಪ್ಪಿಕೊಂಡು, ಆ ವಿಷಯದಲ್ಲಿ ನನ್ನೊಂದಿಗಿರುವ ಹೊಣೆಯನ್ನು ವಹಿಸಿಕೊಂಡಿರುವಿರಾ? ಅವರು ಹೇಳಿದರು: ಹೌದು. ನಾವು ಒಪ್ಪಿಕೊಂಡಿರುವೆವು. ಅವನು ಹೇಳಿದನು: ಹಾಗಾದರೆ ನೀವು ಅದಕ್ಕೆ ಸಾಕ್ಷಿಗಳಾಗಿರಿ. ನಾನೂ ನಿಮ್ಮೊಂದಿಗೆ ಸಾಕ್ಷಿಯಾಗಿರುವೆನು.”** [ಆಲಿ ಇಮ್ರಾನ್:81]

ಇಸ್ಲಾಮ್ ಧರ್ಮವು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರ ಮೇಲೆ ಸಾರ್ವತ್ರಿಕವಾಗಿ ವಿಶ್ವಾಸವಿರಿಸುವುದನ್ನು ಕಡ್ಡಾಯಗೊಳಿಸುತ್ತದೆ ಮತ್ತು ಅವರಲ್ಲಿ ಕೊನೆಯವರಾದ ಪ್ರವಾದಿ ಮುಹಮ್ಮದ್ صلى الله عليه وسلم ರವರಲ್ಲಿ ವಿಶ್ವಾಸವಿರಿಸುವುದನ್ನೂ ಕಡ್ಡಾಯಗೊಳಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೇಳಿರಿ: 'ಓ ಗ್ರಂಥದವರೇ! ತೌರಾತ್, ಇಂಜೀಲ್ ಮತ್ತು ನಿಮಗೆ ನಿಮ್ಮ ಪ್ರಭುವಿನ ವತಿಯಿಂದ ಅವತೀರ್ಣಗೊಳಿಸಲಾದ ಸಂದೇಶಗಳನ್ನು ನೀವು (ಸರಿಯಾದ ವಿಧದಲ್ಲಿ) ಸ್ಥಾಪಿಸುವ ತನಕ ನೀವು ಯಾವುದೇ ತಳಹದಿಯಲ್ಲೂ ಇರಲಾರಿರಿ."** [ಅಲ್-ಮಾಇದ:68].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ಓ ಗ್ರಂಥದವರೇ! ನಮ್ಮ ಮತ್ತು ನಿಮ್ಮ ನಡುವೆ ಸಮಾನವಾಗಿರುವ ಒಂದು ವಚನದೆಡೆಗೆ ಬನ್ನಿರಿ. ಅಂದರೆ ನಾವು ಅಲ್ಲಾಹನ ಹೊರತು (ಇನ್ನಾರನ್ನೂ) ಆರಾಧಿಸದಿರೋಣ, ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರೋಣ ಮತ್ತು ನಮ್ಮಲ್ಲಿ ಕೆಲವರು ಕೆಲವರನ್ನು ಅಲ್ಲಾಹನ ಹೊರತಾಗಿರುವ ಪ್ರಭುಗಳನ್ನಾಗಿ ಮಾಡದಿರೋಣ. ತರುವಾಯ ಅವರೇನಾದರೂ ವಿಮುಖರಾಗುವುದಾದರೆ ನಾವು (ಅಲ್ಲಾಹನಿಗೆ) ಶರಣಾಗತರಾಗಿರುವೆವು ಎಂಬುದಕ್ಕೆ ನೀವು ಸಾಕ್ಷ್ಯ ವಹಿಸಿರಿ ಎಂದು ಅವರೊಂದಿಗೆ ಹೇಳಿರಿ."** [ಆಲಿ ಇಮ್ರಾನ್:64].

ಒಬ್ಬ ಪ್ರವಾದಿಯನ್ನು ನಿರಾಕರಿಸಿದವನು ಖಂಡಿತವಾಗಿಯೂ ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರನ್ನು ನಿರಾಕರಿಸುವವನಾಗಿದ್ದಾನೆ. ಈ ಕಾರಣದಿಂದಲೇ ಅಲ್ಲಾಹನು ನೂಹರ ( عليه السلام) ಸಮುದಾಯದ ಮೇಲೆ ತನ್ನ ತೀರ್ಪನ್ನು ತಿಳಿಸುತ್ತಾ ಹೇಳುತ್ತಾನೆ: **"ನೂಹ್‌ರ ಜನತೆಯು ಸಂದೇಶವಾಹಕರನ್ನು ನಿಷೇಧಿಸಿದರು."** [ಅಶ್ಶುಅರಾ: 105].

ನೂಹ್ عليه السلام ರ ಮುಂಚೆ ಯಾವ ಪ್ರವಾದಿಯೂ ಗತಿಸಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ಆದರೂ ಅವರ ಸಮುದಾಯದವರು ಅವರನ್ನು ನಿಷೇಧಿಸಿದಾಗ ಅವರ ಈ ನಿಷೇಧವು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರನ್ನು ನಿಷೇಧಿಸಿದಂತಾಗಿದೆ. ಏಕೆಂದರೆ ಅವರೆಲ್ಲರ ಆಹ್ವಾನವು ಒಂದೇ ಆಗಿತ್ತು ಮತ್ತು ಅವರೆಲ್ಲರ ಗುರಿಯೂ ಒಂದೇ ಆಗಿತ್ತು.

**ಐದನೆಯದು:** ಅಂತ್ಯ ದಿನದ ಮೇಲೆ ವಿಶ್ವಾಸವಿಡುವುದು. ಅದು ಪುನರುತ್ಥಾನದ ದಿನವಾಗಿದೆ. ಈ ಲೌಕಿಕ ಜೀವನದ ಅಂತ್ಯದಲ್ಲಿ ಅಲ್ಲಾಹನು ಇಸ್ರಾಫೀಲ್ ಎಂಬ ದೇವಚರರಿಗೆ

ಆಜ್ಞೆ ನೀಡುವನು. ಆಗ ಅವರು (ಜನರೆಲ್ಲರೂ) ಮೂರ್ಛೆಹೋಗುವಂತೆ ಮಾಡುವ ಕಹಳೆ ಊದುವರು. ಆಗ ಅಲ್ಲಾಹು ಇಚ್ಛಿಸಿದವರೆಲ್ಲರೂ ಮೂರ್ಛೆ ಹೋಗಿ ಮರಣ ಹೊಂದುವರು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಕಹಳೆಯಲ್ಲಿ ಊದಲಾಗುವಾಗ ಆಕಾಶಗಳಲ್ಲಿರುವವರು ಮತ್ತು ಭೂಮಿಯಲ್ಲಿರುವವರು ನಿಶ್ಚಲರಾಗುವರು. ಅಲ್ಲಾಹು ಇಚ್ಛಿಸಿದವರ ಹೊರತು. ತರುವಾಯ ಅದರಲ್ಲಿ (ಕಹಳೆಯಲ್ಲಿ) ಇನ್ನೊಮ್ಮೆ ಊದಲಾಗುವಾಗ ಅಗೋ! ಅವರು ಎದ್ದು ನಿಂತು ನೋಡುತ್ತಿರುವರು."** [ಅಝ್ಝುಮರ್:68]

ಅಲ್ಲಾಹನು ಬಯಸಿದವರನ್ನು ಹೊರತುಪಡಿಸಿ ಭೂಮಿ ಮತ್ತು ಆಕಾಶದಲ್ಲಿರುವರೆಲ್ಲರೂ ಮರಣಹೊಂದಿದಾಗ, ಅಲ್ಲಾಹನು ಭೂಮಿ ಮತ್ತು ಆಕಾಶಗಳನ್ನು ಸುರುಳಿಯಾಗಿ ಸುತ್ತುವನು. ಅಲ್ಲಾಹನ ಈ ವಚನದಲ್ಲಿರುವಂತೆ: **"ಗ್ರಂಥಗಳ ಹಾಳೆಗಳನ್ನು ಸುರುಳಿಯಾಗಿ ಸುತ್ತುವಂತೆ ನಾವು ಆಕಾಶವನ್ನು ಸುತ್ತುವ ದಿನ. ಸೃಷ್ಟಿಯನ್ನು ಮೊದಲ ಬಾರಿಗೆ ಆರಂಭಿಸಿದಂತೆ ನಾವದನ್ನು ಪುನರಾವರ್ತಿಸುವೆವು. ಅದು ನಮ್ಮ ಮೇಲಿನ ಹೊಣೆಯಾಗಿರುವ ಒಂದು ವಾಗ್ದಾನವಾಗಿದೆ. ಖಂಡಿತವಾಗಿಯೂ ನಾವು (ಅದನ್ನು) ಜಾರಿಗೆ ತಂದೇ ತರುವೆವು."** [ಅಲ್-ಅಂಬಿಯಾ:104]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹನನ್ನು ಗಣನೆ ಮಾಡಬೇಕಾದ ರೀತಿಯಲ್ಲಿ ಅವರು ಗಣನೆ ಮಾಡಲಿಲ್ಲ. ಪುನರುತ್ಥಾನ ದಿನದಂದು ಭೂಮಿಯು ಸಂಪೂರ್ಣವಾಗಿ ಅವನ ಒಂದು ಹಿಡಿತದಲ್ಲಿರುವುದು ಮತ್ತು ಆಕಾಶಗಳು ಅವನ ಬಲಗೈಯಲ್ಲಿ ಸುರುಳಿಯಾಗಿ ಹಿಡಿಯಲ್ಪಟ್ಟಿರುವವು. ಅವನು ಪರಮಪಾವನನು. ಅವರು ಸಹಭಾಗಿತ್ವ ಮಾಡುವುದರಿಂದೆಲ್ಲ ಅವನು ಅತೀತನಾಗಿರುವನು."** [ಅಝ್ಝುಮರ್:67]

ಪ್ರವಾದಿ صلى الله عليه وسلم ರವರು ಹೇಳಿದರು: **"ಪುನರುತ್ಥಾನ ದಿನದಂದು ಅಲ್ಲಾಹನು ಆಕಾಶಗಳನ್ನು ಸುರುಳಿಯಂತೆ ಸುತ್ತುವನು. ನಂತರ ಅವುಗಳನ್ನು ತನ್ನ ಬಲಗೈಯಲ್ಲಿ ಹಿಡಿದು ಹೇಳುವನು: ನಾನೇ ಸಾಮ್ರಾಟ, ಸರ್ವಾಧಿಕಾರಿಗಳು ಎಲ್ಲಿದ್ದಾರೆ? ಅಹಂಕಾರಿಗಳು ಎಲ್ಲಿದ್ದಾರೆ? ನಂತರ ತನ್ನ ಎಡಗೈಯಲ್ಲಿ ಭೂಮಿಗಳನ್ನು ಸುರುಳಿಯಾಗಿ ಸುತ್ತುವನು. ನಂತರ ಕೇಳುವನು: ಸರ್ವಾಧಿಕಾರಿಗಳು ಎಲ್ಲಿದ್ದಾರೆ? ಅಹಂಕಾರಿಗಳು ಎಲ್ಲಿದ್ದಾರೆ?"** [ಮುಸ್ಲಿಮ್.]

ನಂತರ ಅಲ್ಲಾಹನು ಮಲಕ್‌ಗೆ (ಇಸ್ರಾಫೀಲ್) ಆಜ್ಞೆ ನೀಡುವನು. ಆಗ ಅವರು ಎರಡನೇ ಬಾರಿಗೆ ಕಹಳೆಯನ್ನು ಊದುವರು. ಆಗ ಜನರು ಎದ್ದು ನಿಂತು ನೋಡುತ್ತಿರುವರು. **"ತರುವಾಯ ಅದರಲ್ಲಿ (ಕಹಳೆಯಲ್ಲಿ) ಇನ್ನೊಮ್ಮೆ ಊದಲಾಗುವಾಗ ಅಗೋ! ಅವರು ಎದ್ದು ನಿಂತು ನೋಡುತ್ತಿರುವರು."** [ಅಝ್ಝುಮರ್:68]

ಅಲ್ಲಾಹನು ಮಾನವರನ್ನು ಪುನರ್ಜೀವಗೊಳಿಸಿದ ಬಳಿಕ ಅವರನ್ನು ವಿಚಾರಣೆಗಾಗಿ ಒಟ್ಟುಗೂಡಿಸುವನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಭೂಮಿಯು ಅವರಿಂದ ಒಡೆದು ಅವರು ಅತಿ ವೇಗವಾಗಿ (ಹೊರ)ಬರುವ ದಿನ. ಅದು ನಮ್ಮ ಮಟ್ಟಿಗೆ ಸುಲಭವಾಗಿರುವ ಒಂದು ಒಗ್ಗೂಡಿಸುವಿಕೆಯಾಗಿದೆ."** [ಕ್ವಾಫ್:44].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅದು ಅವರು ಬಯಲಿಗೆ ಬರುವ ದಿನವಾಗಿದೆ. ಅವರಿಗೆ ಸಂಬಂಧಿಸಿದ ಯಾವುದೇ ವಿಷಯವೂ ಅಲ್ಲಾಹನಿಂದ ಮರೆಯಾಗಿರಲಾರದು. ಇಂದು ರಾಜಾಧಿಕಾರವು ಯಾರಿಗೆ? ಏಕನೂ ಸರ್ವಾಧಿಕಾರಿಯೂ ಆಗಿರುವ ಅಲ್ಲಾಹನಿಗೆ."** [ಗಾಫಿರ್:16].

ಈ ದಿನ ಅಲ್ಲಾಹನು ಎಲ್ಲಾ ಮಾನವರನ್ನು ವಿಚಾರಣೆ ಮಾಡುವನು. ಅಕ್ರಮಕ್ಕೊಳಗಾದ ಎಲ್ಲರಿಗೂ ಅಕ್ರಮಿಗಳೊಡನೆ ಪ್ರತೀಕಾರ ತೀರಿಸುವಂತೆ ಮಾಡುವನು. ಪ್ರತಿಯೊಬ್ಬ ವ್ಯಕ್ತಿಗೂ ಅವನು ಮಾಡಿದ ಕರ್ಮಗಳಿಗೆ ಪ್ರತಿಫಲ ನೀಡುವನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಈ ದಿನದಂದು ಪ್ರತಿಯೊಬ್ಬ ವ್ಯಕ್ತಿಗೂ ಅವನು ಸಂಪಾದಿಸಿರುವುದರ ಪ್ರತಿಫಲವನ್ನು ನೀಡಲಾಗುವುದು. ಈ ದಿನದಂದು ಯಾವುದೇ ಅನ್ಯಾಯವಿಲ್ಲ. ಖಂಡಿತವಾಗಿಯೂ ಅಲ್ಲಾಹು ಅತಿವೇಗವಾಗಿ ವಿಚಾರಣೆ ಮಾಡುವವನಾಗಿರುವನು."** [ಗಾಫಿರ್:17].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಅಲ್ಲಾಹು ಒಂದು ಅಣುವಿನ ತೂಕದಷ್ಟೂ ಅನ್ಯಾಯವೆಸಗಲಾರನು. ಒಳಿತೇನಾದರೂ ಇರುವುದಾದರೆ ಅವನದನ್ನು ಇಮ್ಮಡಿಗೊಳಿಸಿ ಕೊಡುವನು ಮತ್ತು ತನ್ನ ವತಿಯ ಮಹಾ ಪ್ರತಿಫಲವನ್ನೂ ದಯಪಾಲಿಸುವನು."** [ಅನ್ನಿಸಾ:40].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಗ ಯಾರು ಒಂದು ಅಣುವಿನ ತೂಕದಷ್ಟು ಒಳಿತು ಮಾಡಿರುವನೋ ಅವನು ಅದನ್ನು ಕಾಣುವನು.(7) ಯಾರು ಒಂದು ಅಣುವಿನ ತೂಕದಷ್ಟು ಕೆಡುಕು ಮಾಡಿರುವನೋ ಅವನು ಅದನ್ನು ಕಾಣುವನು.(8)"** [ಅಝ್ಝಲ್‌ಝಲ:7-8]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಪುನರುತ್ಥಾನ ದಿನದಂದು ನಾವು ನ್ಯಾಯ ಬದ್ಧವಾದ ತಕ್ಕಡಿಗಳನ್ನು ಸ್ಥಾಪಿಸುವೆವು. ಆಗ ಯಾರೊಂದಿಗೂ ಕಿಂಚಿತ್ತೂ ಅಕ್ರಮವೆಸಗಲಾಗದು. ಅದು (ಕರ್ಮವು) ಒಂದು ಸಾಸಿವೆ ಕಾಳಿನಷ್ಟು ತೂಕವಿರುವುದಾದರೂ ನಾವು ಅದನ್ನು ತರುವೆವು. ವಿಚಾರಣೆ ಮಾಡುವವರಾಗಿ ನಾವು ಸಾಕು."** [ಅಲ್-ಅಂಬಿಯಾ:47]

ಪುನರ್ಜೀವಗೊಳಿಸಿ, ವಿಚಾರಣೆ ನಡೆಸಿದ ನಂತರ ಪ್ರತಿಫಲ ನೀಡಲಾಗುವುದು. ಸತ್ಕರ್ಮವೆಸಗಿದವರಿಗೆ ಎಂದೂ ಕೊನೆಗೊಳ್ಳದ ಅನುಗ್ರಹಗಳಿರುವವು ಮತ್ತು ದುಷ್ಕರ್ಮ ವೆಸಗಿದವರನ್ನು ಹಾಗೂ ಸತ್ಯವನ್ನು ನಿಷೇಧಿಸಿದವರನ್ನು ಶಿಕ್ಷಿಸಲಾಗುವುದು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಂದು ಆಧಿಪತ್ಯವು ಅಲ್ಲಾಹನಿಗಾಗಿ ರುವುದು. ಅವನು ಅವರ ಮಧ್ಯೆ ತೀರ್ಪು ನೀಡುವನು. ಆದ್ದರಿಂದ ವಿಶ್ವಾಸವಿಟ್ಟವರು ಮತ್ತು ಸತ್ಕರ್ಮಗೈದವರಾರೋ ಅವರು ಸುಖಾನುಭೂತಿಯ ಸ್ವರ್ಗೋದ್ಯಾನಗಳಲ್ಲಿರುವರು.(56) ಅವಿಶ್ವಾಸವಿಟ್ಟವರು ಮತ್ತು ನಮ್ಮ ದೃಷ್ಟಾಂತಗಳನ್ನು ನಿಷೇಧಿಸಿದವರಾರೋ ಅವರಿಗೆ ಅವಮಾನಕರ ಶಿಕ್ಷೆಯಿದೆ.(57)"** [ಅಲ್-ಹಜ್ಜ್: 56-57]

ಇಹಲೋಕದಲ್ಲೇ ಎಲ್ಲವೂ ಕೊನೆಗೊಳ್ಳುವುದಾಗಿದ್ದರೆ ನಮ್ಮ ಜೀವನ ಮತ್ತು ಅಸ್ತಿತ್ವವೆಲ್ಲವೂ ಶುದ್ಧ ಅಸಂಬದ್ಧವಾಗಿರುತ್ತಿತ್ತು ಎಂದು ನಮಗೆ ತಿಳಿದಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ನಾವು ನಿಮ್ಮನ್ನು ಉದ್ದೇಶರಹಿತವಾಗಿ ಸೃಷ್ಟಿಸಿರುವೆವು ಮತ್ತು ನೀವು ನಮ್ಮ ಬಳಿಗೆ ಮರಳಿ ಬರಲಾರಿರಿ ಎಂದೂ ನೀವು ಭಾವಿಸಿರುವಿರಾ?”** [ಅಲ್-ಮುಅ್‌ಮಿನೂನ್:115]

**ಆರನೆಯದು:** ವಿಧಿ-ನಿರ್ಣಯದ ಮೇಲೆ ವಿಶ್ವಾಸವಿಡುವುದು. ಅಂದರೆ ಅಲ್ಲಾಹನು ಈಗಾಗಲೇ ಸಂಭವಿಸಿದ ಎಲ್ಲವನ್ನೂ ತಿಳಿದಿದ್ದಾನೆ, ಮುಂದೆ ಸಂಭವಿಸುವುದನ್ನು ಮತ್ತು ಈ ಜಗತ್ತಿನಲ್ಲಿ ಏನೆಲ್ಲಾ ಸಂಭವಿಸಲಿದೆಯೋ ಅವೆಲ್ಲವನ್ನೂ ತಿಳಿದಿದ್ದಾನೆ ಮತ್ತು ಅಲ್ಲಾಹನು ಭೂಮ್ಯಾಕಾಶಗಳನ್ನು ಸೃಷ್ಟಿಸುವುದಕ್ಕೆ ಮುಂಚೆಯೇ ಆ ಎಲ್ಲಾ ವಿಷಯಗಳನ್ನು ದಾಖಲಿಸಿದ್ದಾನೆಂದು ವಿಶ್ವಾಸವಿಡುವುದು ಕಡ್ಡಾಯವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಅಗೋಚರ ವಿಷಯಗಳ ಖಜಾನೆ ಗಳಿರುವುದು ಅವನ ಬಳಿಯಲ್ಲಾಗಿವೆ. ಅವನ ಹೊರತು ಅವುಗಳನ್ನು ಯಾರೂ ಅರಿಯಲಾರರು. ನೆಲದಲ್ಲಿ ಮತ್ತು ಸಮುದ್ರದಲ್ಲಿರುವುದನ್ನು ಅವನು ಅರಿಯುವನು. ಅವನು ಅರಿಯುವ ವಿನಾ ಒಂದು ಎಲೆಯೂ ಉದುರದು. ಭೂಮಿಯ ಅಂಧಕಾರಗಳಲ್ಲಿರುವ ಒಂದು ಧಾನ್ಯವಾಗಿರಲಿ, ಹಸಿಯಾಗಿರುವ ಅಥವಾ ಒಣಗಿರುವ ಯಾವುದೇ ವಸ್ತುವಾಗಿರಲಿ ಸ್ಪಷ್ಟವಾದ ಒಂದು ಗ್ರಂಥದಲ್ಲಿ ದಾಖಲಿಸಲ್ಪಡದೆ ಇರಲಾರದು.”** [ಅಲ್-ಅನ್‌ಆಮ್:59].

ಖಂಡಿತವಾಗಿಯೂ ಅಲ್ಲಾಹನು ತನ್ನ ಜ್ಞಾನದ ಮೂಲಕ ಎಲ್ಲಾ ವಸ್ತುಗಳನ್ನೂ ಪೂರ್ಣವಾಗಿ ಆವರಿಸಿಕೊಂಡಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಏಳು ಆಕಾಶಗಳನ್ನು ಮತ್ತು ಭೂಮಿಯಿಂದ ಅದಕ್ಕೆ ಸಮಾನವಾಗಿರುವುದನ್ನು ಸೃಷ್ಟಿಸಿದವನು ಅಲ್ಲಾಹನಾಗಿರುವನು. ಅವುಗಳ ಮಧ್ಯೆ (ಅವನ) ಆಜ್ಞೆಯು ಇಳಿಯುವುದು. ಅಲ್ಲಾಹು ಎಲ್ಲ ವಿಷಯದಲ್ಲೂ ಸಾಮರ್ಥ್ಯವುಳ್ಳವನಾಗಿ ರುವನು ಮತ್ತು ಅವನು ಎಲ್ಲ ವಸ್ತುವನ್ನೂ ಅರಿವಿನೊಂದಿಗೆ ಪೂರ್ಣವಾಗಿ ಆವರಿಸಿರುವನು.”** [ಅತ್ತಲಾಖ್:12]

ಈ ಜಗತ್ತಿನಲ್ಲಿ ಯಾವುದೇ ವಿಷಯ ಸಂಭವಿಸುವುದಾದರೂ, ಅದನ್ನು ಬಯಸಿದ್ದು, ಇಚ್ಛಿಸಿದ್ದು, ಸೃಷ್ಟಿಸಿದ್ದು ಮತ್ತು ಅದರ ಕಾರಣಗಳನ್ನು ಸುಗಮಗೊಳಿಸಿದ್ದು ಅಲ್ಲಾಹನೇ ಆಗಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಕಾಶಗಳ ಮತ್ತು ಭೂಮಿಯ ಆಧಿಪತ್ಯವು ಯಾರಿಗಾಗಿದೆಯೋ ಅವನಾಗಿರುವನು (ಕುರ್‌ಆನನ್ನು ಅವತೀರ್ಣಗೊಳಿಸಿದವನು). ಅವನು ಸಂತತಿಯನ್ನು ಮಾಡಿಕೊಂಡವನಲ್ಲ. ಆಧಿಪತ್ಯದಲ್ಲಿ ಅವನೊಂದಿಗೆ ಯಾವುದೇ ಸಹಭಾಗಿಗಳಿಲ್ಲ. ಅವನು ಪ್ರತಿಯೊಂದು ವಸ್ತುವನ್ನೂ ಸೃಷ್ಟಿಸಿ ಅದನ್ನು ಯಥಾವತ್ತಾಗಿ ವ್ಯವಸ್ಥೆಗೊಳಿಸಿರುವನು."** [ಅಲ್-ಫುರ್ಖಾನ್:2].

ಅದರಲ್ಲಿ ಅವನಿಗೆ ಪರಿಪೂರ್ಣ ಜ್ಞಾನವಿದೆ. ಆದರೆ ಮನುಷ್ಯರಿಗೆ ಅದನ್ನು ಅರಿತುಕೊಳ್ಳಲು ಸಾಧ್ಯವಾಗದು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಪರಿಪೂರ್ಣವಾದ ಜ್ಞಾನ. ಆದರೂ ಮುನ್ನೆಚ್ಚರಿಕೆಗಳು ಪ್ರಯೋಜನಪಡುತ್ತಿಲ್ಲ."** [ಅಲ್-ಕಮರ್:5]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಸೃಷ್ಟಿಯನ್ನು ಆರಂಭಿಸುವವನು ಅವನಾಗಿರುವನು. ತರುವಾಯ ಅವನು ಅದನ್ನು ಪುನರಾವರ್ತಿಸುವನು. ಅದು ಅವನ ಮಟ್ಟಿಗೆ ಅತ್ಯಂತ ಸುಲಭವಾಗಿದೆ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಉನ್ನತವಾದ ಅವಸ್ಥೆಯಿರುವುದು ಅವನಿಗಾಗಿದೆ. ಅವನು ಪ್ರತಾಪಶಾಲಿಯೂ, ಯುಕ್ತಿಪೂರ್ಣನೂ ಆಗಿರುವನು."** [ಅರ್ರೂಮ್:27].

ಸರ್ವಶಕ್ತನಾದ ಅಲ್ಲಾಹನು ತನ್ನನ್ನು ತಾನೇ ಯುಕ್ತಿ ಎಂಬ ಗುಣದಿಂದ ವರ್ಣಿಸಿದ್ದಾನೆ ಮತ್ತು ತನ್ನನ್ನು ಯುಕ್ತಿಪೂರ್ಣನೆಂದು ಕರೆದಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ತನ್ನ ಹೊರತು ಅನ್ಯ ಆರಾಧ್ಯರಿಲ್ಲವೆಂದು ಅಲ್ಲಾಹು ಸಾಕ್ಷ್ಯ ವಹಿಸಿರುವನು. ಮಲಕ್‌ಗಳೂ ಜ್ಞಾನವುಳ್ಳವರೂ (ಅದಕ್ಕೆ ಸಾಕ್ಷಿಗಳಾಗಿರುವರು).**

ಅವನು ನ್ಯಾಯಪಾಲಿಸುವವನಾಗಿರುವನು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಪ್ರತಾಪಶಾಲಿಯೂ, ಯುಕ್ತಿಪೂರ್ಣನೂ ಆಗಿರುವನು." [ಆಲಿ ಇಮ್ರಾನ್:18].

ಈಸಾ عليه السلام ರು ಪುನರುತ್ಥಾನದ ದಿನದಂದು ತನ್ನೊಡನೆ ಮಾತನಾಡಲಿದ್ದಾರೆ ಎಂದು ಸರ್ವಶಕ್ತನಾದ ಅಲ್ಲಾಹನು ಅವರ ಮಾತನ್ನು ಉಲ್ಲೇಖಿಸಿ ಹೇಳುತ್ತಾನೆ: "ನೀನು ಅವರನ್ನು ಶಿಕ್ಷಿಸುವುದಾದರೆ ಖಂಡಿತವಾಗಿಯೂ ಅವರು ನಿನ್ನ ದಾಸರಾಗಿರುವರು. ನೀನು ಅವರಿಗೆ ಕ್ಷಮೆ ನೀಡುವುದಾದರೆ ಖಂಡಿತವಾಗಿಯೂ ನೀನು ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿರುವೆ." [ಅಲ್-ಮಾಇದ:118].

ತೂರ್ ಪರ್ವತದ ಬಳಿಯಿಂದ ಮೂಸಾ عليه السلام ಕರೆದಾಗ ಸರ್ವಶಕ್ತನಾದ ಅಲ್ಲಾಹನು ಅವರೊಡನೆ ಹೇಳುತ್ತಾನೆ: "ಓ ಮೂಸಾ! ಖಂಡಿತವಾಗಿಯೂ ನಾನು ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿರುವ ಅಲ್ಲಾಹನಾಗಿರುವೆನು." [ಅನ್ನಮ್ಲ್:9]

ಅವನು ಪವಿತ್ರ ಕುರ್‌ಆನನ್ನು ಯುಕ್ತಿ ಎಂಬ ಗುಣದಿಂದ ವರ್ಣಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲಿಫ್, ಲಾಮ್, ರಾ. ಇದು ಗ್ರಂಥವಾಗಿದೆ. ಇದರಲ್ಲಿರುವ ಸೂಕ್ತಿಗಳನ್ನು ವಿಚಾರಭದ್ರಗೊಳಿಸಲಾಗಿದೆ. ತರುವಾಯ ಅವುಗಳನ್ನು ವಿಶದೀಕರಿಸಲಾಗಿದೆ. ಇದು ಯುಕ್ತಿಪೂರ್ಣನೂ ಸೂಕ್ಷ್ಮಜ್ಞಾನಿಯೂ ಆಗಿರುವ ಅಲ್ಲಾಹನ ಬಳಿಯಿಂದಿರುವುದಾಗಿದೆ." [ಹೂದ್:1].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಇದು ತಮ್ಮ ಪ್ರಭು ತಮಗೆ ದಿವ್ಯಸಂದೇಶವಾಗಿ ನೀಡಿರುವ ಜ್ಞಾನದಲ್ಲಿ ಸೇರಿದ್ದಾಗಿದೆ. ತಾವು ಅಲ್ಲಾಹನೊಂದಿಗೆ ಅನ್ಯ ಆರಾಧ್ಯನನ್ನು ಮಾಡಿಕೊಳ್ಳದಿರಿ. ಹಾಗೇನಾದರೂ ಮಾಡಿದರೆ ತಾವು ಆಕ್ಷೇಪಾರ್ಹರೂ ಬಹಿಷ್ಕೃತರೂ ಆಗಿ ನರಕಾಗ್ನಿಯಲ್ಲಿ ಎಸೆಯಲಾಗುವಿರಿ." [ಅಲ್-ಇಸ್ರಾ:39]

## 22. ಸಂದೇಶವಾಹಕರು عليهم السلام ಅಲ್ಲಾಹನ ವತಿಯ ಸಂದೇಶಗಳನ್ನು ತಲುಪಿಸುವ ವಿಷಯದಲ್ಲಿ ಪ್ರಮಾದಮುಕ್ತರಾಗಿದ್ದಾರೆ. ಬುದ್ಧಿಗೆ ವಿರುದ್ಧವಾದ ಅಥವಾ ಆರೋಗ್ಯಪೂರ್ಣವಾದ ಗುಣಗಳನ್ನು ತಿರಸ್ಕರಿಸುವ ವಿಷಯಗಳಿಂದ ದೋಷಮುಕ್ತರಾಗಿದ್ದಾರೆ. ಅಲ್ಲಾಹನ ದಾಸರಿಗೆ ಅವನ ಆಜ್ಞೆಗಳನ್ನು ತಲುಪಿಸುವ ಹೊಣೆಯನ್ನು ಸಂದೇಶವಾಹಕರಿಗೆ ವಹಿಸಿಕೊಡಲಾಗಿದೆ. ಅಲ್ಲಾಹನ ರುಬೂಬಿಯ್ಯತ್ (ಪ್ರಭುತ್ವ) ಅಥವಾ ಉಲೂಹಿಯ್ಯತ್ (ಆರಾಧನೆ)ನ ವಿಶೇಷತೆಗಳಲ್ಲಿ ಸಂದೇಶವಾಹಕರಿಗೆ ಯಾವ ಪಾಲಿಲ್ಲ. ಬದಲಾಗಿ ಅವರು ಇತರೆಲ್ಲಾ ಮನುಷ್ಯರಂತೆ ಮನುಷ್ಯರಾಗಿದ್ದಾರೆ. ಅಲ್ಲಾಹನು ತನ್ನ ಸಂದೇಶಗಳನ್ನು ಅವರಿಗೆ ಅವತೀರ್ಣಗೊಳಿಸುತ್ತಾನೆ.

ಸಂದೇಶವಾಹಕರು ಅಲ್ಲಾಹನ ವತಿಯ ಸಂದೇಶಗಳನ್ನು ತಲುಪಿಸುವ ವಿಷಯದಲ್ಲಿ ಪ್ರಮಾದಮುಕ್ತರಾಗಿದ್ದಾರೆ. ಏಕೆಂದರೆ ಅಲ್ಲಾಹನು ತನ್ನ ಸಂದೇಶಗಳನ್ನು ತಲುಪಿಸಲು ತನ್ನ ಸೃಷ್ಟಿಗಳಲ್ಲಿ ಅತ್ಯುತ್ತಮ ಜನರನ್ನು ಆರಿಸಿಕೊಳ್ಳುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹು ಮಲಕ್‌ಗಳಿಂದಲೂ, ಮನುಷ್ಯರಿಂದಲೂ ಸಂದೇಶವಾಹಕರನ್ನು ಆರಿಸುವನು. ಖಂಡಿತವಾಗಿಯೂ ಅಲ್ಲಾಹು ಎಲ್ಲವನ್ನು ಆಲಿಸುವವನೂ, ಕಾಣುವವನೂ ಆಗಿರುವನು." [ಅಲ್-ಹಜ್ಜ್:75]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ಅಲ್ಲಾಹು ಆದಮ್‌ರನ್ನು, ನೂಹ್‌ರನ್ನು, ಇಬ್ರಾಹೀಮ್‌ರ ಕುಟುಂಬವನ್ನು ಮತ್ತು ಇಮ್ರಾನ್‌ರ ಕುಟುಂಬ ವನ್ನು ಲೋಕದವರ ಪೈಕಿ ಉತ್ಕೃಷ್ಟರನ್ನಾಗಿ ಆರಿಸಿರುವನು." [ಆಲಿ ಇಮ್ರಾನ್:33].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವನು (ಅಲ್ಲಾಹು) ಹೇಳಿದನು: 'ಓ ಮೂಸಾ! ನಾನು ನನ್ನ ಸಂದೇಶಗಳ ಮೂಲಕ ಮತ್ತು ನನ್ನ (ನೇರ) ಮಾತುಕತೆಯ ಮೂಲಕ ಖಂಡಿತವಾಗಿಯೂ ತಮ್ಮನ್ನು ಮನುಷ್ಯರ ಪೈಕಿ ಶ್ರೇಷ್ಠರನ್ನಾಗಿ ಆರಿಸಿರುವೆನು. ಆದ್ದರಿಂದ ನಾನು ತಮಗೆ ನೀಡಿರುವುದನ್ನು ಹಿಡಿದುಕೊಳ್ಳಿರಿ ಮತ್ತು ಕೃತಜ್ಞತೆ ಸಲ್ಲಿಸುವವರ ಪೈಕಿ ಸೇರಿದವರಾಗಿರಿ."** [ಅಲ್-ಅಲ್‌ರಾಫ್:144]

ತಮ್ಮ ಮೇಲೆ ಅವತೀರ್ಣವಾಗುವುದು ಅಲ್ಲಾಹನ ದಿವ್ಯಸಂದೇಶವೆಂದು ಪ್ರವಾದಿಗಳು ಚೆನ್ನಾಗಿ ತಿಳಿದಿದ್ದಾರೆ. ಮಲಕ್‌ಗಳು ದಿವ್ಯಸಂದೇಶದೊಂದಿಗೆ ಇಳಿಯುವುದನ್ನು ಅವರು ಕಣ್ಣಾರೆ ನೋಡುತ್ತಾರೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವನು ಅಗೋಚರವನ್ನು ಅರಿಯುವವನಾಗಿರುವನು. ಆದರೆ ಅವನು ಅವನ ಅಗೋಚರ ಜ್ಞಾನವನ್ನು ಯಾರಿಗೂ ಪ್ರಕಟಗೊಳಿಸಲಾರನು.(26) ಅವನು ತೃಪ್ತಿಪಟ್ಟಿರುವ ಯಾರಾದರೂ ಸಂದೇಶವಾಹಕರಿಗೆ ಹೊರತು. ಆದರೆ ಖಂಡಿತವಾಗಿಯೂ ಅವನು ಅವರ (ಸಂದೇಶವಾಹಕರ) ಮುಂಭಾಗದಲ್ಲಿ ಮತ್ತು ಹಿಂಭಾಗದಲ್ಲಿ ಕಾವಲುಗಾರರನ್ನು ಇರಿಸುವನು.(27) ಅವರು (ಸಂದೇಶವಾಹಕರು) ಅವರ ಪ್ರಭುವಿನ ಸಂದೇಶಗಳನ್ನು ತಲುಪಿಸಿಕೊಟ್ಟಿರುವರೆಂದು ಅವನು (ಅಲ್ಲಾಹು) ಅರಿಯುವ ಸಲುವಾಗಿ. ಅವರ ಬಳಿಯಿರುವುದನ್ನು ಅವನು ಸಂಪೂರ್ಣವಾಗಿ ಅರಿತಿರುವನು. ಅವನು ಸಕಲ ವಸ್ತುಗಳ ಎಣಿಕೆಯನ್ನೂ ಎಣಿಸಿಟ್ಟಿರುವನು.(28)"** [ಅಲ್-ಜಿನ್ನ್:26- 28]

ಅಲ್ಲಾಹನು ಅವರಿಗೆ ತನ್ನ ಸಂದೇಶಗಳನ್ನು (ಜನರಿಗೆ) ತಲುಪಿಸಲು ಆಜ್ಞಾಪಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಸಂದೇಶವಾಹಕರೇ! ತಮ್ಮ ಪ್ರಭುವಿನ ವತಿಯಿಂದ ತಮಗೆ ಅವತೀರ್ಣಗೊಂಡಿರುವುದನ್ನು (ಜನರಿಗೆ) ತಲುಪಿಸಿಕೊಡಿರಿ. ತಾವು ಹಾಗೆ ಮಾಡದಿದ್ದರೆ ತಾವು ಅವನ ದೌತ್ಯವನ್ನು ನೆರವೇರಿಸಿದವರಾಗಲಾರಿರಿ. ಅಲ್ಲಾಹು ತಮ್ಮನ್ನು ಜನರಿಂದ ಕಾಪಾಡುವನು. ಅಲ್ಲಾಹು ಸತ್ಯನಿಷೇಧಿಗಳಾದ ಜನರನ್ನು ಖಂಡಿತವಾಗಿಯೂ ಸನ್ಮಾರ್ಗಕ್ಕೆ ಸೇರಿಸಲಾರನು."** [ಅಲ್-ಮಾಇದ:67].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಶುಭವಾರ್ತೆ ತಿಳಿಸುವ ಮತ್ತು ಮುನ್ನೆಚ್ಚರಿಕೆ ನೀಡುವ ಸಂದೇಶವಾಹಕರು. ಸಂದೇಶವಾಹಕರ ನಿಯೋಗಾನಂತರ ಅಲ್ಲಾಹನಿಗೆ ವಿರುದ್ಧವಾಗಿ ಜನರಿಗೆ ಯಾವುದೇ ಪುರಾವೆಯೂ ಇಲ್ಲದಿರುವ ಸಲುವಾಗಿ. ಅಲ್ಲಾಹು ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿರುವನು."** [ಅನ್ನಿಸಾ:165].

ಪ್ರವಾದಿಗಳು ಅಲ್ಲಾಹನನ್ನು ಅತಿ ಕಠಿಣವಾಗಿ ಭಯಪಡುತ್ತಿದ್ದರು. ಆದುದರಿಂದ ಅವರು ಅವನ ಸಂದೇಶಗಳಲ್ಲಿ ಯಾವುದೇ ಸೇರ್ಪಡೆ ಅಥವಾ ಕಡಿತ ಮಾಡುತ್ತಿರಲಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಮ್ಮ ಹೆಸರಲ್ಲಿ ಅವರು (ಪ್ರವಾದಿಯವರು) ಯಾವುದಾದರೂ ಮಾತುಗಳನ್ನು ಸ್ವತಃ ರಚಿಸಿ ಹೇಳಿರುತ್ತಿದ್ದರೆ.(44) ನಾವು ಅವರನ್ನು ಬಲಗೈಯಿಂದ ಹಿಡಿಯುತ್ತಿದ್ದೆವು.(45) ತರುವಾಯ ಅವರ ಕಂಠನಾಡಿಯನ್ನು ನಾವು ಕತ್ತರಿಸಿ ಹಾಕುತ್ತಿದ್ದೆವು.(46) ಆಗ ನಿಮ್ಮ ಪೈಕಿ ಯಾರಿಗೂ ಅವರಿಂದ (ಶಿಕ್ಷೆಯನ್ನು) ತಡೆಯಲಾಗದು.(47)"** [ಅಲ್-ಹಾಕ್ಕ:44-47].

ಇಬ್ನ್ ಕಸೀರ್ رحمه الله ರವರು ಹೇಳುತ್ತಾರೆ: "ಅಲ್ಲಾಹನು ಹೇಳುತ್ತಾನೆ: **"ಅವರು (ಪ್ರವಾದಿಯವರು) ನಮ್ಮ ಹೆಸರಲ್ಲಿ ಯಾವುದಾದರೂ ಮಾತುಗಳನ್ನು ಸ್ವತಃ ರಚಿಸಿ ಹೇಳಿರುತ್ತಿದ್ದರೆ."** ಅಂದರೆ ಸತ್ಯ ನಿಷೇಧಿಗಳು ಆರೋಪಿಸಿದಂತೆ ಮುಹಮ್ಮದ್ صلى الله عليه وسلم ರವರು ನಮ್ಮ ಮೇಲೆ ಸುಳ್ಳನ್ನು ಹೆಣೆದು ಸತ್ಯ ಸಂದೇಶದಲ್ಲಿ ಏನಾದರೂ ಸೇರ್ಪಡೆ ಅಥವಾ ಕಡಿತ ಮಾಡುತ್ತಿದ್ದರೆ, ಅಥವಾ ತಮ್ಮ ವತಿಯಿಂದ ಏನಾದರೂ ನಿರ್ಮಿಸಿ ಅದನ್ನು ನಮಗೆ ಸೇರಿಸುತ್ತಿದ್ದರೆ, – ಹೀಗಾಗಲು ಸಾಧ್ಯವಿಲ್ಲ – ನಾವು ಅವರಿಗೆ ತಕ್ಷಣ ಶಿಕ್ಷೆಯನ್ನು ನೀಡುತ್ತಿದ್ದೆವು. ಈ ಕಾರಣದಿಂದಲೇ ಅಲ್ಲಾಹನು ಹೇಳುತ್ತಾನೆ: **"ನಾವು ಅವರನ್ನು ಬಲಗೈಯಿಂದ ಹಿಡಿಯುತ್ತಿದ್ದೆವು."** ಹೀಗೆ ಹೇಳಲಾಗುತ್ತದೆ: ಇದರ ಅರ್ಥ ನಾವು ಅವರ ವಿರುದ್ಧ ಬಲಗೈಯಿಂದ ಶಿಕ್ಷಾಕ್ರಮ ಕೈಗೊಳ್ಳುತ್ತಿದ್ದೆವು. ಏಕೆಂದರೆ ಅದು (ಬಲಗೈ) ಹಿಡಿತದಲ್ಲಿ ಅತಿಕಠಿಣವಾಗಿರುತ್ತದೆ. ಹೀಗೂ ಹೇಳಲಾಗುತ್ತದೆ: (ಇದರ ಅರ್ಥ) ನಾವು ಅವರನ್ನು ಅವರ ಬಲಗೈಯಿಂದ ಹಿಡಿದುಕೊಳ್ಳುತ್ತಿದ್ದೆವು."

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹು ಹೇಳುವ ಸಂದರ್ಭ(ವನ್ನು ಗಮನಿಸಿರಿ): ಓ ಮರ್ಯಮ್‌ರ ಪುತ್ರ ಈಸಾ! ಅಲ್ಲಾಹನ ಹೊರತು ನನ್ನನ್ನು ಮತ್ತು ನನ್ನ ತಾಯಿಯನ್ನು ಆರಾಧ್ಯರನ್ನಾಗಿ ಮಾಡಿಕೊಳ್ಳಿರಿ ಎಂದು ತಾವು ಜನರೊಂದಿಗೆ ಹೇಳಿರುವಿರಾ? ಅವರು ಹೇಳುವರು: ನೀನು ಪರಮ ಪಾವನನು. ನನಗೆ (ಹೇಳಲು) ಯಾವುದೇ ಹಕ್ಕಿಲ್ಲದ ಒಂದು ಮಾತನ್ನು ನಾನು ಹೇಳುವೆನೇ? ನಾನದನ್ನು ಹೇಳಿರುತ್ತಿದ್ದರೆ ಖಂಡಿತವಾಗಿಯೂ ನೀನು ಅರಿತಿರುತ್ತಿದ್ದೆ. ನನ್ನ ಮನಸ್ಸಿನಲ್ಲಿರುವುದನ್ನು ನೀನು ಅರಿಯುವೆ. ನಿನ್ನ ಮನಸ್ಸಿನಲ್ಲಿರುವುದನ್ನು ನಾನು ಅರಿಯಲಾರೆ. ಖಂಡಿತವಾಗಿಯೂ ನೀನು ಅಗೋಚರ ವಿಷಯಗಳನ್ನು ಅರಿಯುವವನಾಗಿರುವೆ. ನೀನು ನನ್ನೊಂದಿಗೆ ಆದೇಶಿಸಿರುವಂತೆ ನನ್ನ ಮತ್ತು ನಿಮ್ಮ ಪ್ರಭುವಾದ ಅಲ್ಲಾಹನ ಆರಾಧಿಸಿರಿ ಎಂಬುದರ ವಿನಾ ಬೇರೇನನ್ನೂ ನಾನು ಅವರೊಂದಿಗೆ ಹೇಳಿರಲಿಲ್ಲ. ನಾನು ಅವರೊಂದಿಗೆ ಇದ್ದಾಗಲೆಲ್ಲವೂ ನಾನು ಅವರ ಮೇಲೆ ಸಾಕ್ಷಿಯಾಗಿದ್ದೆ. ತರುವಾಯ ನೀನು ನನ್ನನ್ನು ಪೂರ್ಣವಾಗಿ ಎತ್ತಿದ ನಂತರ ಅವರ ಪರಿವೀಕ್ಷಕನು ನೀನೇ ಆಗಿದ್ದೆ. ನೀನು ಸರ್ವ ವಿಷಯಗಳ ಮೇಲೂ ಸಾಕ್ಷಿಯಾಗಿರುವೆ." [ಅಲ್-ಮಾಇದ:116-117].

ತನ್ನ ಸಂದೇಶಗಳನ್ನು ತಲುಪಿಸುವ ಮಾರ್ಗದಲ್ಲಿ ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು عليهم الصلاة و السلام ದೃಢವಾಗಿ ನಿಲ್ಲಿಸುವುದು ಅಲ್ಲಾಹು ಅವರ ಮೇಲೆ ತೋರಿದ ಅನುಗ್ರಹದಲ್ಲಿ ಸೇರಿದ್ದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನೀವು ಅಲ್ಲಾಹನೊಂದಿಗೆ ಸಹಭಾಗಿಯನ್ನಾಗಿ ಮಾಡುತ್ತಿರುವ ಎಲ್ಲದರಿಂದಲೂ ನಾನು ವಿಮುಕ್ತನಾಗಿರುವೆನು ಎಂಬುದಕ್ಕೆ ನಾನು ಅಲ್ಲಾಹನನ್ನು ಸಾಕ್ಷಿಯಾಗಿಸುತ್ತಿರುವೆನು. ನೀವೂ (ಅದಕ್ಕೆ) ಸಾಕ್ಷಿಗಳಾಗಿರಿ. ಆದ್ದರಿಂದ ನೀವು ಒಟ್ಟಾಗಿ ನನ್ನ ವಿರುದ್ಧ ಸಂಚು ಹೂಡಿರಿ. ತರುವಾಯ ನನಗೆ ಸ್ವಲ್ಪವೂ ಕಾಲಾವಕಾಶವನ್ನು ನೀಡದಿರಿ. ನಾನು ನನ್ನ ಮತ್ತು ನಿಮ್ಮ ಪ್ರಭುವಾಗಿರುವ ಅಲ್ಲಾಹನ ಮೇಲೆ ಭರವಸೆಯಿಟ್ಟಿರುವೆನು. ಯಾವುದೇ ಜೀವಿಯೂ ಇರಲಾರದು, ಅದರ ಮುಂದಲೆ ಅವನ ವಶದಲ್ಲಿರುವುದು. ಖಂಡಿತವಾಗಿಯೂ ನನ್ನ ಪ್ರಭು ನೇರವಾದ ಮಾರ್ಗದಲ್ಲಿರುವನು." [ಹೂದ್ 54-56].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ನಾವು ತಮಗೆ ನೀಡಿರುವ ದಿವ್ಯಸಂದೇಶದಿಂದ ತಮ್ಮನ್ನು ತಪ್ಪಿಸಿಬಿಡಲು ಅವರು ಸಿದ್ಧರಾಗಿರುವರು. ತಾವು ನಮ್ಮ ಮೇಲೆ ಅದಲ್ಲದ ಬೇರೇನನ್ನಾದರೂ ಹೆಣೆದು ರಚಿಸಬೇಕೆಂದು (ಅವರು ಬಯಸುತ್ತಿರುವರು). ಹಾಗಿರುತ್ತಿದ್ದರೆ ಅವರು ತಮ್ಮನ್ನು ಮಿತ್ರನನ್ನಾಗಿ ಮಾಡಿಕೊಳ್ಳುತ್ತಿದ್ದರು. ನಾವು ತಮ್ಮನ್ನು ಅಚಲವಾಗಿ ನಿಲ್ಲಿಸದಿರುತ್ತಿದ್ದರೆ ತಾವು ಅವರೆಡೆಗೆ ಸ್ವಲ್ಪವಾದರೂ ವಾಲುವಂತಾಗುತ್ತಿದ್ದಿರಿ. ಹಾಗಿರುತ್ತಿದ್ದರೆ ಬದುಕಿನ ಇಮ್ಮಡಿ ಶಿಕ್ಷೆಯನ್ನು ಮತ್ತು ಮರಣದ ಇಮ್ಮಡಿ ಶಿಕ್ಷೆಯನ್ನು ತಾವು ಸವಿಯುವಂತೆ ನಾವು ಮಾಡುತ್ತಿದ್ದೆವು. ತರುವಾಯ ನಮ್ಮ ವಿರುದ್ಧ ತಮಗೆ ಸಹಾಯ ಮಾಡುವ ಯಾರನ್ನೂ ತಾವು ಕಾಣಲಾರಿರಿ." [ಅಲ್-ಇಸ್ರಾ: 73-75]

ಪವಿತ್ರ ಕುರ್‌ಆನ್ ಸರ್ವಲೋಕಗಳ ಪ್ರಭುವಿನಿಂದ ಅವತೀರ್ಣಗೊಂಡದ್ದಾಗಿದೆ ಎಂಬುದಕ್ಕೆ ಈ ಸೂಕ್ತಿಗಳು ಮತ್ತು ಇದಕ್ಕಿಂತ ಮುಂಚಿನ ಸೂಕ್ತಿಗಳು ಸಾಕ್ಷಿ ಮತ್ತು ಪುರಾವೆಯಾಗಿವೆ. ಏಕೆಂದರೆ ಇದು ಪ್ರವಾದಿ ಮುಹಮ್ಮದ್ صلى الله عليه وسلم ರವರ ಕಡೆಯಿಂದಾಗಿರುತ್ತಿದ್ದರೆ ಅವರ ಬಗ್ಗೆಯಿರುವ ಇಂತಹ ಮಾತನ್ನು ಅವರು ಅದರಲ್ಲಿ ಸೇರಿಸುತ್ತಿರಲಿಲ್ಲ. ಸರ್ವಶಕ್ತನಾದ ಅಲ್ಲಾಹನು ತನ್ನ ಸಂದೇಶವಾಹಕರನ್ನು ಜನರಿಂದ ಕಾಪಾಡುವನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಸಂದೇಶವಾಹಕರೇ! ತಮ್ಮ ಪ್ರಭುವಿನ ವತಿಯಿಂದ ತಮಗೆ ಅವತೀರ್ಣಗೊಂಡಿರುವುದನ್ನು (ಜನರಿಗೆ) ತಲುಪಿಸಿಕೊಡಿರಿ. ತಾವು ಹಾಗೆ ಮಾಡದಿದ್ದರೆ ತಾವು ಅವನ ದೌತ್ಯವನ್ನು ನೆರವೇರಿಸಿದವರಾಗಲಾರಿರಿ. ಅಲ್ಲಾಹು ತಮ್ಮನ್ನು ಜನರಿಂದ ಕಾಪಾಡುವನು. ಅಲ್ಲಾಹು ಸತ್ಯನಿಷೇಧಿಗಳಾದ ಜನರನ್ನು ಖಂಡಿತವಾಗಿಯೂ ಸನ್ಮಾರ್ಗಕ್ಕೆ ಸೇರಿಸಲಾರನು." [ಅಲ್-ಮಾಇದ:67].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "(ಓ ಪ್ರವಾದಿಯವರೇ!) ತಾವು ಅವರಿಗೆ ನೂಹ್‌ರ ವೃತ್ತಾಂತವನ್ನು ಓದಿಕೊಡಿರಿ. ಅವರು ತನ್ನ ಜನತೆಯೊಂದಿಗೆ ಹೇಳಿದ ಸಂದರ್ಭ: 'ಓ ನನ್ನ ಜನರೇ! ನನ್ನ ಸಾನಿಧ್ಯ ಮತ್ತು ಅಲ್ಲಾಹನ ದೃಷ್ಟಾಂತಗಳ ಬಗ್ಗೆ ನನ್ನ ಉಪದೇಶವು

ನಿಮಗೊಂದು ದೊಡ್ಡ ಭಾರವಾಗಿ ಬಿಟ್ಟಿರುವುದಾದರೆ ನಾನು ಅಲ್ಲಾಹನ ಮೇಲೆ ಭರವಸೆ ಇಟ್ಟಿರುವೆನು. ಆದ್ದರಿಂದ ನಿಮ್ಮ ವಿಷಯವನ್ನು ನೀವು ಮತ್ತು ನೀವು ಸಹಭಾಗಿಗಳನ್ನಾಗಿ ಮಾಡಿಕೊಂಡವರು ಜೊತೆಗೂಡಿ ತೀರ್ಮಾನಿಸಿರಿ. ತರುವಾಯ ನಿಮ್ಮ ವಿಷಯದಲ್ಲಿ (ತೀರ್ಮಾನದಲ್ಲಿ) ನಿಮಗೆ ಯಾವುದೇ ಅಸ್ಪಷ್ಟತೆಯೂ ಇರದಿರಲಿ. ತರುವಾಯ ನೀವು (ಆ ತೀರ್ಮಾನವನ್ನು) ನನ್ನ ಮೇಲೆ ಜಾರಿಗೊಳಿಸಿರಿ. ನನಗೆ ನೀವು ಸ್ವಲ್ಪವೂ ಕಾಲಾವಕಾಶವನ್ನು ನೀಡದಿರಿ." [ಯೂನುಸ್:71].

ಮೂಸಾ عليه السلام ರವರ ಮಾತನ್ನು ಉಲ್ಲೇಖಿಸುತ್ತಾ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅವರಿಬ್ಬರು ಹೇಳಿದರು: ನಮ್ಮ ಪ್ರಭೂ! ಅವನು (ಫಿರ್‌ಔನ್) ನಮ್ಮ ಮೇಲೆ ಮುಗಿಬೀಳುವನೋ ಅಥವಾ ಅತಿಕ್ರಮವೆಸಗುವನೋ ಎಂದು ನಾವು ಭಯಪಡುತ್ತಿರುವೆವು. ಅವನು (ಅಲ್ಲಾಹು) ಹೇಳಿದನು: 'ನೀವು ಭಯಪಡದಿರಿ. ಖಂಡಿತವಾಗಿಯೂ ನಾನು ನಿಮ್ಮೊಂದಿಗಿರುವೆನು. ನಾನು ಆಲಿಸುತ್ತಲೂ, ನೋಡುತ್ತಲೂ ಇರುವೆನು." [ತ್ವಾಹಾ:45-46]

ತನ್ನ ಸಂದೇಶವಾಹಕರನ್ನು عليهم السلام ಅವರ ಶತ್ರುಗಳಿಂದ ಸಂರಕ್ಷಿಸುವೆನೆಂದು ಸರ್ವಶಕ್ತನಾದ ಅಲ್ಲಾಹನು ವಿವರಿಸಿದ್ದಾನೆ. ಆದ್ದರಿಂದ ಅವರಿಗೆ ಕೇಡುಂಟುಮಾಡಲು ಶತ್ರುಗಳಿಗೆ ಸಾಧ್ಯವಿಲ್ಲ. ಅದೇ ರೀತಿ ಸರ್ವಶಕ್ತನಾದ ಅಲ್ಲಾಹನು ತನ್ನ ದಿವ್ಯವಾಣಿಯನ್ನು ರಕ್ಷಿಸುವನೆಂದು ತಿಳಿಸಿದ್ದಾನೆ. ಆದ್ದರಿಂದ ಅದರಲ್ಲಿ (ದಿವ್ಯವಾಣಿಯಲ್ಲಿ) ಯಾವುದೇ ಸೇರ್ಪಡೆ ಅಥವಾ ಕಡಿತ ಉಂಟಾಗಲಾರದು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ಈ ಉಪದೇಶವನ್ನು ಅವತೀರ್ಣಗೊಳಿಸಿದವರು ನಾವಾಗಿರುವೆವು. ಖಂಡಿತವಾಗಿಯೂ ಅದನ್ನು ನಾವು ಸಂರಕ್ಷಿಸುವೆವು." [ಅಲ್-ಹಿಜ್ರ್:9].

ಬುದ್ಧಿ ಅಥವಾ ಗುಣಸ್ವಭಾವಕ್ಕೆ ವಿರುದ್ಧವಾಗಿರುವ ಎಲ್ಲದ್ದರಿಂದಲೂ ಸಂದೇಶವಾಹಕರು عليهم السلام ಕಾಪಾಡಲ್ಪಟ್ಟಿದ್ದಾರೆ. ತನ್ನ ಪ್ರವಾದಿ ಮುಹಮ್ಮದ್ صلى الله

عليه وسلم ರವರನ್ನು ಪರಿಶುದ್ಧಗೊಳಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ತಾವು ಸರ್ವಶ್ರೇಷ್ಠ ಸ್ವಭಾವದಲ್ಲಿರುವಿರಿ."** [ಅಲ್-ಖಲಮ್:4]

ಅವರ ಕುರಿತು ಪುನಃ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ನಿಮ್ಮ ಒಡನಾಡಿ (ಪ್ರವಾದಿ) ಒಬ್ಬ ಹುಚ್ಚರಲ್ಲ."** [ಅತ್ತಕ್ವೀರ್:22] ಇದು ಅವರು ಸಂದೇಶವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲೆಂದಾಗಿದೆ.

ಅಲ್ಲಾಹನ ದಾಸರಿಗೆ ಅವನ ಆಜ್ಞೆಗಳನ್ನು ತಲುಪಿಸುವ ಹೊಣೆಯನ್ನು ಸಂದೇಶವಾಹಕರಿಗೆ ವಹಿಸಿಕೊಡಲಾಗಿದೆ. ಅಲ್ಲಾಹನ ರುಬೂಬಿಯ್ಯತ್ (ಪ್ರಭುತ್ವ) ಅಥವಾ ಉಲೂಹಿಯ್ಯತ್ (ಆರಾಧನೆ)ನ ವಿಶೇಷತೆಗಳಲ್ಲಿ ಸಂದೇಶವಾಹಕರಿಗೆ ಯಾವುದೇ ಪಾಲಿಲ್ಲ. ಬದಲಾಗಿ ಅವರು ಇತರೆಲ್ಲಾ ಮನುಷ್ಯರಂತೆ ಮನುಷ್ಯರಾಗಿದ್ದಾರೆ. ಅಲ್ಲಾಹನು ತನ್ನ ಸಂದೇಶಗಳನ್ನು ಅವರಿಗೆ ಅವತೀರ್ಣಗೊಳಿಸುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರೆಡೆಗೆ ಕಳುಹಿಸಲಾದ ಸಂದೇಶವಾಹಕರು ಅವರೊಂದಿಗೆ ಹೇಳಿದರು: ನಾವು ನಿಮ್ಮಂತಿರುವ ಮನುಷ್ಯರು ಮಾತ್ರವಾಗಿರುವೆವು. ಆದರೆ ಅಲ್ಲಾಹು ತನ್ನ ದಾಸರ ಪೈಕಿ ತಾನಿಚ್ಛಿಸುವವರ ಮೇಲೆ ಔದಾರ್ಯ ತೋರುವನು. ಅಲ್ಲಾಹನ ಅನುಮತಿಯ ವಿನಾ ನಿಮಗೆ ಯಾವುದಾದರೂ ಆಧಾರ ಪ್ರಮಾಣವನ್ನು ತಂದುಕೊಡಲು ನಮ್ಮಿಂದಾಗದು. ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆ ಭರವಸೆಯಿಡಲಿ."** [ಇಬ್ರಾಹೀಂ:11]

ತನ್ನ ಜನತೆಗೆ ಹೀಗೆ ಹೇಳಬೇಕೆಂದು ಸರ್ವಶಕ್ತನಾದ ಅಲ್ಲಾಹನು ತನ್ನ ಸಂದೇಶವಾಹಕ ಮುಹಮ್ಮದ್ صلى الله عليه وسلم ರಿಗೆ ಆಜ್ಞಾಪಿಸುತ್ತಾ ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ನಾನು ನಿಮ್ಮಂತಿರುವ ಒಬ್ಬ ಮನುಷ್ಯನು ಮಾತ್ರವಾಗಿರುವೆನು. ನಿಮ್ಮ ಆರಾಧ್ಯನು ಏಕಮೇವ ಆರಾಧ್ಯನಾಗಿರುವನೆಂದು ನನಗೆ ದಿವ್ಯಸಂದೇಶ ನೀಡಲಾಗುತ್ತಿದೆ. ಆದ್ದರಿಂದ ಯಾರಾದರೂ ತನ್ನ ಪ್ರಭುವಿನ ಭೇಟಿಯನ್ನು ಆಶಿಸುವುದಾದರೆ**

**ಅವನು ಸತ್ಕರ್ಮವನ್ನು ಮಾಡಲಿ ಮತ್ತು ತನ್ನ ಪ್ರಭುವಿನ ಆರಾಧನೆಯಲ್ಲಿ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಲಿ."** [ಅಲ್-ಕಹ್ಫ್:110]

23. ಇಸ್ಲಾಂ ಧರ್ಮವು ಆರಾಧನೆಯ ಮಹಾ ಮೂಲತತ್ವಗಳೊಂದಿಗೆ ಅಲ್ಲಾಹನನ್ನು ಮಾತ್ರ ಆರಾಧಿಸಲು ಕರೆ ನೀಡುತ್ತದೆ. ಅವು: 1. ನಮಾಝ್. ಅದು ಕಿಯಾಮ್ (ನಿಂತುಕೊಳ್ಳುವುದು), ರುಕೂ (ಬಾಗುವುದು), ಸುಜೂದ್(ಸಾಷ್ಟಾಂಗವೆರಗುವುದು), ಅಲ್ಲಾಹನ ಸ್ಮರಣೆ ಮತ್ತು ಪ್ರಶಂಸೆ ಹಾಗೂ ಪ್ರಾರ್ಥನೆಗಳನ್ನು ಒಳಗೊಂಡಿದೆ. ಒಬ್ಬ ವ್ಯಕ್ತಿ ದಿನಕ್ಕೆ ಐದು ಬಾರಿ ಅದನ್ನು ನಿರ್ವಹಿಸುತ್ತಾನೆ. ಅದರಲ್ಲಿ ಎಲ್ಲಾ ತರಹದ ಭೇದ-ಭಾವಗಳು ನಿವಾರಣೆಯಾಗುತ್ತವೆ. ಶ್ರೀಮಂತರು, ಬಡವರು, ಮುಖಂಡರು, ಅನುಯಾಯಿಗಳು ಎಲ್ಲರೂ ನಮಾಜಿನಲ್ಲಿ ಒಂದೇ ಸಾಲಿನಲ್ಲಿ ನಿಲ್ಲುತ್ತಾರೆ. 2. ಝಕಾತ್. ಅದು ಸಂಪತ್ತಿನ ಒಂದು ಸಣ್ಣ ಮೊತ್ತವಾಗಿದ್ದು, ಕೆಲವು ಷರತ್ತುಗಳು ಮತ್ತು ಅಲ್ಲಾಹನು ನಿರ್ಣಯಿಸಿದ ಕೆಲವು ನಿರ್ಣಯಗಳಿಗೆ ಅನುಗುಣವಾಗಿ, ಶ್ರೀಮಂತರ ಸಂಪತ್ತಿನಲ್ಲಿ ಕಡ್ಡಾಯಗೊಳಿಸಲಾಗಿದೆ. ಅದನ್ನು ಬಡವರು ಮುಂತಾದವರಿಗೆ ಹಂಚಲಾಗುತ್ತದೆ. ಅದನ್ನು ವರ್ಷಕ್ಕೊಮ್ಮೆ ನೀಡಬೇಕಾಗಿದೆ. 3. ಉಪವಾಸ. ಅದು ರಮದಾನ್ ತಿಂಗಳಿನ ಹಗಲಿನಲ್ಲಿ ಉಪವಾಸವನ್ನು ಅಸಿಂಧುಗೊಳಿಸುವ ಕಾರ್ಯಗಳಿಂದ ತನ್ನನ್ನು ತಡೆದುಕೊಳ್ಳುವುದಾಗಿದೆ. ಅದು ಮನಸ್ಸಿನಲ್ಲಿ ಇಚ್ಛಾಶಕ್ತಿ ಮತ್ತು ಸಹನೆಯನ್ನು ಬೆಳೆಸುತ್ತದೆ. 4. ಹಜ್ಜ್ : ಅದು ಸಾಮರ್ಥ್ಯವಿದ್ದವನಿಗೆ ಜೀವಮಾನದಲ್ಲಿ ಒಂದು ಬಾರಿ ಮಕ್ಕಾ ಮುಕರ್‍ರಮದಲ್ಲಿರುವ ಅಲ್ಲಾಹನ ಭವನದ ಕಡೆ ಯಾತ್ರೆ ಕೈಗೊಳ್ಳುವುದಾಗಿದೆ. ಈ ಹಜ್ಜ್ ಯಾತ್ರೆಯಲ್ಲಿ ಸೃಷ್ಟಿಕರ್ತನ ಕಡೆಗೆ

**ತಿರುಗುವಲ್ಲಿ ಎಲ್ಲರೂ ಸಮಾನರಾಗಿದ್ದಾರೆ. ಅದರಲ್ಲಿ ಎಲ್ಲಾ ರೀತಿಯ ಬೇಧ-ಭಾವಗಳು ಮತ್ತು ಸಂಬಂಧಗಳು ನಿವಾರಣೆಯಾಗುತ್ತವೆ.**

ಇಸ್ಲಾಂ ಧರ್ಮವು ಮಹಾ ಆರಾಧನೆಗಳೊಂದಿಗೆ ಅಲ್ಲಾಹನನ್ನು ಆರಾಧಿಸಲು ಕರೆ ನೀಡುತ್ತದೆ. ಈ ಮಹಾ ಆರಾಧನೆಗಳನ್ನು ಅಲ್ಲಾಹನು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರ عليهم الصلاة والسلام ಮೇಲೆ ಕಡ್ಡಾಯಗೊಳಿಸಿದ್ದಾನೆ. ಆ ಮಹಾ ಆರಾಧನೆಗಳು ಹೀಗಿವೆ:

**ಮೊದಲನೆಯದು:** ನಮಾಝ್. ಅಲ್ಲಾಹನು ಅದನ್ನು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಿಗೆ ಕಡ್ಡಾಯಗೊಳಿಸಿದಂತೆ ಮುಸ್ಲಿಮರ ಮೇಲೂ ಕಡ್ಡಾಯಗೊಳಿಸಿದ್ದಾನೆ. ಪ್ರದಕ್ಷಿಣೆ ಮಾಡುವವರಿಗೆ, ನಮಾಝ್ ನಿರ್ವಹಿಸುವವರಿಗೆ, ತಲೆಬಾಗುವವರಿಗೆ ಮತ್ತು ಸಾಷ್ಟಾಂಗವೆರಗುವವರಿಗೆ ತನ್ನ ಭವನವನ್ನು ಸ್ವಚ್ಛಗೊಳಿಸಬೇಕೆಂದು ಅಲ್ಲಾಹನು ತನ್ನ ಪ್ರವಾದಿ ಇಬ್ರಾಹೀಮ್ ಖಲೀಲ್ عليه السلام ರಿಗೆ ಆಜ್ಞಾಪಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಾವು ಆ ಭವನವನ್ನು (ಕಅಬಾವನ್ನು) ಜನರು ಸಮ್ಮಿಲನಗೊಳ್ಳುವ ಸ್ಥಳವನ್ನಾಗಿಯೂ, ಒಂದು ಸುರಕ್ಷಿತ ಕೇಂದ್ರವನ್ನಾಗಿಯೂ ಮಾಡಿದ ಸಂದರ್ಭ(ವನ್ನು ಸ್ಮರಿಸಿರಿ). ಇಬ್ರಾಹೀಮ್ ನಿಂತು ಪ್ರಾರ್ಥಿಸಿದ ಸ್ಥಳವನ್ನು ನೀವು (ನಮಾಝಿನ) ಸ್ಥಳವನ್ನಾಗಿ ಮಾಡಿಕೊಳ್ಳಿರಿ. ಪ್ರದಕ್ಷಿಣೆ ಮಾಡುವರಿಗೂ, ಇಅತಿಕಾಫ್ ನಿರ್ವಹಿಸುವವರಿಗೂ, ತಲೆಬಾಗುತ್ತಾ ಮತ್ತು ಸಾಷ್ಟಾಂಗವೆರಗುತ್ತಾ ನಮಾಝ್ ಮಾಡುವವರಿಗೂ ನನ್ನ ಭವನವನ್ನು ನೀವಿಬ್ಬರೂ ಸ್ವಚ್ಛಗೊಳಿಸಿರಿ ಎಂದು ನಾವು ಇಬ್ರಾಹೀಮ್ ಮತ್ತು ಇಸ್ಮಾಈಲ್‌ರಿಗೆ ಆಜ್ಞೆಯಿತ್ತೆವು."** [ಅಲ್-ಬಖರ:125].

ಅಲ್ಲಾಹನು ಮೂಸಾ عليه السلام ರನ್ನು ಮೊದಲನೆಯ ಬಾರಿ ಕರೆದಾಗ ಅವರಿಗೆ ನಮಾಝನ್ನು ಕಡ್ಡಾಯಗೊಳಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಖಂಡಿತವಾಗಿಯೂ ನಾನು ತಮ್ಮ ಪ್ರಭುವಾಗಿರುವೆನು. ಆದ್ದರಿಂದ ತಾವು ತಮ್ಮ ಚಪ್ಪಲಿಗಳನ್ನು ಕಳಚಿರಿ. ತಾವು ತುವಾ ಎಂಬ ಪವಿತ್ರ ಕಣಿವೆಯಲ್ಲಿರುವಿರಿ. ನಾನು ತಮ್ಮನ್ನು ಆರಿಸಿರುವೆನು. ಆದ್ದರಿಂದ ದಿವ್ಯಸಂದೇಶ ನೀಡಲಾಗುವುದನ್ನು ತಾವು ಕಿವಿಗೊಟ್ಟು ಆಲಿಸಿರಿ.(13) ಖಂಡಿತವಾಗಿಯೂ ಅಲ್ಲಾಹು ನಾನೇ ಆಗಿರುವೆನು. ನನ್ನ ಹೊರತು ಅನ್ಯ ಆರಾಧ್ಯರಿಲ್ಲ. ಆದ್ದರಿಂದ ತಾವು ನನ್ನನ್ನು ಆರಾಧಿಸಿರಿ ಮತ್ತು ನನ್ನನ್ನು ಸ್ಮರಿಸುವುದಕ್ಕಾಗಿ ನಮಾಝನ್ನು ಸಂಸ್ಥಾಪಿಸಿರಿ.(14)"** [ತ್ವಾಹಾ:12-14]

ಅಲ್ಲಾಹನು ಈಸಾ ಮಸೀಹ್ عليه السلام ರಿಗೆ ನಮಾಝ್ ನಿರ್ವಹಿಸಬೇಕೆಂದು ಮತ್ತು ಝಕಾತ್ ಪಾವತಿಸಬೇಕೆಂದು ಆಜ್ಞಾಪಿಸಿದ್ದಾಗಿ ಅವರು ಹೇಳುತ್ತಾರೆ. ಅವರ ಮಾತನ್ನು ಉಲ್ಲೇಖಿಸುತ್ತಾ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ನಾನು ಎಲ್ಲೇ ಇದ್ದರೂ ಅವನು ನನ್ನನ್ನು ಅನುಗ್ರಹೀತನನ್ನಾಗಿ ಮಾಡಿರುವನು. ನಾನು ಬದುಕಿರುವವರೆಗೂ ನಮಾಝ್ ಮಾಡಲು ಮತ್ತು ಝಕಾತ್ ನೀಡಲು ಅವನು ನನ್ನೊಂದಿಗೆ ಆಜ್ಞಾಪಿಸಿರುವನು.”** [ಮರ್ಯಮ್:31]

ಇಸ್ಲಾಮ್ ಧರ್ಮದಲ್ಲಿ ನಮಾಝ್ ಎಂದರೆ ಕಿಯಾಮ್ (ನಿಂತುಕೊಳ್ಳುವುದು), ರುಕೂ (ಬಾಗುವುದು), ಸುಜೂದ್ (ಸಾಷ್ಟಾಂಗವೆರಗುವುದು), ಅಲ್ಲಾಹನ ಸ್ಮರಣೆ ಮತ್ತು ಪ್ರಶಂಸೆ ಹಾಗೂ ಪ್ರಾರ್ಥನೆಗಳಾಗಿವೆ. ಒಬ್ಬ ವ್ಯಕ್ತಿ ದಿನಕ್ಕೆ ಐದು ಬಾರಿ ಅದನ್ನು ನಿರ್ವಹಿಸುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ನೀವು ನಮಾಝ್‌ಗಳನ್ನು ಸೂಕ್ಷ್ಮತೆಯೊಂದಿಗೆ ನಿರ್ವಹಿಸಿರಿ. ವಿಶೇಷವಾಗಿ ಉತ್ಕೃಷ್ಟವಾದ ನಮಾಝನ್ನು. ನೀವು ಅಲ್ಲಾಹನ ಮುಂದೆ ಭಯಭಕ್ತಿಯುಳ್ಳವರಾಗಿ ನಿಂತು ನಮಾಝ್ ನಿರ್ವಹಿಸಿರಿ.”** [ಅಲ್-ಬಕರ:238].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಸೂರ್ಯನು (ಆಕಾಶಮಧ್ಯದಿಂದ) ಸರಿದ ಬಳಿಕ ಕತ್ತಲಾಗುವ ತನಕ (ನಿಗದಿತ ಸಮಯಗಳಲ್ಲಿ) ತಾವು ನಮಾಝನ್ನು ಸಂಸ್ಥಾಪಿಸಿರಿ. ಕುರ್‌ಆನ್ ಪಾರಾಯಣ ಮಾಡಲಾಗುವ ಪ್ರಭಾತ ನಮಾಝನ್ನೂ (ಸಂಸ್ಥಾಪಿಸಿರಿ).**

ಖಂಡಿತವಾಗಿಯೂ ಪ್ರಭಾತ ನಮಾಝಿನ ಕುರ್‌ಆನ್ ಪಾರಾಯಣವು ಸಾಕ್ಷ್ಯವಹಿಸಲ್ಪಡುವಂತದ್ದಾಗಿದೆ." [ಅಲ್-ಇಸ್ರಾ:78]

ಪ್ರವಾದಿ صلي الله عليه وسلم ರವರು ಹೇಳಿದರು: "ರುಕೂವಿನಲ್ಲಿ ನೀವು ಸರ್ವಶಕ್ತನಾದ ರಬ್ಬಿನ (ಪ್ರಭುವಿನ) ಮಹಾನತೆಯನ್ನು ಹೊಗಳಿರಿ ಮತ್ತು ಸುಜೂದಿನಲ್ಲಿ ಪ್ರಾರ್ಥನೆಗಾಗಿ ಪರಿಶ್ರಮಿಸಿರಿ. ಇದು ನಿಮ್ಮ ಪ್ರಾರ್ಥನೆ ಸ್ವೀಕಾರವಾಗಲಿಕ್ಕೆ ಯೋಗ್ಯವಾದ ಸಮಯವಾಗಿದೆ." [ಸಹೀಹ್ ಮುಸ್ಲಿಮ್]

**ಎರಡನೆಯದು:** ಝಕಾತ್. ಅದು ಸಂಪತ್ತಿನ ಒಂದು ಸಣ್ಣ ಮೊತ್ತವಾಗಿದ್ದು, ಕೆಲವು ಷರತ್ತುಗಳು ಮತ್ತು ಅಲ್ಲಾಹನು ನಿರ್ಣಯಿಸಿದ ಕೆಲವು ನಿರ್ಣಯಗಳಿಗೆ ಅನುಗುಣವಾಗಿ, ಶ್ರೀಮಂತರ ಸಂಪತ್ತಿನಲ್ಲಿ ಕಡ್ಡಾಯಗೊಳಿಸಲಾಗಿದೆ. ಅದನ್ನು ಬಡವರು ಮುಂತಾದವರಿಗೆ ಹಂಚಲಾಗುತ್ತದೆ. ಅದನ್ನು ವರ್ಷಕ್ಕೊಮ್ಮೆ ನೀಡಬೇಕಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅವರನ್ನು ಶುದ್ಧೀಕರಿಸಲು ಮತ್ತು ಸಂಸ್ಕರಿಸಲು ನೆರವಾಗುವ ದಾನವನ್ನು ತಾವು ಅವರ ಸಂಪತ್ತುಗಳಿಂದ ಪಡೆದುಕೊಳ್ಳಿರಿ ಮತ್ತು ಅವರಿಗೋಸ್ಕರ (ಅನುಗ್ರಹಕ್ಕಾಗಿ) ಪ್ರಾರ್ಥಿಸಿರಿ. ಖಂಡಿತವಾಗಿಯೂ ತಮ್ಮ ಪ್ರಾರ್ಥನೆಯು ಅವರಿಗೆ ಶಾಂತಿಯನ್ನು ನೀಡುತ್ತದೆ. ಅಲ್ಲಾಹು ಎಲ್ಲವನ್ನು ಆಲಿಸುವವನೂ ಅರಿಯುವವನೂ ಆಗಿರುವನು." [ಅತ್ತೌಬಾ:103]

ಪ್ರವಾದಿ صلي الله عليه وسلم ರವರು ಮುಆದ್ رضي الله عنه ರನ್ನು ಯಮನ್‌ಗೆ ಕಳುಹಿಸುವಾಗ ಹೀಗೆ ಹೇಳಿದರು: "ಖಂಡಿತವಾಗಿಯೂ ನೀವು ಗ್ರಂಥದವರ ಬಳಿಗೆ ಹೋಗುತ್ತಿದ್ದೀರಿ. ಆದ್ದರಿಂದ ನೀವು ಅವರನ್ನು "ಅಲ್ಲಾಹನ ಹೊರತು ಅನ್ಯ ನೈಜ ಆರಾಧ್ಯನಿಲ್ಲ ಮತ್ತು ನಾನು ಅಲ್ಲಾಹನ ಸಂದೇಶವಾಹಕನಾಗಿದ್ದೇನೆಂದು" ಸಾಕ್ಷ್ಯ ವಹಿಸಲು ಆಹ್ವಾನಿಸಿರಿ. ಅವರು ಈ ವಿಷಯದಲ್ಲಿ ನಿಮ್ಮನ್ನು ಅನುಸರಿಸಿದರೆ, ಅಲ್ಲಾಹನು ಅವರ ಮೇಲೆ ಹಗಲು ರಾತ್ರಿಯಲ್ಲಿ ಐದು ನಮಾಝ್‌ಗಳನ್ನು ಕಡ್ಡಾಯಗೊಳಿಸಿದ್ದಾನೆಂದು ತಿಳಿಸಿರಿ. ಅವರು ಇದರಲ್ಲೂ ನಿಮ್ಮನ್ನು ಅನುಸರಿಸಿದರೆ, ಅಲ್ಲಾಹನು ಅವರ ಮೇಲೆ ಅವರ ಸಂಪತ್ತಿನಲ್ಲಿ ಝಕಾತ್ತನ್ನು

ಕಡ್ಡಾಯಗೊಳಿಸಿದ್ದಾನೆಂದು ಹೇಳಿರಿ. ಅದು ಅವರ ಪೈಕಿ ಶ್ರೀಮಂತರಿಂದ ತೆಗೆದುಕೊಳ್ಳಲಾಗುತ್ತದೆ ಮತ್ತು ಅವರ ಪೈಕಿ ಬಡವರಿಗೆ ನೀಡಲಾಗುತ್ತದೆ. ಅವರು ಇದರಲ್ಲೂ ನಿಮ್ಮನ್ನು ಅನುಸರಿಸಿದರೆ, ಅವರ ಅತ್ಯುತ್ತಮ ಸಂಪತ್ತಿನ ಬಗ್ಗೆ ಎಚ್ಚರಿಕೆ ವಹಿಸಿರಿ. (ಅದನ್ನು ವಶಪಡಿಸಬೇಡಿ). ಅನ್ಯಾಯಕ್ಕೊಳಗಾದವನ ಪ್ರಾರ್ಥನೆಯನ್ನು ಭಯಪಡಿರಿ. ಏಕೆಂದರೆ ಅದರ ಮತ್ತು ಅಲ್ಲಾಹನ ನಡುವೆ ಯಾವುದೇ ಪರದೆ ಇರುವುದಿಲ್ಲ." [ತಿರ್ಮಿದಿ: 625]

**ಮೂರನೆಯದು:** ಉಪವಾಸ. ಹಿಂದಿನ ಎಲ್ಲಾ ಪ್ರವಾದಿಗಳು ಮತ್ತು ಸಂದೇಶ ವಾಹಕರಿಗೆ ಕಡ್ಡಾಯಗೊಳಿಸಿದಂತೆ ಅಲ್ಲಾಹನು ಮುಸ್ಲಿಮರಿಗೂ ಅದನ್ನು ಕಡ್ಡಾಯ ಗೊಳಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಸತ್ಯವಿಶ್ವಾಸಿಗಳೇ! ನಿಮಗಿಂತ ಮುಂಚಿನವರ ಮೇಲೆ ವಿಧಿಸಲಾದಂತೆ ನಿಮ್ಮ ಮೇಲೂ ಉಪವಾಸ ಆಚರಿಸುವುದನ್ನು ಕಡ್ಡಾಯವಾಗಿ ವಿಧಿಸಲಾಗಿದೆ. ನೀವು ಭಯಭಕ್ತಿ ಪಾಲಿಸುವ ಸಲುವಾಗಿ." [ಅಲ್-ಬಖರ:183].

ಅದು ರಮದಾನ್ ತಿಂಗಳಿನ ಹಗಲಿನಲ್ಲಿ ಉಪವಾಸವನ್ನು ಅಸಿಂಧುಗೊಳಿಸುವ ಕಾರ್ಯಗಳಿಂದ ತನ್ನನ್ನು ತಡೆದುಕೊಳ್ಳುವುದಾಗಿದೆ. ಅದು ಮನಸ್ಸಿನಲ್ಲಿ ಇಚ್ಛಾಶಕ್ತಿ ಮತ್ತು ಸಹನೆಯನ್ನು ಬೆಳೆಸುತ್ತದೆ.

ಪ್ರವಾದಿ صلى الله عليه وسلم ರವರು ಹೇಳಿದರು: "ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ಉಪವಾಸವು ನನಗಿರುವಂತದ್ದು. ನಾನೇ ಅದಕ್ಕೆ ಪ್ರತಿಫಲ ನೀಡುವೆನು. ಉಪವಾಸಿಗನು ತನ್ನ ಆಸೆಗಳನ್ನು ಮತ್ತು ಆಹಾರ-ಪಾನೀಯಗಳನ್ನು ನನಗಾಗಿ ತೊರೆಯುತ್ತಾನೆ. ಉಪವಾಸವು ಗುರಾಣಿಯಾಗಿದೆ. ಉಪವಾಸಿಗನಿಗೆ ಎರಡು ಸಂತೋಷಗಳಿವೆ: ಒಂದು ಪಾರಣೆಯ ವೇಳೆ ಸಿಗುವ ಸಂತೋಷ ಮತ್ತು ಇನ್ನೊಂದು ಅವನು ಅಲ್ಲಾಹನನ್ನು ಭೇಟಿಯಾಗುವಾಗ ಸಿಗುವ ಸಂತೋಷ." [ಸಹೀಹುಲ್ ಬುಖಾರಿ 7492.]

**ನಾಲ್ಕನೆಯದು:** ಹಜ್ಜ್. ಹಿಂದಿನ ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಿಗೆ عليهم الصلاة والسلام ಕಡ್ಡಾಯಗೊಳಿಸಿದಂತೆ ಅಲ್ಲಾಹನು ಮುಸ್ಲಿಮರಿಗೂ ಅದನ್ನು

ಕಡ್ಡಾಯಗೊಳಿಸಿದ್ದಾನೆ. ತನ್ನ ಪ್ರವಾದಿ ಇಬ್ರಾಹೀಮ್ ಖಲೀಲ್ عليه السلام ರಿಗೆ ಹಜ್ಜಿಗಾಗಿ ಕರೆ ನೀಡಬೇಕೆಂದು ಆಜ್ಞಾಪಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ನಾವು ಅವರೊಂದಿಗೆ ಹೇಳಿದೆವು): 'ಹಜ್ಜಿನ ಬಗ್ಗೆ ತಾವು ಜನರಿಗೆ ಘೋಷಣೆ ಮಾಡಿರಿ. ಅವರು ಪಾದಚಾರಿಗಳಾಗಿಯೂ, ವಿದೂರವಾದ ಎಲ್ಲ ಪರ್ವತ ಕಣಿವೆಗಳ ಮೂಲಕವೂ, ಎಲ್ಲ ವಿಧದ ಸಣಕಲು ಒಂಟೆಗಳ ಮೇಲೇರಿಯೂ ತಮ್ಮ ಬಳಿಗೆ ಬರುವರು."** [ಅಲ್-ಹಜ್ಜ್:27]

ಹಜ್ಜ್ ಮಾಡುವವರಿಗಾಗಿ ಪ್ರಾಚೀನ ಭವನವನ್ನು ಸ್ವಚ್ಛಗೊಳಿಸಿಬೇಕೆಂದು ಅಲ್ಲಾಹನು ಇಬ್ರಾಹೀಮರಿಗೆ ಆಜ್ಞಾಪಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಇಬ್ರಾಹೀಮರಿಗೆ ಆ ಭವನದ (ಕಅಬಾಲಯದ) ಸ್ಥಾನವನ್ನು ನಾವು ಅನುಕೂಲ ಮಾಡಿಕೊಟ್ಟ ಸಂದರ್ಭ. ನನ್ನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡದಿರಿ ಮತ್ತು ತವಾಫ್(ಪ್ರದಕ್ಷಿಣೆ) ಮಾಡುವವರಿಗೆ, ನಿಂತು, ಬಾಗಿ ಮತ್ತು ಸಾಷ್ಟಾಂಗವೆರಗಿ ಪ್ರಾರ್ಥಿಸುವವರಿಗೆ ನನ್ನ ಭವನವನ್ನು ಶುದ್ಧೀಕರಿಸಿರಿ ಎಂದು (ನಾವು ಅವರಿಗೆ ಆಜ್ಞಾಪಿಸಿದೆವು)."** [ಅಲ್-ಹಜ್ಜ್:26]

ಹಜ್ಜ್ ಎಂದರೆ ಸಾಮರ್ಥ್ಯವಿದ್ದವನ ಮೇಲೆ ಜೀವಮಾನದಲ್ಲಿ ಒಂದು ಬಾರಿ ಮಕ್ಕಾ ಮುಕರ್‍ರಮದಲ್ಲಿರುವ ಅಲ್ಲಾಹನ ಭವನಕ್ಕೆ ತೆರಳಿ ಅಲ್ಲಿ ಕೆಲವು ನಿಗದಿಪಡಿಸಲಾದ ಕಾರ್ಯಗಳನ್ನು ನಿರ್ವಹಿಸುವುದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆ ಭವನವನ್ನು ತಲುಪಲು ಸಾಧ್ಯವಿರುವ ಜನರು ಅದರೆಡೆಗೆ ಹಜ್ಜ್ ಯಾತ್ರೆ ಮಾಡುವುದು ಅವರಿಗೆ ಅಲ್ಲಾಹನೊಂದಿಗಿರುವ ಬಾಧ್ಯತೆಯಾಗಿದೆ. ಯಾರಾದರೂ ಅವಿಶ್ವಾಸವಿಡುವುದಾದರೆ ಖಂಡಿತವಾಗಿಯೂ ಅಲ್ಲಾಹು ಸರ್ವಲೋಕದವರಿಂದ ನಿರಪೇಕ್ಷನಾಗಿರುವನು."** [ಆಲು ಇಮ್ರಾನ್:97].

ಹಜ್ಜ್‌ನಲ್ಲಿ ಮುಸ್ಲಿಮ್ ಯಾತ್ರಿಕರು ಆರಾಧನೆಯನ್ನು ಸೃಷ್ಟಿಕರ್ತನಾದ ಅಲ್ಲಾಹನಿಗೆ ಮಾತ್ರ ಸಮರ್ಪಿಸುತ್ತಾ ಒಂದು ಸ್ಥಳದಲ್ಲಿ ಸೇರುತ್ತಾರೆ. ಹಜ್ಜ್ ಮಾಡುವವರೆಲ್ಲರೂ ಹಜ್ಜಿನ ಆರಾಧನಾ ಕ್ರಮಗಳನ್ನು ಒಂದೇ ರೀತಿಯಲ್ಲಿ ನಿರ್ವಹಿಸುತ್ತಾರೆ. ಇದರಿಂದ ಪರಿಸರ, ಸಂಸ್ಕೃತಿ ಮತ್ತು ಜೀವನಮಟ್ಟದ ಎಲ್ಲಾ ವ್ಯತ್ಯಾಸಗಳು ನಿವಾರಣೆಯಾಗುತ್ತವೆ.

## 24. ಇಸ್ಲಾಮಿನ ಆರಾಧನಾ ಕ್ರಮಗಳ ಒಂದು ದೊಡ್ಡ ವಿಶೇಷತೆಯೇನೆಂದರೆ ಅವುಗಳ ವಿಧಾನ, ಸಮಯ ಮತ್ತು ಷರತ್ತುಗಳನ್ನು ಸರ್ವಶಕ್ತನಾದ ಅಲ್ಲಾಹನೇ ನಿಯಮಿಸಿದ್ದಾನೆ ಮತ್ತು ಅವುಗಳನ್ನು ಪ್ರವಾದಿ صلى الله عليه وسلم ರವರು ತಲುಪಿಸಿಕೊಟ್ಟಿದ್ದಾರೆ. ಇಂದಿನವರೆಗೂ ಮಾನವರು ಅದರಲ್ಲಿ ಯಾವುದೇ ಸೇರ್ಪಡೆ ಅಥವಾ ಕಡಿತ ಮಾಡುವ ಮೂಲಕ ಹಸ್ತಕ್ಷೇಪ ಮಾಡಿಲ್ಲ. ಎಲ್ಲಾ ಪ್ರವಾದಿಗಳು عليهم السلام ಈ ಮಹಾ ಆರಾಧನೆಗಳ ಕಡೆಗೆ ಆಹ್ವಾನಿಸಿದ್ದಾರೆ.

ಇಸ್ಲಾಮಿನ ಆರಾಧನಾ ಕ್ರಮಗಳ ಒಂದು ದೊಡ್ಡ ವಿಶೇಷತೆಯೇನೆಂದರೆ ಅವುಗಳ ವಿಧಾನ, ಸಮಯ ಮತ್ತು ಷರತ್ತುಗಳನ್ನು ಸರ್ವಶಕ್ತನಾದ ಅಲ್ಲಾಹನೇ ನಿಯಮಿಸಿದ್ದಾನೆ ಮತ್ತು ಅವುಗಳನ್ನು ಪ್ರವಾದಿ صلى الله عليه وسلم ರವರು ತಲುಪಿಸಿಕೊಟ್ಟಿದ್ದಾರೆ. ಇಂದಿನವರೆಗೂ ಮಾನವರು ಅದರಲ್ಲಿ ಯಾವುದೇ ಸೇರ್ಪಡೆ ಅಥವಾ ಕಡಿತ ಮಾಡುವ ಮೂಲಕ ಹಸ್ತಕ್ಷೇಪ ಮಾಡಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ತೀಕರಿಸಿ ಕೊಟ್ಟಿರುವೆನು. ನನ್ನ ಅನುಗ್ರಹವನ್ನು ನಾನು ನಿಮಗೆ ನೆರವೇರಿಸಿಕೊಟ್ಟಿರುವೆನು. ಇಸ್ಲಾಮನ್ನು ಧರ್ಮವಾಗಿ ನಾನು ನಿಮಗೆ ತೃಪ್ತಿಪಟ್ಟಿರುವೆನು." [ಅಲ್-ಮಾಇದ:3].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆದ್ದರಿಂದ ತಮಗೆ ದಿವ್ಯಸಂದೇಶವಾಗಿ ನೀಡಲಾಗಿರುವುದನ್ನು ತಾವು ಬಿಗಿಯಾಗಿ ಹಿಡಿಯಿರಿ. ಖಂಡಿತವಾಗಿಯೂ ತಾವು ನೇರ ಹಾದಿಯಲ್ಲಿರುವಿರಿ."** [ಅಝ್ಝುಖ್ರುಫ್:43]

ಸರ್ವಶಕ್ತನಾದ ಅಲ್ಲಾಹನು ನಮಾಝಿನ ಬಗ್ಗೆ ಹೇಳುತ್ತಾನೆ: **"ನೀವು ನಮಾಝ್ ನಿರ್ವಹಿಸಿದ ಬಳಿಕ ನಿಂತು ಕೊಂಡು, ಕುಳಿತುಕೊಂಡು ಮತ್ತು ಮಲಗಿಕೊಂಡು ಅಲ್ಲಾಹುವನ್ನು ಸ್ಮರಿಸಿರಿ. ಶಾಂತಿ ನೆಮ್ಮದಿಯ ಸಂದರ್ಭದಲ್ಲಿ ನೀವು ನಮಾಝನ್ನು ಕ್ರಮಪ್ರಕಾರ ಸಂಸ್ಥಾಪಿಸಿರಿ. ಖಂಡಿತವಾಗಿಯೂ ನಮಾಝ್ ಸತ್ಯವಿಶ್ವಾಸಿಗಳ ಮೇಲೆ ಸಮಯ ನಿಶ್ಚಯಿಸಲಾದ ಒಂದು ಕಡ್ಡಾಯ ಕರ್ಮವಾಗಿದೆ."** [ಅನ್ನಿಸಾ:103].

ಝಕಾತ್ ನೀಡುವುದರ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಝಕಾತ್ (ನೀಡಬೇಕಾದುದು) ಬಡವರಿಗೆ, ನಿರ್ಗತಿಕರಿಗೆ, ಅದಕ್ಕಾಗಿ ಕಾರ್ಯನಿರ್ವಹಿಸುವವರಿಗೆ (ಇಸ್ಲಾಮ್ ಧರ್ಮದೊಂದಿಗೆ) ಹೃದಯಗಳು ಬೆಸೆಯಲ್ಪಟ್ಟವರಿಗೆ, ಗುಲಾಮ ವಿಮೋಚನೆಗೆ, ಸಾಲದಿಂದಾಗಿ ಕಷ್ಟಪಡುವವರಿಗೆ, ಅಲ್ಲಾಹನ ಮಾರ್ಗದಲ್ಲಿ ಮತ್ತು ದಾರಿಹೋಕರಿಗೆ ಮಾತ್ರವಾಗಿದೆ. ಇದು ಅಲ್ಲಾಹನ ವತಿಯ ನಿರ್ಣಯವಾಗಿದೆ. ಅಲ್ಲಾಹು ಎಲ್ಲವನ್ನು ಅರಿಯುವವನೂ ಯುಕ್ತಿಪೂರ್ಣನೂ ಆಗಿರುವನು."** [ಅತ್ತೌಬಾ:60]

ಉಪವಾಸದ ಕುರಿತು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಜನರಿಗೆ ಮಾರ್ಗದರ್ಶಿಯಾಗಿಯೂ, ಸನ್ಮಾರ್ಗವನ್ನು ತೋರಿಸಿಕೊಡುವ ಮತ್ತು ಸತ್ಯಾಸತ್ಯತೆಗಳನ್ನು ಬೇರ್ಪಡಿಸುವ ಸುಸ್ಪಷ್ಟ ಆಧಾರಪ್ರಮಾಣವಾಗಿಯೂ, ಕುರ್‌ಆನ್ ಅವತೀರ್ಣಗೊಂಡ ತಿಂಗಳಾಗಿದೆ ರಮದಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಆ ತಿಂಗಳಲ್ಲಿ ಉಪಸ್ಥಿತರಿದ್ದರೆ ಅವನು ಅದರಲ್ಲಿ ಉಪವಾಸವನ್ನು ಆಚರಿಸಲಿ. ಯಾರಾದರೂ ರೋಗಿಯಾಗಿದ್ದರೆ ಅಥವಾ ಪ್ರಯಾಣದಲ್ಲಿದ್ದರೆ, ಅವನು ಇತರ ದಿನಗಳಲ್ಲಿ ಆ ಸಂಖ್ಯೆಯಷ್ಟು (ಉಪವಾಸವನ್ನು ಆಚರಿಸಲಿ). ಅಲ್ಲಾಹು ನಿಮಗೆ ನಿರಾಳತೆಯನ್ನು ಬಯಸುತ್ತಿರುವನು. ನಿಮಗೆ ಪ್ರಯಾಸವನ್ನುಂಟು ಮಾಡಲು ಅವನು ಬಯಸುವುದಿಲ್ಲ. ನೀವು ಆ ಸಂಖ್ಯೆಯನ್ನು ಪೂರ್ತಿಗೊಳಿಸುವ ಸಲುವಾಗಿಯೂ, ಅಲ್ಲಾಹು**

**ನಿಮಗೆ ಸನ್ಮಾರ್ಗವನ್ನು ತೋರಿಸಿಕೊಟ್ಟ ಕಾರಣ ನೀವು ಅವನ ಮಹತ್ವವನ್ನು ಕೊಂಡಾಡುವ ಸಲುವಾಗಿಯೂ ಮತ್ತು ನೀವು ಅವನಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿಯೂ (ಈ ರೀತಿ ಆಜ್ಞಾಪಿಸಲಾಗಿದೆ).”** [ಅಲ್-ಬಖರ:185].

ಹಜ್ಜ್‌ನ ಕುರಿತು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಹಜ್ಜ್‌ನ ಕಾಲವು ಅರಿಯಲ್ಪಟ್ಟ ತಿಂಗಳುಗಳಾಗಿವೆ. ಯಾರಾದರೂ ಆ ತಿಂಗಳುಗಳಲ್ಲಿ ಹಜ್ಜ್ ಕರ್ಮದಲ್ಲಿ ಪ್ರವೇಶಿಸಿದರೆ ತರುವಾಯ ಹಜ್ಜ್‌ನ ವೇಳೆಯಲ್ಲಿ ಲೈಂಗಿಕ ಸಂಪರ್ಕವಾಗಲಿ, ದುರಾಚಾರವಾಗಲಿ, ಕಲಹವಾಗಲಿ ಮಾಡದಿರಿ. ನೀವು ಏನೇ ಸತ್ಕರ್ಮ ನಿರ್ವಹಿಸಿದರೂ ಅದನ್ನು ಅಲ್ಲಾಹು ಅರಿಯುವನು. ನೀವು (ಹಜ್ಜ್ ಗೆ ಹೊರಡುವಾಗ) ಯಾತ್ರಾ ಸಾಮಗ್ರಿಗಳನ್ನು ಸಜ್ಜುಗೊಳಿಸಿರಿ. ಆದರೆ ಯಾತ್ರಾ ಸಾಮಗ್ರಿಗಳಲ್ಲಿ ಅತ್ಯುತ್ತಮವಾದುದು ಭಯಭಕ್ತಿಯಾಗಿದೆ. ಓ ಬುದ್ಧಿವಂತರೇ! ನನ್ನನ್ನು ಭಯಪಟ್ಟು ಜೀವಿಸಿರಿ.”** [ಅಲ್-ಬಖರ:197].

ಪ್ರವಾದಿಗಳೆಲ್ಲರೂ عليهم السلام ಈ ಎಲ್ಲಾ ಮಹಾ ಆರಾಧನೆಗಳೆಡೆಗೆ ಆಹ್ವಾನಿಸಿದ್ದಾರೆ.

25. ಅಬ್ದುಲ್ಲಾರ ಮಗ ಮುಹಮ್ಮದ್ ಇಸ್ಲಾಮಿನ ಸಂದೇಶವಾಹಕರು. ಇವರು ಇಸ್ಮಾಈಲ್ ಬಿನ್ ಇಬ್ರಾಹೀಮರ ಸಂತಾನದಲ್ಲಿ ಸೇರಿದವರು. ಇವರು ಕ್ರಿ.ಶ. 571 ರಲ್ಲಿ ಮಕ್ಕಾ ನಗರದಲ್ಲಿ ಜನಿಸಿದರು ಮತ್ತು ಅಲ್ಲೇ ಪ್ರವಾದಿಯಾಗಿ ನಿಯೋಗಿಸಲ್ಪಟ್ಟರು. ನಂತರ ಅವರು ಮದೀನಾಕ್ಕೆ ವಲಸೆ ಹೋದರು. ವಿಗ್ರಹಾರಾಧನೆಯಲ್ಲಿ ಅವರು ತಮ್ಮ ಜನತೆಯೊಡನೆ ಸಹಕರಿಸಲಿಲ್ಲ. ಆದರೆ ಅವರು ದೊಡ್ಡ ದೊಡ್ಡ ಕಾರ್ಯಗಳಲ್ಲಿ ತಮ್ಮ ಜನತೆಯೊಂದಿಗೆ ಸಹಕರಿಸುತ್ತಿದ್ದರು. ಅವರು ಪ್ರವಾದಿಯಾಗುವ ಮುಂಚಿನಿಂದಲೇ ಅತ್ಯುತ್ತಮ ಸ್ವಭಾವದವರಾಗಿದ್ದರು. ಅವರ ಜನತೆ ಅವರನ್ನು "ಅಲ್-ಅಮೀನ್" (ಪ್ರಾಮಾಣಿಕ) ಎಂದು ಕರೆಯುತ್ತಿದ್ದರು. ಅವರಿಗೆ 40 ವರ್ಷ ಪ್ರಾಯವಾದಾಗ, ಅಲ್ಲಾಹನು ಅವರನ್ನು ಪ್ರವಾದಿಯನ್ನಾಗಿ ನಿಯೋಗಿಸಿದನು ಮತ್ತು ದೊಡ್ಡ ದೊಡ್ಡ ದೃಷ್ಟಾಂತಗಳೊಂದಿಗೆ [ಪವಾಡಗಳು] ಅವರನ್ನು ಬೆಂಬಲಿಸಿದನು. ಅವುಗಳಲ್ಲಿ ಅತಿದೊಡ್ಡದು ಪವಿತ್ರ ಕುರ್‌ಆನ್. ಅದು ಪ್ರವಾದಿಗಳಿಗೆ ನೀಡಲ್ಪಟ್ಟ ದೃಷ್ಟಾಂತಗಳಲ್ಲೇ ಅತಿದೊಡ್ಡದಾಗಿದ್ದು, ಪ್ರವಾದಿಗಳಿಗೆ ನೀಡಲಾದ ದೃಷ್ಟಾಂತಗಳಲ್ಲಿ ಇಂದಿನ ತನಕ ಬಾಕಿಯುಳಿದ ದೃಷ್ಟಾಂತವಾಗಿದೆ. ಅಲ್ಲಾಹನು ಪ್ರವಾದಿಯವರಿಗೆ ಧರ್ಮವನ್ನು ಪೂರ್ತೀಕರಿಸಿ ಕೊಟ್ಟು, ಪ್ರವಾದಿ صلي الله عليه وسلم ರವರು ಸಂಪೂರ್ಣ ಜವಾಬ್ದಾರಿಯೊಂದಿಗೆ ಆ ಧರ್ಮವನ್ನು (ಜನರಿಗೆ) ತಲುಪಿಸಿದ ನಂತರ ತಮ್ಮ 63ನೇ ವಯಸ್ಸಿನಲ್ಲಿ ನಿಧನರಾದರು. ಅವರನ್ನು ಮದೀನಾ ನಗರದಲ್ಲಿ ದಫನ ಮಾಡಲಾಯಿತು. ಪ್ರವಾದಿ ಮುಹಮ್ಮದ್ صلي الله

**عليه وسلم ರವರು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ಕಟ್ಟಕಡೆಯವರಾಗಿದ್ದಾರೆ. ಅಲ್ಲಾಹನು ಅವರನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದನು. ಜನರನ್ನು ಬಹುದೇವರಾಧನೆ, ಸತ್ಯನಿಷೇಧ ಮತ್ತು ಅಜ್ಞಾನಗಳೆಂಬ ಕಾರ್ಗತ್ತಲೆಗಳಿಂದ ಏಕದೇವತ್ವ ಮತ್ತು ಸತ್ಯವಿಶ್ವಾಸವೆಂಬ ಬೆಳಕಿನ ಕಡೆಗೆ ಹೊರತರುವುದಕ್ಕಾಗಿ (ಅವರನ್ನು ಕಳುಹಿಸಲಾಗಿದೆ). ಅಲ್ಲಾಹನು ಅವರನ್ನು ಅವನ ಆಜ್ಞೆಯಿಂದ ಅವನೆಡೆಗೆ ಆಹ್ವಾನಿಸುವವರನ್ನಾಗಿ ಮಾಡಿ ಕಳುಹಿಸಿದ್ದಾನೆಂದು ಸಾಕ್ಷಿ ನೀಡಿದ್ದಾನೆ.**

ಅಬ್ದುಲ್ಲಾರ ಮಗ ಮುಹಮ್ಮದ್ ಇಸ್ಲಾಮಿನ ಸಂದೇಶವಾಹಕರು. ಇವರು ಇಸ್ಮಾಈಲ್ ಬಿನ್ ಇಬ್ರಾಹೀಮರ ಸಂತಾನದಲ್ಲಿ ಸೇರಿದವರು. ಇವರು ಕ್ರಿ.ಶ. 571 ರಲ್ಲಿ ಮಕ್ಕಾ ನಗರದಲ್ಲಿ ಜನಿಸಿದರು ಮತ್ತು ಅಲ್ಲೇ ಪ್ರವಾದಿಯಾಗಿ ನಿಯೋಗಿಸಲ್ಪಟ್ಟರು. ನಂತರ ಅವರು ಮದೀನಾಕ್ಕೆ ವಲಸೆ ಹೋದರು. ವಿಗ್ರಹಾರಾಧನೆಯಲ್ಲಿ ಅವರು ತಮ್ಮ ಜನತೆಯೊಡನೆ ಸಹಕರಿಸಲಿಲ್ಲ. ಆದರೂ ಅವರು ದೊಡ್ಡ ದೊಡ್ಡ ಕಾರ್ಯಗಳಲ್ಲಿ ತಮ್ಮ ಜನತೆಯೊಂದಿಗೆ ಸಹಕರಿಸುತ್ತಿದ್ದರು. ಅವರು ಪ್ರವಾದಿಯಾಗುವ ಮುಂಚಿನಿಂದಲೇ ಅತ್ಯುತ್ತಮ ಸ್ವಭಾವದವರಾಗಿದ್ದರು. ಅವರು ಸರ್ವಶ್ರೇಷ್ಠ ಸ್ವಭಾವದವರೆಂದು ಅಲ್ಲಾಹನು ಅವರನ್ನು ಬಣ್ಣಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ತಾವು ಸರ್ವಶ್ರೇಷ್ಠ ಸ್ವಭಾವದಲ್ಲಿರುವಿರಿ."** [ಅಲ್-ಖಲಮ್:4]

ಅವರಿಗೆ 40 ವರ್ಷ ಪ್ರಾಯವಾದಾಗ, ಅಲ್ಲಾಹನು ಅವರನ್ನು ಪ್ರವಾದಿಯನ್ನಾಗಿ ನಿಯೋಗಿಸಿದನು ಮತ್ತು ದೊಡ್ಡ ದೊಡ್ಡ ದೃಷ್ಟಾಂತಗಳೊಂದಿಗೆ [ಪವಾಡಗಳು] ಅವರನ್ನು ಬೆಂಬಲಿಸಿದನು. ಅವುಗಳಲ್ಲಿ ಅತಿದೊಡ್ಡದು ಪವಿತ್ರ ಕುರ್‌ಆನ್. ಪ್ರವಾದಿ صلى الله عليه وسلم ರವರು ಹೇಳಿದರು: **"ಎಲ್ಲಾ ಪ್ರವಾದಿಗಳಿಗೂ ಜನರು ವಿಶ್ವಾಸವಿರಿಸುವಂತಹ ಒಂದು**

**ದೃಷ್ಟಾಂತವನ್ನು ನೀಡಲಾಗಿತ್ತು. ನನಗೆ ಅಲ್ಲಾಹು ದಿವ್ಯವಾಣಿ(ವಹೀ)ಯ ಮೂಲಕ ಅವತೀರ್ಣಗೊಳಿಸಲಾದ ಪವಿತ್ರ ಕುರ್‌ಆನನ್ನು ನೀಡಲಾಗಿದೆ. ಆದ್ದರಿಂದ ಪುನರುತ್ಥಾನ ದಿನದಂದು ನಾನು ಎಲ್ಲರಿಗಿಂತ ಹೆಚ್ಚು ಅನುಯಾಯಿಗಳನ್ನು ಹೊಂದಿದವನಾಗಲು ಬಯಸುತ್ತೇನೆ."** [ಸಹೀಹುಲ್ ಬುಖಾರಿ.]

ಪವಿತ್ರ ಕುರ್‌ಆನ್ ಅಲ್ಲಾಹನ ಪ್ರವಾದಿ صلى الله عليه وسلم ರಿಗೆ ನೀಡಿದ ದಿವ್ಯ ಸಂದೇಶವಾಗಿದೆ. ಅದರ ಕುರಿತು ಅಲ್ಲಾಹನು ಹೇಳುತ್ತಾನೆ: **"ಇದು ಗ್ರಂಥ. ಇದರಲ್ಲಿ ಸಂದೇಹವೇ ಇಲ್ಲ. ಭಯಭಕ್ತಿ ಪಾಲಿಸುವವರಿಗೆ ಇದು ಸನ್ಮಾರ್ಗವನ್ನು ತೋರಿಸಿಕೊಡುತ್ತದೆ."** [ಅಲ್-ಬಖರ:2].

ಸರ್ವಶಕ್ತ ಅಲ್ಲಾಹನು ಅದರ ಕುರಿತು ಹೇಳುತ್ತಾನೆ: **"ಅವರು ಕುರ್‌ಆನ್‌ನ ಬಗ್ಗೆ ಚಿಂತಿಸುವುದಿಲ್ಲವೇ? ಅದು ಅಲ್ಲಾಹೇತರರ ಬಳಿಯಿಂದಾಗಿರುತ್ತಿದ್ದರೆ ಅವರು ಅದರಲ್ಲಿ ಅನೇಕ ವಿರೋಧಾಭಾಸಗಳನ್ನು ಕಾಣುತ್ತಿದ್ದರು."** [ಅನ್ನಿಸಾ:82].

ಕುರ್‌ಆನಿನಂತಿರುವ ಒಂದು ಗ್ರಂಥವನ್ನು ರಚಿಸಿ ತರಲು ಅಲ್ಲಾಹನು ಮನುಷ್ಯರು ಮತ್ತು ಜಿನ್ನ್‌ಗಳಿಗೆ ಸವಾಲು ಹಾಕಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ಈ ಕುರ್‌ಆನ್‌ಗೆ ಸಮಾನವಾಗಿರುವ ಒಂದನ್ನು ರಚಿಸಿ ತರಲು ಮನುಷ್ಯರು ಮತ್ತು ಜಿನ್ನ್‌ಗಳು ಒಟ್ಟುಗೂಡಿದರೂ ಸಹ ಖಂಡಿತವಾಗಿಯೂ ಇದಕ್ಕೆ ಸಮಾನವಾಗಿರುವುದನ್ನು ತರಲು ಅವರಿಂದಾಗದು. ಅವರಲ್ಲಿ ಕೆಲವರು ಇತರ ಕೆಲವರಿಗೆ ಬೆಂಬಲ ನೀಡಿದರೂ ಸರಿಯೇ."** [ಅಲ್-ಇಸ್ರಾ:88]

ಕುರ್‌ಆನಿನಂತಿರುವ 10 ಅಧ್ಯಾಯಗಳನ್ನಾದರೂ ರಚಿಸಿ ತರಲು ಅಲ್ಲಾಹು ಅವರಿಗೆ ಸವಾಲು ಹಾಕಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಥವಾ, ಇದನ್ನು ಅವರು (ಪ್ರವಾದಿಯವರು) ಸ್ವತಃ ರಚಿಸಿರುವರು ಎಂದು ಅವರು ಹೇಳುತ್ತಿರುವರೇ? ತಾವು ಹೇಳಿರಿ: ಹಾಗಾದರೆ ಇದರಂತೆ ರಚಿಸಲಾಗಿರುವ ಹತ್ತು ಅಧ್ಯಾಯಗಳನ್ನು ತನ್ನಿರಿ. ಅಲ್ಲಾಹನ ಹೊರತು ನಿಮಗೆ ಸಾಧ್ಯವಾಗುವವರನ್ನೆಲ್ಲ ಆಹ್ವಾನಿಸಿರಿ. ನೀವು ಸತ್ಯಸಂಧರಾಗಿದ್ದರೆ!"** [ಹೂದ್:13].

ಅಷ್ಟೇ ಅಲ್ಲ, ಕುರ್‌ಆನಿನಂತಿರುವ ಒಂದೇ ಒಂದು ಅಧ್ಯಾಯವನ್ನಾದರೂ ರಚಿಸಿ ತರಲು ಅಲ್ಲಾಹು ಅವರಿಗೆ ಸವಾಲು ಹಾಕಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಮ್ಮ ದಾಸನಿಗೆ ನಾವು ಅವತೀರ್ಣಗೊಳಿಸಿರುವುದರ (ಕುರ್‌ಆನ್‌ನ) ಬಗ್ಗೆ ನೀವು ಸಂದೇಹದಲ್ಲಿದ್ದರೆ ಅದರಂತಿರುವ ಒಂದು ಅಧ್ಯಾಯವನ್ನಾದರೂ ತನ್ನಿರಿ. ಅಲ್ಲಾಹನ ಹೊರತು ನಿಮಗಿರುವ ಸಹಾಯಕರನ್ನೂ ಆಹ್ವಾನಿಸಿರಿ. ನೀವು ಸತ್ಯಸಂಧರಾಗಿದ್ದರೆ (ಅದನ್ನು ಮಾಡಿ ತೋರಿಸಿರಿ)."** [ಅಲ್-ಬಖರ:23].

ಪ್ರವಾದಿಗಳಿಗೆ ನೀಡಲಾದ ದೃಷ್ಟಾಂತಗಳ ಪೈಕಿ ಇಂದಿನವರೆಗೆ ಉಳಿದಿರುವ ಏಕೈಕ ದೃಷ್ಟಾಂತ ಪವಿತ್ರ ಕುರ್‌ಆನ್ ಆಗಿದೆ. ಅಲ್ಲಾಹನು ಪ್ರವಾದಿಯವರಿಗೆ ಧರ್ಮವನ್ನು ಪೂರ್ತೀಕರಿಸಿ ಕೊಟ್ಟು, ಪ್ರವಾದಿ صلي الله عليه وسلم ರವರು ಸಂಪೂರ್ಣ ಜವಾಬ್ದಾರಿಯೊಂದಿಗೆ ಆ ಧರ್ಮವನ್ನು (ಜನರಿಗೆ) ತಲುಪಿಸಿದ ನಂತರ ತಮ್ಮ 63ನೇ ವಯಸ್ಸಿನಲ್ಲಿ ನಿಧನರಾದರು. ಅವರನ್ನು ಮದೀನಾ ನಗರದಲ್ಲಿ ದಫನ ಮಾಡಲಾಯಿತು.

ಪ್ರವಾದಿ ಮುಹಮ್ಮದ್ صلي الله عليه وسلم ರವರು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ಕಟ್ಟಕಡೆಯವರಾಗಿದ್ದಾರೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಮುಹಮ್ಮದ್ ನಿಮ್ಮ ಪುರುಷರ ಪೈಕಿ ಯಾರ ತಂದೆಯೂ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳ ಪೈಕಿ ಕಟ್ಟಕಡೆಯವರಾಗಿರುವರು. ಅಲ್ಲಾಹು ಎಲ್ಲ ವಿಷಯಗಳ ಬಗ್ಗೆ ಅರಿವುಳ್ಳವನಾಗಿರುವನು."** [ಅಲ್-ಅಹ್ಝಾಬ್:40]

ಅಬೂ ಹುರೈರಾ رضي الله عنه ರವರಿಂದ ವರದಿಯಾದ ಹದೀಸಿನಲ್ಲಿ ಪ್ರವಾದಿ صلي الله عليه وسلم ರವರು ಹೇಳುತ್ತಾರೆ: **"ನನ್ನ ಮತ್ತು ಹಿಂದಿನ ಪ್ರವಾದಿಗಳ ಉದಾಹರಣೆಯು ಸುಂದರವಾದ ಮತ್ತು ಅಲಂಕರಿಸಲ್ಪಟ್ಟ ಒಂದು ಭವನವನ್ನು ನಿರ್ಮಿಸಿದವನಂತಿದೆ. ಆದರೆ ಒಂದು ಇಟ್ಟಿಗೆಯ ಸ್ಥಳವನ್ನು ಬಿಟ್ಟು. ಜನರು ಆ ಭವನದ ಸುತ್ತ ತಿರುಗುತ್ತ (ಅದರ ಸೌಂದರ್ಯ ನೋಡಿ) ಆಶ್ಚರ್ಯಪಡುತ್ತಾ ಈ ಇಟ್ಟಿಗೆಯನ್ನು ಯಾಕೆ ಇಡಲಾಗಿಲ್ಲವೆಂದು ಕೇಳುತ್ತಿದ್ದರು."** ಪ್ರವಾದಿ صلي الله عليه وسلم ರವರು ಹೇಳುತ್ತಾರೆ: **"ಆ ಇಟ್ಟಿಗೆ ನಾನೇ. ನಾನು ಕೊನೆಯ ಪ್ರವಾದಿಯಾಗಿದ್ದೇನೆ."** [ಸಹೀಹುಲ್ ಬುಖಾರಿ]

ಇಂಜೀಲ್ ಗ್ರಂಥದಲ್ಲಿ ಮಸೀಹ್ ಈಸಾ عليه السلام ರು ಪ್ರವಾದಿ ಮುಹಮ್ಮದ್ صلي الله عليه وسلم ರ ಸುವಾರ್ತೆ ನೀಡುತ್ತಾ ಹೇಳಿದರು: "ಕಟ್ಟಡ ನಿರ್ಮಾಣಗಾರರು ತಿರಸ್ಕರಿಸಿದ ಕಲ್ಲು ಮೂಲೆಯ ಮೇಲ್ಭಾಗದಲ್ಲಿತ್ತು. ನೀವು ಗ್ರಂಥಗಳಲ್ಲಿ ಓದಿಲ್ಲವೇ: ಯೇಸು ಕರ್ತನ ಕಡೆಯಿಂದ ಅವರಿಗೆ ಹೇಳಿದರು: "ಇದು ನಮ್ಮ ದೃಷ್ಟಿಯಲ್ಲಿ ಬಹಳ ವಿಚಿತ್ರವಾಗಿದೆ."

ಇಂದು ಅಸ್ತಿತ್ವದಲ್ಲಿರುವ ತೋರಾ ಪುಸ್ತಕದಲ್ಲಿ ಅಲ್ಲಾಹು ಮೂಸಾ عليه السلام ರಿಗೆ ಹೇಳಿದ ಮಾತು ಉಲ್ಲೇಖಿಸಲಾಗಿದೆ: "ನಾನು ನಿನ್ನಂತಿರುವ ಒಬ್ಬ ಪ್ರವಾದಿಯನ್ನು ಅವರ ಸಹೋದರರ ನಡುವಿನಿಂದ ಅವರಿಗೆ ನಿಯೋಗಿಸುವೆನು. ನಾನು ನನ್ನ ವಚನಗಳನ್ನು ಅವನ ಬಾಯಲ್ಲಿ ಇಡುವೆನು. ಆಗ ನಾನು ಅವನಿಗೆ ಆಜ್ಞಾಪಿಸುವುದನ್ನೆಲ್ಲಾ ಅವನು ಅವರಿಗೆ ತಿಳಿಸುವನು."

ಅಲ್ಲಾಹನು ಪ್ರವಾದಿ ಮುಹಮ್ಮದ್ صلي الله عليه ರವರನ್ನು ಸನ್ಮಾರ್ಗದೊಂದಿಗೆ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದನು. ಅವರು ಸತ್ಯದಲ್ಲಿದ್ದಾರೆ ಮತ್ತು ಅವರನ್ನು ಅವನು ತನ್ನ ಆಜ್ಞೆಯಿಂದ ಅವನೆಡೆಗೆ ಆಹ್ವಾನಿಸುವವರನ್ನಾಗಿ ಮಾಡಿ ಕಳುಹಿಸಿದ್ದಾನೆಂದು ಸಾಕ್ಷಿ ನೀಡಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆದರೆ ಅಲ್ಲಾಹು ತಮಗೆ ಏನನ್ನು ಅವತೀರ್ಣಗೊಳಿಸಿರುವನೋ ಅದರ ಬಗ್ಗೆ ಸ್ವತಃ ಅವನೇ ಸಾಕ್ಷ್ಯ ವಹಿಸುವನು. ಅವನು ಅದನ್ನು**

ಅವತೀರ್ಣಗೊಳಿಸಿರುವುದು ಅವನ ಅರಿವಿನೊಂದಿಗೇ ಆಗಿದೆ. ಮಲಕ್‌ಗಳೂ (ಅದಕ್ಕೆ) ಸಾಕ್ಷ್ಯ ವಹಿಸುವರು. ಸಾಕ್ಷಿಯಾಗಿ ಅಲ್ಲಾಹು ಸಾಕು." [ಅನ್ನಿಸಾ:166].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಸನ್ಮಾರ್ಗದೊಂದಿಗೆ ಮತ್ತು ಸತ್ಯ ಧರ್ಮದೊಂದಿಗೆ ತನ್ನ ಸಂದೇಶವಾಹಕರನ್ನು ಕಳುಹಿಸಿದವನು ಅವನಾಗಿರುವನು. ಅದನ್ನು ಎಲ್ಲ ಧರ್ಮಗಳ ಮೇಲೆ ಪ್ರಕಟಗೊಳಿಸುವ ಸಲುವಾಗಿ. ಸಾಕ್ಷಿಯಾಗಿ ಅಲ್ಲಾಹು ಸಾಕು." [ಅಲ್-ಫತ್ಹ್:28]

ಜನರನ್ನು ಬಹುದೇವರಾಧನೆ, ಸತ್ಯನಿಷೇಧ ಮತ್ತು ಅಜ್ಞಾನಗಳೆಂಬ ಕಾರ್ಗತ್ತಲೆಗಳಿಂದ ಏಕದೇವತ್ವ ಮತ್ತು ಸತ್ಯವಿಶ್ವಾಸವೆಂಬ ಬೆಳಕಿನ ಕಡೆಗೆ ಹೊರತರುವುದಕ್ಕಾಗಿ ಅಲ್ಲಾಹು ಅವರನ್ನು ಕಳುಹಿಸಿದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ತನ್ನ ಸಂತೃಪ್ತಿಯನ್ನು ಅರಸುತ್ತಿರುವವರನ್ನು ಅಲ್ಲಾಹು ಅದರ ಮೂಲಕ ಶಾಂತಿಯ ಹಾದಿಗಳೆಡೆಗೆ ಮುನ್ನಡೆಸುವನು. ಅವನು ಅವರನ್ನು ತನ್ನ ಅಪ್ಪಣೆಯೊಂದಿಗೆ ಅಂಧಕಾರಗಳಿಂದ ಪ್ರಕಾಶದೆಡೆಗೆ ಹೊರತರುವನು ಮತ್ತು ಅವರನ್ನು ನೇರವಾದ ಮಾರ್ಗದೆಡೆಗೆ ಮುನ್ನಡೆಸುವನು." [ಅಲ್-ಮಾಇದ:16].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲಿಫ್ ಲಾಮ್ ರಾ. ಇದು ತಾವು ಮನುಷ್ಯರನ್ನು ಅವರ ಪ್ರಭುವಿನ ಅನುಮತಿಯ ಮೇರೆಗೆ ಅಂಧಕಾರಗಳಿಂದ ಪ್ರಕಾಶದೆಡೆಗೆ, ಪ್ರತಾಪಶಾಲಿಯೂ ಸ್ತುತ್ಯರ್ಹನೂ ಆಗಿರುವ (ಅಲ್ಲಾಹುವಿನ) ಮಾರ್ಗದೆಡೆಗೆ ಹೊರತರಲು ತಮಗೆ ನಾವು ಅವತೀರ್ಣಗೊಳಿಸಿರುವ ಗ್ರಂಥವಾಗಿದೆ." [ಇಬ್ರಾಹೀಂ:1]

## 26. ಪ್ರವಾದಿ ಮುಹಮ್ಮದ್ صلي الله عليه وسلم ರವರು ತಂದ ಇಸ್ಲಾಮಿನ ಷರೀಅತ್ ದೈವಿಕ ಸಂದೇಶಗಳ ಪೈಕಿ ಮತ್ತು ದೈವಿಕ ಷರೀಯತ್ ಗಳ ಪೈಕಿ ಕಟ್ಟಕಡೆಯದ್ದಾಗಿದೆ. ಅದು ಪರಿಪೂರ್ಣ ಷರೀಅತ್ ಆಗಿದೆ. ಜನರ ಧಾರ್ಮಿಕ ಮತ್ತು ಐಹಿಕ ಒಳಿತು ಅದರಲ್ಲಿ ಅಡಗಿದೆ. ಅದು ಜನರ ಧರ್ಮ, ಅವರ ರಕ್ತ, ಅವರ ಸಂಪತ್ತು, ಅವರ ಬುದ್ಧಿ ಮತ್ತು ಅವರ ಸಂತತಿಗಳನ್ನು ಮೊದಲನೇ ಸ್ಥಾನದಲ್ಲಿಟ್ಟು ಸಂರಕ್ಷಿಸುತ್ತದೆ. ಹಿಂದಿನ ಷರೀಅತ್‌ಗಳು ಒಂದು ಇನ್ನೊಂದನ್ನು ರದ್ದುಗೊಳಿಸಿದಂತೆ, ಅದು (ಇಸ್ಲಾಂ) ಹಿಂದಿನ ಎಲ್ಲಾ ಷರೀಅತ್‌ಗಳನ್ನು ರದ್ದುಗೊಳಿಸುತ್ತದೆ.

ಪ್ರವಾದಿ ಮುಹಮ್ಮದ್ صلي الله عليه وسلم ರವರು ತಂದ ಇಸ್ಲಾಮಿನ ಷರೀಅತ್ ದೈವಿಕ ಸಂದೇಶಗಳ ಪೈಕಿ ಮತ್ತು ದೈವಿಕ ಷರೀಯತ್ ಗಳ ಪೈಕಿ ಕಟ್ಟಕಡೆಯದ್ದಾಗಿದೆ. ಅಲ್ಲಾಹನು ಈ ಸಂದೇಶದೊಂದಿಗೆ ಧರ್ಮವನ್ನು ಪೂರ್ತೀಕರಿಸಿದನು ಮತ್ತು ಪ್ರವಾದಿ ಮುಹಮ್ಮದ್ صلي الله عليه وسلم ರವರಿಗೆ ಸಂದೇಶವಾಹಕನನ್ನಾಗಿ ಮಾಡಿ ಕಳುಹಿಸುವುದರೊಂದಿಗೆ ಜನರ ಮೇಲಿನ ಅನುಗ್ರಹವನ್ನು ನೆರವೇರಿಸಿ ಕೊಡಲಾಯಿತು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ತೀಕರಿಸಿ ಕೊಟ್ಟಿರುವೆನು. ನನ್ನ ಅನುಗ್ರಹವನ್ನು ನಾನು ನಿಮಗೆ ನೆರವೇರಿಸಿಕೊಟ್ಟಿರುವೆನು. ಇಸ್ಲಾಮನ್ನು ಧರ್ಮವಾಗಿ ನಾನು ನಿಮಗೆ ತೃಪ್ತಿಪಟ್ಟಿರುವೆನು." [ಅಲ್-ಮಾಇದ:3].

ಇಸ್ಲಾಮಿನ ಷರೀಅತ್ ಪರಿಪೂರ್ಣ ಷರೀಅತ್ ಆಗಿದೆ. ಜನರ ಧಾರ್ಮಿಕ ಮತ್ತು ಐಹಿಕ ಒಳಿತು ಅದರಲ್ಲಿ ಅಡಗಿದೆ. ಏಕೆಂದರೆ ಅದು ಹಿಂದಿನ ಎಲ್ಲಾ ಷರೀಅತ್‌ಗಳಲ್ಲಿರುವುದನ್ನು ಒಟ್ಟುಗೂಡಿಸಿದೆ ಮತ್ತು ಅದನ್ನು ಪೂರ್ಣಗೊಳಿಸಿ ನೆರವೇರಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಈ ಕುರ್‌ಆನ್ ಅತ್ಯಂತ ನೇರವಾಗಿರುವ ಮಾರ್ಗದೆಡೆಗೆ ಮುನ್ನಡೆಸುತ್ತದೆ ಮತ್ತು ಸತ್ಕರ್ಮವೆಸಗುವ ಸತ್ಯವಿಶ್ವಾಸಿಗಳಿಗೆ ಮಹಾ ಪ್ರತಿಫಲವಿದೆಯೆಂಬ ಶುಭವಾರ್ತೆಯನ್ನು ತಿಳಿಸುತ್ತದೆ."** [ಅಲ್-ಇಸ್ರಾ:9]

ಗತ ಸಮುದಾಯಗಳಲ್ಲಿದ್ದ ಭಾರಗಳನ್ನು ಇಸ್ಲಾಮಿನ ಷರೀಅತ್ ಜನರಿಂದ ಕೆಳಗಿಳಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಅಂದರೆ) ತಮ್ಮ ಬಳಿಯಿರುವ ತೌರಾತ್‌ನಲ್ಲಿ ಮತ್ತು ಇಂಜೀಲ್‌ನಲ್ಲಿ ದಾಖಲಿಸಲ್ಪಟ್ಟಿರುವುದಾಗಿ ಅವರು ಕಾಣುವ ನಿರಕ್ಷರಿ ಪ್ರವಾದಿಯಾದ ಸಂದೇಶವಾಹಕರನ್ನು (ಪ್ರವಾದಿ ಮುಹಮ್ಮದ್‌ರನ್ನು) ಅನುಸರಿಸುವವರಿಗೆ (ಆ ಕಾರುಣ್ಯವನ್ನು ನಾನು ವಿಧಿಸುವೆನು). ಆ ಪ್ರವಾದಿಯು ಅವರೊಂದಿಗೆ ಸದಾಚಾರವನ್ನು ಆದೇಶಿಸುವರು ಮತ್ತು ದುರಾಚಾರವನ್ನು ವಿರೋಧಿಸುವರು. ಅವರಿಗೆ ಉತ್ತಮ ವಸ್ತುಗಳನ್ನು ಧರ್ಮಸಮ್ಮತಗೊಳಿಸುವರು ಮತ್ತು ಕೆಟ್ಟ ವಸ್ತುಗಳನ್ನು ಅವರ ಮೇಲೆ ನಿಷಿದ್ಧಗೊಳಿಸುವರು. ಅವರ ಭಾರಗಳನ್ನು ಮತ್ತು ಅವರ ಮೇಲಿದ್ದ ಸಂಕೋಲೆಗಳನ್ನು ಕೆಳಗಿಳಿಸುವರು. ಆದ್ದರಿಂದ ಆ ಪ್ರವಾದಿಯಲ್ಲಿ ವಿಶ್ವಾಸವಿಡುವವರು, ಅವರನ್ನು ಬೆಂಬಲಿಸುವವರು, ಸಹಾಯ ಮಾಡುವವರು ಮತ್ತು ಅವರೊಂದಿಗೆ ಅವತೀರ್ಣಗೊಂಡಿರುವ ಪ್ರಕಾಶವನ್ನು ಅನುಸರಿಸುವವರು ಯಾರೋ ಅವರೇ ಯಶಸ್ವಿಯಾದವರಾಗಿರುವರು."** [ಅಲ್-ಅಅ್‌ರಾಫ್:157]

ಇಸ್ಲಾಮಿನ ಷರೀಅತ್ ಹಿಂದಿನ ಎಲ್ಲಾ ಷರೀಅತ್‌ಗಳನ್ನು ರದ್ದುಗೊಳಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ತಮಗೆ ನಾವು ಗ್ರಂಥವನ್ನು ಸತ್ಯದೊಂದಿಗೆ ಅವತೀರ್ಣಗೊಳಿಸಿರುವೆವು. ಅದು ತನ್ನ ಮುಂದಿರುವ ಗ್ರಂಥಗಳನ್ನು ದೃಢೀಕರಿಸುತ್ತದೆ ಮತ್ತು ಅವುಗಳನ್ನು ಸಂರಕ್ಷಿಸುತ್ತದೆ. ಆದ್ದರಿಂದ ಅಲ್ಲಾಹು ಅವತೀರ್ಣಗೊಳಿಸಿರುವುದಕ್ಕೆ ಅನುಗುಣವಾಗಿ ತಾವು ಅವರ ಮಧ್ಯೆ ತೀರ್ಪು ನೀಡಿರಿ. ತಮಗೆ ತಲುಪಿದ ಸತ್ಯವನ್ನು ತೊರೆದು ತಾವು ಅವರ ದೇಹೇಚ್ಛೆಗಳನ್ನು ಅನುಸರಿಸದಿರಿ. ನಿಮ್ಮಲ್ಲಿ**

**ಪ್ರತಿಯೊಂದು ಸಮುದಾಯಕ್ಕೂ ನಾವು ಒಂದೊಂದು ನಿಯಮಸಂಹಿತೆ ಮತ್ತು ಕರ್ಮಮಾರ್ಗವನ್ನು ಮಾಡಿಕೊಟ್ಟಿರುವೆವು. ಅಲ್ಲಾಹು ಇಚ್ಛಿಸಿದ್ದರೆ ಅವನು ನಿಮ್ಮನ್ನು ಒಂದೇ ಸಮುದಾಯವನ್ನಾಗಿ ಮಾಡುತ್ತಿದ್ದನು. ಆದರೆ ಅವನು ನಿಮಗೆ ದಯಪಾಲಿಸಿರುವುದರಲ್ಲಿ ನಿಮ್ಮನ್ನು ಪರೀಕ್ಷಿಸಲು (ಇಚ್ಛಿಸುವನು). ಆದ್ದರಿಂದ ನೀವು ಸತ್ಕರ್ಮಗಳೆಡೆಗೆ ಸ್ಪರ್ಧಿಸಿ ಧಾವಿಸಿರಿ. ನಿಮ್ಮೆಲ್ಲರ ಮರಳುವಿಕೆಯು ಅಲ್ಲಾಹನ ಬಳಿಗೇ ಆಗಿದೆ. ಆಗ ಅವನು ನಿಮಗೆ ನೀವು ಭಿನ್ನರಾಗಿರುವ ವಿಷಯಗಳ ಬಗ್ಗೆ ತಿಳಿಸಿಕೊಡುವನು."** [ಅಲ್-ಮಾಇದ:48].

ಷರೀಯತ್ತನ್ನು ಒಳಗೊಂಡಿರುವ ಪವಿತ್ರ ಕುರ್‌ಆನ್ ಹಿಂದಿನ ಎಲ್ಲಾ ದೈವಿಕ ಗ್ರಂಥಗಳನ್ನು ದೃಢೀಕರಿಸುತ್ತದೆ, ಅವುಗಳ ಬಗ್ಗೆ ತೀರ್ಪು ನೀಡುತ್ತದೆ ಮತ್ತು ಅವುಗಳನ್ನು ರದ್ದುಗೊಳಿಸುತ್ತದೆ.

## 27. ಸರ್ವಶಕ್ತನಾದ ಅಲ್ಲಾಹನು ಪ್ರವಾದಿ ಮುಹಮ್ಮದ್ صلي الله عليه وسلم ರವರು ತಂದ ಇಸ್ಲಾಮ್ ಧರ್ಮವನ್ನು ಹೊರತುಪಡಿಸಿ ಬೇರೆ ಯಾವ ಧರ್ಮವನ್ನೂ ಸ್ವೀಕರಿಸುವುದಿಲ್ಲ. ಯಾರಾದರೂ ಇಸ್ಲಾಮ್ ಧರ್ಮವನ್ನು ಹೊರತುಪಡಿಸಿ ಬೇರೆ ಯಾವುದಾದರೂ ಧರ್ಮವನ್ನು ಸ್ವೀಕರಿಸಿದರೆ ಅವನಿಂದ ಅದನ್ನು ಎಂದಿಗೂ ಸ್ವೀಕರಿಸಲಾಗುವುದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಪ್ರವಾದಿ ಮುಹಮ್ಮದ್ صلي الله عليه وسلم ರವರನ್ನು ಕಳುಹಿಸಿದ ನಂತರ ಅವರು ತಂದ ಇಸ್ಲಾಮ್ ಧರ್ಮವನ್ನು ಹೊರತುಪಡಿಸಿ ಬೇರೆ ಯಾವ ಧರ್ಮವನ್ನೂ ಸ್ವೀಕರಿಸುವುದಿಲ್ಲ. ಯಾರಾದರೂ ಇಸ್ಲಾಮ್ ಧರ್ಮವನ್ನು ಹೊರತುಪಡಿಸಿ ಬೇರೆ ಯಾವುದಾದರೂ ಧರ್ಮವನ್ನು ಸ್ವೀಕರಿಸಿದರೆ ಅವನಿಂದ ಅದನ್ನು ಎಂದಿಗೂ ಸ್ವೀಕರಿಸಲಾಗುವುದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: “ಯಾರಾದರೂ ಇಸ್ಲಾಮಿಗೆ (ಅಲ್ಲಾಹನಿಗಿರುವ ಶರಣಾಗತಿಗೆ) ಹೊರತಾಗಿರುವುದನ್ನು ಧರ್ಮವಾಗಿ ಅರಸುವುದಾದರೆ ಅದನ್ನು ಅವನಿಂದ ಎಂದಿಗೂ ಸ್ವೀಕರಿಸಲಾಗದು. ಪರಲೋಕದಲ್ಲಿ ಅವನು ನಷ್ಟ ಹೊಂದಿದದವರ ಪೈಕಿ ಸೇರಿದವನಾಗುವನು.” [ಆಲಿ ಇಮ್ರಾನ್:85].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: “ಖಂಡಿತವಾಗಿಯೂ ಅಲ್ಲಾಹನ ಬಳಿ ಧರ್ಮವೆಂದರೆ ಇಸ್ಲಾಮ್ ಮಾತ್ರವಾಗಿದೆ. ಗ್ರಂಥ ನೀಡಲಾದವರು ತಮಗೆ (ಧಾರ್ಮಿಕ) ಜ್ಞಾನವು ಬಂದ ಬಳಿಕವೇ ಭಿನ್ನರಾದರು. ಅದು ಅವರು ಪರಸ್ಪರ ಹೊಂದಿರುವ ವಿದ್ವೇಷದ ನಿಮಿತ್ತವಾಗಿದೆ. ಯಾರಾದರೂ ಅಲ್ಲಾಹನ ದೃಷ್ಟಾಂತಗಳನ್ನು ನಿಷೇಧಿಸುವುದಾದರೆ ಖಂಡಿತವಾಗಿಯೂ ಅಲ್ಲಾಹು ಅತೀ ಶೀಘ್ರವಾಗಿ ವಿಚಾರಣೆ ಮಾಡುವವನಾಗಿರುವನು.” [ಆಲಿ ಇಮ್ರಾನ್:19].

ಈ ಇಸ್ಲಾಮ್ ಧರ್ಮವೇ ಇಬ್ರಾಹೀಮ್ ಖಲೀಲರ عليه السلام ಮಾರ್ಗವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಸ್ವತಃ ತನ್ನನ್ನೇ ಮೂರ್ಖನನ್ನಾಗಿ ಮಾಡಿಕೊಂಡವನ ಹೊರತು ಇಬ್ರಾಹೀಮ್‌ರ ಮಾರ್ಗದಿಂದ ವಿಮುಖನಾಗುವವನು ಯಾರಿರುವನು? ನಾವು ಅವರನ್ನು (ಇಬ್ರಾಹೀಮ್‌ರನ್ನು) ಇಹಲೋಕದಲ್ಲಿ ವಿಶೇಷವಾಗಿ ಆರಿಸಿರುವೆವು. ಪರಲೋಕದಲ್ಲಿ ಅವರು ಸಜ್ಜನರಲ್ಲೇ ಸೇರಿದವರಾಗಿರುವರು." [ಅಲ್-ಬಖರ:130].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಸಾತ್ವಿಕನಾಗಿರುತ್ತಾ ಯಾರು ತನ್ನ ಮುಖವನ್ನು ಅಲ್ಲಾಹನಿಗೆ ಶರಣಾಗಿಸುವನೋ ಮತ್ತು ಸತ್ಯಮಾರ್ಗದಲ್ಲಿ ದೃಢವಾಗಿ ನೆಲೆನಿಂತು ಇಬ್ರಾಹೀಮ್‌ರ ಮಾರ್ಗವನ್ನು ಅನುಸರಿಸುವನೋ ಅವನಿಗಿಂತಲೂ ಉತ್ತಮ ಧರ್ಮನಿಷ್ಠೆಯುಳ್ಳವನು ಇನ್ನಾರಿರುವನು? ಅಲ್ಲಾಹು ಇಬ್ರಾಹೀಮ್‌ರನ್ನು ಆಪ್ತಮಿತ್ರರನ್ನಾಗಿ ಮಾಡಿಕೊಂಡಿರುವನು." [ಅನ್ನಿಸಾ:125].

ಅಲ್ಲಾಹನು ತನ್ನ ಸಂದೇಶವಾಹಕ ಮುಹಮ್ಮದ್ صلي الله عليه وسلم ರಿಗೆ ಹೀಗೆ ಹೇಳಬೇಕೆಂದು ಆಜ್ಞಾಪಿಸಿದ್ದಾನೆ: **"ಹೇಳಿರಿ: ಖಂಡಿತವಾಗಿಯೂ ನನ್ನ ಪ್ರಭು ನನ್ನನ್ನು ನೇರವಾದ ಮಾರ್ಗದೆಡೆಗೆ ಮುನ್ನಡೆಸಿರುವನು. ವಕ್ರತೆಯಿಲ್ಲದ ಧರ್ಮದೆಡೆಗೆ, ಋಜು ಮಾರ್ಗದಲ್ಲಿ ನೆಲೆನಿಂತ ಇಬ್ರಾಹೀಮ್‌ರ ಮಾರ್ಗದೆಡೆಗೆ. ಅವರು ಬಹುದೇವ ವಿಶ್ವಾಸಿಗಳಲ್ಲಿ ಸೇರಿದವರಾಗಿರಲಿಲ್ಲ."** [ಅಲ್-ಅನ್‌ಆಮ್:161].

28. ಪವಿತ್ರ ಕುರ್‌ಆನ್ ಅಲ್ಲಾಹನು ಪ್ರವಾದಿ ಮುಹಮ್ಮದ್ صلي الله عليه وسلم ರಿಗೆ ಅವತೀರ್ಣಗೊಳಿಸಿದ ಗ್ರಂಥವಾಗಿದೆ. ಅದು ಸರ್ವ ಲೋಕಗಳ ಪರಿಪಾಲಕ ಪ್ರಭುವಿನ ವಚನವಾಗಿದೆ. ಅದರಂತಿರುವ ಒಂದು ಗ್ರಂಥವನ್ನು, ಅಥವಾ ಅದರಂತಿರುವ ಒಂದು ಅಧ್ಯಾಯವನ್ನು ರಚಿಸಿ ತರಲು ಅಲ್ಲಾಹನು ಮನುಷ್ಯರು ಮತ್ತು ಜಿನ್ನ್‌ಗಳಿಗೆ ಸವಾಲು ಹಾಕಿದ್ದಾನೆ. ಈ ಸವಾಲು ಇಂದು ಕೂಡ ಅಸ್ತಿತ್ವದಲ್ಲಿದೆ. ಮಿಲಿಯನ್‌ಗಟ್ಟಲೆ ಜನರನ್ನು ದಿಗ್ಭ್ರಮೆಗೊಳಿಸುವ ಪ್ರಮುಖ ಪ್ರಶ್ನೆಗಳಿಗೆ ಪವಿತ್ರ ಕುರ್‌ಆನ್ ಉತ್ತರಿಸುತ್ತದೆ. ಪವಿತ್ರ ಕುರ್‌ಆನನ್ನು ಅದು ಅವತೀರ್ಣಗೊಂಡ ಅರಬೀ ಭಾಷೆಯಲ್ಲಿ ಇಂದಿನವರೆಗೂ ಸಂರಕ್ಷಿಸಲಾಗಿದೆ. ಅದರಿಂದ ಒಂದು ಅಕ್ಷರವೂ ಕಳೆದುಹೋಗಿಲ್ಲ. ಅದನ್ನು ಮುದ್ರಿಸಲಾಗುತ್ತದೆ ಹಾಗೂ ಪ್ರಕಟಿಸಲಾಗುತ್ತದೆ. ಅದೊಂದು ಅದ್ಭುತ ಪವಾಡವಾಗಿದ್ದು, ಓದಲಿಕ್ಕೆ ಅಥವಾ ಅದರ ಅರ್ಥಾನುವಾದವನ್ನು ಓದಲಿಕ್ಕೆ ಯೋಗ್ಯವಾದ ಗ್ರಂಥವಾಗಿದೆ. ಇದೇ ರೀತಿ ಪ್ರವಾದಿ ಮುಹಮ್ಮದ್ صلي الله عليه وسلم ರವರ ವಚನ ಮತ್ತು ಅವರ ಬೋಧನೆ ಹಾಗೂ ಚರಿತ್ರೆ ವಿಶ್ವಾಸಾರ್ಹ ವರದಿಗಾರರ ಸರಪಳಿಯ ಪ್ರಕಾರ ಸಂರಕ್ಷಿಸಲಾಗಿದೆ ಮತ್ತು ವರ್ಗಾಯಿಸಲಾಗಿದೆ. ಅದು ಪ್ರವಾದಿ ಮುಹಮ್ಮದ್ صلي الله عليه وسلم ರವರು ಮಾತನಾಡಿದ ಅರಬೀ ಭಾಷೆಯಲ್ಲೇ ಮುದ್ರಿಸಲಾಗಿವೆ. ಅದನ್ನು ಹಲವಾರು ಭಾಷೆಗಳಲ್ಲಿ ಅನುವಾದಿಸಲಾಗಿದೆ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿರವರ ವಚನಗಳು ಇಸ್ಲಾಮಿನ ನಿಯಮಗಳ ಮತ್ತು ಅದರ ಧರ್ಮಶಾಸ್ತ್ರದ ಏಕೈಕ ಮೂಲವಾಗಿದೆ. ಇಸ್ಲಾಮ್ ಧರ್ಮವು

**ಅದರೊಂದಿಗೆ ಸಂಬಂಧವಿರುವ ಜನರ ನಡವಳಿಕೆಯಿಂದ ಸ್ವೀಕರಿಸುವಂತದ್ದಲ್ಲ. ಬದಲಿಗೆ ಅದು ಅಲ್ಲಾಹನ ದಿವ್ಯಸಂದೇಶದಿಂದ – ಪವಿತ್ರ ಕುರ್‌ಆನ್ ಮತ್ತು ಪ್ರವಾದಿರವರ ಸುನ್ನತ್ತಿನಿಂದ – ಸ್ವೀಕರಿಸುವಂತದ್ದಾಗಿದೆ.**

ಪವಿತ್ರ ಕುರ್‌ಆನ್ ಅಲ್ಲಾಹನು ಅರಬ್ ಪ್ರವಾದಿ ಮುಹಮ್ಮದ್ صلى الله عليه وسلم ರಿಗೆ ಅರೇಬಿಕ್ ಭಾಷೆಯಲ್ಲಿ ಅವತೀರ್ಣಗೊಳಿಸಿದ ಗ್ರಂಥವಾಗಿದೆ. ಅದು ಸರ್ವ ಲೋಕಗಳ ಪರಿಪಾಲಕ ಪ್ರಭುವಿನ ವಚನವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಇದು (ಕುರ್‌ಆನ್) ಸರ್ವಲೋಕಗಳ ಪ್ರಭು ಅವತೀರ್ಣಗೊಳಿಸಿದ್ದಾಗಿದೆ.(192) ವಿಶ್ವಾಸಾರ್ಹ ಆತ್ಮನು (ಜಿಬ್ರೀಲ್) ಅದರೊಂದಿಗೆ ಇಳಿದನು.(193) ತಮ್ಮ ಹೃದಯದಲ್ಲಿ (ಇಳಿದಿರುವರು) ತಾವು ಮುನ್ನೆಚ್ಚರಿಕೆ ನೀಡುವವರಲ್ಲಿ ಸೇರಿದವರಾಗುವ ಸಲುವಾಗಿ.(194) ಸ್ಪಷ್ಟವಾದ ಅರಬಿ ಭಾಷೆಯಲ್ಲಿ (ಅದು ಅವತೀರ್ಣಗೊಂಡಿದೆ).(195)"** [ಅಶ್ಶುಅರಾ:192 - 195].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ತಮಗೆ ಕುರ್‌ಆನನ್ನು ನೀಡಲಾಗುತ್ತಿರುವುದು ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುವವನ ಬಳಿಯಿಂದಾಗಿದೆ."** [ಅನ್ನಮ್ಲ್:6]

ಮತ್ತು ಕುರ್‌ಆನ್ ಗ್ರಂಥವು ಅಲ್ಲಾಹನಿಂದ ಅವತೀರ್ಣಗೊಂಡ ಗ್ರಂಥವಾಗಿದ್ದು ಅದು ಪೂರ್ವ ದೈವಿಕ ಗ್ರಂಥಗಳನ್ನು ದೃಡೀಕರಿಸುತ್ತವೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಈ ಕುರ್‌ಆನ್ ಅಲ್ಲಾಹನಿಗೆ ವಿನಾ (ಇನ್ನಾರಿಗೂ) ಹೆಣೆದು ರಚಿಸಲಾಗುವಂತದ್ದಲ್ಲ. ಆದರೆ ಇದು ಇದಕ್ಕಿಂತ ಮುಂಚಿನ ಗ್ರಂಥಗಳ**

ದೃಢೀಕರಣವೂ, ಗ್ರಂಥದ (ನಿಯಮಗಳ) ವಿಶದೀಕರಣವೂ ಆಗಿದೆ. ಇದರಲ್ಲಿ ಯಾವುದೇ ಸಂದೇಹವಿಲ್ಲ. ಇದು ಸರ್ವಲೋಕಗಳ ಪ್ರಭುವಿನ ವತಿಯಿಂದಾಗಿದೆ." [ಯೂನುಸ್:37].

ಯಹೂದಿಗಳು ಮತ್ತು ಕ್ರಿಶ್ಚಿಯನ್ನರು ತಮ್ಮ ಧರ್ಮದಲ್ಲಿ ಭಿನ್ನಾಭಿಪ್ರಾಯ ಹೊಂದಿರುವ ಹೆಚ್ಚಿನ ವಿಷಯಗಳ ಬಗ್ಗೆ ಈ ಅದ್ಭುತ ಕುರ್‌ಆನ್ ತೀರ್ಪು ನೀಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಇಸ್ರಾಈಲ್ ಸಂತತಿಗಳು ಭಿನ್ನಾಭಿಪ್ರಾಯ ಹೊಂದುತ್ತಿರುವ ಹೆಚ್ಚಿನ ವಿಷಯಗಳನ್ನೂ ಈ ಕುರ್‌ಆನ್ ಅವರಿಗೆ ವಿವರಿಸಿಕೊಡುತ್ತಿದೆ." [ಅನ್ನಮ್ಲ್:76]

ಅಲ್ಲಾಹನ ಬಗ್ಗೆ, ಅವನ ಧರ್ಮ ಮತ್ತು ಅವನು ನೀಡುವ ಪ್ರತಿಫಲಕ್ಕೆ ಸಂಬಂಧಿಸಿದ ವಾಸ್ತವಿಕತೆಗಳನ್ನು ತಿಳಿಯುವ ವಿಷಯದಲ್ಲಿ ಪವಿತ್ರ ಕುರ್‌ಆನ್ ಜನರೆಲ್ಲರ ಮೇಲೆ ಪುರಾವೆಯಾಗುವಂತಹ ಆಧಾರಗಳನ್ನು ಮತ್ತು ಸಾಕ್ಷ್ಯಗಳನ್ನು ಒಳಗೊಂಡಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ನಾವು ಈ ಕುರ್‌ಆನ್‌ನಲ್ಲಿ ಜನರಿಗಾಗಿ ಎಲ್ಲ ವಿಧದ ಉಪಮೆಗಳನ್ನು ವಿವರಿಸಿರುವೆವು. ಅವರು ಆಲೋಚಿಸಿ ಅರ್ಥಮಾಡಿಕೊಳ್ಳುವ ಸಲುವಾಗಿ." [ಅಝ್ಝುಮರ್:27]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನಾವು ತಮಗೆ ಈ ಗ್ರಂಥವನ್ನು ಎಲ್ಲ ವಿಷಯಗಳಿಗಿರುವ ವಿಶದೀಕರಣವಾಗಿ, ಮಾರ್ಗದರ್ಶಿಯಾಗಿ ಮತ್ತು ಕಾರುಣ್ಯವಾಗಿ ಹಾಗೂ ಶರಣಾಗತರಾಗಿ ಬದುಕುವವರಿಗೆ ಒಂದು ಶುಭವಾರ್ತೆಯಾಗಿ ಅವತೀರ್ಣಗೊಳಿಸಿರುವೆವು." [ಅನ್ನಹ್ಲ್:89].

ಮಿಲಿಯನ್‌ಗಟ್ಟಲೆ ಜನರನ್ನು ದಿಗ್ಭ್ರಮೆಗೊಳಿಸುವ ಪ್ರಮುಖ ಪ್ರಶ್ನೆಗಳಿಗೆ ಪವಿತ್ರ ಕುರ್‌ಆನ್ ಉತ್ತರಿಸುತ್ತದೆ. ಅಲ್ಲಾಹನು ಭೂಮ್ಯಾಕಾಶಗಳನ್ನು ಹೇಗೆ ಸೃಷ್ಟಿಸಿದನೆಂದು ಪವಿತ್ರ ಕುರ್‌ಆನ್ ವಿವರಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಕಾಶಗಳು ಮತ್ತು ಭೂಮಿಯು ಪರಸ್ಪರ ಅಂಟಿಕೊಂಡಿತ್ತು ಮತ್ತು ತರುವಾಯ ನಾವು ಅವುಗಳನ್ನು ಬೇರ್ಪಡಿಸಿದೆವು ಎಂದು ಸತ್ಯನಿಷೇಧಿಗಳು ಕಾಣುವುದಿಲ್ಲವೇ? ಜೀವವಿರುವ ಎಲ್ಲ ವಸ್ತುಗಳನ್ನೂ ನಾವು ನೀರಿನಿಂದ ಉಂಟುಮಾಡಿರುವೆವು. ಆದರೂ ಅವರು ವಿಶ್ವಾಸವಿಡುವುದಿಲ್ಲವೇ?"** [ಅಲ್-ಅಂಬಿಯಾ:30]

ಅಲ್ಲಾಹನು ಮನುಷ್ಯನನ್ನು ಹೇಗೆ ಸೃಷ್ಟಿಸಿದನು (ಎಂದು ವಿವರಿಸುತ್ತದೆ).

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಜನರೇ! ಪುನರುತ್ಥಾನದ ಬಗ್ಗೆ ನಿಮಗೆ ಸಂದೇಹವಿದ್ದರೆ (ಚಿಂತಿಸಿರಿ). ಖಂಡಿತವಾಗಿಯೂ ನಾವು ನಿಮ್ಮನ್ನು ಮಣ್ಣಿನಿಂದ, ತರುವಾಯ ವೀರ್ಯದಿಂದ, ತರುವಾಯ ರಕ್ತಪಿಂಡದಿಂದ, ತರುವಾಯ ರೂಪ ನೀಡಲ್ಪಟ್ಟಿರುವ ಮತ್ತು ರೂಪ ನೀಡಲ್ಪಡದಿರುವ ಮಾಂಸ ಮುದ್ದೆಯಿಂದ ಸೃಷ್ಟಿಸಿರುವೆವು. ನಾವು ನಿಮಗೆ ವಿವರಿಸಿಕೊಡುವ ಸಲುವಾಗಿ (ಇದನ್ನು ಹೇಳುತ್ತಿರುವೆವು). ನಾವಿಚ್ಛಿಸುವುದನ್ನು ನಿಶ್ಚಿತವಾದ ಒಂದು ಅವಧಿಯ ತನಕ ನಾವು ಗರ್ಭಾಶಯಗಳಲ್ಲಿ ಇರಿಸುವೆವು. ತರುವಾಯ ನಿಮ್ಮನ್ನು ಶಿಶುವಾಗಿ ಹೊರತರುವೆವು. ತರುವಾಯ ನೀವು ನಿಮ್ಮ ಪೂರ್ಣಶಕ್ತಿಯನ್ನು ತಲುಪುವವರೆಗೆ (ಅವನು ನಿಮ್ಮನ್ನು ಪೋಷಿಸುವನು). ನಿಮ್ಮ ಪೈಕಿ (ಬೇಗನೇ) ಮರಣಹೊಂದುವವರಿದ್ದಾರೆ. ಅರಿವು ಪಡೆದ ಬಳಿಕ ಏನನ್ನೂ ಅರಿತಿರದವರಾಗುವಂತೆ ಅತ್ಯಂತ ಬಲಹೀನವಾದ ಪ್ರಾಯದೆಡೆಗೆ ಮರಳಿಸಲಾಗುವವರೂ ನಿಮ್ಮಲ್ಲಿದ್ದಾರೆ. ಭೂಮಿಯು ಒಣಗಿ ನಿರ್ಜೀವವಾಗಿರುವುದನ್ನು ತಾವು ಕಾಣುವಿರಿ. ತರುವಾಯ ನಾವು ಅದರ ಮೇಲೆ (ಮಳೆ)ನೀರನ್ನು ಸುರಿಸಿದರೆ ಅದಕ್ಕೆ ಪುಳಕವುಂಟಾಗಿ ಅದು ಬೆಳವಣಿಗೆ ಹೊಂದುತ್ತದೆ ಮತ್ತು ಸುಂದರವಾದ ಸರ್ವ ಸಸ್ಯಗಳನ್ನೂ ಅದು ಹೊರತರುತ್ತದೆ."** [ಅಲ್ ಹಜ್ಜ್:5]

ಮನುಷ್ಯ ಮರಣಾನಂತರ ಎಲ್ಲಿಗೆ ಹೋಗುತ್ತಾನೆ, ಇಹಲೋಕ ಜೀವನದ ಬಳಿಕ ಸತ್ಕರ್ಮಿಗಳಿಗೆ ಮತ್ತು ದುಷ್ಕರ್ಮಿಗಳಿಗೆ ಸಿಗುವ ಪ್ರತಿಫಲವೇನು (ಎಂದು ವಿವರಿಸುತ್ತದೆ). ಈ ವಿಷಯಕ್ಕೆ ಸಂಬಂಧಿಸಿದ ಪುರಾವೆಗಳನ್ನು ಶೀರ್ಷಿಕೆ ಸಂಖ್ಯೆ 20 ರಲ್ಲಿ ಈಗಾಗಲೇ

ನೀಡಲಾಗಿದೆ. ಮನುಷ್ಯಾಸ್ತಿತ್ವವು ಆಕಸ್ಮಿಕವೇ? ಅಥವಾ ಅದಕ್ಕೆ ಒಂದು ಉದಾತ್ತ ಉದ್ದೇಶವಿದೆಯೇ? (ಎಂದು ವಿವರಿಸುತ್ತದೆ).

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ರಹಸ್ಯಗಳ ಬಗ್ಗೆ, ಅಲ್ಲಾಹು ಸೃಷ್ಟಿಸಿದ ಯಾವುದೇ ವಸ್ತುವಿನ ಬಗ್ಗೆ, ಅವರ ಅವಧಿಯು ಸಮೀಪಿಸಿರಬಹುದು ಎಂಬುದರ ಬಗ್ಗೆ ಅವರು ಚಿಂತಿಸಿ ನೋಡಲಾರರೇ? ಇದರ (ಕುರ್‌ಆನ್) ಬಳಿಕ ಅವರು ಯಾವ ವೃತ್ತಾಂತದಲ್ಲಿ ವಿಶ್ವಾಸವಿಡುವರು?"** [ಅಲ್-ಅಅ್‌ರಾಫ್:185]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಾವು ನಿಮ್ಮನ್ನು ಉದ್ದೇಶರಹಿತವಾಗಿ ಸೃಷ್ಟಿಸಿರುವೆವು ಮತ್ತು ನೀವು ನಮ್ಮ ಬಳಿಗೆ ಮರಳಿ ಬರಲಾರಿರಿ ಎಂದೂ ನೀವು ಭಾವಿಸಿರುವಿರಾ?"** [ಅಲ್-ಮುಅ್‌ಮಿನೂನ್:115]

ಪವಿತ್ರ ಕುರ್‌ಆನ್ ಅದು ಅವತೀರ್ಣಗೊಂಡ ಅರಬೀ ಭಾಷೆಯಲ್ಲೇ ಇಂದಿನವರೆಗೂ ಸಂರಕ್ಷಿಸಲಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಈ ಉಪದೇಶವನ್ನು ಅವತೀರ್ಣಗೊಳಿಸಿದವರು ನಾವಾಗಿರುವೆವು. ಖಂಡಿತವಾಗಿಯೂ ಅದನ್ನು ನಾವು ಸಂರಕ್ಷಿಸುವೆವು."** [ಅಲ್-ಹಿಜ್ರ್:9].

ಅದರಲ್ಲಿ ಒಂದು ಅಕ್ಷರವೂ ನಷ್ಟವಾಗಿಲ್ಲ. ಅದರಲ್ಲಿ ಯಾವುದೇ ವಿರೋಧಾಭಾಸ, ಕಡಿತ ಅಥವಾ ಬದಲಾವಣೆ ಉಂಟಾಗುವುದು ಅಸಂಭವ್ಯವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ಕುರ್‌ಆನ್‌ನ ಬಗ್ಗೆ ಚಿಂತಿಸುವುದಿಲ್ಲವೇ? ಅದು ಅಲ್ಲಾಹೇತರರ ಬಳಿಯಿಂದಾಗಿರುತ್ತಿದ್ದರೆ ಅವರು ಅದರಲ್ಲಿ ಅನೇಕ ವಿರೋಧಾಭಾಸಗಳನ್ನು ಕಾಣುತ್ತಿದ್ದರು."** [ಅನ್ನಿಸಾ:82]

ಅದು ಮುದ್ರಿಸಲಾಗುತ್ತದೆ ಹಾಗೂ ಪ್ರಕಟಿಸಲಾಗುತ್ತದೆ. ಅದೊಂದು ಅದ್ಭುತ ಪವಾಡದ ಗ್ರಂಥವಾಗಿದ್ದು, ಪಾರಾಯಣ ಮಾಡಲು, ಪಾರಾಯಣವನ್ನು ಕೇಳಲು ಅಥವಾ

ಅದರ ಅರ್ಥಾನುವಾದವನ್ನು ಓದಲು ಯೋಗ್ಯವಾಗಿದೆ. ಇದೇ ರೀತಿ ಪ್ರವಾದಿ ಮುಹಮ್ಮದ್ صلي الله عليه وسلم ರವರ ವಚನ, ಅವರ ಬೋಧನೆಗಳು ಮತ್ತು ಚರಿತ್ರೆ ವಿಶ್ವಾಸಾರ್ಹ ವರದಿಗಾರರ ಸರಪಳಿಯ ಮೂಲಕ ಸಂರಕ್ಷಿಸಲಾಗಿದೆ ಹಾಗೂ ವರ್ಗಾಯಿಸಲಾಗಿದೆ. ಅದನ್ನು ಪ್ರವಾದಿ ಮುಹಮ್ಮದ್ صلي الله عليه وسلم ರವರು ಮಾತನಾಡಿದ ಅರಬೀ ಭಾಷೆಯಲ್ಲೇ ಮುದ್ರಿಸಲಾಗಿದೆ. ಅದನ್ನು ಹಲವಾರು ಭಾಷೆಗಳಲ್ಲಿ ಅನುವಾದಿಸಲಾಗಿದೆ.

ಪವಿತ್ರ ಕುರ್‌ಆನ್ ಮತ್ತು ಪ್ರವಾದಿರವರ ವಚನಗಳು ಇಸ್ಲಾಮಿನ ನಿಯಮಗಳ ಮತ್ತು ಅದರ ಧರ್ಮಶಾಸ್ತ್ರದ ಏಕೈಕ ಮೂಲವಾಗಿದೆ. ಇಸ್ಲಾಮ್ ಧರ್ಮವು ಅದರೊಂದಿಗೆ ಸಂಬಂಧವಿರುವ ಜನರ ನಡವಳಿಕೆಯಿಂದ ಸ್ವೀಕರಿಸುವಂತದ್ದಲ್ಲ. ಬದಲಿಗೆ ಅದು ಅಲ್ಲಾಹನ ದಿವ್ಯಸಂದೇಶದಿಂದ – ಪವಿತ್ರ ಕುರ್‌ಆನ್ ಮತ್ತು ಪ್ರವಾದಿರವರ ಸುನ್ನತ್ತಿನಿಂದ – ಸ್ವೀಕರಿಸುವಂತದ್ದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಈ ಉಪದೇಶವು ಅವರ ಬಳಿಗೆ ಬಂದಾಗ ಅದನ್ನು ನಿಷೇಧಿಸಿದವರು (ನಷ್ಟ ಹೊಂದಿದವರಾಗಿರುವರು). ಖಂಡಿತ ವಾಗಿಯೂ ಅದೊಂದು ಪ್ರತಾಪಶಾಲಿ ಗ್ರಂಥವಾಗಿದೆ.ಅದರ ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಅಸತ್ಯವು ಅದರಲ್ಲಿ ಸೇರದು. ಅದು ಯುಕ್ತಿಪೂರ್ಣನೂ ಸ್ತುತ್ಯರ್ಹನೂ ಆಗಿರುವವನಿಂದ ಅವತೀರ್ಣಗೊಂಡಿರುವುದಾಗಿದೆ."** [ಫುಸ್ಸಿಲತ್:41-42].

ಪ್ರವಾದಿರವರ ಸುನ್ನತಿನ ಕುರಿತು ಅದು ಅಲ್ಲಾಹನ ವತಿಯ ದಿವ್ಯವಾಣಿಯಾಗಿದೆ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಸಂದೇಶವಾಹಕರು ನಿಮಗೆ ಏನನ್ನು ನೀಡುವರೋ ಅದನ್ನು ಸ್ವೀಕರಿಸಿರಿ ಮತ್ತು ಅವರು ನಿಮ್ಮನ್ನು ಯಾವುದರಿಂದ ತಡೆಯುವರೋ ಅದರಿಂದ ದೂರಸರಿಯಿರಿ. ಅಲ್ಲಾಹನನ್ನು ಭಯಪಡಿರಿ. ಖಂಡಿತವಾಗಿಯೂ ಅಲ್ಲಾಹು ಕಠಿಣವಾಗಿ ಶಿಕ್ಷಿಸುವವನಾಗಿರುವನು."** [ಅಲ್-ಹಶ್ರ್:7].

## 29. ಇಸ್ಲಾಮ್ ಧರ್ಮವು ಮಾತಾಪಿತರೊಂದಿಗೆ ಸದ್ವರ್ತನೆಯಿಂದ ವರ್ತಿಸಬೇಕೆಂದು ಆಜ್ಞೆ ನೀಡುತ್ತದೆ. ಅವರು ಮುಸ್ಲಿಮೇತರರಾದರೂ ಸರಿ. ಅದೇ ರೀತಿ ಮಕ್ಕಳೊಂದಿಗೂ ಉತ್ತಮ ರೀತಿಯಿಂದ ವರ್ತಿಸಬೇಕೆಂದು ಆದೇಶಿಸುತ್ತದೆ.

ಇಸ್ಲಾಮ್ ಧರ್ಮವು ಮಾತಾಪಿತರೊಂದಿಗೆ ಸದ್ವರ್ತನೆಯಿಂದ ವರ್ತಿಸಬೇಕೆಂದು ಆಜ್ಞೆ ನೀಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನೀವು ಅವನ ಹೊರತು ಬೇರೆ ಯಾರನ್ನೂ ಆರಾಧಿಸದಿರಲು ಮತ್ತು ಮಾತಾಪಿತರಿಗೆ ಒಳಿತನ್ನು ಮಾಡಲು ತಮ್ಮ ಪ್ರಭು ವಿಧಿಸಿರುವನು. ಅವರ (ಮಾತಾಪಿತರ) ಪೈಕಿ ಒಬ್ಬರು ಅಥವಾ ಇಬ್ಬರೂ ತಮ್ಮ ಬಳಿ ವೃದ್ಧಾಪ್ಯವನ್ನು ತಲುಪಿದರೆ ಅವರೊಂದಿಗೆ 'ಛೆ' ಎಂದು ಹೇಳುವುದಾಗಲಿ, ಅವರನ್ನು ಗದರಿಸುವುದಾಗಲಿ ಮಾಡದಿರಿ. ಗೌರವದಿಂದ ಕೂಡಿದ ಮಾತುಗಳನ್ನಷ್ಟೇ ಅವರೊಂದಿಗೆ ಹೇಳಿರಿ." [ಅಲ್-ಇಸ್ರಾ:23]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಮಾನವರಿಗೆ ಅವರ ಮಾತಾಪಿತರ ವಿಷಯದಲ್ಲಿ ನಾವು ಉಪದೇಶ ಮಾಡಿರುವೆವು. ಅವನ ತಾಯಿಯು ಬಲಹೀನತೆಯ ಮೇಲೆ ಬಲಹೀನತೆಯನ್ನು ಸಹಿಸಿ ಅವನನ್ನು ಗರ್ಭ ಧರಿಸಿರುವಳು. ಅವನ ಸ್ತನಪಾನವನ್ನು ನಿಲ್ಲಿಸಲಾಗುವುದು ಎರಡು ವರ್ಷದೊಂದಿಗಾಗಿದೆ. ನನಗೂ, ನಿನ್ನ ಮಾತಾಪಿತರಿಗೂ ಕೃತಜ್ಞನಾಗಿರು. (ನಿನ್ನ) ಮರಳುವಿಕೆಯು ನನ್ನ ಬಳಿಗೇ ಆಗಿದೆ." [ಲುಖ್ಮಾನ್:14].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ತನ್ನ ಮಾತಾಪಿತರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ನಾವು ಮನುಷ್ಯನಿಗೆ ಉಪದೇಶ ಮಾಡಿರುವೆವು. ಅವನ ತಾಯಿ ಬಹಳ ಕಷ್ಟದಿಂದ ಅವನನ್ನು ಗರ್ಭ ಧರಿಸಿರುವಳು ಮತ್ತು ಬಹಳ ಕಷ್ಟದಿಂದಲೇ ಅವನಿಗೆ ಜನ್ಮ ನೀಡಿರುವಳು. ಅವನ ಗರ್ಭಾವಧಿ ಮತ್ತು ಮೊಲೆಬಿಡಿಸುವ ಕಾಲವು ಸೇರಿ ಒಟ್ಟು ಮೂವತ್ತು

ಮಾಸಗಳಾಗಿವೆ. ಹೀಗೆ ಅವನು ತನ್ನ ಪೂರ್ಣ ಬಲವನ್ನು ಪಡೆದು ನಲ್ವತ್ತು ವಯಸ್ಸಿನವನಾದಾಗ ಅವನು ಹೇಳುವನು: ನನ್ನ ಪ್ರಭೂ! ನನಗೆ ಮತ್ತು ನನ್ನ ಹೆತ್ತವರಿಗೆ ನೀನು ದಯಪಾಲಿಸಿರುವ ಅನುಗ್ರಹಗಳಿಗಾಗಿ ಕೃತಜ್ಞತೆ ಸಲ್ಲಿಸಲು ಮತ್ತು ನೀನು ಸಂತೃಪ್ತನಾಗುವ ಸತ್ಕರ್ಮವನ್ನು ಮಾಡಲು ನನಗೆ ಪ್ರೇರಣೆ ನೀಡು. ನನ್ನ ಸಂತತಿಗಳಲ್ಲಿ ನನಗೆ ಒಳಿತನ್ನುಂಟುಮಾಡು. ಖಂಡಿತವಾಗಿಯೂ ನಾನು ನಿನ್ನೆಡೆಗೆ ಪಶ್ಚಾತ್ತಾಪಪಟ್ಟು ಮರಳಿರುವೆನು. ಖಂಡಿತವಾಗಿಯೂ ನಾನು ಶರಣಾಗತರಾಗುವವರ ಪೈಕಿ ಸೇರಿದವನಾಗಿರುವೆನು." [ಅಲ್-ಅಹ್ಕಾಫ್:15].

ಅಬೂ ಹುರೈರಾ رضي الله عنه ರಿಂದ ವರದಿ. ಅವರು ಹೇಳುತ್ತಾರೆ: ಒಬ್ಬ ವ್ಯಕ್ತಿ ಪ್ರವಾದಿ صلي الله عليه وسلم ರವರ ಬಳಿ ಬಂದು, "ನನ್ನ ಸದ್ವರ್ತನೆಗೆ ಯಾರು ಹೆಚ್ಚು ಅರ್ಹರು?" ಎಂದು ಕೇಳಿದರು. **"ನಿನ್ನ ತಾಯಿ"** ಎಂದು ಪ್ರವಾದಿ صلي الله عليه وسلم ಉತ್ತರಿಸಿದರು. "ಆನಂತರ ಯಾರು?" ಎಂದಾತ ಕೇಳಿದಾಗ, **"ನಿನ್ನ ತಾಯಿ"** ಎಂದೇ ಪ್ರವಾದಿ صلي الله عليه وسلم ಉತ್ತರಿಸಿದರು. ಆತ ಪುನಃ "ಆ ಬಳಿಕ ಯಾರು?" ಎಂದು ಪ್ರಶ್ನಿಸಿದನು. ಆಗಲೂ ಪ್ರವಾದಿಯವರು صلي الله عليه وسلم **"ನಿನ್ನ ತಾಯಿ"** ಎಂದೇ ಉತ್ತರಿಸಿದರು. ಆತ (ನಾಲ್ಕನೆಯ ಸಲವೂ) ಇನ್ನು ಯಾರು? ಎಂದು ಪ್ರಶ್ನಿಸಿದಾಗ ಪ್ರವಾದಿ صلي الله عليه وسلم ಹೇಳಿದರು: **"ನಿನ್ನ ತಂದೆ"**. [ಸಹೀಹ್ ಮುಸ್ಲಿಮ್]

ಮಾತಾಪಿತರು ಮುಸ್ಲಿಮರಾಗಿದ್ದರೂ ಮುಸ್ಲಿಮರಲ್ಲದಿದ್ದರೂ ಅವರೊಡನೆ ಸದ್ವರ್ತನೆಯಿಂದ ವರ್ತಿಸಬೇಕೆಂಬ ಈ ಆದೇಶದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಅಸ್ಮಾ ಬಿಂತ್ ಅಬೂಬಕ್ರ್ رضي الله عنهما ಹೇಳುತ್ತಾರೆ: ಖುರೈಷರು ಪ್ರವಾದಿ(ಸ) ರವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದ ಅವಧಿಯಲ್ಲಿ ಮುಶ್ರಿಕ್ ಆಗಿದ್ದ ನನ್ನ ತಾಯಿ ತನ್ನ ಮಗನೊಂದಿಗೆ ನನ್ನ ಬಳಿಗೆ ಬಂದರು. ನಾನು ಪ್ರವಾದಿಯವರಲ್ಲಿ ಧರ್ಮವಿಧಿ ಕೇಳಿದೆ "ನನ್ನ ತಾಯಿ ಬಂದಿದ್ದಾರೆ. ಅವರು ನನ್ನೊಂದಿಗೆ ಸಂಪರ್ಕವಿರಿಸ ಬಯಸಿದ್ದಾರೆ. ನಾನು ಸಂಪರ್ಕ ವಿವರಿಸಬಹುದೇ?" ಪ್ರವಾದಿ صلي الله عليه وسلم ರವರು ಹೇಳಿದರು: **"ನಿನ್ನ ತಾಯಿಯೊಂದಿಗೆ ಉತ್ತಮ ಸಂಬಂಧವಿರಿಸಿ ಸೌಜನ್ಯದಿಂದ ವರ್ತಿಸು"**. [ಸಹೀಹುಲ್ ಬುಖಾರಿ]

ಬದಲಾಗಿ, ಮಾತಾಪಿತರು ಮಗನನ್ನು ಇಸ್ಲಾಮಿನಿಂದ ಸತ್ಯನಿಷೇಧಕ್ಕೆ ಪರಿವರ್ತಿಸಲು ಪ್ರಯತ್ನಸಿದರೆ ಮತ್ತು ಬಲವಂತಪಡಿಸಿದರೆ – ಈ ಪರಿಸ್ಥಿತಿಯಲ್ಲಿ – ಇಸ್ಲಾಮ್ ಧರ್ಮ ಅವರಿಗೆ ವಿಧೇಯರಾಗದಂತೆ ಮತ್ತು ಅಲ್ಲಾಹನ ಮೇಲೆ ವಿಶ್ವಾಸವಿರಿಸಿಕೊಂಡು ಅವರಿಬ್ಬ ರೊಂದಿಗೆ ಸದ್ವರ್ತನೆ ತೋರುತ್ತಾ , ಉತ್ತಮ ರೀತಿಯಿಂದ ವರ್ತಿಸುತ್ತಾ ಬಾಳಬೇಕೆಂದು ಆಜ್ಞೆ ನೀಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ನಿನಗೆ ಯಾವುದೇ ಜ್ಞಾನವಿಲ್ಲದ ಏನನ್ನಾದರೂ ನನ್ನೊಂದಿಗೆ ಸಹಭಾಗಿಯನ್ನಾಗಿ ಮಾಡುವಂತೆ ಅವರಿಬ್ಬರೂ ನಿನ್ನನ್ನು ಬಲವಂತಪಡಿಸಿದರೆ, ಆಗ ಅವರನ್ನು ಅನುಸರಿಸಬಾರದು. ಐಹಿಕ ಜೀವನದಲ್ಲಿ ಅವರೊಂದಿಗೆ ಉತ್ತಮವಾಗಿ ವರ್ತಿಸು. ನನ್ನೆಡೆಗೆ ಮರಳಿದವರ ಮಾರ್ಗವನ್ನು ಹಿಂಬಾಲಿಸು. ತರುವಾಯ ನಿಮ್ಮ ಮರಳುವಿಕೆಯು ನನ್ನ ಬಳಿಗೇ ಆಗಿದೆ. ನೀವು ಮಾಡುತ್ತಿರುವುದರ ಬಗ್ಗೆ ಆಗ ನಾನು ನಿಮಗೆ ತಿಳಿಸಿಕೊಡುವೆನು.”** [ಲುಖ್ಮಾನ್:15].

ಒಬ್ಬ ಮುಸಲ್ಮಾನ ತನ್ನ ಮುಸ್ಲಿಮೇತರ ಸಂಬಂಧಿಕರೊಂದಿಗೆ ಅಥವಾ ಸಂಬಂಧಿಕರಲ್ಲದವರೊಂದಿಗೆ ಅವರು ಅವನೊಂದಿಗೆ ಯುದ್ಧ ಮಾಡುವವರಲ್ಲದಿದ್ದರೆ ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸದಂತೆ ಇಸ್ಲಾಮ್ ಧರ್ಮವು ತಡೆಯುವುದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಧರ್ಮದ ವಿಷಯದಲ್ಲಿ ನಿಮ್ಮೊಂದಿಗೆ ಯುದ್ಧ ಮಾಡದವರು ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಗಟ್ಟದವರು ಯಾರೋ ಅವರಿಗೆ ನೀವು ಒಳಿತು ಮಾಡುವುದನ್ನು ಮತ್ತು ಅವರೊಂದಿಗೆ ನ್ಯಾಯಪಾಲಿಸುವುದನ್ನು ಅಲ್ಲಾಹು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ಅಲ್ಲಾಹು ನ್ಯಾಯ ಪಾಲಿಸುವವರನ್ನು ಇಷ್ಟಪಡುವನು.”** [ಅಲ್-ಮುಮ್ತಹನ:8]

ಇಸ್ಲಾಂ ಧರ್ಮವು ಮಕ್ಕಳೊಂದಿಗೆ ಉತ್ತಮ ರೀತಿಯಿಂದ ವರ್ತಿಸಬೇಕೆಂದು ಆದೇಶಿಸುತ್ತದೆ. ಇಸ್ಲಾಂ ಧರ್ಮವು ತಂದೆಗೆ ಆದೇಶಿಸುವ ಅತ್ಯಂತ ದೊಡ್ಡ ವಿಷಯವೇನೆಂದರೆ

ತಂದೆಯು ತನ್ನ ಮಕ್ಕಳಿಗೆ ಅವರ ಮೇಲೆ ಅವರ ಪಾಲಕ ಪ್ರಭುವಿನ ಹಕ್ಕು ಬಾಧ್ಯತೆಗಳೇನು ಎಂಬುದನ್ನು ಕಲಿಸುವುದು.

ಪ್ರವಾದಿ صلى الله عليه وسلم ರವರು ತಮ್ಮ ಚಿಕ್ಕಪ್ಪನ ಮಗ ಅಬ್ದುಲ್ಲಾ ಬಿನ್ ಅಬ್ಬಾಸ್ رضي الله عنهما ರವರಿಗೆ ಹೇಳಿದಂತೆ: **"ಓ ಬಾಲಕ, ಅಥವಾ ಓ ಪುಟ್ಟ ಬಾಲಕ! ನಾನು ನಿನಗೆ ಕೆಲವು ವಚನಗಳನ್ನು ಕಲಿಸಲೇ? ಅಲ್ಲಾಹನು ಅದರ ಮೂಲಕ ನಿಮಗೆ ಪ್ರಯೋಜನವನ್ನು ನೀಡುವನು."** ನಾನು ಹೇಳಿದೆ: "ಖಂಡಿತವಾಗಿಯೂ ಕಲಿಸಿರಿ". ಆಗ ಪ್ರವಾದಿ(ಸ) ರವರು ಹೇಳಿದರು **"ನೀನು ಅಲ್ಲಾಹನನ್ನು ಭಯಪಡು. ಅವನು ನಿನ್ನನ್ನು ಕಾಪಾಡುವನು. ನೀನು ಅಲ್ಲಾಹನನ್ನು ಭಯಪಡು. ನೀನು ಅವನನ್ನು ನಿನ್ನ ಮುಂದೆ ಕಾಣುವೆ. ಸಂತೋಷವಾದಾಗ ನೀನು ಅವನನ್ನು ಸ್ಮರಿಸು. ನೀನು ಕಷ್ಟದಲ್ಲಿರುವಾಗ ಅವನು ನಿನ್ನನ್ನು ನೆನಪಿಡುವನು. ನೀನು ಬೇಡುವುದಾದರೆ ಅಲ್ಲಾಹನಲ್ಲೇ ಬೇಡು. ನೀನು ಸಹಾಯಯಾಚಿಸುವುದಾದರೆ ಅಲ್ಲಾಹನಿಂದಲೇ ಸಹಾಯಯಾಚಿಸು."** [ಅಹ್ಮದ್ 4/287.]

ತಮ್ಮ ಮಕ್ಕಳಿಗೆ ಅವರ ಧಾರ್ಮಿಕ ಮತ್ತು ಐಹಿಕ ವಿಷಯಗಳಲ್ಲಿ ಪ್ರಯೋಜನ ಕರವಾಗಿರುವುದನ್ನು ಕಲಿಸಬೇಕೆಂದು ಅಲ್ಲಾಹನು ತಂದೆ ತಾಯಿಯರಿಗೆ ಆಜ್ಞಾಪಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಸತ್ಯವಿಶ್ವಾಸಿಗಳೇ! ಮನುಷ್ಯರನ್ನು ಮತ್ತು ಕಲ್ಲುಗಳನ್ನು ಇಂಧನವಾಗಿ ಬಳಸುವ ನರಕಾಗ್ನಿಯಿಂದ ಸ್ವತಃ ನಿಮ್ಮನ್ನೂ, ನಿಮ್ಮ ಕುಟುಂಬದವರನ್ನೂ ರಕ್ಷಿಸಿರಿ. ಅದರ ಮೇಲ್ನೋಟ ವಹಿಸಲು ಕಠೋರ ಸ್ವಭಾವದವರೂ, ಅತಿ ಬಲಿಷ್ಠರೂ ಆಗಿರುವ ಮಲಕ್‌ಗಳಿರುವರು. ಅಲ್ಲಾಹು ಅವರೊಂದಿಗೆ ಆಜ್ಞಾಪಿಸಿದ ಯಾವುದೇ ವಿಷಯವನ್ನೂ ಅವರು ಧಿಕ್ಕರಿಸಲಾರರು. ಅವರೊಂದಿಗೆ ಆಜ್ಞಾಪಿಸಲಾಗುವ ಯಾವುದೇ ಆಜ್ಞೆಯನ್ನೂ ಅವರು ಪಾಲಿಸುವರು."** [ಅತ್ತಹ್ರೀಮ್:6]

ಅಲ್ಲಾಹನ ಈ ವಚನದ ಕುರಿತು ಅಲೀ رضي الله عنه ರವರು ಹೇಳುತ್ತಾರೆ: **"ನರಕಾಗ್ನಿಯಿಂದ ಸ್ವತಃ ನಿಮ್ಮನ್ನೂ, ನಿಮ್ಮ ಕುಟುಂಬದವರನ್ನೂ ರಕ್ಷಿಸಿರಿ."** ಅವರು (ಅಲೀ) ಹೇಳುತ್ತಾರೆ: "ಅವರಿಗೆ ಶಿಷ್ಟಾಚಾರವನ್ನು ಕಲಿಸಿರಿ ಮತ್ತು ಅವರಿಗೆ ಜ್ಞಾನವನ್ನು ನೀಡಿರಿ."

ಮಕ್ಕಳಿಗೆ ನಮಾಜ್ ಕಲಿಸಬೇಕೆಂದು ಪ್ರವಾದಿ صلى الله عليه وسلم ರವರು ತಂದೆಗೆ ಆಜ್ಞೆ ನೀಡಿದ್ದಾರೆ. ಇದರಿಂದ ಅವರಲ್ಲಿ ನಮಾಜ್ ಪಾಲಿಸುವ ರೂಢಿ ಬೆಳೆಯುತ್ತದೆ. ಪ್ರವಾದಿ صلى الله عليه وسلم ರವರು ಹೇಳಿದರು: **"ನಿಮ್ಮ ಮಕ್ಕಳು ಏಳು ವರ್ಷಕ್ಕೆ ತಲುಪಿದಾಗ ಅವರನ್ನು ನಮಾಜ್ ಮಾಡಲು ಆಜ್ಞಾಪಿಸಿರಿ."** [ಅಬೂ ದಾವೂದ್.]

ಪ್ರವಾದಿ صلى الله عليه وسلم ರವರು ಹೇಳಿದರು: **"ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಿದ್ದಾನೆ. ಪ್ರತಿಯೊಬ್ಬನಲ್ಲೂ ಅವನ ಅಧೀನದಲ್ಲಿರುವವರ ಕುರಿತು ಪ್ರಶ್ನಿಸಲಾಗುವುದು. ಇಮಾಮ್ (ಖಲೀಫ) ಆಡಳಿತಾಧಿಕಾರಿಯಾಗಿದ್ದಾನೆ. ಅವನೊಂದಿಗೆ ಅವನ ಪ್ರಜೆಗಳ ಕುರಿತು ವಿಚಾರಿಸಲಾಗುವುದು. ಪುರುಷನು ತನ್ನ ಮನೆಯ ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅವನ ಅಧೀನದಲ್ಲಿರುವವರ ಕುರಿತು ಪ್ರಶ್ನಿಸಲಾಗುವುದು. ಸ್ತ್ರೀ ತನ್ನ ಪತಿಯ ಮನೆಯ ಮೇಲ್ವಿಚಾರಕಿಯಾಗಿರುತ್ತಾಳೆ. ಅವಳೊಂದಿಗೆ ಅದರ ಕುರಿತು ವಿಚಾರಿಸಲಾಗುವುದು. ಸೇವಕನು ತನ್ನ ಯಜಮಾನನ ಸೊತ್ತಿನ ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅವನ ಅಧೀನದಲ್ಲಿರುವುದರ ಕುರಿತು ಪ್ರಶ್ನಿಸಲಾಗುವುದು. ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅವನ ಅಧೀನದಲ್ಲಿರುವವರ ಕುರಿತು ವಿಚಾರಿಸಲಾಗುವುದು."** [ಸಹೀಹ್ ಇಬ್ನ್ ಹಿಬ್ಬಾನ್ 4490.]

ತನ್ನ ಮಕ್ಕಳಿಗೆ ಮತ್ತು ತನ್ನ ಮನೆಯವರಿಗೆ ಖರ್ಚು ಮಾಡಬೇಕೆಂದು ಇಸ್ಲಾಮ್ ತಂದೆಗೆ ಆದೇಶಿಸಿದೆ. ಇದರ ಕುರಿತು ಶೀರ್ಷಿಕೆ ಸಂಖ್ಯೆ (18)ರಲ್ಲಿ ಉಲ್ಲೇಖಿಸಲಾಗಿದೆ.

ಪ್ರವಾದಿ صلى الله عليه وسلم ರವರು ಮಕ್ಕಳಿಗೆ ಖರ್ಚು ಮಾಡುವುದರ ಶ್ರೇಷ್ಠತೆಯನ್ನು ವಿವರಿಸುತ್ತಾ ಹೇಳಿದರು: **"ಒಬ್ಬ ವ್ಯಕ್ತಿ ಖರ್ಚು ಮಾಡುವ ಅತ್ಯಂತ ಶ್ರೇಷ್ಠ ದೀನಾರ್ (ಬಂಗಾರದ ನಾಣ್ಯ) ತನ್ನ ಮಡದಿ-ಮಕ್ಕಳಿಗಾಗಿ ಖರ್ಚು ಮಾಡುವ ದೀನಾರ್ ಆಗಿದೆ, ಒಬ್ಬ ವ್ಯಕ್ತಿ ತನ್ನ ಪ್ರಾಣಿಗಾಗಿ (ತನ್ನ ಸವಾರಿಗಾಗಿ) ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ದೀನಾರ್ ಆಗಿದೆ, ಮತ್ತು ಒಬ್ಬ ವ್ಯಕ್ತಿ ಅಲ್ಲಾಹನ ಮಾರ್ಗದಲ್ಲಿ ತನ್ನ ಸಹಚರರಿಗಾಗಿ ಖರ್ಚು ಮಾಡುವ ದೀನಾರ್**

ಆಗಿದೆ.” ಅಬೂ ಖಿಲಾಬಾ ಹೇಳುತ್ತಾರೆ: “ಪ್ರವಾದಿ(ಸ) ರವರು (ಖರ್ಚು ಮಾಡುವುದನ್ನು) ಮಡದಿ ಮಕ್ಕಳಿಂದ ಪ್ರಾರಂಭಿಸಿದರು.” ನಂತರ ಅಬೂ ಖಿಲಾಬ ಹೇಳುತ್ತಾರೆ: “ಸಣ್ಣ ಮಕ್ಕಳಿಗಾಗಿ ಖರ್ಚು ಮಾಡುವ ವ್ಯಕ್ತಿಗಿಂತ ಹೆಚ್ಚಿನ ಪ್ರತಿಫಲ ಯಾರಿಗಿರಬಹುದು? ಅವನು ಅವರಿಗೆ (ಇತರರ ಮುಂದೆ ಕೈಚಾಚುವ) ಅವಮಾನದಿಂದ ರಕ್ಷಿಸುತ್ತಾನೆ. ಅಥವಾ ಅವನಿಂದ ಅಲ್ಲಾಹನು ಅವರಿಗೆ ಲಾಭ ನೀಡುತ್ತಾನೆ ಮತ್ತು ಅವರನ್ನು ಶ್ರೀಮಂತ ಗೊಳಿಸುತ್ತಾನೆ.” [ಸಹೀಹ್ ಮುಸ್ಲಿಮ್: 994.]

## 30. ಇಸ್ಲಾಮ್ ಧರ್ಮವು ಶತ್ರುಗಳೊಂದಿಗೂ ಮಾತು ಮತ್ತು ವ್ಯವಹಾರದಲ್ಲಿ ನ್ಯಾಯ ಪಾಲಿಸಬೇಕೆಂದು ಆದೇಶಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ತನ್ನ ದಾಸರಿಗೆ ಸಂಬಂಧಿಸಿದ ತನ್ನ ಕೆಲಸ-ಕಾರ್ಯಗಳಲ್ಲಿ ಮತ್ತು ಕಾರ್ಯನಿರ್ವಹಣೆಯಲ್ಲಿ ನ್ಯಾಯ ಮತ್ತು ಸಮಾನತೆಯನ್ನು ಪಾಲಿಸುತ್ತಾನೆ. ಅವನು ಏನು ಆಜ್ಞಾಪಿಸುತ್ತಾನೋ ಮತ್ತು ಏನು ವಿರೋಧಿಸುತ್ತಾನೋ, ಏನು ಸೃಷ್ಟಿಸುತ್ತಾನೋ ಮತ್ತು ಏನು ನಿರ್ಣಯಿಸುತ್ತಾನೋ ಅವೆಲ್ಲದರಲ್ಲೂ ನೇರವಾದ ಮಾರ್ಗವನ್ನು ಅವಲಂಬಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ತನ್ನ ಹೊರತು ಅನ್ಯ ಆರಾಧ್ಯರಿಲ್ಲವೆಂದು ಅಲ್ಲಾಹು ಸಾಕ್ಷ್ಯವಹಿಸಿರುವನು. ಮಲಕ್‌ಗಳೂ ಜ್ಞಾನವುಳ್ಳವರೂ (ಅದಕ್ಕೆ ಸಾಕ್ಷಿಗಳಾಗಿರುವರು). ಅವನು ನ್ಯಾಯಪಾಲಿಸುವವನಾಗಿರುವನು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಪ್ರತಾಪಶಾಲಿಯೂ, ಯುಕ್ತಿಪೂರ್ಣನೂ ಆಗಿರುವನು.”** [ಆಲಿ ಇಮ್ರಾನ್:18].

ಅಲ್ಲಾಹನು ನ್ಯಾಯ ಪಾಲಿಸಬೇಕೆಂದು ಆದೇಶಿಸುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಹೇಳಿರಿ: ನ್ಯಾಯ ಪಾಲಿಸುವಂತೆ ನನ್ನ ಪ್ರಭು ಆಜ್ಞಾಪಿಸಿರುವನು.”** [ಅಲ್-ಅಅ್‌ರಾಫ್:29]

ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರು عليهم الصلاة والسلام ನ್ಯಾಯದೊಂದಿಗೆ ಬಂದರು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ನಾವು ನಮ್ಮ ಸಂದೇಶವಾಹಕರನ್ನು ಸ್ಪಷ್ಟವಾದ ದೃಷ್ಟಾಂತಗಳೊಂದಿಗೆ ಕಳುಹಿಸಿರುವೆವು. ಜನರು ನ್ಯಾಯಬದ್ಧವಾಗಿ ನೆಲೆಗೊಳ್ಳುವ ಸಲುವಾಗಿ ನಾವು ಅವರೊಂದಿಗೆ ಗ್ರಂಥವನ್ನೂ ತಕ್ಕಡಿಯನ್ನೂ ಇಳಿಸಿಕೊಟ್ಟಿರುವೆವು." [ಅಲ್-ಹದೀದ್:25]

ತಕ್ಕಡಿ ಅಂದರೆ ಮಾತು ಮತ್ತು ಕಾರ್ಯಗಳಲ್ಲಿರುವ ನ್ಯಾಯವಾಗಿದೆ. ಇಸ್ಲಾಮ್ ಧರ್ಮವು ಮಾತು ಮತ್ತು ವ್ಯವಹಾರದಲ್ಲಿ ಶತ್ರುಗಳೊಂದಿಗೂ ನ್ಯಾಯ ಪಾಲಿಸಬೇಕೆಂದು ಆದೇಶಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರಾಗಿರುತ್ತಾ ದೃಢವಾಗಿ ನಿಂತು ನ್ಯಾಯ ಪಾಲಿಸುವವರಾಗಿರಿ. ಅದು ಸ್ವತಃ ನಿಮಗೆ ಅಥವಾ ನಿಮ್ಮ ಮಾತಾಪಿತರಿಗೆ ಅಥವಾ ನಿಕಟ ಸಂಬಂಧಿಕರಿಗೆ ವಿರುದ್ಧವಾಗಿದ್ದರೂ ಸರಿ. (ನ್ಯಾಯಬೇಡುವವನು) ಧನಿಕನಾಗಿರಲಿ ಬಡವನಾಗಿರಲಿ ಅವರಿಬ್ಬರೊಂದಿಗೂ ಹೆಚ್ಚು ನಿಕಟನಾಗಿರುವವನು ಅಲ್ಲಾಹನಾಗಿರುವನು. ಆದ್ದರಿಂದ ನೀವು ನ್ಯಾಯ ಪಾಲಿಸದೆ ದೇಹೇಚ್ಛೆಗಳನ್ನು ಅನುಸರಿಸದಿರಿ. ನೀವು ತಿರುಚುವುದಾಗಲಿ ಹಿಂದೆ ಸರಿಯುವುದಾಗಲಿ ಮಾಡಿದರೆ ಖಂಡಿತವಾಗಿಯೂ ನೀವು ಮಾಡುತ್ತಿರುವುದೆಲ್ಲವನ್ನೂ ಅಲ್ಲಾಹು ಸೂಕ್ಷ್ಮವಾಗಿ ಅರಿಯುವವನಾಗಿರುವನು." [ಅನ್ನಿಸಾ:135].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಮಸ್ಜಿದುಲ್ ಹರಾಮ್‌ನಿಂದ ನಿಮ್ಮನ್ನು ತಡೆದರು ಎಂಬ ಕಾರಣದಿಂದ ಒಂದು ಜನತೆಯೊಂದಿಗೆ ನಿಮಗಿರುವ ಕ್ರೋಧವು ಅನ್ಯಾಯ ವೆಸಗಲು ನಿಮಗೆಂದೂ ಪ್ರೇರಣೆಯಾಗದಿರಲಿ. ಪುಣ್ಯ ಮತ್ತು ಧರ್ಮನಿಷ್ಠೆಯಲ್ಲಿ ಪರಸ್ಪರ ಸಹಕರಿಸಿರಿ. ಪಾಪ ಮತ್ತು ಅತಿಕ್ರಮದಲ್ಲಿ ಪರಸ್ಪರ ಸಹಕರಿಸದಿರಿ. ನೀವು ಅಲ್ಲಾಹನನ್ನು

ಭಯಪಡಿರಿ. ಖಂಡಿತವಾಗಿಯೂ ಅಲ್ಲಾಹು ಕಠಿಣವಾಗಿ ಶಿಕ್ಷಿಸುವವನಾಗಿರುವನು." [ಅಲ್-ಮಾಇದ:2].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗೋಸ್ಕರ ನೆಲೆಗೊಳ್ಳುವವರೂ, ನ್ಯಾಯಕ್ಕೆ ಸಾಕ್ಷಿವಹಿಸುವವರೂ ಆಗಿರಿ. ಒಂದು ಜನತೆಯೊಂದಿಗಿರುವ ಕ್ರೋಧವು ನ್ಯಾಯ ಪಾಲಿಸದಿರಲು ನಿಮ್ಮನ್ನು ಪ್ರೇರೇಪಿಸದಿರಲಿ. ನ್ಯಾಯ ಪಾಲಿಸಿರಿ. ಅದು ಧರ್ಮನಿಷ್ಠೆಗೆ ಅತ್ಯಂತ ನಿಕಟವಾಗಿದೆ. ನೀವು ಅಲ್ಲಾಹನನ್ನು ಭಯಪಡಿರಿ. ಖಂಡಿತವಾಗಿಯೂ ನೀವು ಮಾಡುತ್ತಿರುವುದನ್ನು ಅಲ್ಲಾಹು ಸೂಕ್ಷ್ಮವಾಗಿ ಅರಿಯುವವನಾಗಿರುವನು." [ಅಲ್-ಮಾಇದ:8].

ಸ್ವತಃ ತನಗೆ ಅಥವಾ ತನ್ನ ಮಾತಾಪಿತರಿಗೆ ಅಥವಾ ತನ್ನ ನಿಕಟ ಸಂಬಂಧಿಕರಿಗೆ ವಿರುದ್ಧವಾಗಿದ್ದರೂ ಸರಿ, ಸತ್ಯಕ್ಕೆ ಸಾಕ್ಷಿಯಾಗುವ ಮತ್ತು ಸತ್ಯವನ್ನೇ ನುಡಿಯುವ ಹಾಗೂ ಶತ್ರುವಿನೊಂದಿಗೂ ಸ್ನೇಹಿತನೊಂದಿಗೂ ನ್ಯಾಯ ಪಾಲಿಸಬೇಕೆಂದು ಆದೇಶಿಸುವ ಇಂತಹ ಆದೇಶವನ್ನು ಇಂದು ಯಾವುದೇ ದೇಶದ ಸಂವಿಧಾನದಲ್ಲಿ ಅಥವಾ ಧಾರ್ಮಿಕ ಗ್ರಂಥಗಳಲ್ಲಿ ನಿಮಗೆ ನೋಡಲು ಸಾಧ್ಯವೇ?

ಮಕ್ಕಳ ನಡುವೆ ನ್ಯಾಯ ಪಾಲಿಸಬೇಕೆಂದು ಪ್ರವಾದಿ صلي الله عليه وسلم ರವರು ಆದೇಶಿಸಿದ್ದಾರೆ. ಆಮಿರ್(ರ) ಹೇಳುತ್ತಾರೆ: ನುಅ್‌ಮಾನ್ ಬಿನ್ ಬಷೀರ್ رضي الله عنه ಮಿಂಬರಿನಲ್ಲಿ (ಶುಕ್ರವಾರದಂದು ಭಾಷಣ ಕೊಡುವ ಪೀಠ) ಹೀಗೆ ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ: ನನ್ನ ತಂದೆ ನನಗೆ ಒಂದು ಉಡುಗೊರೆ ನೀಡಿದರು. (ನನ್ನ ತಾಯಿ) ಅಮ್ರ ಬಿಂತಿ ರವಾಹ رضي الله عنها ಹೇಳಿದರು: "ನೀವು ಇದಕ್ಕೆ ಪ್ರವಾದಿ صلي الله عليه وسلم ರವರನ್ನು ಸಾಕ್ಷಿಯಾಗಿ ಮಾಡುವ ತನಕ ನನಗೆ ತೃಪ್ತಿಯಿಲ್ಲ." ನನ್ನ ತಂದೆ ಪ್ರವಾದಿಯವರ(ಸ) ಬಳಿಗೆ ತೆರಳಿ ಹೇಳಿದರು: "ಯಾ ರಸೂಲಲ್ಲಾಹ್! ನಾನು ನನ್ನ ಪತ್ನಿ ಅಮ್ರಾಳಿಗೆ ಜನಿಸಿದ ನನ್ನ ಪುತ್ರನಿಗೆ ಒಂದು ಉಡುಗೊರೆ ಕೊಟ್ಟಿದ್ದೇನೆ. ಇದಕ್ಕೆ ತಮ್ಮನ್ನು ಸಾಕ್ಷಿಯಾಗಿ ಮಾಡುವ ತನಕ ನನಗೆ ತೃಪ್ತಿಯಿಲ್ಲ ಎಂದು ಆಕೆ ಹೇಳುತ್ತಾರೆ." ಪ್ರವಾದಿ(ಸ) ಕೇಳಿದರು: "ನೀವು ನಿಮ್ಮ ಎಲ್ಲಾ

ಮಕ್ಕಳಿಗೂ ಇಷ್ಟೇ ಕೊಟ್ಟಿರುವಿರಾ?" ಅವರು ಇಲ್ಲವೆಂದಾಗ ಪ್ರವಾದಿ(ಸ) ಹೇಳಿದರು: "ಅಲ್ಲಾಹನನ್ನು ಭಯಪಡಿರಿ ಮತ್ತು ಮಕ್ಕಳ ಮಧ್ಯೆ ನ್ಯಾಯಪಾಲಿಸಿರಿ." ಇದನ್ನು ಕೇಳಿ ನನ್ನ ತಂದೆ ಮರಳಿ ಬಂದು ಉಡುಗೊರೆಯನ್ನು ನನ್ನಿಂದ ವಾಪಸು ಪಡೆದರು. [ಸಹೀಹುಲ್ ಬುಖಾರಿ 2587.]

ಇದೇಕೆಂದರೆ ಜನರ ಮತ್ತು ರಾಷ್ಟ್ರಗಳ ವ್ಯವಹಾರವು ನ್ಯಾಯದಿಂದಲ್ಲದೆ ನಡೆಯಲು ಸಾಧ್ಯವಿಲ್ಲ. ತಮ್ಮ ಧರ್ಮ, ರಕ್ತ, ಸಂತಾನ, ಗೌರವ, ಸಂಪತ್ತು ಮತ್ತು ತಮ್ಮ ನಾಡುಗಳ ವಿಷಯದಲ್ಲಿ ನ್ಯಾಯದಿಂದಲ್ಲದೆ ಸುರಕ್ಷಿತರಾಗಿರಲು ಸಾಧ್ಯವಿಲ್ಲ. ಆದುದರಿಂದ ಮಕ್ಕಾದ ಸತ್ಯ ನಿಷೇಧಿಗಳು ಮಕ್ಕಾ ನಗರದಲ್ಲಿ ಮುಸ್ಲಿಮರ ಜೀವನವನ್ನು ಸಂಕುಚಿತಗೊಳಿಸಿದಾಗ ಪ್ರವಾದಿ صلى الله عليه وسلم ರವರು ಅವರನ್ನು (ಮುಸ್ಲಿಮರನ್ನು) ಹಬ್‌ಶಾಗೆ ವಲಸೆ ಹೋಗಿರೆಂದು ಆದೇಶಿಸಿದರು. ಅಲ್ಲಿ ಯಾರಿಗೂ ಅನ್ಯಾಯವಾಗದಂತೆ ನ್ಯಾಯಪಾಲಿಸುವ ರಾಜ ಇದ್ದಾನೆಂಬುದೇ ಇದಕ್ಕೆ ಕಾರಣ.

## 31. ಇಸ್ಲಾಮ್ ಧರ್ಮವು ಎಲ್ಲಾ ಸೃಷ್ಟಿಗಳೊಂದಿಗೆ ಸದ್ವರ್ತನೆಯಿಂದ ವರ್ತಿಸಬೇಕೆಂದು ಆದೇಶಿಸುತ್ತದೆ. ಅತ್ಯುತ್ತಮ ಸ್ವಭಾವಗಳನ್ನು ಅಳವಡಿಸಿಕೊಳ್ಳಬೇಕೆಂದು ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡಬೇಕೆಂದು ಆಹ್ವಾನಿಸುತ್ತದೆ.

ಇಸ್ಲಾಮ್ ಧರ್ಮವು ಎಲ್ಲಾ ಸೃಷ್ಟಿಗಳೊಂದಿಗೆ ಸದ್ವರ್ತನೆಯಿಂದ ವರ್ತಿಸಬೇಕೆಂದು ಆದೇಶಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ಅಲ್ಲಾಹು ನ್ಯಾಯ ಪಾಲಿಸಲು, ಒಳಿತನ್ನು ಮಾಡಲು ಮತ್ತು ಸಂಬಂಧಿಕರಿಗೆ (ನೆರವು) ನೀಡಲು ಆಜ್ಞಾಪಿಸುತ್ತಿರುವನು." [ಅನ್ನಹ್ಲ್:90].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಅಂದರೆ) ಅನುಕೂಲ ಸ್ಥಿತಿಯಲ್ಲೂ ಪ್ರತಿಕೂಲ ಸ್ಥಿತಿಯಲ್ಲೂ ದಾನಧರ್ಮ ಮಾಡುವ, ಕೋಪವನ್ನು ಅದುಮಿಡುವ ಮತ್ತು ಜನರಿಗೆ ಕ್ಷಮೆ ನೀಡುವವರಿಗೆ. ಅಲ್ಲಾಹು ಸತ್ಕರ್ಮಿಗಳನ್ನು ಪ್ರೀತಿಸುವನು."** [ಆಲಿ ಇಮ್ರಾನ್:134].

ಪ್ರವಾದಿ ಮುಹಮ್ಮದ್ صلي الله عليه وسلم ರವರು ಹೇಳಿದರು: **"ಖಂಡಿತವಾಗಿಯೂ ಅಲ್ಲಾಹನು ಪ್ರತಿಯೊಂದು ವಿಷಯದಲ್ಲೂ ಒಳಿತು ಮತ್ತು ಅಚ್ಚುಕಟ್ಟನ್ನು ಕಡ್ಡಾಯಗೊಳಿಸಿದ್ದಾನೆ. ನೀವು (ಪ್ರಾಣಿಯನ್ನು) ಕೊಲ್ಲುವಾಗ ಅತ್ಯುತ್ತಮ ರೀತಿಯಲ್ಲಿ ಕೊಲ್ಲಿರಿ. ಕೊಯ್ಯುವಾಗ ಉತ್ತಮ ವಿಧಾನದಿಂದ ಕೊಯ್ಯಿರಿ. ನಿಮ್ಮಲ್ಲಿ ಯಾರಾದರೂ ವಧಿಸಲು ಬಯಸಿದರೆ ಅವನು ಚೂರಿಯನ್ನು ಹರಿತಗೊಳಿಸಲಿ ಹಾಗೂ ವಧಿಸುವ ಪ್ರಾಣಿಗೆ (ಸಾಧ್ಯವಾದಷ್ಟು) ನೆಮ್ಮದಿಯನ್ನು ನೀಡಲಿ."** [ಸಹೀಹ್ ಮುಸ್ಲಿಮ್: 1955.]

ಇಸ್ಲಾಮ್ ಅತ್ಯುತ್ತಮ ಸ್ವಭಾವಗಳನ್ನು ಅಳವಡಿಸಿಕೊಳ್ಳಬೇಕೆಂದು ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡಬೇಕೆಂದು ಆಹ್ವಾನಿಸುತ್ತದೆ. ಪೂರ್ವ ಗ್ರಂಥಗಳಲ್ಲಿರುವ ಪ್ರವಾದಿ ಮುಹಮ್ಮದ್ صلي الله عليه وسلم ರವರ ಗುಣ ವಿಶೇಷತೆಯ ಬಗ್ಗೆ

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಅಂದರೆ) ತಮ್ಮ ಬಳಿಯಿರುವ ತೌರಾತ್‌ನಲ್ಲಿ ಮತ್ತು ಇಂಜೀಲ್‌ನಲ್ಲಿ ದಾಖಲಿಸಲ್ಪಟ್ಟಿರುವುದಾಗಿ ಅವರು ಕಾಣುವ ನಿರಕ್ಷರಿ ಪ್ರವಾದಿಯಾದ ಸಂದೇಶವಾಹಕರನ್ನು (ಪ್ರವಾದಿ ಮುಹಮ್ಮದ್‌ರನ್ನು) ಅನುಸರಿಸುವವರಿಗೆ (ಆ ಕಾರುಣ್ಯವನ್ನು ನಾನು ವಿಧಿಸುವೆನು). ಆ ಪ್ರವಾದಿಯು ಅವರೊಂದಿಗೆ ಸದಾಚಾರವನ್ನು ಆದೇಶಿಸುವರು ಮತ್ತು ದುರಾಚಾರವನ್ನು ವಿರೋಧಿಸುವರು. ಅವರಿಗೆ ಉತ್ತಮ ವಸ್ತುಗಳನ್ನು ಧರ್ಮಸಮ್ಮತಗೊಳಿಸುವರು ಮತ್ತು ಕೆಟ್ಟ ವಸ್ತುಗಳನ್ನು ಅವರ ಮೇಲೆ ನಿಷಿದ್ಧಗೊಳಿಸುವರು. ಅವರ ಭಾರಗಳನ್ನು ಮತ್ತು ಅವರ ಮೇಲಿದ್ದ ಸಂಕೋಲೆಗಳನ್ನು ಕೆಳಗಿಳಿಸುವರು. ಆದ್ದರಿಂದ ಆ ಪ್ರವಾದಿಯಲ್ಲಿ ವಿಶ್ವಾಸವಿಡುವವರು, ಅವರನ್ನು ಬೆಂಬಲಿಸುವವರು, ಸಹಾಯ ಮಾಡುವವರು ಮತ್ತು ಅವರೊಂದಿಗೆ ಅವತೀರ್ಣಗೊಂಡಿರುವ ಪ್ರಕಾಶವನ್ನು ಅನುಸರಿಸುವವರು ಯಾರೋ ಅವರೇ ಯಶಸ್ವಿಯಾದವರಾಗಿರುವರು."** [ಅಲ್-ಅಅ್‌ರಾಫ್:157]

ಪ್ರವಾದಿ صلي الله عليه وسلم ರವರು ಹೇಳಿದರು: **"ಓ ಆಯಿಷಾ! ಖಂಡಿತವಾಗಿಯೂ ಅಲ್ಲಾಹನು ಸೌಮ್ಯನು ಮತ್ತು ಸೌಮ್ಯತೆಯನ್ನು ಇಷ್ಟಪಡುತ್ತಾನೆ. ಅವನು ಗಡಸುತನಕ್ಕೆ ನೀಡದೇ ಇರುವುದನ್ನು ಮತ್ತು ಇತರ ಯಾವುದಕ್ಕೂ ನೀಡದೇ ಇರುವುದನ್ನು ಸೌಮ್ಯತೆಗೆ ಕೊಡುತ್ತಾನೆ."** [ಸಹೀಹ್ ಮುಸ್ಲಿಮ್: 2593.]

ಪ್ರವಾದಿ صلي الله عليه وسلم ರವರು ಹೇಳಿದರು: **"ಖಂಡಿತವಾಗಿಯೂ ಅಲ್ಲಾಹನು ನಿಮಗೆ ತಾಯಿಯ ಆಜ್ಞೋಲ್ಲಂಘನೆ ಮಾಡುವುದನ್ನು ಮತ್ತು ಹೆಣ್ಣು ಮಕ್ಕಳನ್ನು ಜೀವಂತ ಹೂಳುವುದನ್ನು ನಿಷೇಧಿಸಿದ್ದಾನೆ. ಯಾರದೇ ಹಕ್ಕುಚ್ಯುತಿ ಮಾಡುವುದನ್ನು ಅಥವಾ ಅಕ್ರಮವಾಗಿ (ಸೊತ್ತು) ಪಡೆಯುವುದನ್ನು ನಿಷೇಧಿಸಿದ್ದಾನೆ. ನಿಷ್ಪ್ರಯೋಜಕ ಮಾತುಗಳನ್ನಾಡುವುದನ್ನು, ಹೆಚ್ಚು ಪ್ರಶ್ನೆ ಕೇಳುವುದನ್ನು ಮತ್ತು ಸಂಪತ್ತನ್ನು ದುರ್ವ್ಯಯ ಮಾಡುವುದನ್ನು ನಿಷೇಧಿಸುತ್ತಾನೆ."** [ಸಹೀಹುಲ್ ಬುಖಾರಿ 2408.]

ಪ್ರವಾದಿ صلي الله عليه وسلم ರವರು ಹೇಳಿದರು: **"ನೀವು ಸತ್ಯವಿಶ್ವಾಸಿಗಳಾಗುವವರೆಗೆ ನೀವು ಸ್ವರ್ಗ ಪ್ರವೇಶಿಸಲಾರಿರಿ. ನೀವು ಪರಸ್ಪರ ಪ್ರೀತಿಸುವವರಿಗೆ ನೀವು ಸತ್ಯವಿಶ್ವಾಸಿ ಗಳಾಗಲಾರಿರಿ. ನಾನು ನಿಮಗೆ ಒಂದು ವಿಷಯವನ್ನು ತಿಳಿಸಿಕೊಡಲೇ? ಅದನ್ನು ಮಾಡಿದರೆ ನೀವು ಪರಸ್ಪರ ಪ್ರೀತಿಸುವಿರಿ. ನೀವು ಪರಸ್ಪರ ಸಲಾಮನ್ನು ಹಬ್ಬಿಸಿರಿ."** [ಸಹೀಹ್ ಮುಸ್ಲಿಮ್: 54.]

## 32. ಇಸ್ಲಾಮ್ ಧರ್ಮವು ಸತ್ಯ, ಪ್ರಾಮಾಣಿಕತೆ, ಗುಣಶೀಲತೆ, ಸಭ್ಯತೆ, ಧೈರ್ಯ, ಔದಾರ್ಯ, ಉದಾರತನ, ನಿರ್ಗತಿಕರಿಗೆ ಸಹಾಯ ಮಾಡುವುದು, ದುಃಖಿತರಿಗೆ ನೆರವು ನೀಡುವುದು, ಹಸಿದವರಿಗೆ ಆಹಾರ ನೀಡುವುದು, ನೆರೆಹೊರೆಯವರೊಂದಿಗೆ ಸದ್ವರ್ತನೆ ತೋರುವುದು, ಸಂಬಂಧಗಳನ್ನು ಜೋಡಿಸುವುದು, ಪ್ರಾಣಿಗಳ ಮೇಲೆ ದಯೆ ತೋರುವುದು ಮುಂತಾದ ಸ್ತುತ್ಯರ್ಹ ಗುಣಸ್ವಭಾವಗಳನ್ನು ಅಳವಡಿಸಿಕೊಳ್ಳಲು ಆದೇಶಿಸುತ್ತದೆ.

ಇಸ್ಲಾಮ್ ಧರ್ಮವು ಸ್ತುತ್ಯರ್ಹ ಗುಣಸ್ವಭಾವಗಳನ್ನು ಅಳವಡಿಸಿಕೊಳ್ಳಬೇಕೆಂದು ಆದೇಶಿಸುತ್ತದೆ. ಪ್ರವಾದಿ صلي الله عليه وسلم ರವರು ಹೇಳಿದರು: **"ಖಂಡಿತವಾಗಿಯೂ ನನ್ನನ್ನು ಅತ್ಯುತ್ತಮ ಸ್ವಭಾವಗಳನ್ನು ಪರಿಪೂರ್ಣಗೊಳಿಸಲೆಂದು ಮಾತ್ರ ಕಳುಹಿಸಲಾಗಿದೆ."** [ಸಹೀಹುಲ್ ಅದಬಿಲ್ ಮುಫ್ರದ್ 207.]

ಪ್ರವಾದಿ صلي الله عليه وسلم ರವರು ಹೇಳಿದರು: **"ನಿಮ್ಮ ಪೈಕಿ (ಇಹಲೋಕದಲ್ಲಿ) ನನಗೆ ಅತ್ಯಂತ ಪ್ರಿಯರು ಮತ್ತು ಪುನರುತ್ಥಾನ ದಿನದಂದು ನನಗೆ ಅತ್ಯಂತ ಹತ್ತಿರವಿರುವವರು ನಿಮ್ಮಲ್ಲಿ ಅತ್ಯುತ್ತಮ ಸ್ವಭಾವ ಹೊಂದಿರುವವರಾಗಿದ್ದಾರೆ. ನಿಮ್ಮ ಪೈಕಿ (ಇಹಲೋಕದಲ್ಲಿ) ನನಗೆ ಅತ್ಯಂತ ದ್ವೇಷವಿರುವವರು ಮತ್ತು ಪುನರುತ್ಥಾನದ ದಿನದಂದು ನನ್ನಿಂದ ಅತ್ಯಂತ ದೂರವಿರುವವರು ವಾಚಾಳರು (ಅಸಡ್ಡೆ ಮಾತನಾಡುವವರು) ಮತ್ತು ಎಳೆದು ಮಾತನಾಡು ವವರು ಮತ್ತು "ಮುತಫೈಹಿಖೂನ್" ಆಗಿದ್ದಾರೆ."** ಸಹಾಬಾಗಳು ಹೇಳಿದರು: "ಅಲ್ಲಾಹನ ಸಂದೇಶವಾಹಕರೇ! ನಾವು "ಸರ್ಸಾರೂನ್" (ವಾಚಾಳರು) ಅಲ್ ಮುತಷದ್ದಿಖೂನ್ (ಎಳೆದು ಮಾತನಾಡುವವರು) ರನ್ನು ತಿಳಿದಿದ್ದೇವೆ. ಆದರೆ ಈ "ಮುತಫೈಹಿಖೂನ್" ಎಂದರೆ ಯಾರು?" ಪ್ರವಾದಿ صلي الله عليه وسلم ರವರು ಹೇಳಿದರು: **"ಅಹಂಕಾರಿಗಳು."** [ಅಸ್ಸಿಲ್ಸಿಲತು-ಸ್ಸಹೀಹ 791.]

ಅಬ್ದುಲ್ಲಾ ಬಿನ್ ಅಮ್ರ್ رضي الله عنهما ಹೇಳುತ್ತಾರೆ: ಪ್ರವಾದಿ صلى الله عليه وسلم ರವರು ಅಸಭ್ಯ ಮಾತು ಆಡುವವರಲ್ಲ. ಅಸಭ್ಯ ನುಡಿಯಲು ಪ್ರಯತ್ನಿಸುತ್ತಲೂ ಇರಲಿಲ್ಲ. ಅವರು ಹೇಳುತ್ತಿದ್ದರು **"ಅತ್ಯುತ್ತಮ ಸ್ವಭಾವದವನೇ ನಿಮ್ಮ ಪೈಕಿ ಅತ್ಯುತ್ತಮ".** [ಸಹೀಹುಲ್ ಬುಖಾರಿ 3559.]

ಇಸ್ಲಾಮ್ ಧರ್ಮವು ಸಾಮಾನ್ಯವಾಗಿ ಅತ್ಯುತ್ತಮ ಸ್ವಭಾವ ಮತ್ತು ಅತ್ಯುತ್ತಮ ಸತ್ಕರ್ಮಗಳಿಗೆ ಪ್ರೇರಣೆ ನೀಡುತ್ತದೆಂದು ಸೂಚಿಸುವ ಇತರೆ ಇನ್ನೂ ಅನೇಕ ಸೂಕ್ತಿಗಳು ಮತ್ತು ಹದೀಸ್‌ಗಳಿವೆ. ಇಸ್ಲಾಮ್ ಧರ್ಮವು ಆದೇಶಿಸುವ ಇನ್ನೊಂದು ವಿಷಯ: ಸತ್ಯ.

ಪ್ರವಾದಿ صلى الله عليه وسلم ರವರು ಹೇಳಿದರು: **“ಸತ್ಯವನ್ನೇ ಹೇಳಿರಿ. ಏಕೆಂದರೆ ಸತ್ಯವು ಸತ್ಕರ್ಮಕ್ಕೆ ದಾರಿ ತೋರಿಸುತ್ತದೆ. ಸತ್ಕರ್ಮವು ಸ್ವರ್ಗಕ್ಕೆ ದಾರಿ ತೋರಿಸುತ್ತದೆ. ಒಬ್ಬ ವ್ಯಕ್ತಿಯು ನಿರಂತರವಾಗಿ ಸತ್ಯವನ್ನೇ ಹೇಳುತ್ತಾ ಸತ್ಯಕ್ಕೆ ಪ್ರಾಮುಖ್ಯತೆ ನೀಡುತ್ತಾ ಇದ್ದರೆ ಅವನು ಅಲ್ಲಾಹನ ಬಳಿ ಸತ್ಯವಂತನೆಂದು ದಾಖಲಿಸಲ್ಪಡುತ್ತಾನೆ.”** [ಸಹೀಹ್ ಮುಸ್ಲಿಮ್: 2607.]

ಇಸ್ಲಾಮ್ ಧರ್ಮವು ಆದೇಶಿಸುವ ಇನ್ನೊಂದು ವಿಷಯ: ಅಮಾನತ್ತನ್ನು ವಹಿಸುವುದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ನಂಬಿಕೆಯೊಂದಿಗೆ ವಹಿಸಿಕೊಡಲಾದ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ಕೊಡಬೇಕೆಂದು ಅಲ್ಲಾಹು ನಿಮ್ಮೊಂದಿಗೆ ಆಜ್ಞಾಪಿಸುತ್ತಿರುವನು.”** [ಅನ್ನಿಸಾ:58].

ಇಸ್ಲಾಮ್ ಧರ್ಮವು ಆದೇಶಿಸುವ ಇನ್ನೊಂದು ವಿಷಯ: ಗುಣಶೀಲತೆ. ಪ್ರವಾದಿ صلى الله عليه وسلم ರವರು ಹೇಳಿದರು: **“ಮೂರು ವ್ಯಕ್ತಿಗಳಿಗೆ ಸಹಾಯ ಮಾಡುವುದು ಅಲ್ಲಾಹನಿಗೆ ಕಡ್ಡಾಯವಾಗಿದೆ. ಅವರಲ್ಲೊಬ್ಬನು ಗುಣಶೀಲತೆಯನ್ನು ಬಯಸುತ್ತಾ ಮದುವೆಯಾಗುವವನು.”** [ಸುನನುತ್ತಿರ್ಮಿದಿ: 1655]

ಪ್ರವಾದಿ صلي الله عليه وسلم ರವರು ಹೀಗೆ ಪ್ರಾರ್ಥಿಸುತ್ತಿದ್ದರು: **"ಓ ಅಲ್ಲಾಹ್ ನಾನು ನಿನ್ನೊಂದಿಗೆ ಸನ್ಮಾರ್ಗ, ಭಯಭಕ್ತಿ, ಗುಣಶೀಲತೆ, ಮತ್ತು ಶ್ರೀಮಂತಿಕೆಯನ್ನು ಬೇಡುತ್ತೇನೆ."** [ಸಹೀಹ್ ಮುಸ್ಲಿಮ್: 2721.]

ಇಸ್ಲಾಮ್ ಧರ್ಮವು ಆದೇಶಿಸುವ ಇನ್ನೊಂದು ವಿಷಯ: ಲಜ್ಜೆ. ಪ್ರವಾದಿ صلي الله عليه وسلم ರವರು ಹೇಳಿದರು: **"ಲಜ್ಜೆಯಿಂದ ಒಳಿತಲ್ಲದೆ ಇನ್ನೇನೂ ಲಭಿಸುವುದಿಲ್ಲ."** [ಸಹೀಹುಲ್ ಬುಖಾರಿ 6117.]

ಪ್ರವಾದಿ صلي الله عليه وسلم ರವರು ಹೇಳಿದರು: **"ಪ್ರತಿಯೊಂದು ಧರ್ಮಕ್ಕೂ ಒಂದು ಸದ್ಗುಣವಿದೆ. ಇಸ್ಲಾಂ ಧರ್ಮದ ಸದ್ಗುಣವು ಲಜ್ಜೆಯಾಗಿದೆ."** [ಈ ಹದೀಸನ್ನು ಇಮಾಮ್ ಬೈಹಖಿ ರವರು ಶುಅಬುಲ್ ಈಮಾನ್ ಪುಸ್ತಕದಲ್ಲಿ ವರದಿ ಮಾಡಿದ್ದಾರೆ 6/2619.]

ಇಸ್ಲಾಮ್ ಧರ್ಮವು ಆದೇಶಿಸುವ ಇನ್ನೊಂದು ವಿಷಯ: ಧೈರ್ಯ. ಅನಸ್ رضي الله عنه ರವರು ಹೇಳುತ್ತಾರೆ: "ಪ್ರವಾದಿ صلي الله عليه وسلم ರವರು ಅತ್ಯಂತ ಸುಂದರ, ಅತ್ಯಂತ ಧೈರ್ಯಶಾಲಿ ಮತ್ತು ಅತ್ಯಂತ ಉದಾರಿಯಾಗಿದ್ದರು. ಮದೀನಾದ ಜನರು (ಒಂದು ರಾತ್ರಿ) ಭಯಭೀತರಾಗಿದ್ದರು. (ಒಂದು ಧ್ವನಿ ಕೇಳಿಸಿದಾಗ ಎಲ್ಲರೂ ಆ ಕಡೆಗೆ ಚಲಿಸಿದರು) ಪ್ರವಾದಿ صلي الله عليه وسلم ರವರು ಆ ಸಮಯದಲ್ಲಿ ಅವರೆಲ್ಲರ ಮುಂದೆ ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದರು." [ಸಹೀಹುಲ್ ಬುಖಾರಿ 2820.]

ಪ್ರವಾದಿ صلي الله عليه وسلم ರವರು ಅಲ್ಲಾಹನಲ್ಲಿ ಹೇಡಿತನದಿಂದ ಅಭಯ ಯಾಚಿಸುತ್ತಿದ್ದರು. ಅವರು ಹೇಳುತ್ತಿದ್ದರು: **"ಓ ಅಲ್ಲಾಹ್ ನಾನು ನಿನ್ನೊಂದಿಗೆ ಹೇಡಿತನದಿಂದ ಅಭಯ ಯಾಚಿಸುತ್ತೇನೆ."** [ಸಹೀಹುಲ್ ಬುಖಾರಿ 6374.]

ಇಸ್ಲಾಮ್ ಧರ್ಮವು ಆದೇಶಿಸುವ ಇನ್ನೊಂದು ವಿಷಯ: ಔದಾರ್ಯ ಮತ್ತು ಉದಾರತನ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ವ್ಯಯಿಸುವವರನ್ನು ಒಂದು ಧಾನ್ಯದೊಂದಿಗೆ ಹೋಲಿಸಬಹುದು. ಅದು ಏಳು ತೆನೆಗಳನ್ನು ಉತ್ಪಾದಿಸಿತು. ಪ್ರತಿಯೊಂದು ತೆನೆಯಲ್ಲೂ ನೂರು ಧಾನ್ಯಗಳಿವೆ. ಅಲ್ಲಾಹು ಅವನಿಚ್ಛಿಸುವವರಿಗೆ ಇಮ್ಮಡಿಯಾಗಿ ಕೊಡುವನು. ಅಲ್ಲಾಹು ಅಪಾರ ಸಾಮರ್ಥ್ಯವುಳ್ಳವನೂ, (ಎಲ್ಲವನ್ನೂ) ಅರಿಯುವವನೂ ಆಗಿರುವನು."** [ಅಲ್-ಬಖರ:261].

ಉದಾರತನ ಪ್ರವಾದಿ صلى الله عليه وسلم ರವರ ಸದ್ಗುಣಗಳಲ್ಲೊಂದಾಗಿದೆ. ಇಬ್ನು ಅಬ್ಬಾಸ್ رضي الله عنهما ರವರು ಹೇಳುತ್ತಾರೆ : "ಪ್ರವಾದಿ صلى الله عليه وسلم ರವರು ಸತ್ಕಾರ್ಯದ ವಿಷಯದಲ್ಲಿ ಜನರ ಪೈಕಿ ಎಲ್ಲರಿಗಿಂತಲೂ ಹೆಚ್ಚು ಉದಾರಿಯಾಗಿದ್ದರು. ರಮದಾನಿನಲ್ಲಿ ಜಿಬ್ರೀಲ್‌ರನ್ನು ಭೇಟಿಯಾಗುವಾಗ ಅವರು ಅತಿಹೆಚ್ಚು ಉದಾರಿಯಾಗು ತ್ತಿದ್ದರು. ರಮದಾನ್ ತಿಂಗಳು ಕಳೆಯುವವರೆಗೂ ರಮದಾನಿನ ಎಲ್ಲಾ ರಾತ್ರಿಗಳಲ್ಲೂ ಜಿಬ್ರೀಲ್ عليه السلام ಪ್ರವಾದಿ(ಸ) ಯವರನ್ನು ಭೇಟಿಯಾಗುತ್ತಿದ್ದರು. ಪ್ರವಾದಿ(ಸ) ರವರು ಅವರ ಮುಂದೆ ಕುರ್‌ಆನ್ ಪಾರಾಯಣ ಮಾಡುತ್ತಿದ್ದರು. ಜಿಬ್ರೀಲ್ عليه السلام ಅವರನ್ನು ಭೇಟಿಯಾಗುವಾಗ ಅವರು ಒಳಿತಿನ ಕಾರ್ಯಗಳಲ್ಲಿ ಬೀಸುವ ಗಾಳಿಗಿಂತಲೂ ಹೆಚ್ಚು ಉದಾರಿಯಾಗುತ್ತಿದ್ದರು." [ಸಹೀಹುಲ್ ಬುಖಾರಿ 1902.]

ನಿರ್ಗತಿಕರಿಗೆ ಸಹಾಯ ಮಾಡುವುದು, ದುಃಖಿತರಿಗೆ ನೆರವು ನೀಡುವುದು, ಹಸಿದವರಿಗೆ ಆಹಾರ ನೀಡುವುದು, ನೆರೆಹೊರೆಯವರೊಂದಿಗೆ ಸದ್ವರ್ತನೆ ತೋರುವುದು, ಸಂಬಂಧಗಳನ್ನು ಜೋಡಿಸುವುದು, ಪ್ರಾಣಿಗಳ ಮೇಲೆ ದಯೆ ತೋರುವುದು ಮುಂತಾದವುಗಳನ್ನು ಇಸ್ಲಾಮ್ ಧರ್ಮವು ಆದೇಶಿಸುತ್ತದೆ.

ಅಬ್ದುಲ್ಲಾ ಬಿನ್ ಅಮ್ರ್ رضي الله عنهما ಹೇಳುತ್ತಾರೆ: ಒಬ್ಬ ವ್ಯಕ್ತಿ ಪ್ರವಾದಿವರ್ಯರಲ್ಲಿ صلى الله عليه وسلم "ಇಸ್ಲಾಮಿನಲ್ಲಿ ಶ್ರೇಷ್ಠ ಕರ್ಮ ಯಾವುದು?" ಎಂದು ಕೇಳಿದರು. ಪ್ರವಾದಿ صلى الله عليه وسلم ರವರು ಹೇಳಿದರು: **"ಆಹಾರವನ್ನು ಉಣಿಸುವುದು ಮತ್ತು ನಿನಗೆ**

ಪರಿಚಯವಿರುವವರಿಗೂ ಪರಿಚಯವಿಲ್ಲದವರಿಗೂ ಸಲಾಮ್ ಹೇಳುವುದು." [ಸಹೀಹುಲ್ ಬುಖಾರಿ 12.]

ಪ್ರವಾದಿ صلى الله عليه وسلم ರವರು ಹೇಳಿದರು: "ಒಬ್ಬ ವ್ಯಕ್ತಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಅವನಿಗೆ ತುಂಬಾ ಬಾಯಾರಿಕೆಯಾಯಿತು. ಅವನು ಒಂದು ಬಾವಿಯನ್ನು ಕಂಡು ಅದರಲ್ಲಿ ಇಳಿದು ನೀರು ಕುಡಿದು ಮರಳುವಾಗ ನಾಯಿಯೊಂದು ಬಾಯಾರಿಕೆಯಿಂದ ತನ್ನ ನಾಲಿಗೆ ಹೊರಚಾಚಿ, ಮಣ್ಣು ನೆಕ್ಕುವುದನ್ನು ನೋಡಿದನು. ನನಗೆ ಬಾಯಾರಿಕೆಯಾದಂತೆ ಇದಕ್ಕೂ ಬಾಯಾರಿಕೆ ಆಗಿರಬಹುದೆಂದು ಹೇಳಿಕೊಂಡು ತನ್ನ ಪಾದರಕ್ಷೆಯನ್ನಿಳಿಸಿ ನೀರು ತುಂಬಿಸಿ ನಾಯಿಯ ಬಾಯಿಗೆ ಹಾಕಿ ನೀರು ಕುಡಿಸಿದನು. ಆಗ ಅಲ್ಲಾಹನು ಅವನಿಗೆ ಉತ್ತಮ ಪ್ರತಿಫಲ ನೀಡಿ ಅವನ ಪಾಪಗಳನ್ನು ಮನ್ನಿಸಿದನು." (ಇದನ್ನು ಕೇಳಿ) ಜನರು ಕೇಳಿದರು: "ಅಲ್ಲಾಹನ ಸಂದೇಶವಾಹಕರೇ, ಪ್ರಾಣಿಗಳೊಂದಿಗೆ ಈ ರೀತಿ ವರ್ತಿಸುವುದರಿಂದಲೂ ಪುಣ್ಯ ಸಿಗುವುದೇ?" ಪ್ರವಾದಿ صلى الله عليه وسلم ಹೇಳಿದರು "ಜೀವವಿರುವ ಪ್ರತಿಯೊಂದು ಜೀವಿಯಲ್ಲಿಯೂ ಪುಣ್ಯವಿದೆ". [ಸಹೀಹ್ ಇಬ್ನ್ ಹಿಬ್ಬಾನ್ 544.]

ಪ್ರವಾದಿ صلى الله عليه وسلم ರವರು ಹೇಳಿದರು: "ವಿಧವೆಯರು ಮತ್ತು ನಿರ್ಗತಿಕರಿಗಾಗಿ ಶ್ರಮಿಸುವವನು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುವವನಂತೆ ಅಥವಾ ರಾತ್ರಿ ಪೂರ್ತಿ ನಮಾಝ್ ನಿರ್ವಹಿಸುವವನಂತೆ ಮತ್ತು ಹಗಲು ಪೂರ್ತಿ ಉಪವಾಸ ಆಚರಿಸುವವನಂತೆ." [ಸಹೀಹುಲ್ ಬುಖಾರಿ 5353.]

ಇಸ್ಲಾಮ್ ಧರ್ಮವು ಕುಟುಂಬ ಸಂಬಂಧದ ಹಕ್ಕುಗಳ ಬಗ್ಗೆ ಒತ್ತಿ ಹೇಳುತ್ತದೆ. ರಕ್ತ ಸಂಬಂಧಗಳನ್ನು ಜೋಡಿಸುವುದನ್ನು ಕಡ್ಡಾಯಗೊಳಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಸತ್ಯವಿಶ್ವಾಸಿಗಳಿಗೆ ಅವರ ಶರೀರಗಳಿಗಿಂತಲೂ ಹೆಚ್ಚು ಆಪ್ತರು ಸಂದೇಶವಾಹಕರಾಗಿರುವರು. ಅವರ ಮಡದಿಯರು ಅವರಿಗೆ ಮಾತೆಯರಾಗಿರುವರು. ಅಲ್ಲಾಹನ ನಿಯಮದಲ್ಲಿ ರಕ್ತ ಸಂಬಂಧಿಗಳು ಪರಸ್ಪರರಿಗೆ ಇತರ ಸತ್ಯವಿಶ್ವಾಸಿಗಳಿಗಿಂತಲೂ, ಮುಹಾಜಿರ್‌ಗಳಿಗಿಂತಲೂ ಹೆಚ್ಚು ನಿಕಟರಾಗಿರುವರು.

**ನೀವು ನಿಮ್ಮ ಮಿತ್ರರಿಗೆ ಏನಾದರೂ ಉಪಕಾರ ಮಾಡುವುದಾದರೆ ಅದು ಇದರಿಂದ ಹೊರತಾಗಿದೆ. ಅದು ಗ್ರಂಥದಲ್ಲಿ ದಾಖಲಿಸಲಾಗಿರುವ ವಿಷಯವಾಗಿದೆ."** [ಅಲ್-ಅಹ್‌ಝಾಬ್:6]

ರಕ್ತ ಸಂಬಂಧಗಳನ್ನು ಕಡಿಯುವುದರ ಬಗ್ಗೆ ಅಲ್ಲಾಹನು ಎಚ್ಚರಿಕೆ ನೀಡಿದ್ದಾನೆ. ಅದನ್ನು ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವುದರೊಂದಿಗೆ ಜೋಡಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆದರೆ ನೀವು ಕಾರ್ಯನಿರ್ವಹಣೆಯನ್ನು ವಹಿಸಿಕೊಳ್ಳುವುದಾದರೆ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುತ್ತಲೂ, ನಿಮ್ಮ ಕುಟುಂಬ ಸಂಬಂಧಗಳನ್ನು ಕಡಿಯುತ್ತಲೂ ಇರುವಿರಾ?(22) ಅಂತಹವರನ್ನು ಅಲ್ಲಾಹು ಶಪಿಸಿರುವನು. ಅವನು ಅವರನ್ನು ಕಿವುಡರನ್ನಾಗಿ ಮಾಡಿದನು ಮತ್ತು ಅವರ ಕಣ್ಣುಗಳಿಗೆ ಅಂಧತೆಯನ್ನು ನೀಡಿದನು.(23)"** [ಮುಹಮ್ಮದ್: 22-23]

ಪ್ರವಾದಿ صلى الله عليه وسلم ರವರು ಹೇಳಿದರು: **"ಸಂಬಂಧಗಳನ್ನು ಕಡಿಯುವವನು ಸ್ವರ್ಗ ಪ್ರವೇಶಿಸಲಾರ."** [ಸಹೀಹ್ ಮುಸ್ಲಿಮ್: 2556.]

ಕಡ್ಡಾಯವಾಗಿ ಜೋಡಿಸಬೇಕಾದ ರಕ್ತ ಸಂಬಂಧಗಳು: ತಂದೆ-ತಾಯಿಯರು, ಸಹೋದರರು, ಸಹೋದರಿಯರು, ತಂದೆಯ ಸಹೋದರ ಸಹೋದರಿಯರು ಮತ್ತು ತಾಯಿಯ ಸಹೋದರ ಸಹೋದರಿಯರು. ಇಸ್ಲಾಮ್ ಧರ್ಮವು ನೆರೆಹೊರೆಯವರ ಹಕ್ಕನ್ನು ನೀಡಬೇಕೆಂದು ಒತ್ತಿ ಹೇಳುತ್ತದೆ. ಅವರು ಸತ್ಯನಿಷಧಿಗಳಾಗಿದ್ದರೂ ಸರಿ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ಅಲ್ಲಾಹನನ್ನು ಆರಾಧಿಸಿರಿ. ಅವನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡದಿರಿ ಮತ್ತು ಮಾತಾಪಿತರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ. ಸಂಬಂಧಿಕರೊಂದಿಗೆ, ಅನಾಥರೊಂದಿಗೆ, ಬಡವರೊಂದಿಗೆ, ಕುಟುಂಬ ಸಂಬಂಧವಿರುವ ನೆರೆಹೊರೆಯವರೊಂದಿಗೆ, ಇತರ ನೆರೆಹೊರೆಯವರೊಂದಿಗೆ, ಸಹವಾಸಿಯೊಂದಿಗೆ, ದಾರಿಹೋಕರೊಂದಿಗೆ ಮತ್ತು ನಿಮ್ಮ ಬಲಗೈಗಳು ಅಧೀನದಲ್ಲಿರಿಸಿದ**

ಗುಲಾಮರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ. ದರ್ಪ ಮತ್ತು ದುರಭಿಮಾನವಿರುವ ಯಾರನ್ನೂ ಅಲ್ಲಾಹು ಮೆಚ್ಚಲಾರನು." [ಅನ್ನಿಸಾ:36].

ಪ್ರವಾದಿ صلي الله عليه وسلم ರವರು ಹೇಳಿದರು: "ನೆರೆಹೊರೆಯವರ ವಿಷಯದಲ್ಲಿ ಜಿಬ್ರೀಲರು ನನಗೆ ಎಷ್ಟು ಉಪದೇಶಿಸಿದರು ಎಂದರೆ ಅವರನ್ನು ವಾರೀಸುದಾರನಾಗಿ ಮಾಡಿ ಬಿಡಲಾಗುವುದೋ ಎಂದು ನಾನು ಭಾವಿಸಿದೆ." [ಸಹೀಹ್ ಅಬೂ ದಾವೂದ್ 5152.]

## 33. ಇಸ್ಲಾಮ್ ಧರ್ಮವು ಆಹಾರ ಮತ್ತು ಪಾನೀಯಗಳಲ್ಲಿ ಉತ್ತಮ ವಸ್ತುಗಳನ್ನು ಧರ್ಮಸಮ್ಮತಗೊಳಿಸಿದೆ. ಹೃದಯ, ದೇಹ ಮತ್ತು ಮನೆಯನ್ನು ಸ್ವಚ್ಛಗೊಳಿಸಬೇಕೆಂದು ಆದೇಶಿಸುತ್ತದೆ. ಈ ಕಾರಣದಿಂದಲೇ ಇಸ್ಲಾಮ್ ಧರ್ಮವು ವಿವಾಹವನ್ನು ಧರ್ಮಸಮ್ಮತಗೊಳಿಸಿದೆ. ಪ್ರವಾದಿಗಳು عليهم السلام ಇದನ್ನು ಆದೇಶಿಸಿದ್ದಾರೆ. ಅವರು ಪ್ರತಿಯೊಂದು ಉತ್ತಮ ಕಾರ್ಯವನ್ನು ಆದೇಶಿಸುತ್ತಿದ್ದರು.

ಇಸ್ಲಾಮ್ ಧರ್ಮವು ಆಹಾರ ಮತ್ತು ಪಾನೀಯಗಳಲ್ಲಿ ಉತ್ತಮ ವಸ್ತುಗಳನ್ನು ಧರ್ಮಸಮ್ಮತಗೊಳಿಸಿದೆ. ಪ್ರವಾದಿ صلي الله عليه وسلم ರವರು ಹೇಳಿದರು: "ಓ ಜನರೇ! ಲ್ಲಾಹನು ಪರಿಶುದ್ಧನು. ಅವನು ಪರಿಶುದ್ಧವಾದುದನ್ನು ಹೊರತುಪಡಿಸಿ (ಯಾವುದೇ ಸಂಪತ್ತನ್ನು) ಸ್ವೀಕರಿಸುವುದಿಲ್ಲ. ಅಲ್ಲಾಹನು ಪ್ರವಾದಿಗಳಿಗೆ ಆಜ್ಞಾಪಿಸಿದ್ದನ್ನೇ ಸತ್ಯವಿಶ್ವಾಸಿಗಳಿಗೂ ಆಜ್ಞಾಪಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ: "ಓ ಸಂದೇಶವಾಹಕರೇ! ಉತ್ತಮವಾದ ವಸ್ತುಗಳಿಂದ ತಿನ್ನಿರಿ ಮತ್ತು ಸತ್ಕರ್ಮವೆಸಗಿರಿ. ಖಂಡಿತವಾಗಿಯೂ ನೀವು ಮಾಡುತ್ತಿರುವುದರ ಬಗ್ಗೆ ನಾನು ಅರಿವುಳ್ಳವನಾಗಿರುವೆನು." ಅಲ್ಲಾಹನು ಹೇಳುತ್ತಾನೆ: "ಓ ಸತ್ಯವಿಶ್ವಾಸಿಗಳೇ! ನಾವು ನಿಮಗೆ ನೀಡಿರುವವುಗಳ ಪೈಕಿ ಉತ್ತಮವಾದುದನ್ನು ತಿನ್ನಿರಿ ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ; ನೀವು ಅವನನ್ನು ಮಾತ್ರ ಆರಾಧಿಸುವವರಾಗಿದ್ದರೆ." ನಂತರ

**ಅವರು (ಪ್ರವಾದಿಯವರು) ದೀರ್ಘ ಪ್ರಯಾಣದಲ್ಲಿರುವ ಒಬ್ಬ ವ್ಯಕ್ತಿಯ ಬಗ್ಗೆ ಹೇಳಿದರು. ಅವನ ತಲೆಗೂದಲು ಚದುರಿವೆ ಮತ್ತು ಅವನ ದೇಹವು ಧೂಳಿನಿಂದ ಕೂಡಿದೆ. ಅವನು ಆಕಾಶದ ಕಡೆಗೆ ತನ್ನ ಎರಡೂ ಕೈಗಳನ್ನು ಚಾಚಿ: ಓ ನನ್ನ ಪ್ರಭುವೇ, ಓ ನನ್ನ ಪ್ರಭುವೇ! (ಎಂದು ಪ್ರಾರ್ಥಿಸುತ್ತಿದ್ದಾನೆ). ಅವನ ಆಹಾರವು ನಿಷಿದ್ಧವಾದುದು, ಅವನ ಪಾನೀಯವು ನಿಷಿದ್ಧವಾದುದು, ಅವನ ಬಟ್ಟೆಗಳು ನಿಷಿದ್ಧವಾದುದು ಮತ್ತು ಅವನ ಪೋಷಣೆಯು ಕೂಡ ನಿಷಿದ್ಧದಿಂದಲೇ ಆಗಿದೆ. ಅವನ ಪ್ರಾರ್ಥನೆಯು ಸ್ವೀಕಾರವಾಗಲು ಹೇಗೆ ಸಾಧ್ಯ?"** [ಸಹೀಹ್ ಮುಸ್ಲಿಮ್: 1015.]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ಅಲ್ಲಾಹು ಅವನ ದಾಸರಿಗಾಗಿ ಉತ್ಪಾದಿಸಿರುವ ಅಲಂಕಾರ ವಸ್ತುಗಳನ್ನು ಮತ್ತು ಉತ್ತಮ ಆಹಾರಗಳನ್ನು ನಿಷಿದ್ಧಗೊಳಿಸಿದವರು ಯಾರು? ಹೇಳಿರಿ: ಅವುಗಳು ಐಹಿಕ ಜೀವನದಲ್ಲಿ ಸತ್ಯವಿಶ್ವಾಸಿಗಳಿಗಿರುವುದಾಗಿದೆ. ಪುನರುತ್ಥಾನ ದಿನದಂದು ಅವರಿಗೆ ಮಾತ್ರ ವಿಶೇಷವಾಗಿರುವುದಾಗಿದೆ. ಅರಿತುಕೊಳ್ಳುವ ಜನರಿಗಾಗಿ ನಾವು ಹೀಗೆ ದೃಷ್ಟಾಂತಗಳನ್ನು ವಿವರಿಸಿಕೊಡುವೆವು."** [ಅಲ್-ಅಅ್‌ರಾಫ್:32]

ಇಸ್ಲಾಮ್ ಧರ್ಮವು ಹೃದಯ, ದೇಹ ಮತ್ತು ಮನೆಯನ್ನು ಸ್ವಚ್ಛಗೊಳಿಸಬೇಕೆಂದು ಆದೇಶಿಸುತ್ತದೆ. ಈ ಕಾರಣದಿಂದಲೇ ಇಸ್ಲಾಮ್ ಧರ್ಮವು ವಿವಾಹವನ್ನು ಧರ್ಮಸಮ್ಮತಗೊಳಿಸಿದೆ. ಪ್ರವಾದಿಗಳು عليهم السلام ಇದನ್ನು ಆದೇಶಿಸಿದ್ದಾರೆ. ಅವರು ಪ್ರತಿಯೊಂದು ಉತ್ತಮ ಕಾರ್ಯವನ್ನು ಆದೇಶಿಸುತ್ತಿದ್ದರು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹು ನಿಮ್ಮಿಂದಲೇ ನಿಮಗೆ ಸಂಗಾತಿಗಳನ್ನು ಮಾಡಿಕೊಟ್ಟಿರುವನು. ನಿಮ್ಮ ಸಂಗಾತಿಗಳ ಮೂಲಕ ಅವನು ನಿಮಗೆ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಮಾಡಿಕೊಟ್ಟಿರುವನು. ವಿಶಿಷ್ಟ ವಸ್ತುಗಳಿಂದ ಅವನು ನಿಮಗೆ ಅನ್ನಾಧಾರವನ್ನೂ ಒದಗಿಸಿರುವನು. ಹೀಗಿರುವಾಗ ಅವರು ಅಸತ್ಯದಲ್ಲಿ ವಿಶ್ವಾಸವಿಟ್ಟು ಅಲ್ಲಾಹುವಿನ ಅನುಗ್ರಹವನ್ನು ನಿಷೇಧಿಸುತ್ತಿರುವರೇ?"** [ಅನ್ನಹ್ಲ್:72].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ತಮ್ಮ ಉಡುಪುಗಳನ್ನು ಶುದ್ಧೀಕರಿಸಿರಿ.(4) ಪಾಪವನ್ನು ವರ್ಜಿಸಿರಿ.(5)"** [ಅಲ್-ಮುದ್ದಸ್ಸಿರ್:4-5].

ಪ್ರವಾದಿ صلي الله عليه وسلم ರವರು ಹೇಳಿದರು: **"ಯಾರ ಹೃದಯದಲ್ಲಿ ಒಂದು ಅಣುವಿನಷ್ಟೂ ಅಹಂಕಾರವಿದೆಯೋ ಅವನು ಸ್ವರ್ಗ ಪ್ರವೇಶಿಸಲಾರ."** ಒಬ್ಬ ವ್ಯಕ್ತಿ ಕೇಳಿದ: "ಒಬ್ಬಾತ ತನ್ನ ಬಟ್ಟೆ ಚೆನ್ನಾಗಿರಬೇಕೆಂದು ಮತ್ತು ತನ್ನ ಪಾದರಕ್ಷೆಗಳು ಚೆನ್ನಾಗಿರಬೇಕೆಂದು ಬಯಸುವುದಾದರೆ..." ಪ್ರವಾದಿ صلي الله عليه وسلم ರವರು ಹೇಳಿದರು: **"ಖಂಡಿತವಾಗಿಯೂ ಅಲ್ಲಾಹನು ಸುಂದರನಾಗಿದ್ದಾನೆ ಮತ್ತು ಸೌಂದರ್ಯವನ್ನು ಇಷ್ಟಪಡುತ್ತಾನೆ. ಅಹಂಕಾರ ಎಂದರೆ ಸತ್ಯವನ್ನು ತಿರಸ್ಕರಿಸುವುದು ಮತ್ತು ಜನರನ್ನು ಕೀಳಾಗಿ ಕಾಣುವುದು."** [ಸಹೀಹ್ ಮುಸ್ಲಿಮ್: 91.]

**34. ಅಲ್ಲಾಹನೊಂದಿಗೆ ಸಹಭಾಗಿತ್ವ (ಶಿರ್ಕ್), ಸತ್ಯ ನಿಷೇಧ (ಕುಫ್ರ್), ವಿಗ್ರಹಾರಾಧನೆ, ಅರಿವಿಲ್ಲದೆ ಅಲ್ಲಾಹನ ಬಗ್ಗೆ ಹೇಳುವುದು, ಮಕ್ಕಳನ್ನು ಕೊಲ್ಲುವುದು, ಪವಿತ್ರ ಜೀವವನ್ನು ಕೊಲ್ಲುವುದು, ಭೂಮಿಯಲ್ಲಿ ಕ್ಷೋಭೆಯನ್ನುಂಟುಮಾಡುವುದು, ಮಾಟ ಮಂತ್ರ, ಪ್ರತ್ಯಕ್ಷವಾಗಿರುವ ಮತ್ತು ಪರೋಕ್ಷವಾಗಿರುವ ನೀಚಕೃತ್ಯಗಳು, ವ್ಯಭಿಚಾರ, ಸಲಿಂಗರತಿ ಮುಂತಾದ ನಿಷಿದ್ಧಗಳ ಮೂಲಗಳನ್ನೇ ಇಸ್ಲಾಂ ಧರ್ಮವು ನಿಷೇಧಿಸಿದೆ. ಅದೇ ರೀತಿ ಬಡ್ಡಿ ತಿನ್ನುವುದನ್ನು, ಸತ್ತ ಪ್ರಾಣಿಗಳನ್ನು ತಿನ್ನುವುದನ್ನು, ವಿಗ್ರಹಗಳಿಗೆ ಮತ್ತು ಮೂರ್ತಿಗಳಿಗೆ ಬಲಿಯರ್ಪಿಸಲಾಗಿರುವುದನ್ನು ತಿನ್ನುವುದನ್ನು ಇಸ್ಲಾಂ ಧರ್ಮವು ನಿಷೇಧಿಸಿದೆ. ಹಂದಿಮಾಂಸ, ಮತ್ತು ಎಲ್ಲಾ ರೀತಿಯ ಹೊಲಸುಗಳನ್ನು ನಿಷೇಧಿಸಿದೆ. ಅನಾಥರ ಸಂಪತ್ತನ್ನು ಕಬಳಿಸುವುದನ್ನು, ಅಳತೆ ಮತ್ತು ತೂಕದಲ್ಲಿ ಮೋಸ ಮಾಡುವುದನ್ನು, ಮತ್ತು ಸಂಬಂಧಗಳನ್ನು ಕಡಿಯುವುದನ್ನು ಇಸ್ಲಾಮ್ ಧರ್ಮವು ನಿಷೇಧಿಸಿದೆ. ಇವೆಲ್ಲವೂ ನಿಷಿದ್ಧವಾಗಿವೆ ಎಂಬ ವಿಷಯದಲ್ಲಿ ಎಲ್ಲಾ ಪ್ರವಾದಿಗಳು عليهم السلام ಏಕಾಭಿಪ್ರಾಯವನ್ನು ಹೊಂದಿದ್ದಾರೆ.**

ಅಲ್ಲಾಹನೊಂದಿಗೆ ಸಹಭಾಗಿತ್ವ (ಶಿರ್ಕ್), ಸತ್ಯ ನಿಷೇಧ (ಕುಫ್ರ್), ವಿಗ್ರಹಾರಾಧನೆ, ಅರಿವಿಲ್ಲದೆ ಅಲ್ಲಾಹನ ಬಗ್ಗೆ ಹೇಳುವುದು, ಮಕ್ಕಳನ್ನು ಕೊಲ್ಲುವುದು ಮುಂತಾದ ನಿಷಿದ್ಧಗಳ ಮೂಲಗಳನ್ನೇ ಇಸ್ಲಾಂ ಧರ್ಮವು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ಬನ್ನಿರಿ! ನಿಮ್ಮ ಪ್ರಭು ನಿಮ್ಮ ಮೇಲೆ ಏನೆಲ್ಲ ನಿಷಿದ್ಧಗೊಳಿಸಿರುವನೆಂದು ನಾನು ನಿಮಗೆ ಓದಿ ಕೊಡುವೆನು: ಅವನೊಂದಿಗೆ ನೀವು ಏನನ್ನೂ ಸಹಭಾಗಿಯನ್ನಾಗಿ ಮಾಡದಿರಿ, ಮಾತಾಪಿತರೊಂದಿಗೆ**

ಉತ್ತಮವಾಗಿ ವರ್ತಿಸಿರಿ, ಬಡತನದಿಂದಾಗಿ ನಿಮ್ಮ ಮಕ್ಕಳನ್ನು ವಧಿಸದಿರಿ, — ನಿಮಗೂ, ಅವರಿಗೂ ಆಹಾರ ನೀಡುವವರು ನಾವಾಗಿರುವೆವು — ಬಹಿರಂಗವಾಗಿರುವ ಮತ್ತು ಗುಪ್ತವಾಗಿರುವ ಯಾವುದೇ ನೀಚಕೃತ್ಯಗಳನ್ನೂ ಸಮೀಪಿಸದಿರಿ ಮತ್ತು ಅಲ್ಲಾಹು ಪವಿತ್ರಗೊಳಿಸಿದ ಜೀವವನ್ನು ನ್ಯಾಯಬದ್ಧವಾಗಿಯೇ ವಿನಾ ಕೊಲ್ಲದಿರಿ. ಇವು ನೀವು ಚಿಂತಿಸಿ ಗ್ರಹಿಸುವುದಕ್ಕಾಗಿ ಅವನು ನಿಮಗೆ ನೀಡಿದ ಉಪದೇಶಗಳಾಗಿವೆ. ಅತ್ಯುತ್ತಮವಾದ ಮಾರ್ಗದ ಮೂಲಕವಲ್ಲದೆ ನೀವು ಅನಾಥನ ಸಂಪತ್ತನ್ನು ಸಮೀಪಿಸದಿರಿ. ಅವನು ಪ್ರೌಢಾವಸ್ಥೆಯನ್ನು ತಲುಪುವ ತನಕ (ನೀವು ಅವನ ಸಂರಕ್ಷಣೆಯ ಹೊಣೆಯನ್ನು ವಹಿಸಿರಿ). ಅಳತೆ ಮತ್ತು ತೂಕವನ್ನು ಪೂರ್ಣವಾಗಿ ಮತ್ತು ನ್ಯಾಯಬದ್ಧವಾಗಿ ನೀಡಿರಿ. ಯಾವುದೇ ವ್ಯಕ್ತಿಗೂ ಅವನ ಸಾಮರ್ಥ್ಯಕ್ಕಿಂತ ಮಿಗಿಲಾಗಿರುವುದನ್ನು ನಾವು ಬಾಧ್ಯತೆಯಾಗಿ ಹೊರಿಸಲಾರೆವು. ನೀವು ಮಾತನಾಡುವಾಗ ನ್ಯಾಯ ಪಾಲಿಸಿರಿ. ಅದು ನಿಕಟ ಸಂಬಂಧಿಕನ ವಿಷಯದಲ್ಲಾದರೂ ಸರಿ. ಅಲ್ಲಾಹನೊಂದಿಗಿರುವ ಕರಾರನ್ನು ಈಡೇರಿಸಿರಿ. ಇವು ನೀವು ಚಿಂತಿಸಿ ಗ್ರಹಿಸುವುದಕ್ಕಾಗಿ ಅವನು ನಿಮಗೆ ನೀಡಿದ ಉಪದೇಶಗಳಾಗಿವೆ." [ಅಲ್-ಅನ್ಆಮ್:151-152]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಹೇಳಿರಿ: ನನ್ನ ಪ್ರಭು ನಿಷಿದ್ಧಗೊಳಿಸಿರುವುದು ಪ್ರತ್ಯಕ್ಷವಾಗಿರುವ ಮತ್ತು ಪರೋಕ್ಷವಾಗಿರುವ ನೀಚಕೃತ್ಯಗಳು, ಪಾಪಕೃತ್ಯಗಳು, ಅನ್ಯಾಯವಾದ ದಬ್ಬಾಳಿಕೆ, ಅಲ್ಲಾಹು ಯಾವುದೇ ಆಧಾರಪ್ರಮಾಣವನ್ನು ಇಳಿಸಿಕೊಡದಿರುವುದನ್ನು ಅವನೊಂದಿಗೆ ಸಹಭಾಗಿಯನ್ನಾಗಿ ಮಾಡುವುದು ಮತ್ತು ನಿಮಗೆ ಅರಿವಿಲ್ಲದಿರುವುದನ್ನು ಅಲ್ಲಾಹನ ಹೆಸರಲ್ಲಿ ಹೇಳುವುದು ಮಾತ್ರವಾಗಿದೆ." [ಅಲ್-ಅಲ್‌ರಾಫ್:33]

ಇಸ್ಲಾಮ್ ಧರ್ಮವು ಪವಿತ್ರ ಜೀವವನ್ನು ಕೊಲ್ಲುವುದನ್ನು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹು ಪವಿತ್ರಗೊಳಿಸಿರುವ ಜೀವವನ್ನು ನ್ಯಾಯಬದ್ಧವಾಗಿಯೇ ವಿನಾ ಕೊಲ್ಲದಿರಿ. ಯಾರಾದರೂ ಅನ್ಯಾಯವಾಗಿ ಹತ್ಯೆಗೀಡಾದರೆ ಅವನ ಹಕ್ಕುದಾರನಿಗೆ ನಾವು (ಪ್ರತೀಕಾರದ) ಅಧಿಕಾರವನ್ನು ನೀಡಿರುವೆವು. ಆದರೆ ಅವನು

ಕೊಲೆಯಲ್ಲಿ ಹದ್ದುಮೀರದಿರಲಿ. ಖಂಡಿತವಾಗಿಯೂ ಅವನು ಸಹಾಯ ಮಾಡಲ್ಪಟ್ಟವನಾಗಿರುವನು." [ಅಲ್-ಇಸ್ರಾ:33]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅವರು ಅಲ್ಲಾಹನೊಂದಿಗೆ ಅನ್ಯ ಆರಾಧ್ಯರನ್ನು ಕರೆದು ಪ್ರಾರ್ಥಿಸದವರೂ, ಅಲ್ಲಾಹು ಪಾವಿತ್ರ್ಯತೆ ನೀಡಿರುವ ಯಾವುದೇ ಜೀವವನ್ನು ನ್ಯಾಯವಾಗಿಯೇ ಹೊರತು ಹತ್ಯೆ ಮಾಡದವರೂ, ವ್ಯಭಿಚಾರ ಮಾಡದವರೂ ಆಗಿರುವರು. ಯಾರಾದರೂ ಇವುಗಳನ್ನು ಮಾಡುವುದಾದರೆ ಅವನು ಪಾಪಫಲವನ್ನು ಕಾಣುವನು." [ಅಲ್-ಫುರ್ಖಾನ್:68].

ಇಸ್ಲಾಮ್ ಧರ್ಮವು ಭೂಮಿಯಲ್ಲಿ ಕ್ಷೋಭೆಯನ್ನುಂಟುಮಾಡುವುದನ್ನು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಭೂಮಿಯಲ್ಲಿ ಸುಧಾರಣೆಯನ್ನುಂಟು ಮಾಡಿದ ಬಳಿಕ ನೀವು ಅಲ್ಲಿ ಕ್ಷೋಭೆಯನ್ನುಂಟುಮಾಡದಿರಿ." [ಅಲ್-ಅಅ್‌ರಾಫ್:56]

ಶುಐಬ್ عليه السلام ರವರ ಮಾತನ್ನು ಉಲ್ಲೇಖಿಸುತ್ತಾ ಅವರು ತಮ್ಮ ಜನರಿಗೆ ಹೀಗೆ ಹೇಳಿದರೆಂದು

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಮದ್ಯನ್ ಜನಾಂಗದೆಡೆಗೆ ಅವರ ಸಹೋದರ ಶುಐಬ್‌ರನ್ನು (ನಾವು ಕಳುಹಿಸಿದೆವು). ಅವರು ಹೇಳಿದರು: 'ಓ ನನ್ನ ಜನರೇ! ನೀವು ಅಲ್ಲಾಹನನ್ನು ಆರಾಧಿಸಿರಿ. ನಿಮಗೆ ಅವನ ಹೊರತು ಅನ್ಯ ಆರಾಧ್ಯರಿಲ್ಲ. ಖಂಡಿತವಾಗಿಯೂ ನಿಮ್ಮ ಪ್ರಭುವಿನ ವತಿಯಿಂದ ಸ್ಪಷ್ಟವಾದ ಪುರಾವೆಯು ನಿಮ್ಮೆಡೆಗೆ ಬಂದಿದೆ. ಆದ್ದರಿಂದ ನೀವು ಅಳತೆ ಮತ್ತು ತೂಕವನ್ನು ಪೂರ್ತಿಯಾಗಿ ಕೊಡಿರಿ. ಜನರಿಗೆ ಅವರ ಸಾಮಗ್ರಿಗಳನ್ನು ಕಡಿಮೆಗೊಳಿಸದಿರಿ. ಭೂಮಿಯಲ್ಲಿ ಸುಧಾರಣೆಯನ್ನುಂಟುಮಾಡಿದ ಬಳಿಕ ಅಲ್ಲಿ ವಿನಾಶವನ್ನುಂಟುಮಾಡದಿರಿ. ನೀವು ವಿಶ್ವಾಸಿಗಳಾಗಿದ್ದರೆ ಅದು ನಿಮಗೆ ಉತ್ತಮವಾಗಿದೆ." [ಅಲ್-ಅಅ್‌ರಾಫ್:85]

ಇಸ್ಲಾಮ್ ಮಾಟ ಮಂತ್ರವನ್ನು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ತಾವು ತಮ್ಮ ಬಲಗೈಯ್ಯಲ್ಲಿರುವುದನ್ನು (ಬೆತ್ತವನ್ನು) ಹಾಕಿರಿ. ಅವರು ನಿರ್ಮಿಸಿದ್ದೆಲ್ಲವನ್ನೂ ಅದು ನುಂಗುವುದು. ಅವರು ಮಾಡಿರುವುದು ಮಾಂತ್ರಿಕನ ತಂತ್ರ ಮಾತ್ರವಾಗಿದೆ. ಮಾಂತ್ರಿಕನು ಎಲ್ಲೇ ಹೋದರೂ ಯಶಸ್ವಿಯಾಗಲಾರನು."** [ತ್ವಾಹಾ:69]

ಪ್ರವಾದಿ صلي الله عليه وسلم ರವರು ಹೇಳಿದರು: **"ಏಳು ವಿನಾಶಕಾರಿ ಪಾಪಗಳಿಂದ ದೂರವಿರಿ."** ಸಹಾಬಿಗಳು ಕೇಳಿದರು: "ಆ ಏಳು ಪಾಪಗಳು ಯಾವುವು?" ಪ್ರವಾದಿ صلي الله عليه وسلم ಹೇಳಿದರು: **"ಶಿರ್ಕ್ (ಬಹುದೇವತ್ವ), ಮಾಟ ಮಾಡುವುದು, ಅನ್ಯಾಯವಾಗಿ ಯಾರನ್ನಾದರೂ ವಧಿಸುವುದು – ಏಕೆಂದರೆ ಅಲ್ಲಾಹನು ಅನ್ಯಾಯದ ವಧೆಯನ್ನು ನಿಷೇಧಿಸಿರುವನು – ಬಡ್ಡಿ ತಿನ್ನುವುದು, ಅನಾಥರ ಸೊತ್ತು ಕಬಳಿಸುವುದು, ಜಿಹಾದ್‌ನ ವೇಳೆ ಯುದ್ಧ ರಂಗದಿಂದ ಪಲಾಯನ ಮಾಡುವುದು, ನಿರಪರಾಧಿ ಸ್ತ್ರೀಯರ ಮೇಲೆ ಸುಳ್ಳಾರೋಪ ಹೊರಿಸುವುದು."** [ಸಹೀಹುಲ್ ಬುಖಾರಿ 6857.]

ಪ್ರತ್ಯಕ್ಷವಾಗಿರುವ ಮತ್ತು ಪರೋಕ್ಷವಾಗಿರುವ ನೀಚಕೃತ್ಯಗಳು, ವ್ಯಭಿಚಾರ, ಸಲಿಂಗರತಿ ಮುಂತಾದವುಗಳನ್ನು ಇಸ್ಲಾಂ ಧರ್ಮವು ನಿಷೇಧಿಸಿದೆ. ಈ ಪ್ಯಾರಾಗ್ರಾಫ್‌ನ ಆರಂಭದಲ್ಲಿ ಇದಕ್ಕೆ ಪುರಾವೆಯಾಗಿರುವ ಸೂಕ್ತಿಗಳನ್ನು ಉಲ್ಲೇಖಿಸಲಾಗಿದೆ. ಅದೇ ರೀತಿ ಇಸ್ಲಾಮ್ ಧರ್ಮವು ಬಡ್ಡಿಯನ್ನೂ ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ಬಡ್ಡಿಯ ಪೈಕಿ ಬರಲು ಬಾಕಿಯಿರುವುದನ್ನು ಬಿಟ್ಟು ಬಿಡಿರಿ. ನೀವು ಸತ್ಯವಿಶ್ವಾಸಿಗಳಾಗಿದ್ದರೆ!(278) ನೀವು ಹಾಗೆ ಮಾಡುವುದಿಲ್ಲವೆಂದಾದರೆ ಅಲ್ಲಾಹು ಮತ್ತು ಅವನ ಸಂದೇಶವಾಹಕರ ಕಡೆಯಿಂದ (ನಿಮ್ಮ ಮೇಲಿರುವ) ಯುದ್ಧ ಘೋಷಣೆಯ ಬಗ್ಗೆ ಅರಿತುಕೊಳ್ಳಿರಿ. ನೀವು ಪಶ್ಚಾತ್ತಾಪಪಟ್ಟು ಮರಳುವುದಾದರೆ ನಿಮ್ಮ ಬಂಡವಾಳವು ನಿಮಗೆ ಸಿಗುವುದು. ನೀವು ಅನ್ಯಾಯವೆಸಗದಿರಿ ಮತ್ತು ನಿಮಗೂ ಅನ್ಯಾಯವಾಗದಿರಲಿ.(279)"** [ಅಲ್-ಬಖರ:278-279]

ಬಡ್ಡಿಕೋರನಿಗೆ ಯುದ್ಧ ಬೆದರಿಕೆ ಹಾಕಿದ ಹಾಗೆ ಅಲ್ಲಾಹನು ಇತರ ಯಾವುದೇ ಪಾಪ ಕೃತ್ಯವೆಸೆಗುವವನಿಗೆ ಯುದ್ಧ ಬೆದರಿಕೆ ಹಾಕಲಿಲ್ಲ. ಏಕೆಂದರೆ ಬಡ್ಡಿಯಿಂದ ಧರ್ಮ, ದೇಶ, ಜೀವ ಮತ್ತು ಸಂಪತ್ತಿನ ನಾಶವಿದೆ. ಸತ್ತ ಪ್ರಾಣಿಗಳನ್ನು ತಿನ್ನುವುದನ್ನು, ವಿಗ್ರಹಗಳಿಗೆ ಮತ್ತು ಮೂರ್ತಿಗಳಿಗೆ ಬಲಿಯರ್ಪಿಸಲಾಗಿರುವುದನ್ನು ತಿನ್ನುವುದನ್ನು ಮತ್ತು ಹಂದಿಮಾಂಸ ತಿನ್ನುವುದನ್ನು ಇಸ್ಲಾಂ ಧರ್ಮವು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಶವ, ರಕ್ತ, ಹಂದಿ ಮಾಂಸ, ಅಲ್ಲಾಹೇತರರ ಹೆಸರಲ್ಲಿ ಘೋಷಿಸ(ಕೊಯ್ಯ)ಲಾಗಿರುವುದು, ಉಸಿರುಗಟ್ಟಿ ಸತ್ತಿರುವುದು, ಹೊಡೆದು ಸಾಯಿಸಿರುವುದು, ಕೆಳಗೆ ಬಿದ್ದು ಸತ್ತಿರುವುದು, ಇರಿತಕ್ಕೊಳಗಾಗಿ ಸತ್ತಿರುವುದು, ವನ್ಯಮೃಗಗಳು ಕಚ್ಚಿ ತಿಂದಿರುವುದು ಇತ್ಯಾದಿ ನಿಮಗೆ ನಿಷಿದ್ಧಗೊಳಿಸಲಾಗಿದೆ. ಆದರೆ (ಸಾಯುವ ಮೊದಲೇ) ನೀವು ಕೊಯ್ದಿರುವುದು ಇದರಿಂದ ಹೊರತಾಗಿದೆ. ವಿಗ್ರಹಗಳ ಮುಂದೆ ಬಲಿಯರ್ಪಿಸಲಾಗಿರುವುದು ಕೂಡ (ನಿಮಗೆ ನಿಷಿದ್ಧವಾಗಿದೆ). ಬಾಣಗಳನ್ನು ಬಳಸಿ ಅದೃಷ್ಟ ಪರೀಕ್ಷಿಸುವುದನ್ನು ಕೂಡ (ನಿಮಗೆ ನಿಷಿದ್ಧಗೊಳಿಸಲಾಗಿದೆ). ಅವೆಲ್ಲವೂ ಧಿಕ್ಕಾರ ಪ್ರವೃತ್ತಿಗಳಾಗಿವೆ."** [ಅಲ್-ಮಾಇದ:3].

ಇಸ್ಲಾಮ್ ಮದ್ಯಪಾನ ಮತ್ತು ಎಲ್ಲಾ ರೀತಿಯ ಹೊಲಸುಗಳನ್ನು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಸತ್ಯವಿಶ್ವಾಸಿಗಳೇ! ಮದ್ಯ, ಜೂಜಾಟ, ಪ್ರತಿಷ್ಠಾಪನೆಗಳು ಮತ್ತು ಭಾಗ್ಯ ಪರೀಕ್ಷಿಸುವ ಬಾಣಗಳು ಪೈಶಾಚಿಕವಾಗಿರುವ ನೀಚಕೃತ್ಯಗಳಾಗಿವೆ. ಆದ್ದರಿಂದ ನೀವು ಅವೆಲ್ಲವನ್ನೂ ವರ್ಜಿಸಿರಿ. ನೀವು ಯಶಸ್ವಿಯಾಗಲೂಬಹುದು.(90) ಸೈತಾನನು ಇಚ್ಛಿಸುವುದು ಮದ್ಯ ಮತ್ತು ಜೂಜಾಟದ ಮೂಲಕ ನಿಮ್ಮ ಮಧ್ಯೆ ಶತ್ರುತ್ವ ಹಾಗೂ ವಿದ್ವೇಷವನ್ನು ಬಿತ್ತಲು ಮತ್ತು ಅಲ್ಲಾಹನ ಸ್ಮರಣೆ ಹಾಗೂ ನಮಾಝ್‌ನಿಂದ ನಿಮ್ಮನ್ನು ತಡೆಯಲು ಮಾತ್ರವಾಗಿದೆ. ಆದ್ದರಿಂದ ನೀವು (ಅವುಗಳನ್ನು) ನಿಲ್ಲಿಸಲು ಸಿದ್ಧರಿರುವಿರಾ?(91)"** [ಅಲ್-ಮಾಇದ:90-91].

ಶೀರ್ಷಿಕೆ ಸಂಖ್ಯೆ (31) ರಲ್ಲಿ ಈಗಾಗಲೇ ಉಲ್ಲೇಖಿಸಲಾದಂತೆ ತೌರಾತ್ ಗ್ರಂಥದಲ್ಲಿ ಪ್ರವಾದಿ صلي الله عليه وسلم ರವರ ಗುಣವಿಶೇಷತೆಗಳಲ್ಲೊಂದು ಅವರು ಅವರಿಗೆ ಕೆಟ್ಟ ವಸ್ತುಗಳನ್ನು ನಿಷೇಧಿಸುತ್ತಾರೆಂದು ಅಲ್ಲಾಹನು ತಿಳಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಅಂದರೆ) ತಮ್ಮ ಬಳಿಯಿರುವ ತೌರಾತ್‌ನಲ್ಲಿ ಮತ್ತು ಇಂಜೀಲ್‌ನಲ್ಲಿ ದಾಖಲಿಸಲ್ಪಟ್ಟಿರುವುದಾಗಿ ಅವರು ಕಾಣುವ ನಿರಕ್ಷರಿ ಪ್ರವಾದಿಯಾದ ಸಂದೇಶವಾಹಕರನ್ನು (ಪ್ರವಾದಿ ಮುಹಮ್ಮದ್‌ರನ್ನು) ಅನುಸರಿಸುವವರಿಗೆ (ಆ ಕಾರುಣ್ಯವನ್ನು ನಾನು ವಿಧಿಸುವೆನು). ಆ ಪ್ರವಾದಿಯು ಅವರೊಂದಿಗೆ ಸದಾಚಾರವನ್ನು ಆದೇಶಿಸುವರು ಮತ್ತು ದುರಾಚಾರವನ್ನು ವಿರೋಧಿಸುವರು. ಅವರಿಗೆ ಉತ್ತಮ ವಸ್ತುಗಳನ್ನು ಧರ್ಮಸಮ್ಮತಗೊಳಿಸುವರು ಮತ್ತು ಕೆಟ್ಟ ವಸ್ತುಗಳನ್ನು ಅವರ ಮೇಲೆ ನಿಷಿದ್ಧಗೊಳಿಸುವರು. ಅವರ ಭಾರಗಳನ್ನು ಮತ್ತು ಅವರ ಮೇಲಿದ್ದ ಸಂಕೋಲೆಗಳನ್ನು ಕಳಗಿಳಿಸುವರು."** [ಅಲ್-ಅಅ್‌ರಾಫ್:157]

ಇಸ್ಲಾಮ್ ಧರ್ಮವು ಅನಾಥರ ಸಂಪತ್ತನ್ನು ಕಬಳಿಸುವುದನ್ನು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅನಾಥರಿಗೆ ಅವರ ಸೊತ್ತನ್ನು ಕೊಟ್ಟು ಬಿಡಿರಿ. ಉತ್ತಮವಾಗಿರುವುದರೊಂದಿಗೆ ನಿಕೃಷ್ಟವಾಗಿರುವುದನ್ನು ಬದಲಾಯಿಸದಿರಿ. ಅವರ ಸಂಪತ್ತನ್ನು ನಿಮ್ಮ ಸಂಪತ್ತಿನೊಂದಿಗೆ ಸೇರಿಸಿ ತಿನ್ನದಿರಿ. ಖಂಡಿತವಾಗಿಯೂ ಅದೊಂದು ಘೋರ ಪಾಪವಾಗಿದೆ."** [ಅನ್ನಿಸಾ:2].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಅನಾಥರ ಸೊತ್ತನ್ನು ಅನ್ಯಾಯವಾಗಿ ತಿನ್ನುವವರು ಯಾರೋ ಅವರು ತಮ್ಮ ಉದರಗಳಲ್ಲಿ ತುಂಬಿಸುವುದು ಅಗ್ನಿಯನ್ನಾಗಿದೆ. ತರುವಾಯ ಅವರನ್ನು ನರಕಾಗ್ನಿಯಲ್ಲಿ ಉರಿಸಲಾಗುವುದು."** [ಅನ್ನಿಸಾ:10].

ಇಸ್ಲಾಮ್ ಧರ್ಮವು ಅಳತೆ ಮತ್ತು ತೂಕದಲ್ಲಿ ಕಡಿಮೆಗೊಳಿಸುವುದನ್ನು ನಿಷೇಧಿಸಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಳವಿನಲ್ಲಿ ಕಡಿಮೆ ಮಾಡುವವರಿಗೆ ಮಹಾ ನಾಶವಿದೆ.(1) ಅವರು ಜನರಿಂದ ಅಳೆದು ಪಡೆಯುವಾಗ ಪೂರ್ಣವಾಗಿ ಪಡೆಯುವವರು(2) ಮತ್ತು ಜನರಿಗೆ ಅಳೆದು ಕೊಡುವಾಗ ಅಥವಾ ತೂಕ ಮಾಡಿ ಕೊಡುವಾಗ ಕಡಿಮೆ ಮಾಡುವವರು.(3) ತಮ್ಮನ್ನು ಪುನರುತ್ಥಾನಗೊಳಿಸಲಾಗುವುದು ಎಂದು ಅವರು ವಿಶ್ವಾಸವಿಡುವುದಿಲ್ಲವೇ?(4)"** [ಅಲ್- ಮುತಫ್ಫಿಫೀನ್: 1-4]

ಇಸ್ಲಾಮ್ ಧರ್ಮವು ಸಂಬಂಧಗಳನ್ನು ಕಡಿಯುವುದನ್ನು ನಿಷೇಧಿಸುತ್ತದೆ. ಶೀರ್ಷಿಕೆ ಸಂಖ್ಯೆ (31)ರಲ್ಲಿ ಈ ವಿಷಯಕ್ಕೆ ಪುರಾವೆಯಾಗುವ ಕುರ್‌ಆನಿನ ಸೂಕ್ತಿಗಳು ಮತ್ತು ಹದೀಸ್‌ಗಳನ್ನು ಉಲ್ಲೇಖಿಸಲಾಗಿದೆ. ಈ ಮೇಲೆ ಉಲ್ಲೇಖಿಸಲಾದ ಎಲ್ಲಾ ವಸ್ತುಗಳು ನಿಷಿದ್ಧವಾಗಿವೆ ಎಂಬ ವಿಷಯದಲ್ಲಿ ಎಲ್ಲಾ ಪ್ರವಾದಿಗಳು عليهم السلام ಏಕಾಭಿಪ್ರಾಯವನ್ನು ಹೊಂದಿದ್ದಾರೆ.

## 35.ಇಸ್ಲಾಮ್ ಧರ್ಮವು ಸುಳ್ಳು, ವಂಚನೆ, ದ್ರೋಹ, ಮೋಸ, ಕಾಪಟ್ಯ, ಅಸೂಯೆ, ಕುತಂತ್ರ, ಕಳ್ಳತನ, ಅತಿಕ್ರಮ ಮತ್ತು ಅನ್ಯಾಯದಂತಹ ಕೆಟ್ಟ ಸ್ವಭಾವಗಳನ್ನು ವಿರೋಧಿಸುತ್ತದೆ ಮತ್ತು ಎಲ್ಲಾ ರೀತಿಯ ಕೆಟ್ಟ ಗುಣಗಳನ್ನು ನಿಷೇಧಿಸುತ್ತದೆ.

ಇಸ್ಲಾಂ ಧರ್ಮವು ಎಲ್ಲಾ ರೀತಿಯ ಕೆಟ್ಟ ಸ್ವಭಾವಗಳನ್ನು ವಿರೋಧಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನೀನು (ದರ್ಪದಿಂದ) ನಿನ್ನ ಮುಖವನ್ನು ಜನರೆಡೆಗೆ ತಿರುಗಿಸದಿರು. ಭೂಮಿಯಲ್ಲಿ ಜಂಬದಿಂದ ನಡೆಯದಿರು. ದುರಭಿಮಾನ ಹಾಗೂ ಜಂಬವಿರುವ ಯಾರನ್ನೂ ಅಲ್ಲಾಹು ಇಷ್ಟಪಡಲಾರನು." [ಲುಖ್ಮಾನ್:18].

ಪ್ರವಾದಿ صلى الله عليه وسلم ರವರು ಹೇಳಿದರು: "ನಿಮ್ಮ ಪೈಕಿ (ಇಹಲೋಕದಲ್ಲಿ) ನನಗೆ ಅತ್ಯಂತ ಪ್ರಿಯರು ಮತ್ತು ಪುನರುತ್ಥಾನ ದಿನದಂದು ನನಗೆ ಅತ್ಯಂತ ಹತ್ತಿರವಿರುವವರು

ನಿಮ್ಮಲ್ಲಿ ಅತ್ಯುತ್ತಮ ಸ್ವಭಾವ ಹೊಂದಿರುವವರಾಗಿದ್ದಾರೆ. ನಿಮ್ಮ ಪೈಕಿ (ಇಹಲೋಕದಲ್ಲಿ) ನನಗೆ ಅತ್ಯಂತ ದ್ವೇಷವಿರುವವರು ಮತ್ತು ಪುನರುತ್ಥಾನದ ದಿನದಂದು ನನ್ನಿಂದ ಅತ್ಯಂತ ದೂರವಿರುವವರು ವಾಚಾಳರು (ಅಸಡ್ಡೆ ಮಾತನಾಡುವವರು) ಮತ್ತು ಎಳೆದು ಮಾತ ನಾಡುವವರು ಮತ್ತು "ಮುತಫೈಹಿಖೂನ್" ಆಗಿದ್ದಾರೆ." ಸಹಾಬಾಗಳು ಹೇಳಿದರು: "ಅಲ್ಲಾಹನ ಸಂದೇಶವಾಹಕರೇ! ನಾವು "ಸರ್ಸಾರೂನ್" (ವಾಚಾಳರು) ಅಲ್ ಮುತಷದ್ದಿಖೂನ್ (ಎಳೆದು ಮಾತನಾಡುವವರು) ರನ್ನು ತಿಳಿದಿದ್ದೇವೆ. ಆದರೆ ಈ "ಮುತಫೈಹಿಖೂನ್" ಎಂದರೆ ಯಾರು?" ಪ್ರವಾದಿ صلى الله عليه وسلم ರವರು ಹೇಳಿದರು: "ಅಹಂಕಾರಿಗಳು." [ಅಸ್ಸಿಲ್ಸಿಲತು-ಸ್ಸಹೀಹ 791.]

ಇಸ್ಲಾಂ ಧರ್ಮವು ಸುಳ್ಳು ಹೇಳುವುದನ್ನು ವಿರೋಧಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅತಿಕ್ರಮಿ ಮತ್ತು ಸುಳ್ಳುಗಾರನಾಗಿರುವ ಯಾರನ್ನೂ ಅಲ್ಲಾಹು ಖಂಡಿತವಾಗಿಯೂ ಸನ್ಮಾರ್ಗಕ್ಕೆ ಸೇರಿಸಲಾರನು." [ಗಾಫಿರ್:28].

ಪ್ರವಾದಿ صلى الله عليه وسلم ರವರು ಹೇಳಿದರು: "ಸುಳ್ಳು ಹೇಳುವುದರಿಂದ ದೂರವಿರಿ. ಏಕೆಂದರೆ ಸುಳ್ಳು ದುಷ್ಕರ್ಮಕ್ಕೆ ದಾರಿ ತೋರಿಸುತ್ತದೆ. ದುಷ್ಕರ್ಮವು ನರಕಕ್ಕೆ ದಾರಿ ತೋರಿಸುತ್ತದೆ. ಒಬ್ಬ ವ್ಯಕ್ತಿಯು ನಿರಂತರವಾಗಿ ಸುಳ್ಳನ್ನೇ ಹೇಳುತ್ತಾ ಸುಳ್ಳಿಗೆ ಪ್ರಾಮುಖ್ಯತೆ ನೀಡುತ್ತಾ ಇದ್ದರೆ ಅವನು ಅಲ್ಲಾಹನ ಬಳಿ ಸುಳ್ಳುಗಾರನೆಂದು ದಾಖಲಿಸಲ್ಪಡುತ್ತಾನೆ." [ಸಹೀಹ್ ಮುಸ್ಲಿಮ್: 2607.]

ಪ್ರವಾದಿ صلى الله عليه وسلم ರವರು ಹೇಳಿದರು: "ಕಪಟವಿಶ್ವಾಸಿಗೆ ಮೂರು ಲಕ್ಷಣಗಳಿವೆ. ಮಾತನಾಡಿದರೆ ಸುಳ್ಳು ಹೇಳುವುದು, ವಾಗ್ದಾನ ಮಾಡಿದರೆ ಉಲ್ಲಂಘಿಸುವುದು ಮತ್ತು ವಿಶ್ವಾಸವಿಟ್ಟರೆ ವಂಚಿಸುವುದು." [ಸಹೀಹುಲ್ ಬುಖಾರಿ 6095.]

ಇಸ್ಲಾಮ್ ವಂಚನೆಯನ್ನು ವಿರೋಧಿಸುತ್ತದೆ. ಹದೀಸಿನಲ್ಲಿ ಹೀಗೆ ಬಂದಿದೆ: ಒಮ್ಮೆ ಪ್ರವಾದಿ ﷺ ರವರು ಧಾನ್ಯದ ರಾಶಿಯ ಬಳಿಯಿಂದ ಹಾದು ಹೋದರು. ಅವರು ತಮ್ಮ ಕೈಯನ್ನು ಅದರೊಳಗೆ ತೂರಿಸಿದರು. ಅವರ ಬೆರಳುಗಳು ಒದ್ದೆಯಾದವು. ಅವರು ಕೇಳಿದರು:

**"ಧಾನ್ಯ ಮಾರುವವನೇ ಇದೇನು?"** ಆತ ಉತ್ತರಿಸಿದ: "ಅಲ್ಲಾಹನ ಸಂದೇಶವಾಹಕರೇ, ಅದಕ್ಕೆ ಮಳೆ ಸುರಿದಿತ್ತು." ಆಗ ಪ್ರವಾದಿ ﷺ ಕೇಳಿದರು: **"ಹಾಗಾದರೆ ಜನರಿಗೆ ಕಾಣುವಂತೆ ನೀನು ಅದನ್ನು (ಒದ್ದೆ ಧಾನ್ಯವನ್ನು) ಮೇಲೆ ಏಕೆ ಹಾಕಲಿಲ್ಲ? ಯಾರು ವಂಚನೆ ಮಾಡುತ್ತಾರೋ ಅವರು ನನ್ನವರಲ್ಲ."** [ಸಹೀಹ್ ಮುಸ್ಲಿಮ್: 102.]

ಇಸ್ಲಾಮ್ ದ್ರೋಹ, ಮೋಸ, ಕಾಪಟ್ಯವನ್ನು ವಿರೋಧಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕರಿಗೆ ನಂಬಿಕೆದ್ರೋಹ ಮಾಡದಿರಿ. ನಿಮ್ಮ ಮೇಲೆ ನಂಬಿಕೆಯಿಟ್ಟು ಒಪ್ಪಿಸಲಾದ ವಿಷಯಗಳಲ್ಲಿ ನೀವು ಅರಿತವರಾಗಿದ್ದೂ ಸಹ ನಂಬಿಕೆದ್ರೋಹ ಮಾಡದಿರಿ."** [ಅಲ್-ಅನ್ಫಾಲ್:27]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹನೊಂದಿಗಿರುವ ಬಾಧ್ಯತೆಯನ್ನು ನೆರವೇರಿಸುವವರು ಮತ್ತು ಕರಾರನ್ನು ಉಲ್ಲಂಘಿಸದವರು..."** [ಅರ್ರಅ್‌ದ್:20]

ತಮ್ಮ ಸೈನ್ಯವನ್ನು (ಯುದ್ಧಕ್ಕೆ) ಕಳುಹಿಸುವಾಗ ಪ್ರವಾದಿ ﷺ ರವರು ಹೇಳುತ್ತಿದ್ದರು: **"ಯುದ್ಧ ಮಾಡಿರಿ. ಆದರೆ ವಂಚಿಸಬೇಡಿ, ದ್ರೋಹ ಮಾಡಬೇಡಿ, ಸತ್ತವರ ಅಂಗಗಳನ್ನು ವಿರೂಪಗೊಳಿಸಬೇಡಿ ಮತ್ತು ಚಿಕ್ಕ ಮಕ್ಕಳನ್ನು ಕೊಲ್ಲಬೇಡಿ."** [ಸಹೀಹ್ ಮುಸ್ಲಿಮ್: 1731.]

ಪ್ರವಾದಿ صلى الله عليه وسلم ರವರು ಹೇಳಿದರು: **"ಯಾರಲ್ಲಿ ಈ ನಾಲ್ಕು ಲಕ್ಷಣಗಳು ಇವೆಯೋ ಅವನು ಅಪ್ಪಟ ಮುನಾಫಿಕ್ (ಕಪಟವಿಶ್ವಾಸಿ) ಆಗಿದ್ದಾನೆ. ಯಾರಲ್ಲಿ ಈ ಪೈಕಿ ಯಾವುದಾದರೊಂದು ಲಕ್ಷಣ ಇರುವುದೋ ಅವನು ಅದನ್ನು ತೊರೆಯುವ ತನಕ ಅವನಲ್ಲಿ ಕಾಪಟ್ಯದ ಒಂದಂಶ ಇರುತ್ತದೆ. (ಆ ಲಕ್ಷಣಗಳು ಹೀಗಿವೆ): ವಿಶ್ವಾಸದಿಂದ ಏನಾದರೂ ನೀಡಿದರೆ ವಂಚನೆ ಮಾಡುವುದು, ಮಾತನಾಡುವಾಗ ಸುಳ್ಳು ಹೇಳುವುದು, ವಾಗ್ದಾನ ಮಾಡಿದರೆ ಉಲ್ಲಂಘಿಸುವುದು ಮತ್ತು ಜಗಳಾಡಿದಾಗ ಬಯ್ಯುವುದು."** [ಸಹೀಹುಲ್ ಬುಖಾರಿ 34.]

ಇಸ್ಲಾಂ ಧರ್ಮವು ಅಸೂಯೆಯನ್ನು ವಿರೋಧಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: “ಅಲ್ಲಾಹು ತನ್ನ ಔದಾರ್ಯದಿಂದ ಇತರ ಜನರಿಗೆ ನೀಡಿರುವುದರಲ್ಲಿ ಅವರು ಅಸೂಯೆಪಡುತ್ತಿರುವರೇ? ಹಾಗಿದ್ದರೆ ಇಬ್ರಾಹೀಮ್ ಕುಟುಂಬಕ್ಕೆ ನಾವು ಗ್ರಂಥವನ್ನೂ ಜ್ಞಾನವನ್ನೂ ನೀಡಿರುವೆವು. ನಾವು ಅವರಿಗೆ ಮಹಾ ಆಧಿಪತ್ಯವನ್ನೂ ನೀಡಿರುವೆವು.” [ಅನ್ನಿಸಾ:54].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: “ನೀವು ಸತ್ಯವಿಶ್ವಾಸ ಸ್ವೀಕರಿಸಿದ ಬಳಿಕ ನಿಮ್ಮನ್ನು ಅವಿಶ್ವಾಸಿಗಳಾಗಿ ಬದಲಾಯಿಸಬೇಕೆಂದು ಗ್ರಂಥದವರ ಪೈಕಿ ಹೆಚ್ಚಿನವರೂ ಆಶಿಸುವರು. (ಅವರು ಆ ನಿಲುವನ್ನು ಹೊಂದಿರುವುದು) ಸತ್ಯವು ಸ್ಪಷ್ಟವಾಗಿ ಮನದಟ್ಟಾದ ಬಳಿಕವೂ ಸ್ವಾರ್ಥಪೂರಿತ ಅಸೂಯೆಯ ನಿಮಿತ್ತವಾಗಿದೆ. ಆದ್ದರಿಂದ (ಅವರ ವಿಷಯದಲ್ಲಿ) ಅಲ್ಲಾಹು ತನ್ನ ಆಜ್ಞೆಯನ್ನು ತರುವವರೆಗೆ ನೀವು ಕ್ಷಮಿಸಿರಿ ಮತ್ತು ಅವಗಣಿಸಿರಿ. ಖಂಡಿತವಾಗಿಯೂ ಅಲ್ಲಾಹು ಸಕಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿರುವನು.” [ಅಲ್-ಬಖರ:109].

ಪ್ರವಾದಿ صلي الله عليه وسلم ರವರು ಹೇಳಿದರು: “ನಿಮಗಿಂತ ಮುಂಚಿನ ಜನಾಂಗದವರ ರೋಗವು ನಿಮ್ಮೊಳಗೆ ನುಸುಳಿದೆ. ಅದು ಅಸೂಯೆ ಮತ್ತು ವಿದ್ವೇಷವಾಗಿದೆ. ಅದು ಬೋಳಿಸುತ್ತದೆ. ಅದು ತಲೆಗೂದಲನ್ನು ಬೋಳಿಸುತ್ತದೆ ಎಂದು ನಾನು ಹೇಳುವುದಿಲ್ಲ. ಬದಲಾಗಿ ಅದು ಧರ್ಮವನ್ನು ಬೋಳಿಸುತ್ತದೆ. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಆಣೆ! ನೀವು ಸತ್ಯವಿಶ್ವಾಸಿಗಳಾಗುವವರೆಗೆ ನೀವು ಸ್ವರ್ಗ ಪ್ರವೇಶಿಸಲಾರಿರಿ. ನೀವು ಪರಸ್ಪರ ಪ್ರೀತಿಸುವವರಿಗೆ ನೀವು ಸತ್ಯವಿಶ್ವಾಸಿಗಳಾಗಲಾರಿರಿ. ನಾನು ನಿಮಗೆ ಒಂದು ವಿಷಯವನ್ನು ತಿಳಿಸಿಕೊಡಲೇ? ಅದನ್ನು ಮಾಡಿದರೆ ನೀವು ಪರಸ್ಪರ ಪ್ರೀತಿಸುವಿರಿ. ನೀವು ಪರಸ್ಪರ ಸಲಾಮನ್ನು ಹಬ್ಬಿಸಿರಿ.” [ಸುನನುತ್ತಿರ್ಮಿದಿ: 2510]

ಇಸ್ಲಾಂ ಧರ್ಮವು ಕುತಂತ್ರವನ್ನು ವಿರೋಧಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: “ಹೀಗೆ ಪ್ರತಿಯೊಂದು ಊರಿನಲ್ಲೂ ಅಲ್ಲಿನ ಅಪರಾಧಿಗಳ ನಾಯಕರನ್ನು ಪಿತೂರಿಗಳಲ್ಲಿ ಮಗ್ನರಾಗುವಂತೆ ನಾವು ಮಾಡಿರುವೆವು. ಆದರೆ

**ಅವರು ಸ್ವತಃ ಅವರ ವಿರುದ್ಧವಲ್ಲದೆ ಸಂಚು ಹೂಡುತ್ತಿಲ್ಲ. ಅವರು (ಅದರ ಬಗ್ಗೆ) ಪ್ರಜ್ಞಾವಂತರಾಗುವುದಿಲ್ಲ."** [ಅಲ್-ಅನ್‌ಆಮ್:123].

ಯಹೂದಿಗಳು ಈಸಾ ಮಸೀಹ್ عليه السلام ರನ್ನು ಕೊಲ್ಲಲು ಪ್ರಯತ್ನಿಸಿ ಅವರ ವಿರುದ್ಧ ಸಂಚು ಹೂಡಿದಾಗ ಅಲ್ಲಾಹು ಕೂಡ ಅವರ ವಿರುದ್ಧ ತಂತ್ರ ಹೂಡಿದನು ಎಂದು ಅಲ್ಲಾಹು ತಿಳಿಸಿದ್ದಾನೆ. ಕೆಟ್ಟ ಸಂಚು (ಅದರ ಫಲವು) ಅದನ್ನು ಹೂಡಿದವರ ಮೇಲೆಯೇ ಎರಗುವುದು ಎಂದು ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ತರುವಾಯ ಈಸಾರಿಗೆ ಅವರ ನಿಷೇಧವು ಮನದಟ್ಟಾದಾಗ ಅವರು ಹೇಳಿದರು: ಅಲ್ಲಾಹನೆಡೆಗೆ ನನ್ನ ಸಹಾಯಕರಾಗಿ ಯಾರಿದ್ದೀರಿ? ಹವಾರಿಗಳು ಹೇಳಿದರು: ನಾವು ಅಲ್ಲಾಹನ ಸಹಾಯಕರಾಗಿರುವೆವು. ನಾವು ಅಲ್ಲಾಹನಲ್ಲಿ ವಿಶ್ವಾಸವಿಟ್ಟಿರುವೆವು ಮತ್ತು ನಾವು (ಅವನಿಗೆ) ಶರಣಾಗತರಾಗಿರುವೆವು ಎಂಬುದಕ್ಕೆ ತಾವು ಸಾಕ್ಷ್ಯವಹಿಸಿರಿ.(52) (ತರುವಾಯ ಅವರು ಹೀಗೆ ಪ್ರಾರ್ಥಿಸಿದರು): ನಮ್ಮ ಪ್ರಭೂ! ನೀನು ಅವತೀರ್ಣಗೊಳಿಸಿರುವುದರಲ್ಲಿ ನಾವು ವಿಶ್ವಾಸವಿಟ್ಟಿರುವೆವು ಮತ್ತು ನಾವು (ನಿನ್ನ) ಸಂದೇಶವಾಹಕರನ್ನು ಅನುಸರಿಸಿರುವೆವು. ಆದ್ದರಿಂದ ನಮ್ಮನ್ನು ಸಾಕ್ಷ್ಯವಹಿಸಿದವರೊಂದಿಗೆ ದಾಖಲಿಸು.(53) ಅವರು (ಸತ್ಯನಿಷೇಧಿಗಳು) ತಂತ್ರ ಹೂಡಿದರು. ಅಲ್ಲಾಹು ಕೂಡ ತಂತ್ರ ಹೂಡಿದನು. ತಂತ್ರ ಹೂಡುವವರಲ್ಲಿ ಅಲ್ಲಾಹು ಅತ್ಯುತ್ತಮನಾಗಿರುವನು.(54) ಓ ಈಸಾ! ಖಂಡಿತವಾಗಿಯೂ ತಮ್ಮನ್ನು ನಾನು ಪೂರ್ಣವಾಗಿ ವಹಿಸಿಕೊಳ್ಳುವೆನು ಮತ್ತು ತಮ್ಮನ್ನು ನನ್ನ ಬಳಿಗೆ ಎತ್ತಿಕೊಳ್ಳುವೆನು. ತಮ್ಮನ್ನು ನಾನು ಸತ್ಯ ನಿಷೇಧಿಗಳಿಂದ ಪರಿಶುದ್ಧಗೊಳಿಸುವೆನು ಮತ್ತು ತಮ್ಮನ್ನು ಅನುಸರಿಸಿದವರನ್ನು ಪುನರುತ್ಥಾನ ದಿನದವರೆಗೂ ಸತ್ಯ ನಿಷೇಧಿಗಳಿಗಿಂತ ಶ್ರೇಷ್ಠರನ್ನಾಗಿ ಮಾಡುವೆನು. ತರುವಾಯ ನಿಮ್ಮ ಮರಳುವಿಕೆಯು ನನ್ನ ಬಳಿಗಾಗಿದೆ. ನೀವು ಭಿನ್ನಾಭಿಪ್ರಾಯ ತಾಳುತ್ತಿರುವ ವಿಷಯದಲ್ಲಿ ಆಗ ನಾನು ನಿಮ್ಮ ನಡುವೆ ತೀರ್ಪು ನೀಡುವೆನು ಎಂದು ಅಲ್ಲಾಹು ಹೇಳಿದ ಸಂದರ್ಭ(ವನ್ನು ಸ್ಮರಿಸಿರಿ).(55)"** [ಆಲಿ ಇಮ್ರಾನ್: 52-55].

ಪ್ರವಾದಿ ಸ್ವಾಲಿಹ್ عليه السلام ರ ಜನಾಂಗದವರು ಅವರನ್ನು ಮೋಸದಿಂದ ಕೊಲ್ಲಲು ಬಯಸಿ, ಅವರ ವಿರುದ್ಧ ಸಂಚನ್ನು ಹೂಡಿದಾಗ ಅಲ್ಲಾಹನು ಕೂಡ ಅವರ ವಿರುದ್ಧ ತಂತ್ರ ಹೂಡಿದನು ಮತ್ತು ಅವರನ್ನು ಹಾಗೂ ಅವರ ಎಲ್ಲಾ ಜನಾಂಗದವರನ್ನು ನಾಶ ಮಾಡಿದನೆಂದು ಅಲ್ಲಾಹನು ತಿಳಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಾವು ರಾತ್ರಿ ವೇಳೆಯಲ್ಲಿ ಅವರನ್ನು (ಸ್ವಾಲಿಹ್) ಮತ್ತು ಅವರ ಜನರನ್ನು ಕೊಲ್ಲೋಣ. ತರುವಾಯ ಅವರ ಹಕ್ಕುದಾರನೊಂದಿಗೆ, ತಮ್ಮ ಜನರ ವಿನಾಶಕ್ಕೆ ನಾವು ಸಾಕ್ಷ್ಯವಹಿಸಿಲ್ಲ, ಖಂಡಿತವಾಗಿಯೂ ನಾವು ಸತ್ಯವನ್ನೇ ನುಡಿಯುವವರಾಗಿರುವೆವು ಎಂದು ಹೇಳೋಣವೆಂದು ನೀವು ಅಲ್ಲಾಹುವಿನ ಮೇಲೆ ಪರಸ್ಪರ ಪ್ರಮಾಣ ಮಾಡಿ ಹೇಳಿರಿ ಎಂದು ಅವರು ಪರಸ್ಪರ ಹೇಳಿದರು.(49) ಅವರೊಂದು ತಂತ್ರವನ್ನು ಹೂಡಿದರು. ಅವರು ಗ್ರಹಿಸದ ರೀತಿಯಲ್ಲಿ ನಾವೂ ಒಂದು ತಂತ್ರ ಹೂಡಿದೆವು.(50) ತರುವಾಯ ಅವರ ತಂತ್ರದ ಪರ್ಯಾವಸಾನವು ಹೇಗಿತ್ತು ಎಂಬುದನ್ನು ನೋಡಿರಿ. ನಾವು ಅವರನ್ನು ಮತ್ತು ಅವರ ಜನತೆಯನ್ನು ಸಂಪೂರ್ಣವಾಗಿ ನಾಶ ಮಾಡಿದೆವು.(51)"** [ಅನ್ನಮ್ಲ್: 49-51]

ಇಸ್ಲಾಮ್ ಧರ್ಮವು ಕಳ್ಳತನವನ್ನು ವಿರೋಧಿಸುತ್ತದೆ. ಪ್ರವಾದಿ صلى الله عليه وسلم ರವರು ಹೇಳಿದರು: **"ಒಬ್ಬ ವ್ಯಭಿಚಾರಿ ಸತ್ಯ ವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ವ್ಯಭಿಚಾರ ಮಾಡಲಾರ. ಒಬ್ಬ ಕಳ್ಳ ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಕಳ್ಳತನ ಮಾಡಲಾರ. ಒಬ್ಬ ಮದ್ಯಪಾನಿ ಸತ್ಯ ವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಮದ್ಯಪಾನ ಮಾಡಲಾರ. ಆದರೂ ಈ ಎಲ್ಲಾ ವ್ಯಕ್ತಿಗಳಿಗೆ ಪಶ್ಚಾತ್ತಾಪದ ಬಾಗಿಲು ತೆರೆದಿರುತ್ತದೆ."** [ಸಹೀಹುಲ್ ಬುಖಾರಿ 6810.]

ಇಸ್ಲಾಂ ಧರ್ಮವು ಅತಿಕ್ರಮವನ್ನು ವಿರೋಧಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ಅಲ್ಲಾಹು ನ್ಯಾಯ ಪಾಲಿಸಲು, ಒಳಿತನ್ನು ಮಾಡಲು ಮತ್ತು ಸಂಬಂಧಿಕರಿಗೆ (ನೆರವು) ನೀಡಲು ಆಜ್ಞಾಪಿಸು ತ್ತಿರುವನು. ನೀಚಕೃತ್ಯಗಳನ್ನು, ದುರಾಚಾರಗಳನ್ನು ಮತ್ತು ಅತಿಕ್ರಮಗಳನ್ನು ಅವನು**

ವಿರೋಧಿಸುತ್ತಿರುವನು. ನೀವು ಚಿಂತಿಸಿ ಗ್ರಹಿಸುವ ಸಲುವಾಗಿ ಅವನು ನಿಮಗೆ ಉಪದೇಶ ನೀಡುತ್ತಿರುವನು." [ಅನ್ನಹ್ಲ್:90]

ಪ್ರವಾದಿ صلى الله عليه وسلم ರವರು ಹೇಳಿದರು: "ಖಂಡಿತವಾಗಿಯೂ ನೀವು ವಿನಮ್ರತೆಯಿಂದ ವರ್ತಿಸಬೇಕೆಂದು ಅಲ್ಲಾಹನು ನನಗೆ ದಿವ್ಯವಾಣಿ ಮಾಡಿರುವನು. ಎಲ್ಲಿಯವರೆಗೆಂದರೆ ಒಬ್ಬನು ಇನ್ನೊಬ್ಬನ ಮೇಲೆ ದಬ್ಬಾಳಿಕೆ ಮಾಡಬಾರದು ಮತ್ತು ಒಬ್ಬನು ಇನ್ನೊಬ್ಬನ ಮೇಲೆ ಅಹಂಕಾರಪಡಬಾರದು." [ಸಹೀಹ್ ಅಬೂ ದಾವೂದ್ 4895.]

ಇಸ್ಲಾಂ ಧರ್ಮವು ಅನ್ಯಾಯವೆಸಗುವುದನ್ನು ವಿರೋಧಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹು ಅಕ್ರಮಿಗಳನ್ನು ಇಷ್ಟಪಡಲಾರನು." [ಆಲು ಇಮ್ರಾನ್:57].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಖಂಡಿತವಾಗಿಯೂ ಅಕ್ರಮಿಗಳು ಯಶಸ್ವಿಯಾಗಲಾರರು." [ಅಲ್-ಅನ್‌ಆಮ್:21].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಕ್ರಮಿಗಳಿಗೆ ಅವನು ಯಾತನಾಮಯವಾದ ಶಿಕ್ಷೆಯನ್ನು ಸಿದ್ಧಗೊಳಿಸಿರುವನು." [ಅಲ್-ಇನ್ಸಾನ್:31].

ಪ್ರವಾದಿ صلى الله عليه وسلم ರವರು ಹೇಳಿದರು: "ಮೂರು ವ್ಯಕ್ತಿಗಳ ಪ್ರಾರ್ಥನೆ ತಿರಸ್ಕರಿಸಲಾಗದು: ನ್ಯಾಯವಂತ ಆಡಳಿತಗಾರನ ಪ್ರಾರ್ಥನೆ, ಉಪವಾಸ ಆಚರಿಸುವವನು ಉಪವಾಸ ಬಿಡುವವರೆಗೆ ಮಾಡುವ ಪ್ರಾರ್ಥನೆ ಮತ್ತು ಅನ್ಯಾಯಕ್ಕೊಳಗಾದವನ ಪ್ರಾರ್ಥನೆ. ಅವನ ಪ್ರಾರ್ಥನೆಯನ್ನು ಮೋಡಗಳ ಮೇಲೆ ಹೊರಿಸಲಾಗುತ್ತದೆ ಮತ್ತು ಆಕಾಶಗಳ ದ್ವಾರಗಳು ಅದಕ್ಕೆ ತೆರೆದುಕೊಳ್ಳುತ್ತವೆ. ಸರ್ವಶಕ್ತ ಪರಿಪಾಲಕ ಪ್ರಭುವಾದ ಅಲ್ಲಾಹನು ಹೇಳುತ್ತಾನೆ: ನನ್ನ ಘನತೆಯ ಆಣೆ! ನಾನು ಖಂಡಿತವಾಗಿಯೂ ನಿನಗೆ ಸಹಾಯ ಮಾಡುವೆನು. ಅದು ಒಂದು ಕಾಲದ ನಂತರವಾದರೂ ಸರಿ." [ಈ ಹದೀಸನ್ನು ಇಮಾಮ್ ಮುಸ್ಲಿಮ್ ರವರು ಸ್ವಲ್ಪ ವ್ಯತ್ಯಾಸದೊಂದಿಗೆ ವರದಿ ಮಾಡಿದ್ದಾರೆ (2749) ಮತ್ತು ಇಮಾಮ್ ತಿರ್ಮಿದಿರವರೂ ಸ್ವಲ್ಪ

ವ್ಯತ್ಯಾಸದೊಂದಿಗೆ ಈ ಹದೀಸನ್ನು ವರದಿ ಮಾಡಿದ್ದಾರೆ (2526). ಈ ಹದೀಸಿನ ಪದಗಳು ಇಮಾಮ್ ಅಹ್ಮದ್ ರವರದ್ದಾಗಿವೆ (8043).]

ಪ್ರವಾದಿ ಮುಹಮ್ಮದ್ صلي الله عليه وسلم ರವರು ಮುಆದ್ رضي الله عنه ರವರಿಗೆ ಯಮನಿಗೆ ಕಳುಹಿಸುವಾಗ ಹೀಗೆ ಹೇಳಿದರು: **"ಅನ್ಯಾಯಕ್ಕೊಳಗಾದವನ ಪ್ರಾರ್ಥನೆಯನ್ನು ಭಯಪಡಿರಿ. ಏಕೆಂದರೆ ಅದರ ಮತ್ತು ಅಲ್ಲಾಹನ ನಡುವೆ ಯಾವುದೇ ಪರದೆ ಇರುವುದಿಲ್ಲ."** [ಸಹೀಹುಲ್ ಬುಖಾರಿ 1496.]

ಪ್ರವಾದಿ صلي الله عليه وسلم ರವರು ಹೇಳಿದರು: **"ಎಚ್ಚರಿಕೆ! ಯಾರಾದರೂ ಕರಾರು ಮಾಡಿಕೊಂಡ ವ್ಯಕ್ತಿಯ ಮೇಲೆ ಅನ್ಯಾಯವೆಸಗಿದರೆ, ಅಥವಾ ಅವನ (ಹಕ್ಕುಗಳಲ್ಲಿ) ಕಡಿಮೆಗೊಳಿಸಿದರೆ, ಅಥವಾ ಅವನ ಶಕ್ತಿಯನ್ನು ಮೀರಿ ಏನನ್ನಾದರೂ ಮಾಡಲು ಅವನನ್ನು ನಿರ್ಬಂಧಿಸಿದರೆ, ಅಥವಾ ಅವನ ಇಷ್ಟಕ್ಕೆ ವಿರುದ್ಧವಾಗಿ ಅವನಿಂದ ಏನನ್ನಾದರೂ ತೆಗೆದುಕೊಂಡರೆ, ಪುನರುತ್ಥಾನ ದಿನದಂದು ನಾನು ಅವನ ಪರವಾಗಿ ವಾದಿಸುತ್ತೇನೆ."** [ಸುನನ್ ಅಬೂ ದಾವೂದ್ 3052.]

ನೀವು ನೋಡಿದಂತೆ ಇಸ್ಲಾಮ್ ಧರ್ಮವು ಎಲ್ಲಾ ರೀತಿಯ ಕೆಟ್ಟ ಸ್ವಭಾವಗಳನ್ನು, ಅನ್ಯಾಯ ಮತ್ತು ಅಕ್ರಮಗಳನ್ನು ವಿರೋಧಿಸುತ್ತದೆ.

## 36. ಬಡ್ಡಿ ಅಥವಾ ಯಾರಿಗಾದರೂ ಹಾನಿ, ವಂಚನೆ, ಅನ್ಯಾಯ ಅಥವಾ ಮೋಸವನ್ನು ಒಳಗೊಂಡಿರುವ, ಅಥವಾ ವಿಪತ್ತುಗಳಿಗೆ ಕಾರಣವಾಗುವ ಮತ್ತು ಸಮಾಜಕ್ಕೆ, ಸಮುದಾಯಕ್ಕೆ ಹಾಗೂ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಹಾನಿ ಉಂಟುಮಾಡುವ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ಇಸ್ಲಾಮ್ ವಿರೋಧಿಸುತ್ತದೆ.

ಬಡ್ಡಿ ಅಥವಾ ಯಾರಿಗಾದರೂ ಹಾನಿ, ವಂಚನೆ, ಅನ್ಯಾಯ ಅಥವಾ ಮೋಸವನ್ನು ಒಳಗೊಂಡಿರುವ, ಅಥವಾ ವಿಪತ್ತುಗಳಿಗೆ ಕಾರಣವಾಗುವ ಮತ್ತು ಸಮಾಜಕ್ಕೆ, ಸಮುದಾಯಕ್ಕೆ ಹಾಗೂ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಹಾನಿ ಉಂಟುಮಾಡುವ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ಇಸ್ಲಾಮ್ ವಿರೋಧಿಸುತ್ತದೆ. ಈ ಶೀರ್ಷಿಕೆಯ ಆರಂಭದಲ್ಲಿ, ಬಡ್ಡಿ, ಅನ್ಯಾಯ, ವಂಚನೆ ಮತ್ತು ಭೂಮಿಯ ಮೇಲೆ ಕ್ಷೋಭೆಯನ್ನುಂಟುಮಾಡುವುದನ್ನು ನಿಷೇಧಿಸುವ ಸೂಕ್ತಿಗಳು ಮತ್ತು ಹದೀಸ್‌ಗಳನ್ನು ಉಲ್ಲೇಖಿಸಲಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಸತ್ಯವಿಶ್ವಾಸಿಗಳಿಗೆ ಮತ್ತು ಸತ್ಯವಿಶ್ವಾಸಿನಿಗಳಿಗೆ ಅವರು (ಕೆಡುಕಾಗಿರುವ) ಏನನ್ನೂ ಮಾಡದಿದ್ದರೂ ಕಿರುಕುಳ ಕೊಡುವವರು ಯಾರೋ ಅವರು ಸುಳ್ಳಾರೋಪವನ್ನು ಮತ್ತು ಬಹಿರಂಗವಾದ ಪಾಪವನ್ನು ವಹಿಸಿಕೊಂಡಿರುವರು.”** [ಅಲ್-ಅಹ್‌ಝಾಬ್:58]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಯಾರಾದರೂ ಸತ್ಕರ್ಮವೆಸಗಿದರೆ ಅದರ ಒಳಿತು ಅವನಿಗೇ ಆಗಿದೆ. ಯಾರಾದರೂ ದುಷ್ಕರ್ಮವೆಸಗಿದರೆ ಅದರ ದೋಷವೂ ಅವನಿಗೇ ಆಗಿದೆ. ತಮ್ಮ ಪ್ರಭು (ತನ್ನ) ದಾಸರೊಂದಿಗೆ ಅನ್ಯಾಯವೆಸಗುವವನೇ ಅಲ್ಲ.”** [ಫುಸ್ಸಿಲತ್:46].

ಯಾರಿಗಾದರೂ ಹಾನಿ ಮಾಡುವುದು ಮತ್ತು ತನಗೆ ಹಾನಿ ಮಾಡಿದವನಿಗೆ ಪ್ರತಿಯಾಗಿ ಹೆಚ್ಚು ಹಾನಿ ಮಾಡುವುದು ಧರ್ಮಸಮ್ಮತವಲ್ಲ ಎಂದು ಪ್ರವಾದಿ ﷺ ರವರು ತೀರ್ಪು ನೀಡಿದ್ದಾರೆಂದು ಸುನ್ನತಿನಲ್ಲಿ (ಪ್ರವಾದಿ ವಚನ) ಬಂದಿದೆ. [ಸುನನ್ ಅಬೂ ದಾವೂದ್]

ಪ್ರವಾದಿ صلى الله عليه وسلم ರವರು ಹೇಳಿದರು: **“ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿಡುವವನು ತನ್ನ ನೆರೆಹೊರೆಯವರಿಗೆ ತೊಂದರೆ ಕೊಡದಿರಲಿ, ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿಡುವವನು ತನ್ನ ಅತಿಥಿಯನ್ನು ಗೌರವಿಸಲಿ. ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿಡುವವನು ಒಳ್ಳೆಯ ಮಾತನ್ನೇ ಆಡಲಿ ಅನ್ಯಥಾ ಮೌನವಾಗಿರಲಿ.”**

ಇನ್ನೊಂದು ವರದಿಯಲ್ಲಿ **"ತನ್ನ ನೆರೆಹೊರೆಯವರೊಂದಿಗೆ ಉತ್ತಮ ರೀತಿಯಿಂದ ವರ್ತಿಸಲಿ"** ಎಂದು ಇದೆ. [ಸಹೀಹ್ ಮುಸ್ಲಿಮ್: 47]

ಪ್ರವಾದಿ صلى الله عليه وسلم ರವರು ಹೇಳಿದರು: **“ಒಂದು ಬೆಕ್ಕನ್ನು ಸೆರೆಯಲ್ಲಿಟ್ಟು ಸಾಯಿಸಿದ್ದಕ್ಕಾಗಿ ಒಬ್ಬ ಮಹಿಳೆ ಶಿಕ್ಷೆಗೊಳಗಾದಳು. ಆಕೆ ಅದಕ್ಕಾಗಿ ನರಕವನ್ನು ಪ್ರವೇಶಿಸಿದಳು. ಆಕೆ ಆ ಬೆಕ್ಕನ್ನು ಸೆರೆಯಲ್ಲಿಟ್ಟಾಗ ಅದಕ್ಕೆ ತಿನ್ನಲು ಕುಡಿಯಲು ಏನೂ ಕೊಡಲಿಲ್ಲ, ಅದು ಭೂಮಿಯಲ್ಲಿರುವ ಕೀಟಗಳನ್ನು ತಿನ್ನುವಂತೆ ಅದನ್ನು ಬಿಟ್ಟುಬಿಡಲೂ ಇಲ್ಲ.”** [ಸಹೀಹುಲ್ ಬುಖಾರಿ 3482.]

ಒಂದು ಬೆಕ್ಕಿಗೆ ತೊಂದರೆ ಕೊಡುವುದಕ್ಕೆ ಇಂತಹ ಶಿಕ್ಷೆಯಾದರೆ ಮನುಷ್ಯರಿಗೆ ತೊಂದರೆ ಕೊಡುವವನ ಸ್ಥಿತಿ ಏನಾಗಬಹುದು? ಇಬ್ನು ಉಮರ್ رضي الله عنه ಹೇಳುತ್ತಾರೆ: “ಪ್ರವಾದಿ صلى الله عليه وسلم ರವರು ಪ್ರವಚನ ಪೀಠವನ್ನು ಏರಿ ಉನ್ನತ ಧ್ವನಿಯಲ್ಲಿ ಕರೆದು ಹೀಗೆ ಹೇಳಿದರು: **“ಓ ನಾಲಿಗೆಯಿಂದ ಇಸ್ಲಾಮ್ ಸ್ವೀಕರಿಸಿ ಹೃದಯಗಳಿಗೆ ವಿಶ್ವಾಸ ತಲುಪದ ಜನರೇ! ನೀವು ಮುಸ್ಲಿಮರಿಗೆ ತೊಂದರೆ ಕೊಡಬೇಡಿ, ಅವರನ್ನು ನಿಂದಿಸಬೇಡಿ ಮತ್ತು ಅವರ ಕುಂದು ಕೊರತೆಗಳನ್ನು ಹುಡುಕಬೇಡಿ. ಏಕೆಂದರೆ ಯಾರು ತನ್ನ ಮುಸ್ಲಿಮ್ ಸಹೋದರನ ಕುಂದು ಕೊರತೆಗಳನ್ನು ಹುಡುಕುತ್ತಾನೋ ಅವನ ಕುಂದು ಕೊರತೆಗಳನ್ನು ಅಲ್ಲಾಹನು ಹುಡುಕುತ್ತಾನೆ. ಯಾರ ಕುಂದು ಕೊರತೆಗಳನ್ನು ಅಲ್ಲಾಹನು ಹುಡುಕುತ್ತಾನೋ ಅವನು ತನ್ನ ಮನೆಯೊಳಗಿದ್ದರೂ ಅಲ್ಲಾಹನು ಅವನನ್ನು ಅವಮಾನಿಸಿಯೇ ತೀರುತ್ತಾನೆ.”**

ಒಂದು ದಿನ ಇಬ್ನು ಉಮರ್ رضي الله عنه ಕಅಬಾವನ್ನು ನೋಡಿ ಹೇಳಿದರು: “ನೀನು ಎಷ್ಟು ಶ್ರೇಷ್ಠನಾಗಿರುವೆ! ನಿನ್ನ ಪವಿತ್ರತೆ ಎಷ್ಟು ದೊಡ್ಡದಾಗಿದೆ! ಆದರೆ ಅಲ್ಲಾಹನ ದೃಷ್ಟಿಯಲ್ಲಿ

(ಪರಿಪೂರ್ಣ) ಸತ್ಯವಿಶ್ವಾಸಿಯ ಪಾವಿತ್ರ್ಯವು ನಿನಗಿಂತ ದೊಡ್ಡದಾಗಿದೆ." [ಈ ಹದೀಸನ್ನು ಇಮಾಮ್ ತಿರ್ಮಿದಿ (2032) ಮತ್ತು ಇಬ್ನು ಹಿಬ್ಬಾನ್ (5763) ವರದಿ ಮಾಡಿದ್ದಾರೆ.]

ಪ್ರವಾದಿ صلي الله عليه وسلم ರವರು ಹೇಳಿದರು: "ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿಡುವವನು ತನ್ನ ನೆರೆಹೊರೆಯವರಿಗೆ ತೊಂದರೆ ಕೊಡದಿರಲಿ, ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿಡುವವನು ತನ್ನ ಅತಿಥಿಯನ್ನು ಗೌರವಿಸಲಿ. ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿಡುವವನು ಒಳ್ಳೆಯ ಮಾತನ್ನೇ ಆಡಲಿ ಅನ್ಯಥಾ ಮೌನವಾಗಿರಲಿ." [ಸಹೀಹುಲ್ ಬುಖಾರಿ 6018.]

ಅಬೂ ಹುರೈರಾ رضي الله عنه ರವರಿಂದ ವರದಿ. ಪ್ರವಾದಿ صلي الله عليه وسلم ರವರು ಹೇಳಿದರು: "ದಿವಾಳಿಯಾದವನು ಯಾರೆಂದು ನಿಮಗೆ ತಿಳಿದಿದೆಯೇ?" ಸಹಾಬಾಗಳು ಉತ್ತರಿಸಿದರು: "ಓ ಅಲ್ಲಾಹನ ಸಂದೇಶವಾಹಕರೇ! ನಮ್ಮ ಪ್ರಕಾರ ದಿವಾಳಿ ಎಂದರೆ ಹಣವಿಲ್ಲದವನು ಮತ್ತು ಜೀವನ ನಡೆಸುವ ಸರಕುಗಳು ಹೊಂದಿಲ್ಲದವನು." ಆಗ ಪ್ರವಾದಿ صلي الله عليه وسلم ರವರು ಹೇಳಿದರು: "ನನ್ನ ಸಮುದಾಯದಲ್ಲಿ ದಿವಾಳಿಯಾದವನು ಯಾರೆಂದರೆ ಅವನು ಪುನರುತ್ಥಾನದ ದಿನ ಉಪವಾಸ, ನಮಾಜ್, ಝಕಾತ್ ಗಳಂತಹ ಸತ್ಕಾರ್ಯಗಳೊಂದಿಗೆ ಬರುತ್ತಾನೆ. ಆದರೆ ಅವನು ಯಾರನ್ನಾದರೂ ನಿಂದಿಸಿರಬಹುದು, ಯಾರಾದರೊಬ್ಬರ ಮೇಲೆ ಸುಳ್ಳಾರೋಪ ಹೊರಿಸಿರಬಹುದು ಅಥವಾ ಯಾರೊಬ್ಬರ ಸಂಪತ್ತನ್ನು (ಅನ್ಯಾಯವಾಗಿ) ತಿಂದಿರಬಹುದು. ಇಂತಹ ವ್ಯಕ್ತಿಯನ್ನು ಕೂರಿಸಲಾಗುವುದು. ಆಗ ಒಬ್ಬ ದಮನಿತ ವ್ಯಕ್ತಿ ಬಂದು ಅವನಿಂದ ಅವನ ಒಳ್ಳೆಯ ಕಾರ್ಯಗಳನ್ನು ತೆಗೆದುಕೊಂಡು ತನ್ನ ಸೇಡು ತೀರಿಸಿಕೊಳ್ಳುವನು, ಇನ್ನೊಬ್ಬ ಬಂದು ಅವನ ಒಳ್ಳೆಯ ಕಾರ್ಯಗಳನ್ನು ತೆಗೆದುಕೊಂಡು ತನ್ನ ಸೇಡು ತೀರಿಸಿಕೊಳ್ಳುವನು. ಹೀಗೆ ಅವನ ಬಗ್ಗೆ ತೀರ್ಪು ನೀಡುವುದಕ್ಕೆ ಮುಂಚೆ ಅವನ ಸತ್ಕಾರ್ಯಗಳು ಕೊನೆಗೊಂಡರೆ ಅನ್ಯಾಯಕ್ಕೊಳಗಾದವರ ಪಾಪಗಳನ್ನು ಅವನ ಮೇಲೆ ಹಾಕಲಾಗುವುದು. ನಂತರ ಅವನನ್ನು ನರಕಕ್ಕೆ ಎಸೆಯಲಾಗುವುದು." [ಈ ಹದೀಸನ್ನು ಇಮಾಮ್ ಮುಸ್ಲಿಮ್ (2581), ಇಮಾಮ್ ತಿರ್ಮಿದಿ (2418) ಮತ್ತು ಇಮಾಮ್ ಅಹ್ಮದ್ (8029) ವರದಿ ಮಾಡಿದ್ದಾರೆ. ಈ ಹದೀಸಿನ ಪದಗಳು ಇಮಾಮ್ ಅಹ್ಮದ್ ರವರದ್ದಾಗಿವೆ]

ಅಲ್ಲಾಹನ ಪ್ರವಾದಿ صلي الله عليه وسلم ರವರು ಹೇಳಿದರು: **"ರಸ್ತೆಯಲ್ಲಿ ಜನರನ್ನು ತೊಂದರೆ ಕೊಡುವ ಒಂದು ಮರದ ಕೊಂಬೆಯನ್ನು ಒಬ್ಬ ವ್ಯಕ್ತಿ ದೂರ ಸರಿಸಿದನು. ಅದಕ್ಕಾಗಿ ಅವನನ್ನು ಸ್ವರ್ಗಕ್ಕೆ ಸೇರಿಸಲಾಯಿತು."** [ಇಮಾಮ್ ಬುಖಾರಿ ರವರು (652) ಇದೇ ಅರ್ಥವಿರುವ ಹದೀಸನ್ನು ವರದಿ ಮಾಡಿದ್ದಾರೆ. ಇಮಾಮ್ ಮುಸ್ಲಿಮ್ ರವರು ಇದೇ ಪದಗಳಿರುವ ಹದೀಸ್ ವರದಿ ಮಾಡಿದ್ದಾರೆ (1914). ಇಬ್ನು ಮಾಜಾ (3682) ಮತ್ತು ಇಮಾಮ್ ಅಹ್ಮದ್ (10432) ರವರು ಕೂಡಾ ಈ ಹದೀಸನ್ನು ವರದಿ ಮಾಡಿದ್ದಾರೆ. ಈ ಹದೀಸಿನ ಪದಗಳು ಇಮಾಮ್ ಅಹ್ಮದ್ ಮತ್ತು ಇಬ್ನು ಮಾಜಾ ರವರದ್ದಾಗಿವೆ.]

ದಾರಿಯಿಂದ ಅಡ್ಡಿಯನ್ನು ನಿವಾರಿಸಿದರೆ ಸ್ವರ್ಗ ಸಿಗುವುದಾದರೆ, ಜನರನ್ನು ನೋಯಿಸುವ ಮತ್ತು ಅವರ ಜೀವನದಲ್ಲಿ ಅಶಾಂತಿ ಸೃಷ್ಟಿಸುವವರಿಗೆ ಎಷ್ಟು ದೊಡ್ಡ ಶಿಕ್ಷೆಯಿರಬಹುದು!

## 37. ಇಸ್ಲಾಮ್ ಧರ್ಮವು ಬುದ್ಧಿಯನ್ನು ಸಂರಕ್ಷಿಸುತ್ತದೆ. ಅದನ್ನು ಹಾನಿಗೊಳಿಸುವ ಮದ್ಯ ಮುಂತಾದ ಎಲ್ಲವನ್ನೂ ನಿಷೇಧಿಸುತ್ತದೆ. ಅದು ಬುದ್ಧಿಯ ಮಹಿಮೆಯನ್ನು ಉತ್ತುಂಗಕ್ಕೇರಿಸಿ ಅದನ್ನು ಶರಿಯತ್ತಿನ ಎಲ್ಲಾ ಹೊಣೆಗಾರಿಕೆಯ ಆಧಾರವನ್ನಾಗಿ ಮಾಡಿದೆ. ಅದನ್ನು ಮೂಢನಂಬಿಕೆ ಮತ್ತು ವಿಗ್ರಹಾರಾಧನೆಯ ಸಂಕೋಲೆಗಳಿಂದ ಮುಕ್ತಗೊಳಿಸಿದೆ. ಇಸ್ಲಾಮ್ ಧರ್ಮದಲ್ಲಿ ಒಂದು ವರ್ಗಕ್ಕೆ ಮಾತ್ರ ಸೀಮಿತವಾದ ಯಾವುದೇ ನಿಯಮಗಳು ಮತ್ತು ರಹಸ್ಯಗಳಿಲ್ಲ. ಇಸ್ಲಾಂ ಧರ್ಮದ ಎಲ್ಲಾ ಆದೇಶಗಳು ಮತ್ತು ಕಾನೂನುಗಳು ಬುದ್ಧಿಗೆ ನಿಲುಕುವಂತದ್ದಾಗಿವೆ. ಅವು ನ್ಯಾಯ ಹಾಗೂ ಯುಕ್ತಿಯ ಬೇಡಿಕೆಗಳಿಗೆ ಅನುಗುಣವಾಗಿವೆ.

ಇಸ್ಲಾಮ್ ಧರ್ಮವು ಬುದ್ಧಿಯನ್ನು ಸಂರಕ್ಷಿಸುತ್ತದೆ ಮತ್ತು ಅದರ ಮಹಿಮೆಯನ್ನು ಉತ್ತುಂಗಕ್ಕೇರಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ತಮಗೆ ಅರಿವಿಲ್ಲದ ಯಾವುದನ್ನೂ ತಾವು ಹಿಂಬಾಲಿಸದಿರಿ. ಖಂಡಿತವಾಗಿಯೂ ಶ್ರವಣ, ದೃಷ್ಟಿ ಮತ್ತು ಹೃದಯ, ಇವೆಲ್ಲವೂ ವಿಚಾರಣೆಗೆ ಒಳಗಾಗುವುದು."** [ಅಲ್-ಇಸ್ರಾ:36]

ಮನುಷ್ಯನು ಬುದ್ಧಿಯನ್ನು ಕಾಪಾಡುವುದು ಕಡ್ಡಾಯವಾಗಿದೆ. ಈ ಕಾರಣದಿಂದಲೇ ಇಸ್ಲಾಂ ಮದ್ಯ ಮತ್ತು ಮಾದಕ ದ್ರವ್ಯಗಳನ್ನು ನಿಷೇಧಿಸಿದೆ. ಶೀರ್ಷಿಕೆ ಸಂಖ್ಯೆ (34) ನಲ್ಲಿ ಮದ್ಯಪಾನದ ನಿಷೇಧವನ್ನು ಉಲ್ಲೇಖಿಸಲಾಗಿದೆ. ಪವಿತ್ರ ಕುರ್‌ಆನಿನ ಅನೇಕ ಸೂಕ್ತಿಗಳು ಅಲ್ಲಾಹನ ಈ ವಚನದೊಂದಿಗೆ ಮುಕ್ತಾಯಗೊಳ್ಳುತ್ತವೆ: **"ನೀವು ಚಿಂತಿಸುವುದಕ್ಕಾಗಿ."** [ಅಲ್-ಬಖರ:242].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಐಹಿಕ ಜೀವನವು ಆಟ ಮತ್ತು ಮನರಂಜನೆಯೇ ವಿನಾ ಇನ್ನೇನೂ ಅಲ್ಲ. ಭಯಭಕ್ತಿ ಪಾಲಿಸುವವರಿಗೆ ಉತ್ತಮವಾಗಿರುವುದು ಪರಲೋಕವೇ ಆಗಿದೆ. ನೀವು ಆಲೋಚಿಸುವುದಿಲ್ಲವೇ?"** [ಅಲ್-ಅನ್‌ಆಮ್:32].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನೀವು ಚಿಂತಿಸಿ ಗ್ರಹಿಸುವ ಸಲುವಾಗಿ ನಾವು ಅದನ್ನು ಅರಬಿ ಭಾಷೆಯಲ್ಲಿ ಓದಲ್ಪಡುವ ಒಂದು ಪ್ರಮಾಣಗ್ರಂಥವಾಗಿ ಅವತೀರ್ಣ ಗೊಳಿಸಿರುವೆವು."** [ಯೂಸುಫ್:2].

ನೈಜಮಾರ್ಗ ಮತ್ತು ನೈಜ ಜ್ಞಾನದಿಂದ ಬುದ್ಧಿಯನ್ನು ಬಳಸುವವರು ಮಾತ್ರ ಪ್ರಯೋಜನ ಪಡೆಯುತ್ತಾರೆಂದು ಅಲ್ಲಾಹನು ವಿವರಿಸಿದ್ದಾನೆ. ಅವರೇ ಬುದ್ಧಿವಂತರು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವನು ಅವನಿಚ್ಛಿಸುವವರಿಗೆ (ನೈಜ) ಜ್ಞಾನವನ್ನು ನೀಡುವನು. ಯಾರಿಗೆ (ನೈಜ) ಜ್ಞಾನ ನೀಡಲಾಗಿದೆಯೋ ಅವನಿಗೆ (ತನ್ಮೂಲಕ) ಅತ್ಯಧಿಕ ಒಳಿತುಗಳನ್ನು ನೀಡಲಾಗಿದೆ. ಆದರೆ ಬುದ್ಧಿವಂತರು ಮಾತ್ರ ಚಿಂತಿಸಿ ಗ್ರಹಿಸುವರು."** [ಅಲ್-ಬಖರ:269].

ಈ ಕಾರಣದಿಂದಲೇ ಇಸ್ಲಾಮ್ ಧರ್ಮವು ಬುದ್ಧಿಯನ್ನು ಶರಿಯತ್ತಿನ ಎಲ್ಲಾ ಹೊಣೆಗಾರಿಕೆಗಳ ಆಧಾರವನ್ನಾಗಿ ಮಾಡಿದೆ. ಪ್ರವಾದಿ صلى الله عليه وسلم ರವರು ಹೇಳಿದರು: **"ಮೂರು ವ್ಯಕ್ತಿಗಳಿಂದ ಲೇಖನಿ ಎತ್ತುಕೊಳ್ಳಲಾಗಿದೆ: (ಅರ್ಥಾತ್ ಅವರ ಮೇಲೆ ಯಾವ ಹೊಣೆಗಾರಿಕೆ ಇಲ್ಲ ಹಾಗೂ ಅವರ ವಿಚಾರಣೆ ಯಾಗುವುದೂ ಇಲ್ಲ) ಮಲಗುವವನು ಎದ್ದೇಳುವ ತನಕ, ಮಗು ಪ್ರಾಯಕ್ಕೆ ತಲುಪುವ ತನಕ, ಮತ್ತು ಹುಚ್ಚ ಬುದ್ಧಿಯುಳ್ಳವನಾಗುವ ತನಕ."** [ಇಮಾಮ್ ಬುಖಾರಿ ರವರು (5269) ಸಂಖ್ಯೆಯ ಹದೀಸಿನ ಮುಂಚೆ ಈ ಹದೀಸನ್ನು ಅದೇ ರೀತಿ ಮುಅಲ್ಲಖ್ ಆಗಿ (ಇದು ವರದಿ ಪರಂಪರೆಯ ಆರಂಭದಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ವರದಿಗಾರರನ್ನು ಬಿಟ್ಟು ಉದ್ಧರಿಸಿದ ಹದೀಸ್‌ಗಳಾಗಿವೆ. ಒಬ್ಬ ವರದಿಗಾರನನ್ನೂ ಪ್ರಸ್ತಾಪಿಸದೆ ಪ್ರವಾದಿಯವರಿಂದ (صلى الله عليه وسلم) ಉದ್ಧರಿಸಲಾದ ಹಾಗೂ ಸಹಾಬಿ ಅಥವಾ ಸಹಾಬಿಗಳನ್ನು ಮಾತ್ರ ಪ್ರಸ್ತಾಪಿಸಿ ಇನ್ನಾರನ್ನು ಪ್ರಸ್ತಾಪಿಸದೆ ಉದ್ಧರಿಸಿದ

ಹದೀಸ್‌ಗಳಾಗಿವೆ) ಸೀಗತುಲ್ ಜಝ್ಮ್‌ನೊಂದಿಗೆ (ಸ್ವೀಕೃತ ಹದೀಸನ್ನು (ಸಹೀಹ್ ಮತ್ತು ಹಸನ್) ವರದಿ ಮಾಡಲು ಹದೀಸ್ ವರದಿಗಾರರು ಬಳಸುವ ಪದ ಉದಾಹರಣೆಗೆ قال فلان: ಅವರು ಹೇಳಿದರು, روي فلان: ಅವರು ವರದಿ ಮಾಡಿದರು.) ವರದಿ ಮಾಡಿದ್ದಾರೆ. ಇಮಾಮ್ ಅಬೂ ದಾವೂದ್ ರವರು ಈ ಹದೀಸನ್ನು ಮೌಸೂಲ್ (ವರದಿ ಪರಂಪರೆಯು ಅದರ ಕೊನೆಯವರೆಗೆ ಸಂಪರ್ಕದಲ್ಲಿರುವುದು) ಆಗ ಈ ವರದಿ ಮಾಡಿದ್ದಾರೆ. ಈ ಹದೀಸಿನ ಪದಗಳು ಅವರದ್ದೇ ಆಗಿವೆ. ಇಮಾಮ್ ತಿರ್ಮಿದಿ (1423), ಇಮಾಮ್ ನಸಾಈ (ಅಸ್ಸುನನುಲ್ ಕುಬ್ರಾ ದಲ್ಲಿ)(7346), ಇಮಾಮ್ ಅಹ್ಮದ್ ರವರು  ಸ್ವಲ್ಪ ಬದಲಾವಣೆಯೊಂದಿಗೆ (956) ಮತ್ತು ಇಬ್ನು ಮಾಜಾರವರು ಸಂಕ್ಷಿಪ್ತವಾಗಿ ವರದಿ ಮಾಡಿದ್ದಾರೆ (2042).]

ಅದನ್ನು (ಬುದ್ಧಿಯನ್ನು) ಮೂಢನಂಬಿಕೆ ಮತ್ತು ವಿಗ್ರಹಾರಾಧನೆಯ ಸಂಕೋಲೆಗಳಿಂದ ಮುಕ್ತಗೊಳಿಸಿದನು. ಗತ ಸಮುದಾಯಗಳು ಮೂಡನಂಬಿಕೆಗಳನ್ನು ಬಿಗಿಯಾಗಿ ಹಿಡಿದುಕೊಂಡು ಅಲ್ಲಾಹನ ಕಡೆಯಿಂದ ಅವರೆಡೆಗೆ ಬಂದಂತಹ ಸತ್ಯವನ್ನು ತಿರಸ್ಕರಿಸಿದ ಕುರಿತು ತಿಳಿಸುತ್ತಾ ಅಲ್ಲಾಹನು ಹೇಳುತ್ತಾನೆ: **"ಹೀಗೆ ತಮಗಿಂತ ಮುಂಚೆ ಯಾವುದೇ ಪ್ರದೇಶಕ್ಕೆ ನಾವು ಮುನ್ನೆಚ್ಚರಿಕೆಗಾರರನ್ನು ಕಳುಹಿಸಿದಾಗಲೆಲ್ಲ ನಾವು ನಮ್ಮ ಪೂರ್ವಿಕರನ್ನು ಒಂದು ಮಾರ್ಗದಲ್ಲಿರುವುದಾಗಿ ಕಂಡಿರುವೆವು. ಖಂಡಿತವಾಗಿಯೂ ನಾವು ಅವರ ಹೆಜ್ಜೆಗುರುತುಗಳನ್ನು ಹಿಂಬಾಲಿಸುವೆವು ಎಂದು ಅಲ್ಲಿನ ಸುಖಲೋಲುಪರು ಹೇಳದಿರಲಿಲ್ಲ."** [ಅಝ್ಝುಖ್ರುಫ್:23]

ಇಬ್ರಾಹೀಂ ಖಲೀಲ್ عليه السلام ರವರ ಮಾತನ್ನು ಉಲ್ಲೇಖಿಸುತ್ತಾ ಅವರು ತಮ್ಮ ಜನರಿಗೆ ಹೀಗೆ ಹೇಳಿದರೆಂದು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ತಮ್ಮ ತಂದೆಯೊಂದಿಗೆ ಮತ್ತು ತಮ್ಮ ಜನತೆಯೊಂದಿಗೆ ನೀವು ಪೂಜಿಸುತ್ತಿರುವ ಈ ವಿಗ್ರಹಗಳು ಏನು? ಎಂದು ಕೇಳಿದ ಸಂದರ್ಭ.(52) ಅವರು ಹೇಳಿದರು: ನಮ್ಮ ಪೂರ್ವಿಕರು ಇವುಗಳನ್ನು ಆರಾಧಿಸುತ್ತಿರುವುದಾಗಿ ನಾವು ಕಂಡಿರುವೆವು.(53)"** [ಅಲ್-ಅಂಬಿಯಾ: 52-53]

ಇಸ್ಲಾಮ್ ಧರ್ಮವು ಜನರನ್ನು ವಿಗ್ರಹಾರಾಧನೆಯನ್ನು ತ್ಯಜಿಸಲು ಮತ್ತು ತಮ್ಮ ತಂದೆ, ತಾತಂದಿರಿಂದ ಪಾರಂಪರಿಕವಾಗಿ ಬಂದ ಮೂಡನಂಬಿಕೆಗಳನ್ನು ಬಿಟ್ಟು ಬಿಡಲು ಹಾಗೂ ಸಂದೇಶವಾಹಕರ عليهم الصلاة والسلام ಮಾರ್ಗವನ್ನು ಅನುಸರಿಸಲು ಆದೇಶಿಸುತ್ತದೆ. ಇಸ್ಲಾಮ್ ಧರ್ಮದಲ್ಲಿ ಒಂದು ವರ್ಗಕ್ಕೆ ಮಾತ್ರ ಸೀಮಿತವಾದ ಯಾವುದೇ ನಿಯಮಗಳು ಮತ್ತು ರಹಸ್ಯಗಳಿಲ್ಲ. ಪ್ರವಾದಿ صلي الله عليه وسلم ರವರ ಸೋದರ ಸಂಬಂಧಿ ಮತ್ತು ಮಗಳ ಗಂಡ ಆಗಿದ್ದ ಅಲೀ ಇಬ್ನು ಅಬೀ ತಾಲಿಬ್ رضي الله عنه ರವರೊಂದಿಗೆ ಕೇಳಲಾಯಿತು: “ಪ್ರವಾದಿ صلي الله عليه وسلم ರವರು ನಿಮಗೆ ವಿಶೇಷವಾಗಿ ಏನಾದರೂ ಹೇಳಿದ್ದಾರೆಯೇ?” ಅವರು ಹೇಳಿದರು: “ಎಲ್ಲಾ ಜನರಿಗೆ ಸಾಮಾನ್ಯವಾಗಿ ಹೇಳಿದ ಮಾತನ್ನಲ್ಲದೆ ಪ್ರವಾದಿ صلي الله عليه وسلم ರವರು ನಮಗೆ ಪ್ರತ್ಯೇಕವಾಗಿ ಏನೂ ಹೇಳಲಿಲ್ಲ. ಆದರೆ ನನ್ನ ಈ ಖಡ್ಗದ ಒರೆಯಲ್ಲಿರುವ ಕೆಲವು ಮಾತುಗಳ ಹೊರತು.” ನಂತರ ಅವರು ಅದರಿಂದ ಒಂದು ಪತ್ರವನ್ನು ಹೊರತೆಗೆದರು. ಅದರಲ್ಲಿ ಹೀಗೆ ಬರೆಯಲಾಗಿತ್ತು: **“ಅಲ್ಲಾಹೇತರರಿಗೆ ಬಲಿ ನೀಡುವವನ ಮೇಲೆ ಅಲ್ಲಾಹನ ಶಾಪವಿರಲಿ, ಭೂಮಿಯ (ಗಡಿ ಗುರುತಿಸುವಿಕೆ) ಗುರುತನ್ನು ಕದ್ದವನ ಮೇಲೆ ಅಲ್ಲಾಹನ ಶಾಪವಿರಲಿ, ತಂದೆಯನ್ನು ಶಪಿಸುವವನ ಮೇಲೆ ಅಲ್ಲಾಹನ ಶಾಪವಿರಲಿ, ಮತ್ತು ಧರ್ಮದಲ್ಲಿ ನವೀನಾಚಾರವನ್ನು ಸೃಷ್ಟಿಸುವವನಿಗೆ ಆಶ್ರಯ ನೀಡುವವನ ಮೇಲೆ ಅಲ್ಲಾಹನ ಶಾಪವಿರಲಿ.”** [ಸಹೀಹ್ ಮುಸ್ಲಿಮ್: 1978.]

ಇಸ್ಲಾಂ ಧರ್ಮದ ಎಲ್ಲಾ ಆದೇಶಗಳು ಮತ್ತು ಕಾನೂನುಗಳು ಬುದ್ಧಿಗೆ ನಿಲುಕುವಂತದ್ದಾಗಿವೆ. ಅವು ನ್ಯಾಯ ಹಾಗೂ ಯುಕ್ತಿಯ ಬೇಡಿಕೆಗಳಿಗೆ ಅನುಗುಣವಾಗಿವೆ.

**38. ಮಿಥ್ಯ ಧರ್ಮಗಳ ಅನುಯಾಯಿಗಳು ತಮ್ಮ ಧರ್ಮಗಳಲ್ಲಿ ಕಂಡುಬರುವ ವಿರೋಧಾಭಾಸಗಳು ಮತ್ತು ಬುದ್ಧಿಯು ತಿರಸ್ಕರಿಸುವ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡುವುದಿಲ್ಲ. ಏಕೆಂದರೆ ಧರ್ಮದ ಮುಖಂಡರು ಧರ್ಮವು ಬುದ್ಧಿ ಮತ್ತು ವಿವೇಚನವನ್ನು ಮೀರಿದೆ ಮತ್ತು ಧರ್ಮವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಬುದ್ಧಿಗೆ ಯಾವುದೇ ಸ್ಥಾನವಿಲ್ಲ ಎನ್ನುತ್ತಾರೆ. ಆದುದರಿಂದ ಇಸ್ಲಾಮ್ ಬುದ್ಧಿಗೆ ಅದರ ಮಾರ್ಗವನ್ನು ಬೆಳಗಿಸುವ ಪ್ರಕಾಶದ ರೂಪದಲ್ಲಿ ಧರ್ಮವನ್ನು ಕಾಣುತ್ತದೆ. ಮಿಥ್ಯ ಧರ್ಮಗಳ ಮುಖಂಡರು ಮನುಷ್ಯನು ತನ್ನ ಬುದ್ಧಿಯನ್ನು ಉಪಯೋಗಿಸುವುದನ್ನು ತೊರೆದು ಕೇವಲ ಅವರನ್ನು ಅನುಸರಿಸಬೇಕೆಂದು ಬಯಸುತ್ತಾರೆ. ಆದರೆ ಇಸ್ಲಾಮ್ ಮನುಷ್ಯನು ತನ್ನ ಬುದ್ಧಿಯನ್ನು ಜಾಗೃತಗೊಳಿಸಿ ವಿಷಯಗಳ ವಾಸ್ತವಾಂಶಗಳನ್ನು ಅದರ ನಿಜವಾದ ರೂಪದಲ್ಲಿ ನೋಡಬೇಕೆಂದು ಬಯಸುತ್ತದೆ.**

ಮಿಥ್ಯ ಧರ್ಮಗಳ ಅನುಯಾಯಿಗಳು ತಮ್ಮ ಧರ್ಮಗಳಲ್ಲಿ ಕಂಡುಬರುವ ವಿರೋಧಾಭಾಸಗಳು ಮತ್ತು ಬುದ್ಧಿಯು ತಿರಸ್ಕರಿಸುವ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡುವುದಿಲ್ಲ. ಏಕೆಂದರೆ ಧರ್ಮದ ಮುಖಂಡರು ಧರ್ಮವು ಬುದ್ಧಿ ಮತ್ತು ವಿವೇಚನವನ್ನು ಮೀರಿದೆ ಮತ್ತು ಧರ್ಮವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಬುದ್ಧಿಗೆ ಯಾವುದೇ ಸ್ಥಾನವಿಲ್ಲ ಎನ್ನುತ್ತಾರೆ. ಆದುದರಿಂದ ಇಸ್ಲಾಮ್ ಬುದ್ಧಿಗೆ ಅದರ ಮಾರ್ಗವನ್ನು ಬೆಳಗಿಸುವ ಪ್ರಕಾಶದ ರೂಪದಲ್ಲಿ ಧರ್ಮವನ್ನು ಕಾಣುತ್ತದೆ. ಮಿಥ್ಯ ಧರ್ಮಗಳ ಮುಖಂಡರು ಮನುಷ್ಯನು ತನ್ನ ಬುದ್ಧಿಯನ್ನು ಉಪಯೋಗಿಸುವುದನ್ನು ತೊರೆದು ಕೇವಲ ಅವರನ್ನು ಅನುಸರಿಸಬೇಕೆಂದು ಬಯಸುತ್ತಾರೆ. ಆದರೆ ಇಸ್ಲಾಮ್ ಮನುಷ್ಯನು ತನ್ನ ಬುದ್ಧಿಯನ್ನು ಜಾಗೃತಗೊಳಿಸಿ

ವಿಷಯಗಳ ವಾಸ್ತವಾಂಶಗಳನ್ನು ಅದರ ನಿಜವಾದ ರೂಪದಲ್ಲಿ ನೋಡಬೇಕೆಂದು ಬಯಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೀಗೆ, ನಾವು ತಮಗೆ ನಮ್ಮ ಆಜ್ಞೆಯಿಂದಾಗಿ ಒಂದು ಸ್ಫೂರ್ತಿದಾಯಕ ಸಂದೇಶವನ್ನು ನೀಡಿರುವೆವು. ಗ್ರಂಥವಾಗಲಿ ಸತ್ಯವಿಶ್ವಾಸವಾಗಲಿ ಏನೆಂದು ತಮಗೆ ತಿಳಿದಿರಲಿಲ್ಲ. ಆದರೆ ನಾವು ಅದನ್ನು ಒಂದು ಪ್ರಕಾಶವನ್ನಾಗಿ ಮಾಡಿದೆವು. ಅದರ ಮೂಲಕ ನಮ್ಮ ದಾಸರ ಪೈಕಿ ನಾವಿಚ್ಛಿಸುವವರಿಗೆ ನಾವು ಹಾದಿಯನ್ನು ತೋರಿಸುವೆವು. ಖಂಡಿತವಾಗಿಯೂ ತಾವು ಮಾರ್ಗದರ್ಶನ ಮಾಡುತ್ತಿರುವುದು ನೇರವಾದ ಮಾರ್ಗದೆಡೆಗೇ ಆಗಿದೆ."** [ಅಶ್ಶೂರಾ:52]

ವಾಸ್ತವಾಂಶಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅವುಗಳಲ್ಲಿ ವಿಶ್ವಾಸವಿಡಲು ಬುದ್ಧಿಗೆ ಮಾರ್ಗದರ್ಶನ ನೀಡುವಂತಹ ಪುರಾವೆ ಮತ್ತು ಆಧಾರ ಪ್ರಮಾಣಗಳನ್ನು ದೈವಿಕ ಸಂದೇಶವು ಒಳಗೊಂಡಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಓ ಮನುಷ್ಯರೇ! ಖಂಡಿತವಾಗಿಯೂ ನಿಮಗೆ ನಿಮ್ಮ ಪ್ರಭುವಿನ ವತಿಯಿಂದ ಸ್ಪಷ್ಟವಾದ ಪುರಾವೆಯು ಬಂದಿರುತ್ತದೆ. ನಾವು ನಿಮಗೆ ಸ್ಪಷ್ಟವಾದ ಒಂದು ಪ್ರಕಾಶವನ್ನೂ ಇಳಿಸಿಕೊಟ್ಟಿರುವೆವು."** [ಅನ್ನಿಸಾ:174].

ಮನುಷ್ಯನು ಸನ್ಮಾರ್ಗ, ಜ್ಞಾನ ಮತ್ತು ಸತ್ಯದ ಬೆಳಕಿನಲ್ಲಿ ಬದುಕಬೇಕೆಂದು ಸರ್ವಶಕ್ತನಾದ ಅಲ್ಲಾಹನು ಬಯಸುತ್ತಾನೆ. ಆದರೆ ಶೈತಾನರು ಹಾಗೂ ಧಿಕ್ಕಾರಗಳು ಮನುಷ್ಯನು ಸತ್ಯ ನಿಷೇಧ, ಅಜ್ಞಾನ ಮತ್ತು ಮಾರ್ಗ ಭ್ರಷ್ಟತೆಯ ಅಂಧಕಾರಗಳಲ್ಲಿ ಅಲೆದಾಡುತ್ತಿರಬೇಕೆಂದು ಬಯಸುತ್ತಾರೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹು ಸತ್ಯವಿಶ್ವಾಸಿಗಳ ರಕ್ಷಕನಾಗಿರುವನು. ಅವನು ಅವರನ್ನು ಅಂಧಕಾರಗಳಿಂದ ಪ್ರಕಾಶದೆಡೆಗೆ ಹೊರತರುವನು. ಆದರೆ ಸತ್ಯನಿಷೇಧಿಗಳ ರಕ್ಷಕರು ತಾಗೂತ್ (ಮಿಥ್ಯಾರಾಧ್ಯರು)ಗಳಾಗಿರುವರು. ಅವರು (ಮಿಥ್ಯಾರಾಧ್ಯರು) ಅವರನ್ನು ಪ್ರಕಾಶದಿಂದ ಅಂಧಕಾರಗಳೆಡೆಗೆ ಕೊಂಡೊಯ್ಯುವರು. ಅವರು**

ನರಕವಾಸಿಗಳಾಗಿರುವರು. ಅವರು ಅದರಲ್ಲಿ ಶಾಶ್ವತವಾಗಿ ವಾಸಿಸುವರು." [ಅಲ್-ಬಖರ:257].

## 39. ಇಸ್ಲಾಮ್ ಧರ್ಮವು ಸರಿಯಾದ ಜ್ಞಾನವನ್ನು ಗೌರವಿಸುತ್ತದೆ ಮತ್ತು ದೆಹೇಚ್ಛೆಗಳಿಲ್ಲದ ವೈಜ್ಞಾನಿಕ ಸಂಶೋಧನೆಯನ್ನು ಪ್ರೇರೇಪಿಸುತ್ತದೆ. ನಮ್ಮ ದೇಹದ ಬಗ್ಗೆ ಮತ್ತು ನಮ್ಮ ಸುತ್ತಮುತ್ತಲ ಜಗತ್ತಿನ ಬಗ್ಗೆ ಆಲೋಚಿಸಲು ಆಹ್ವಾನಿಸುತ್ತದೆ. ಸರಿಯಾದ ವೈಜ್ಞಾನಿಕ ಸಂಶೋಧನೆಯ ಫಲಿತಾಂಶಗಳು ಇಸ್ಲಾಮ್ ಧರ್ಮದೊಂದಿಗೆ ಸಂಘರ್ಷಿಸುವುದಿಲ್ಲ.

ಇಸ್ಲಾಮ್ ಧರ್ಮವು ಸರಿಯಾದ ಜ್ಞಾನವನ್ನು ಗೌರವಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನಿಮ್ಮ ಪೈಕಿ ವಿಶ್ವಾಸವಿಟ್ಟವರನ್ನು ಮತ್ತು ಜ್ಞಾನ ನೀಡಲಾದವರನ್ನು ಅಲ್ಲಾಹು ಹಲವು ಪದವಿಗಳಿಗೆ ಏರಿಸುವನು. ಅಲ್ಲಾಹು ನೀವು ಮಾಡುತ್ತಿರುವುದರ ಬಗ್ಗೆ ಸೂಕ್ಷ್ಮವಾಗಿ ಅರಿಯುವವನಾಗಿರುವನು." [ಅಲ್-ಮುಜಾದಿಲ:11].

ಅತ್ಯಂತ ದೊಡ್ಡ ಸಾಕ್ಷ್ಯವಹಿಸಲಾಗುವ ವಿಷಯದಲ್ಲಿ ತನ್ನ ಮತ್ತು ತನ್ನ ಮಲಕ್‌ಗಳ (ದೇವಚರರ) ಸಾಕ್ಷ್ಯದೊಂದಿಗೆ ಅಲ್ಲಾಹನು ಜ್ಞಾನವುಳ್ಳವರ ಸಾಕ್ಷ್ಯವನ್ನು ಜೋಡಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ತನ್ನ ಹೊರತು ಅನ್ಯ ಆರಾಧ್ಯರಿಲ್ಲವೆಂದು ಅಲ್ಲಾಹು ಸಾಕ್ಷ್ಯವಹಿಸಿರುವನು. ಮಲಕ್‌ಗಳೂ ಜ್ಞಾನವುಳ್ಳವರೂ (ಅದಕ್ಕೆ ಸಾಕ್ಷಿಗಳಾಗಿರುವರು). ಅವನು ನ್ಯಾಯಪಾಲಿಸುವವನಾಗಿರುವನು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಪ್ರತಾಪಶಾಲಿಯೂ, ಯುಕ್ತಿಪೂರ್ಣನೂ ಆಗಿರುವನು." [ಆಲಿ ಇಮ್ರಾನ್:18].

ಈ ಸೂಕ್ತಿಯು ಇಸ್ಲಾಮಿನಲ್ಲಿ ವಿದ್ವಾಂಸರ ಸ್ಥಾನಮಾನವನ್ನು ಸ್ಪಷ್ಟಪಡಿಸುತ್ತದೆ. ಏನಾದರೂ ಹೆಚ್ಚಿಗೆ ನೀಡಬೇಕೆಂದು ಪ್ರಾರ್ಥಿಸಲು ಅಲ್ಲಾಹನು ಪ್ರವಾದಿ ಮುಹಮ್ಮದ್ صلي الله عليه وسلم ರವರಿಗೆ ಆದೇಶಿಸಿದ್ದರೆ ಅದು ಜ್ಞಾನವನ್ನು ಹೆಚ್ಚಿಸುವುದಕ್ಕಾಗಿ ಮಾತ್ರವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನನ್ನ ಪ್ರಭೂ! ನನಗೆ ಜ್ಞಾನವನ್ನು ಹೆಚ್ಚಿಸಿಕೊಡು ಎಂದು ಹೇಳಿರಿ."** [ತ್ವಾಹಾ:114]

ಪ್ರವಾದಿ صلي الله عليه وسلم ರವರು ಹೇಳಿದರು: **"ಯಾರು ಜ್ಞಾನ ಸಂಪಾದನೆಗಾಗಿ ಒಂದು ಮಾರ್ಗದಲ್ಲಿ ನಡೆಯುತ್ತಾನೋ, ಅಲ್ಲಾಹನು ಅವನಿಗೆ ಸ್ವರ್ಗದ ಹಾದಿಯನ್ನು ಸುಲಭಗೊಳಿಸುತ್ತಾನೆ. ಖಂಡಿತವಾಗಿಯೂ ಮಲಕ್‌ಗಳು (ದೇವಚರರು) ಜ್ಞಾನ ಹುಡುಕುವವನ ಬಗ್ಗೆ ಸಂತೃಪ್ತಿ ಸೂಚಿಸುತ್ತಾ ತಮ್ಮ ರೆಕ್ಕೆಗಳನ್ನು ಹರಡುತ್ತಾರೆ. ಆಕಾಶದಲ್ಲಿ ವಾಸಿಸುವವರು, ಭೂಮಿಯಲ್ಲಿ ವಾಸಿಸುವವರು ಮತ್ತು ನೀರಿನಲ್ಲಿನ ಮೀನುಗಳು ಸಹ ಅವನಿಗಾಗಿ ಕ್ಷಮೆಯನ್ನು ಕೋರುತ್ತವೆ. ನಿಸ್ಸಂದೇಹವಾಗಿಯೂ ಇತರೆಲ್ಲಾ ನಕ್ಷತ್ರಗಳಿಗಿಂತ ಚಂದ್ರನಿಗೆ ಶ್ರೇಷ್ಠತೆಯಿರುವಂತೆಯೇ ಆರಾಧಕರಿಗಿಂತ ವಿದ್ವಾಂಸರಿಗೆ ಶ್ರೇಷ್ಠತೆಯಿದೆ. ನಿಸ್ಸಂದೇಹ ವಾಗಿಯೂ ವಿದ್ವಾಂಸರು ಪ್ರವಾದಿಗಳ ವಾರೀಸುದಾರರಾಗಿದ್ದಾರೆ. ಪ್ರವಾದಿಗಳು ಯಾವುದೇ ದಿರ್ಹಮ್ (ಬೆಳ್ಳಿಯ ನಾಣ್ಯ) ಅಥವಾ ದಿನಾರನ್ನು (ಬಂಗಾರದ ನಾಣ್ಯ) ಪಿತ್ರಾರ್ಜಿತ ಸೊತ್ತಾಗಿ ಬಿಟ್ಟು ಹೋಗುವುದಿಲ್ಲ. ಬದಲಾಗಿ ಅವರು ಜ್ಞಾನವನ್ನು ಪಿತ್ರಾರ್ಜಿತ ಸೊತ್ತಾಗಿ ಬಿಟ್ಟು ಹೋಗುತ್ತಾರೆ. ಯಾರು ಅದನ್ನು ಪಡೆದುಕೊಂಡನೋ ಅವನು ಮಹಾಭಾಗ್ಯವನ್ನು ಪಡೆದುಕೊಂಡನು."** [ಈ ಹದೀಸನ್ನು ಇಮಾಮ್ ಅಬೂ ದಾವೂದ್ (3641), ತಿರ್ಮಿದಿ (2682), ಇಬ್ನು ಮಾಜ (223) ಈ ಹದೀಸಿನ ಪದಗಳು ಅವರದ್ದೇ ಆಗಿವೆ ಮತ್ತು ಇಮಾಮ್ ಅಹ್ಮದ್ (21715) ವರದಿ ಮಾಡಿದ್ದಾರೆ.]

ಇಸ್ಲಾಂ ಧರ್ಮವು ದೆಹೇಟ್ಟೆಗಳಿಲ್ಲದ ವೈಜ್ಞಾನಿಕ ಸಂಶೋಧನೆಯನ್ನು ಪ್ರೇರೇಪಿಸುತ್ತದೆ. ನಮ್ಮ ದೇಹದ ಬಗ್ಗೆ ಮತ್ತು ನಮ್ಮ ಸುತ್ತಮುತ್ತಲ ಜಗತ್ತಿನ ಬಗ್ಗೆ ಆಲೋಚಿಸಲು ಆಹ್ವಾನಿಸುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಇದು (ಕುರ್‌ಆನ್) ಸತ್ಯವೆಂದು ಅವರಿಗೆ ಸ್ಪಷ್ಟವಾಗುವ ರೀತಿಯಲ್ಲಿ ದಿಗಂತಗಳಲ್ಲೂ, ಸ್ವತಃ ಅವರಲ್ಲೂ ನಾವು ಅವರಿಗೆ ತರುವಾಯ ನಮ್ಮ ದೃಷ್ಟಾಂತಗಳನ್ನು ತೋರಿಸಿ ಕೊಡುವೆವು. ತಮ್ಮ ಪ್ರಭು ಎಲ್ಲ ವಿಷಯಕ್ಕೂ ಸಾಕ್ಷಿಯಾಗಿರುವನೆಂಬುದು ಸಾಕಾಗಲಾರದೇ?"** [ಫುಸ್ಸಿಲತ್:53].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ರಹಸ್ಯಗಳ ಬಗ್ಗೆ, ಅಲ್ಲಾಹು ಸೃಷ್ಟಿಸಿದ ಯಾವುದೇ ವಸ್ತುವಿನ ಬಗ್ಗೆ, ಅವರ ಅವಧಿಯು ಸಮೀಪಿಸಿರಬಹುದು ಎಂಬುದರ ಬಗ್ಗೆ ಅವರು ಚಿಂತಿಸಿ ನೋಡಲಾರರೇ? ಇದರ (ಕುರ್‌ಆನ್) ಬಳಿಕ ಅವರು ಯಾವ ವೃತ್ತಾಂತದಲ್ಲಿ ವಿಶ್ವಾಸವಿಡುವರು?"** [ಅಲ್-ಅಅ್‌ರಾಫ್:185]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ಭೂಮಿಯಲ್ಲಿ ಸಂಚರಿಸಿ, ತಮಗಿಂತ ಮುಂಚಿನವರ ಪರ್ಯಾವಸಾನವು ಹೇಗಿತ್ತೆಂಬುದನ್ನು ನೋಡುವುದಿಲ್ಲವೇ? ಅವರು ಇವರಿಗಿಂತಲೂ ಹೆಚ್ಚು ಬಲಶಾಲಿಗಳಾಗಿದ್ದರು. ಅವರು ಭೂಮಿಯನ್ನು ಉತ್ತು ಬೇಸಾಯ ಮಾಡಿದರು. ಇವರು ವಸಾಹತು ಸ್ಥಾಪಿಸಿದ್ದಕ್ಕಿಂತಲೂ ಹೆಚ್ಚಾಗಿ ಅವರು ಅದರಲ್ಲಿ ವಸಾಹತು ಸ್ಥಾಪಿಸಿದ್ದರು. ನಮ್ಮ ಸಂದೇಶವಾಹಕರು ಸ್ಪಷ್ಟವಾದ ಪುರಾವೆಗಳೊಂದಿಗೆ ಅವರ ಬಳಿಗೆ ಬಂದರು. ಅಲ್ಲಾಹು ಅವರೊಂದಿಗೆ ಅನ್ಯಾಯವೆಸಗಿರಲಿಲ್ಲ. ಆದರೆ ಅವರು ಸ್ವತಃ ಅವರೊಂದಿಗೇ ಅನ್ಯಾಯವೆಸಗಿದರು."** [ಅರ್ರೂಮ್:9].

ಸರಿಯಾದ ವೈಜ್ಞಾನಿಕ ಸಂಶೋಧನೆಯ ಫಲಿತಾಂಶಗಳು ಇಸ್ಲಾಮ್ ಧರ್ಮದೊಂದಿಗೆ ಸಂಘರ್ಷಿಸುವುದಿಲ್ಲ. ನಾವು ಒಂದು ಉದಾಹರಣೆಯನ್ನು ಉಲ್ಲೇಖಿಸುತ್ತೇವೆ: ಕುರ್‌ಆನ್ 1400 ವರ್ಷಗಳ ಹಿಂದೆಯೇ ವಿಜ್ಞಾನದ ಬಗ್ಗೆ ನಿಖರವಾದ ವಿವರಗಳನ್ನು ಉಲ್ಲೇಖಿಸಿದೆ. ಆಧುನಿಕ ವಿಜ್ಞಾನವು ಆ ವಿವರಗಳನ್ನು ಇತ್ತೀಚೆಗೆ ಸಂಶೋಧಿಸಿ ತಿಳಿದಿದೆ. ಆಧುನಿಕ ವಿಜ್ಞಾನದ ಫಲಿತಾಂಶಗಳು ಪವಿತ್ರ ಕುರ್‌ಆನ್‌ನಲ್ಲಿ ಉಲ್ಲೇಖಗೊಂಡಿರುವ ವಾಸ್ತವಾಂಶಗಳಿಗೆ ಹೊಂದಿಕೆಯಾಗುತ್ತದೆ. ಅವುಗಳಲ್ಲೊಂದು ತಾಯಿಯ ಗರ್ಭದಲ್ಲಿ ಭ್ರೂಣದ ಸೃಷ್ಟಿಯ ಕುರಿತಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ನಾವು ಮನುಷ್ಯನನ್ನು ಜೇಡಿಮಣ್ಣಿನ ಸತ್ವದಿಂದ ಸೃಷ್ಟಿಸಿದೆವು.(12) ತರುವಾಯ ನಾವು ಅವನನ್ನು ವೀರ್ಯಕೋಶವನ್ನಾಗಿ ಮಾಡಿ ಭದ್ರವಾದ ಒಂದು ಸ್ಥಳದಲ್ಲಿಟ್ಟೆವು.(13) ತರುವಾಯ ನಾವು ಆ ವೀರ್ಯಕೋಶವನ್ನು ಹೆಪ್ಪುಗಟ್ಟಿದ ಒಂದು ರಕ್ತಪಿಂಡವನ್ನಾಗಿ ಮಾಡಿದೆವು. ತರುವಾಯ ನಾವು ಆ ರಕ್ತಪಿಂಡವನ್ನು ಒಂದು ಮಾಂಸದ ಮುದ್ದೆಯನ್ನಾಗಿ ಮಾಡಿದೆವು. ತರುವಾಯ ನಾವು ಆ ಮಾಂಸದ ಮುದ್ದೆಯನ್ನು ಮೂಳೆಗಳನ್ನಾಗಿ ಮಾಡಿದೆವು. ತರುವಾಯ ನಾವು ಆ ಮೂಳೆಗಳನ್ನು ಮಾಂಸದಿಂದ ಹೊದಿಸಿದೆವು. ತರುವಾಯ ನಾವು ಅದನ್ನು ಇನ್ನೊಂದು ಸೃಷ್ಟಿಯನ್ನಾಗಿ ಬೆಳೆಸಿದೆವು. ಆದ್ದರಿಂದ ಅತ್ಯುತ್ತಮ ಸೃಷ್ಟಿಕರ್ತನಾದ ಅಲ್ಲಾಹು ಅನುಗ್ರಹಪೂರ್ಣನಾಗಿರುವನು.(14)."** [ಅಲ್-ಮುಅ್‌ಮಿನೂನ್: 12- 14]

## 40. ಅಲ್ಲಾಹನ ಮೇಲೆ ವಿಶ್ವಾಸವಿಟ್ಟು ಅವನಿಗೆ ವಿಧೇಯನಾಗಿ ಜೀವಿಸಿದ ಮತ್ತು ಅವನ ಸಂದೇಶವಾಹಕರನ್ನು ಧೃಡೀಕರಿಸಿದ ವ್ಯಕ್ತಿಯ ಸತ್ಕರ್ಮಗಳನ್ನು ಮಾತ್ರ ಅಲ್ಲಾಹನು ಸ್ವೀಕರಿಸುತ್ತಾನೆ ಮತ್ತು ಪರಲೋಕದಲ್ಲಿ ಅದರ ಪ್ರತಿಫಲವನ್ನು ನೀಡುತ್ತಾನೆ. ಅಲ್ಲಾಹನು ಧರ್ಮದಲ್ಲಿ ಸೇರಿಸಿದ ಆರಾಧನೆಗಳನ್ನು ಮಾತ್ರ ಅವನು ಸ್ವೀಕರಿಸುತ್ತಾನೆ. ಒಬ್ಬ ವ್ಯಕ್ತಿ ಅಲ್ಲಾಹನನ್ನು ನಿಷೇಧಿಸುತ್ತಾ ಅವನಿಂದ ಪ್ರತಿಫಲವನ್ನು ನಿರೀಕ್ಷಿಸಲು ಹೇಗೆ ಸಾಧ್ಯ? ಒಬ್ಬ ವ್ಯಕ್ತಿ ಎಲ್ಲಾ ಪ್ರವಾದಿಗಳು ಮತ್ತು ಪ್ರವಾದಿ ಮುಹಮ್ಮದ್ صلي الله عليه وسلم ರವರ ಪ್ರವಾದಿತ್ವದ ಮೇಲೆ ಸತ್ಯವಿಶ್ವಾಸವಿರಿಸಿದಾಗ ಮಾತ್ರ ಅಲ್ಲಾಹನು ಅವನ ವಿಶ್ವಾಸವನ್ನು ಸ್ವೀಕರಿಸುತ್ತಾನೆ.

ಅಲ್ಲಾಹನ ಮೇಲೆ ವಿಶ್ವಾಸವಿಟ್ಟು ಅವನಿಗೆ ವಿಧೇಯನಾಗಿ ಜೀವಿಸಿದ ಮತ್ತು ಅವನ ಸಂದೇಶವಾಹಕರನ್ನು ಧೃಡೀಕರಿಸಿದ ವ್ಯಕ್ತಿಯ ಸತ್ಕರ್ಮಗಳನ್ನು ಮಾತ್ರ ಅಲ್ಲಾಹನು ಸ್ವೀಕರಿಸುತ್ತಾನೆ ಮತ್ತು ಪರಲೋಕದಲ್ಲಿ ಅದರ ಪ್ರತಿಫಲವನ್ನು ನೀಡುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಯಾರಾದರೂ ಕ್ಷಣಿಕವಾಗಿರುವುದನ್ನು (ಇಹಲೋಕವನ್ನು) ಬಯಸುವುದಾದರೆ ಅವರಿಗೆ ಅಥವಾ (ಅವರ ಪೈಕಿ) ನಾವಿಚ್ಛಿಸುವವನಿಗೆ, ನಾವಿಚ್ಛಿಸುವುದನ್ನು ಇಲ್ಲಿಯೇ ತ್ವರಿತವಾಗಿ ನೀಡುವೆವು. ತರುವಾಯ ಅವನಿಗೆ ನಾವು ನರಕಾಗ್ನಿಯನ್ನು ನೀಡುವೆವು. ಅವನು ಅಪಮಾನಿತನಾಗಿ ಮತ್ತು ಬಹಿಷ್ಕೃತನಾಗಿ ಅದರಲ್ಲಿ ಉರಿಯುವನು.(18) ಯಾರಾದರೂ ಪರಲೋಕವನ್ನು ಬಯಸುವುದಾದರೆ ಮತ್ತು ಸತ್ಯವಿಶ್ವಾಸಿಯಾಗಿರುತ್ತಾ ಅದಕ್ಕಾಗಿ ಅದರದ್ದೇ ಆದ ಪರಿಶ್ರಮಪಡುವುದಾದರೆ ಅಂತಹವರ ಪರಿಶ್ರಮವು ಪ್ರತಿಫಲಾರ್ಹವಾಗಿದೆ.(19)"** [ಅಲ್-ಇಸ್ರಾ: 18-19]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಯಾರಾದರೂ ಸತ್ಯವಿಶ್ವಾಸಿಯಾಗಿರುತ್ತಾ ಸತ್ಕರ್ಮಗಳಲ್ಲಿ ಏನನ್ನಾದರೂ ಮಾಡಿದರೆ ಅವನ ಪರಿಶ್ರಮದ ಫಲವನ್ನು (ಅವನಿಗೆ) ನಿಷೇಧಿಸಲ್ಪಡದು. ಖಂಡಿತವಾಗಿಯೂ ನಾವು ಅದನ್ನು ಬರೆದಿಡುವೆವು."** [ಅಲ್-ಅಂಬಿಯಾ:94]

ಅಲ್ಲಾಹನು ಅವನು ಧರ್ಮದಲ್ಲಿ ಸೇರಿಸಿದ ಆರಾಧನೆಗಳನ್ನು ಮಾತ್ರ ಸ್ವೀಕರಿಸುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆದ್ದರಿಂದ ಯಾರಾದರೂ ತನ್ನ ಪ್ರಭುವಿನ ಭೇಟಿಯನ್ನು ಆಶಿಸುವುದಾದರೆ ಅವನು ಸತ್ಕರ್ಮವನ್ನು ಮಾಡಲಿ ಮತ್ತು ತನ್ನ ಪ್ರಭುವಿನ ಆರಾಧನೆಯಲ್ಲಿ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಲಿ."** [ಅಲ್-ಕಹ್ಫ್:110]

ಒಂದು ಕರ್ಮವು ಸತ್ಕರ್ಮವಾಗಬೇಕಾದರೆ ಅದು ಅಲ್ಲಾಹನು ನಿರ್ದೇಶಿಸಿದ್ದಾಗಿರಬೇಕು ಮತ್ತು ಅದನ್ನು ನಿರ್ವಹಿಸುವವನು ನಿಷ್ಕಳಂಕನಾಗಿರಬೇಕು, ಅಂದರೆ ಅವನು ಅಲ್ಲಾಹನಲ್ಲಿ ವಿಶ್ವಾಸವಿಡಬೇಕು ಮತ್ತು ಅವನ ಪ್ರವಾದಿಗಳಲ್ಲಿ ಮತ್ತು ಸಂದೇಶವಾಹಕರಲ್ಲಿ ವಿಶ್ವಾಸವಿಡಬೇಕು. ಯಾರ ಕರ್ಮವು ಇದಕ್ಕೆ ಹೊರತಾಗಿದೆಯೋ ಅವನ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಾವು ಅವರು ಮಾಡಿರುವ ಕರ್ಮಗಳೆಡೆಗೆ ತಿರುಗುವೆವು ಮತ್ತು ಅವುಗಳನ್ನು ನಾವು ಚೆದರಿದ ಧೂಳಿಯನ್ನಾಗಿ ಮಾಡುವೆವು."** [ಅಲ್-ಫುರ್ಖಾನ್:23].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆ ದಿನದಂದು ಕೆಲವು ಮುಖಗಳು ವಿನಮ್ರವಾಗಿರುವುವು(2) ಮತ್ತು ಪರಿಶ್ರಮದಿಂದ ಬಳಲಿರುವುವು.(3) ಅವರು ತೀವ್ರ ಶಾಖವನ್ನು ಹೊಂದಿರುವ ಅಗ್ನಿಯನ್ನು ಪ್ರವೇಶಿಸುವರು.(4)"** [ಅಲ್-ಗಾಶಿಯ: 2-4]

ಈ ಮುಖಗಳು ತಗ್ಗಿರುವುವು ಮತ್ತು ಪರಿಶ್ರಮದಿಂದ ಬಳಲಿರುವುವು. ಆದರೆ ಅವರು ಅಲ್ಲಾಹನ ಮಾರ್ಗದರ್ಶನದಂತೆ ಕರ್ಮವೆಸಗಿಲ್ಲ. ಆದ್ದರಿಂದ ಅಲ್ಲಾಹನು ಅವರ ಅಂತಿಮ ತಾಣವನ್ನು ನರಕವನ್ನಾಗಿ ಮಾಡುವನು. ಏಕೆಂದರೆ ಅವರು ಅಲ್ಲಾಹನು ನಿರ್ದೇಶಿಸಿದ ವಿಧಾನದಲ್ಲಿ ಕರ್ಮವೆಸಗಲಿಲ್ಲ. ಬದಲಾಗಿ ಅವರು ಮಿಥ್ಯ ಆರಾಧನೆಗಳಲ್ಲಿ ತಲ್ಲೀನರಾದರು.

ಅವರಿಗೆ ಮಿಥ್ಯ ಧರ್ಮಗಳನ್ನು ಆವಿಷ್ಕರಿಸಿದ ಪಥಭ್ರಷ್ಟ ಮುಖಂಡರನ್ನು ಅವರು ಅನುಸರಿಸಿದರು. ಆದುದರಿಂದ ಪ್ರವಾದಿ صلي الله عليه وسلم ರವರು ತಂದ ನಿಯಮಸಂಹಿತೆಯ ಪ್ರಕಾರ ಯಾರು ಕರ್ಮವೆಸಗುತ್ತಾರೋ ಅವರ ಕರ್ಮಗಳು ಮಾತ್ರ ಅಲ್ಲಾಹನು ಸ್ವೀಕರಿಸುವಂತಹ ಸತ್ಕರ್ಮಗಳಾಗುತ್ತವೆ. ಆದ್ದರಿಂದ ಒಬ್ಬ ವ್ಯಕ್ತಿ ಅಲ್ಲಾಹನನ್ನು ನಿರಾಕರಿಸಿ ಅಲ್ಲಾಹನು ಅವನಿಗೆ ಪ್ರತಿಫಲ ನೀಡಬೇಕೆಂದು ಹೇಗೆ ನಿರೀಕ್ಷಿಸಬಹುದು?? ಒಬ್ಬ ವ್ಯಕ್ತಿ ಎಲ್ಲಾ ಪ್ರವಾದಿಗಳು ಮತ್ತು ಪ್ರವಾದಿ ಮುಹಮ್ಮದ್ صلي الله عليه وسلم ರವರ ಪ್ರವಾದಿತ್ವದ ಮೇಲೆ ಸತ್ಯವಿಶ್ವಾಸವಿರಿಸಿದಾಗ ಮಾತ್ರ ಅಲ್ಲಾಹನು ಅವನ ವಿಶ್ವಾಸವನ್ನು ಸ್ವೀಕರಿಸುತ್ತಾನೆ. ನಾವು ಈ ಹಿಂದೆ ಶೀರ್ಷಿಕೆ ಸಂಖ್ಯೆ (20)ರಲ್ಲಿ ಈ ಕುರಿತು ಕೆಲವು ಪುರಾವೆಗಳನ್ನು ಉಲ್ಲೇಖಿಸಿದ್ದೇವೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ತಮ್ಮ ಪ್ರಭುವಿನ ವತಿಯಿಂದ ತಮಗೆ ಅವತೀರ್ಣಗೊಳಿಸಲಾಗಿರುವುದರಲ್ಲಿ ಸಂದೇಶವಾಹಕರು ವಿಶ್ವಾಸವಿಟ್ಟಿರುವರು. (ತರುವಾಯ) ಸತ್ಯವಿಶ್ವಾಸಿಗಳು ಸಹ ವಿಶ್ವಾಸವಿಟ್ಟಿರುವರು. ಅವರೆಲ್ಲರೂ ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ ಮತ್ತು ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಟ್ಟಿರುವರು. ಅವನ ಸಂದೇಶವಾಹಕರ ಪೈಕಿ ಯಾರ ನಡುವೆಯೂ ನಾವು ವ್ಯತ್ಯಾಸ ಕಲ್ಪಿಸಲಾರೆವು (ಎಂಬುದು ಅವರ ನಿಲುವಾಗಿದೆ). ನಾವು ಆಲಿಸಿರುವೆವು ಮತ್ತು ಅನುಸರಿಸಿರುವೆವು, ನಮ್ಮ ಪ್ರಭೂ! ನಮಗೆ ಪಾಪಮುಕ್ತಿಯನ್ನು ದಯಪಾಲಿಸು, (ನಮ್ಮ) ಮರಳುವಿಕೆಯು ನಿನ್ನ ಬಳಿಗೇ ಆಗಿದೆ ಎಂದು ಅವರು ಹೇಳುವರು.”** [ಅಲ್-ಬಖರ:285].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **“ಓ ಸತ್ಯವಿಶ್ವಾಸಿಗಳೇ! ಅಲ್ಲಾಹನಲ್ಲಿಯೂ, ಅವನ ಸಂದೇಶವಾಹಕರಲ್ಲಿಯೂ, ಅವನ ಸಂದೇಶವಾಹಕರಿಗೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲಿಯೂ ಮತ್ತು ಅವರಿಗಿಂತ ಮುಂಚೆ ಅವತೀರ್ಣಗೊಳಿಸಿದ ಗ್ರಂಥದಲ್ಲಿಯೂ ವಿಶ್ವಾಸವಿಡಿರಿ. ಯಾರು ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ, ಅವನ ಸಂದೇಶವಾಹಕರಲ್ಲಿ ಮತ್ತು ಅಂತ್ಯದಿನದಲ್ಲಿ ಅವಿಶ್ವಾಸವಿಡುತ್ತಾನೋ ಖಂಡಿತವಾಗಿಯೂ ಅವನು ವಿದೂರವಾದ ಪಥಭ್ರಷ್ಟತೆಯಲ್ಲಿರುವನು.”** [ಅನ್ನಿಸಾ:136].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹು ಪ್ರವಾದಿಗಳಿಂದ ಕರಾರು ಪಡೆದ ಸಂದರ್ಭ(ವನ್ನು ಸ್ಮರಿಸಿರಿ). ನಾನು ನಿಮಗೆ ಗ್ರಂಥವನ್ನು ಮತ್ತು ಜ್ಞಾನವನ್ನು ನೀಡಿ, ತರುವಾಯ ನಿಮ್ಮ ಬಳಿಯಿರುವುದನ್ನು ದೃಢೀಕರಿಸುತ್ತಾ ಓರ್ವ ಸಂದೇಶವಾಹಕರು ನಿಮ್ಮ ಬಳಿ ಬಂದರೆ ನೀವು ಖಂಡಿತವಾಗಿಯೂ ಅವರಲ್ಲಿ ವಿಶ್ವಾಸವಿಡಬೇಕು ಮತ್ತು ಅವರಿಗೆ ಸಹಾಯ ಮಾಡಬೇಕು. (ತರುವಾಯ) ಅವನು (ಅವರೊಂದಿಗೆ) ಕೇಳಿದನು: ನೀವಿದನ್ನು ಒಪ್ಪಿಕೊಂಡು, ಆ ವಿಷಯದಲ್ಲಿ ನನ್ನೊಂದಿಗಿರುವ ಹೊಣೆಯನ್ನು ವಹಿಸಿಕೊಂಡಿರುವಿರಾ? ಅವರು ಹೇಳಿದರು: ಹೌದು. ನಾವು ಒಪ್ಪಿಕೊಂಡಿರುವೆವು. ಅವನು ಹೇಳಿದನು: ಹಾಗಾದರೆ ನೀವು ಅದಕ್ಕೆ ಸಾಕ್ಷಿಗಳಾಗಿರಿ. ನಾನೂ ನಿಮ್ಮೊಂದಿಗೆ ಸಾಕ್ಷಿಯಾಗಿರುವೆನು." [ಆಲಿ ಇಮ್ರಾನ್:81].

## 41. ಸತ್ಯಧರ್ಮವು ಮನುಷ್ಯನಲ್ಲಿ ನೆಲೆನಿಂತು ಅವನು ಸರ್ವ ಲೋಕಗಳ ಸೃಷ್ಟಿಕರ್ತನಾದ ಅಲ್ಲಾಹನ ನೈಜ ದಾಸನಾಗುವುದು ಮತ್ತು ಅವನನ್ನು ಮನುಷ್ಯರ, ಭೌತಿಕತೆಯ ಹಾಗೂ ಅಂಧವಿಶ್ವಾಸಗಳ ದಾಸ್ಯದಿಂದ ಸ್ವತಂತ್ರಗೊಳಿಸುವುದು ಎಲ್ಲಾ ದೈವಿಕ ಸಂದೇಶಗಳ ಗುರಿಯಾಗಿದೆ. ಇಸ್ಲಾಮ್ ಧರ್ಮದಲ್ಲಿ - ನೀವು ಈಗಾಗಲೇ ನೋಡಿದಂತೆ - ವ್ಯಕ್ತಿಗಳನ್ನು ಪವಿತ್ರಗೊಳಿಸುವುದಾಗಲಿ, ಅವರನ್ನು ಅವರ ಸ್ಥಾನಮಾನಕ್ಕಿಂತ ಮೇಲಕ್ಕೇರಿಸುವುದಾಗಲಿ, ಅಥವಾ ಅವರನ್ನು ಪ್ರಭುಗಳು ಮತ್ತು ದೇವರುಗಳನ್ನಾಗಿ ಮಾಡುವುದಾಗಲಿ ಇಲ್ಲ.

ಸತ್ಯಧರ್ಮವು ಮನುಷ್ಯನಲ್ಲಿ ನೆಲೆನಿಂತು ಅವನು ಸರ್ವ ಲೋಕಗಳ ಸೃಷ್ಟಿಕರ್ತನಾದ ಅಲ್ಲಾಹನ ನೈಜ ದಾಸನಾಗುವುದು ಮತ್ತು ಅವನನ್ನು ಮನುಷ್ಯರ, ಭೌತಿಕತೆಯ ಹಾಗೂ ಅಂಧವಿಶ್ವಾಸಗಳ ದಾಸ್ಯದಿಂದ ಸ್ವತಂತ್ರಗೊಳಿಸುವುದು ಎಲ್ಲಾ ದೈವಿಕ ಸಂದೇಶಗಳ ಗುರಿಯಾಗಿದೆ. ಪ್ರವಾದಿ صلى الله عليه وسلم ರವರು ಹೇಳಿದರು: "ದೀನಾರ್, ದಿರ್ಹಮ್ ಹಾಗೂ

**ಖಮೀಸದ (ಒಂದು ತರಹದ ಕಪ್ಪು ಬಟ್ಟೆಯ ಮೇಲಂಗಿ) ದಾಸ ನಾಶವಾಗಲಿ. ಅವನಿಗೆ ಏನಾದರೂ ಸಿಕ್ಕಿದರೆ ಸಂತೋಷಪಡುತ್ತಾನೆ. ಸಿಗದಿದ್ದಾಗ ಕೋಪಗೊಳ್ಳುತ್ತಾನೆ."** [ಸಹೀಹುಲ್ ಬುಖಾರಿ 6435.]

ಒಬ್ಬ ಸರಿಯಾದ ವ್ಯಕ್ತಿ ಅಲ್ಲಾಹನಿಗೆ ಹೊರತು ಇನ್ನಾರಿಗೂ ತಲೆಬಾಗುವುದಿಲ್ಲ. ಹಣ, ಪ್ರತಿಷ್ಠೆ, ಸ್ಥಾನ ಅಥವಾ ಪಂಗಡವು ಅವನನ್ನು ದಾಸನನ್ನಾಗಿ ಮಾಡುವುದಿಲ್ಲ. (ಪ್ರವಾದಿ ಮುಹಮ್ಮದ್(ಸ) ರವರ) ಸಂದೇಶವಾಹಕತ್ವದ ಮೊದಲು ಜನರು ಹೇಗಿದ್ದರು ಮತ್ತು ನಂತರ ಹೇಗಾದರು ಎಂದು ಈ ಕೆಳಗಿನ ಘಟನೆಯು ಓದುಗರಿಗೆ ಸ್ಪಷ್ಟವಾಗಿ ವಿವರಿಸುತ್ತದೆ. ಪ್ರಪ್ರಥಮವಾಗಿ ಇಸ್ಲಾಮ್ ಸ್ವೀಕರಿಸಿದ ಮುಸ್ಲಿಮರು ಅಬಿಸೀನಿಯಾಕ್ಕೆ ವಲಸೆ ಹೋದಾಗ ಅಬಿಸೀನಿಯಾದ ರಾಜ ನಜ್ಜಾಶೀ ಅವರೊಡನೆ ಪ್ರಶ್ನಿಸಿದನು: ನೀವು ನಿಮ್ಮ ಜನಾಂಗದವರಿಂದ ಬೇರ್ಪಟ್ಟು ನನ್ನ ಧರ್ಮವನ್ನೋ, ಜಗತ್ತಿನಲ್ಲಿರುವ ಇತರ ಧರ್ಮಗಳನ್ನೋ ಸ್ವೀಕರಿಸದೆ ಈ ಧರ್ಮವನ್ನೇ ಸ್ವೀಕರಿಸಲು ಕಾರಣವೇನು? ಜಾಫರ್ ಇಬ್ನು ಅಬೀ ತಾಲಿಬ್ ಉತ್ತರಿಸಿದರು: "ಓ ದೊರೆಯೇ! ನಾವು ಅಜ್ಞಾನಿಗಳಾಗಿದ್ದೆವು. ವಿಗ್ರಹಗಳನ್ನು ಪೂಜಿಸುತ್ತಿದ್ದೆವು. ಶವಗಳನ್ನು ತಿನ್ನುತ್ತಿದ್ದೆವು. ಎಲ್ಲಾ ತರಹದ ಕೆಟ್ಟ ಕಾರ್ಯಗಳನ್ನು ಮಾಡುತ್ತಿದ್ದೆವು. ಸಂಬಂಧಗಳನ್ನು ಕಡಿಯುತ್ತಿದ್ದೆವು. ನಮ್ಮ ನೆರೆಹೊರೆಯವರೊಂದಿಗೆ ಕೆಟ್ಟದಾಗಿ ವರ್ತಿಸುತ್ತಿದ್ದೆವು. ನಮ್ಮ ಪೈಕಿ ಬಲಶಾಲಿಗಳು ದುರ್ಬಲರನ್ನು ತಿನ್ನುತ್ತಿದ್ದರು. ಅಲ್ಲಾಹನು ನಮ್ಮ ಬಳಿಗೆ ನಮ್ಮಿಂದಲೇ ಒಬ್ಬ ಪ್ರವಾದಿಯನ್ನು ಕಳುಹಿಸುವ ತನಕ ನಾವು ಹೀಗೆಯೇ ಜೀವಿಸುತ್ತಿದ್ದೆವು. ನಮಗೆ ಅವರ ವಂಶ, ಸತ್ಯನಿಷ್ಠೆ, ಪ್ರಾಮಾಣಿಕತೆ ಮತ್ತು ಪರಿಶುದ್ಧತೆಯ ಬಗ್ಗೆ ಬಹಳ ಚೆನ್ನಾಗಿ ತಿಳಿದಿತ್ತು. ಹೀಗಿರುವಾಗ ಒಂದಿನ ಅವರು ನಮ್ಮನ್ನು ಅಲ್ಲಾಹನೆಡೆಗೆ, ಅವನನ್ನು ಏಕೈಕಗೊಳಿಸಲು, ಅವನನ್ನು ಮಾತ್ರ ಆರಾಧಿಸಲು, ನಾವು ಹಾಗೂ ನಮ್ಮ ತಂದೆ-ತಾತಂದಿರು ಅಲ್ಲಾಹನ ಹೊರತು ಆರಾಧಿಸುತ್ತಿದ್ದ ಕಲ್ಲುಗಳು ಮತ್ತು ವಿಗ್ರಹಗಳಿಂದ ದೂರವಿರಲು ಆಹ್ವಾನಿಸಿದರು. ಸತ್ಯವನ್ನೇ ನುಡಿಯಲು, ವಿಶ್ವಾಸದ್ರೋಹ ಮಾಡದಿರಲು, ಸಂಬಂಧಗಳನ್ನು ಜೋಡಿಸಲು, ನೆರೆಹೊರೆಯವರೊಂದಿಗೆ ಉತ್ತಮ ರೀತಿಯಿಂದ ವರ್ತಿಸಲು ಮತ್ತು ನಿಷಿದ್ಧ ಕಾರ್ಯಗಳಿಂದ ಹಾಗೂ ರಕ್ತಪಾತಗಳಿಂದ ದೂರವಿರಲು ಆದೇಶಿಸಿದರು. ಎಲ್ಲಾ ಕೆಟ್ಟ ಕಾರ್ಯಗಳನ್ನು, ಸುಳ್ಳು

ಹೇಳುವುದನ್ನು, ಅನಾಥರ ಸೊತ್ತನ್ನು ತಿನ್ನುವುದನ್ನು ಮತ್ತು ಸುಶೀಲೆಯರ ಮೇಲೆ ಸುಳ್ಳಾರೋಪ ಹೊರಿಸುವುದನ್ನು ನಮಗೆ ವಿರೋಧಿಸಿದರು. ಅಲ್ಲಾಹನನ್ನು ಮಾತ್ರ ಆರಾಧಿಸಲು, ಅವನೊಂದಿಗೆ ಯಾರನ್ನು ಸಹಭಾಗಿಯನ್ನಾಗಿ ಮಾಡದಿರಲು, ನಮಾಝ್ ನಿರ್ವಹಿಸಲು, ಝಕಾತ್ ಪಾವತಿಸಲು, ಮತ್ತು ಉಪವಾಸ ಆಚರಿಸಲು ಆದೇಶಿಸಿದರು. — ವರದಿಗಾರರು ಹೇಳುತ್ತಾರೆ: ಹೀಗೆ ಅವರು ಇಸ್ಲಾಮಿನ ಬಹಳಷ್ಟು ವಿಷಯಗಳು ಎಣಿಸಿ ಹೇಳಿದರು. — ನಾವು ಅವರ ಮಾತನ್ನು ನಂಬಿದೆವು, ಅವರಲ್ಲಿ ವಿಶ್ವಾಸವಿಟ್ಟೆವು ಮತ್ತು ಅವರು ತಂದ ಸಂದೇಶವನ್ನು ಅನುಸರಿಸಿದೆವು. ಹೀಗೆ ನಾವು ಕೇವಲ ಏಕೈಕ ಅಲ್ಲಾಹನನ್ನು ಆರಾಧಿಸಿದೆವು ಮತ್ತು ಅವನ ಜೊತೆ ಯಾವ ವಸ್ತುವನ್ನೂ ಸಹಭಾಗಿಯನ್ನಾಗಿ ಮಾಡಲಿಲ್ಲ. ಅವರು ನಮ್ಮ ಮೇಲೆ ಯಾವ ವಸ್ತುವನ್ನು ನಿಷಿದ್ಧಗೊಳಿಸಿದರೋ ಅದನ್ನು ನಾವು ನಿಷಿದ್ಧವೆಂದು ನಂಬಿದೆವು ಮತ್ತು ಅವರು ನಮ್ಮ ಮೇಲೆ ಯಾವ ವಸ್ತುವನ್ನು ಸಮ್ಮತಾರ್ಹಗೊಳಿಸಿದರೋ ನಾವು ಅದನ್ನು ಸಮ್ಮತಾರ್ಹವೆಂದು ನಂಬಿದೆವು..." [ಇದನ್ನು ಇಮಾಮ್ ಅಹ್ಮದ್ ರವರು ಸ್ವಲ್ಪ ವ್ಯತ್ಯಾಸದೊಂದಿಗೆ ವರದಿ ಮಾಡಿದ್ದಾರೆ (1740) ಮತ್ತು ಅಬೂ ನುಐಮ್ "ಹಿಲ್ಯತುಲ್ ಅವ್ಲಿಯಾ'" ಪುಸ್ತಕದಲ್ಲಿ (1/115) ಸಂಕ್ಷಿಪ್ತವಾಗಿ ವರದಿ ಮಾಡಿದ್ದಾರೆ.]

ಇಸ್ಲಾಮ್ ಧರ್ಮವು - ನೀವು ಈಗಾಗಲೇ ನೋಡಿದಂತೆ - ವ್ಯಕ್ತಿಗಳನ್ನು ಪವಿತ್ರಗೊಳಿಸುವುದಾಗಲಿ, ಅವರನ್ನು ಅವರ ಸ್ಥಾನಮಾನಕ್ಕಿಂತ ಮೇಲಕ್ಕೇರಿಸುವುದಾಗಲಿ, ಅಥವಾ ಅವರನ್ನು ಪ್ರಭುಗಳು ಮತ್ತು ದೇವರುಗಳನ್ನಾಗಿ ಮಾಡುವುದಾಗಲಿ ಇಲ್ಲ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"(ಓ ಪ್ರವಾದಿಯವರೇ!) ಹೇಳಿರಿ: ಓ ಗ್ರಂಥದವರೇ! ನಮ್ಮ ಮತ್ತು ನಿಮ್ಮ ನಡುವೆ ಸಮಾನವಾಗಿರುವ ಒಂದು ವಚನದೆಡೆಗೆ ಬನ್ನಿರಿ. ಅಂದರೆ ನಾವು ಅಲ್ಲಾಹನ ಹೊರತು (ಇನ್ನಾರನ್ನೂ) ಆರಾಧಿಸದಿರೋಣ, ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರೋಣ ಮತ್ತು ನಮ್ಮಲ್ಲಿ ಕೆಲವರು ಕೆಲವರನ್ನು ಅಲ್ಲಾಹನ ಹೊರತಾಗಿರುವ ಪ್ರಭುಗಳನ್ನಾಗಿ ಮಾಡದಿರೋಣ. ತರುವಾಯ ಅವರೇನಾದರೂ ವಿಮುಖರಾಗುವುದಾದರೆ ನಾವು (ಅಲ್ಲಾಹನಿಗೆ) ಶರಣಾಗತರಾಗಿರುವೆವು ಎಂಬುದಕ್ಕೆ ನೀವು ಸಾಕ್ಷ್ಯ ವಹಿಸಿರಿ ಎಂದು ಅವರೊಂದಿಗೆ ಹೇಳಿರಿ."** [ಆಲಿ ಇಮ್ರಾನ್:64].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನೀವು ಮಲಕ್‌ಗಳನ್ನು ಮತ್ತು ಪ್ರವಾದಿಗಳನ್ನು ಪ್ರಭುಗಳನ್ನಾಗಿ ಮಾಡಿಕೊಳ್ಳಿರಿ ಎಂದು ಅವನು ನಿಮ್ಮೊಂದಿಗೆ ಆದೇಶಿಸಲಾರನು. ನೀವು ಮುಸ್ಲಿಮರಾದ ಬಳಿಕ ಅವನು ನಿಮ್ಮೊಂದಿಗೆ ಅವಿಶ್ವಾಸಿಗಳಾಗಲು ಆದೇಶಿಸುವನು (ಎಂದು ನೀವು ಭಾವಿಸುವಿರಾ)?" [ಆಲಿ ಇಮ್ರಾನ್:80].

ಪ್ರವಾದಿ صلي الله عليه وسلم ರವರು ಹೇಳಿದರು: "ಕ್ರೈಸ್ತರು ಈಸಾರನ್ನು ಗೌರವಿಸುವುದರಲ್ಲಿ ಮಿತಿಮೀರಿದಂತೆ ನೀವು ನನ್ನ ಪ್ರಶಂಸೆಯಲ್ಲಿ ಮಿತಿಮೀರಬೇಡಿ. ಏಕೆಂದರೆ ನಾನು ಅಲ್ಲಾಹನ ದಾಸನಾಗಿದ್ದೇನೆ. ಆದ್ದರಿಂದ ಅಲ್ಲಾಹನ ದಾಸ ಮತ್ತು ಸಂದೇಶವಾಹಕನೆಂದು ಮಾತ್ರ ಹೇಳಿರಿ." [ಸಹೀಹುಲ್ ಬುಖಾರಿ 3445.]

## 42. ಅಲ್ಲಾಹನು ಇಸ್ಲಾಮಿನಲ್ಲಿ ಪಶ್ಚಾತ್ತಾಪವನ್ನು ನಿರ್ದೇಶಿಸಿದ್ದಾನೆ. ಪಶ್ಚಾತ್ತಾಪವೆಂದರೆ: ಒಬ್ಬ ವ್ಯಕ್ತಿಯು ತನ್ನ ಪ್ರಭುವಿನೆಡೆಗೆ ಮರಳುವುದು ಮತ್ತು ಪಾಪವನ್ನು ತ್ಯಜಿಸುವುದಾಗಿದೆ. ಇಸ್ಲಾಮ್ ಸ್ವೀಕರಿಸುವುದರಿಂದ ಹಿಂದಿನ ಎಲ್ಲಾ ಪಾಪಗಳು ನಾಶವಾಗುತ್ತವೆ. ಪಶ್ಚಾತ್ತಾಪವು ಹಿಂದಿನ ಎಲ್ಲಾ ಪಾಪಗಳನ್ನು ತೊಳೆದುಬಿಡುತ್ತದೆ. ಆದ್ದರಿಂದ ಯಾವುದೇ ಮನುಷ್ಯನಿಗೆ ಇನ್ನೊಬ್ಬನ ಮುಂದೆ ತನ್ನ ಪಾಪಗಳನ್ನು ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲ.

ಅಲ್ಲಾಹನು ಇಸ್ಲಾಮಿನಲ್ಲಿ ಪಶ್ಚಾತ್ತಾಪವನ್ನು ನಿರ್ದೇಶಿಸಿದ್ದಾನೆ. ಪಶ್ಚಾತ್ತಾಪವೆಂದರೆ: ಒಬ್ಬ ವ್ಯಕ್ತಿಯು ತನ್ನ ಪ್ರಭುವಿನೆಡೆಗೆ ಮರಳುವುದು ಮತ್ತು ಪಾಪವನ್ನು ತ್ಯಜಿಸುವುದಾಗಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಓ ಸತ್ಯವಿಶ್ವಾಸಿಗಳೇ! ನೀವೆಲ್ಲರೂ ಅಲ್ಲಾಹನೆಡೆಗೆ ಪಶ್ಚಾತ್ತಾಪಪಟ್ಟು ಮರಳಿರಿ. ನೀವು ಯಶಸ್ವಿಯಾಗಲೂಬಹುದು." [ಅನ್ನೂರ್:31].

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಖಂಡಿತವಾಗಿಯೂ ತನ್ನ ದಾಸರ ಪಶ್ಚಾತ್ತಾಪವನ್ನು ಸ್ವೀಕರಿಸುವವನು ಮತ್ತು ದಾನಧರ್ಮಗಳನ್ನು ಪಡೆಯುವವನು ಅಲ್ಲಾಹನಾಗಿರುವನು ಹಾಗೂ ಖಂಡಿತವಾಗಿಯೂ ಅಲ್ಲಾಹು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು ಎಂಬುದನ್ನು ಅವರು ಅರಿತಿಲ್ಲವೇ?"** [ಅತ್ತೌಬಾ:104]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವನು ತನ್ನ ದಾಸರಿಂದ ಪಶ್ಚಾತ್ತಾಪವನ್ನು ಸ್ವೀಕರಿಸುವವನಾಗಿರುವನು. ಅವನು ದುಷ್ಕೃತ್ಯಗಳನ್ನು ಮನ್ನಿಸುವನು. ನೀವೇನು ಮಾಡುತ್ತಿರುವಿರೋ ಅದನ್ನು ಅವನು ಅರಿಯುವನು."** [ಅಶ್ಶೂರಾ:25]

ಪ್ರವಾದಿ صلي الله عليه وسلم ರವರು ಹೇಳಿದರು: **"ಅಲ್ಲಾಹನು ತನ್ನ ಸತ್ಯ ವಿಶ್ವಾಸಿ ದಾಸನ ಪಶ್ಚಾತ್ತಾಪದಿಂದ ಎಷ್ಟು ಸಂತೋಷಪಡುತ್ತಾನೆಂದರೆ, ಒಬ್ಬ ವ್ಯಕ್ತಿ ನಿರ್ಜನವಾದ, ನಿಶಬ್ದವಾದ ಮತ್ತು ವಿನಾಶಕಾರಿ ಮರುಭೂಮಿಯಲ್ಲಿ ಪ್ರಯಾಣ ಮಾಡುತ್ತಿದ್ದಾನೆ. ಅವನ ಜೊತೆ ಅವನ ಸವಾರಿ ಇದೆ. ಅದರ ಮೇಲೆ ಅವನ ಆಹಾರ ಮತ್ತು ನೀರು ಇದೆ. ಅವನು (ದಣಿದು ಕೆಲ ಹೊತ್ತು ವಿಶ್ರಾಂತಿ ಪಡೆಯಲಿಕ್ಕೆ) ಮಲಗುತ್ತಾನೆ. ಅವನು ನಿದ್ರೆಯಿಂದ ಎಚ್ಚರಗೊಂಡಾಗ ಅವನ ಸವಾರಿ ಕಾಣೆಯಾಗಿದೆ. ಹೀಗೆ ಬಾಯಾರಿಕೆಯಾಗುವ ತನಕ ಅವನು ಅದನ್ನು ಹುಡುಕುತ್ತಾನೆ. ನಾನು ಮೊದಲು ಇದ್ದ ಸ್ಥಳಕ್ಕೆ ಹಿಂತಿರುಗಿ ಸಾಯುವ ತನಕ ಅಲ್ಲೇ ಮಲಗುತ್ತೇನೆ ಎಂದು ಹೇಳಿ ಅವನು ತನ್ನ ಕೈಯ ಮೇಲೆ ತಲೆಯಿಟ್ಟು ಸಾಯಲು ಮಲಗುತ್ತಾನೆ. ಆದರೆ ಅವನು ನಿದ್ರೆಯಿಂದ (ಇದ್ದಕ್ಕಿದ್ದಂತೆ) ಎಚ್ಚರಗೊಂಡಾಗ ಅವನ ಆಹಾರ ಮತ್ತು ನೀರು ಇದ್ದ ಅವನ ಸವಾರಿಯೂ ಅವನ ಕಣ್ಣುಗಳ ಮುಂದೆ ಇದೆ. ತನ್ನ ಸವಾರಿಯನ್ನು ಕಂಡು ಇವನಿಗೆ ಎಷ್ಟು ಸಂತೋಷವಾಗಬಹುದೋ ಅದಕ್ಕಿಂತಲೂ ಹೆಚ್ಚು ಅಲ್ಲಾಹನಿಗೆ ಅವನ ದಾಸ ಪಶ್ಚಾತ್ತಾಪಪಡುವುದನ್ನು ಕಂಡು ಸಂತೋಷವಾಗುತ್ತದೆ."** [ಸಹೀಹ್ ಮುಸ್ಲಿಮ್: 2744.]

ಇಸ್ಲಾಮ್ ಸ್ವೀಕರಿಸುವುದರಿಂದ ಹಿಂದಿನ ಎಲ್ಲಾ ಪಾಪಗಳು ನಾಶವಾಗುತ್ತವೆ. ಪಶ್ಚಾತ್ತಾಪವು ಹಿಂದಿನ ಎಲ್ಲಾ ಪಾಪಗಳನ್ನು ತೊಳೆದುಬಿಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ನಿಲ್ಲಿಸುವುದಾದರೆ ಅವರು ಮುಂಚೆ ಮಾಡಿರುವುದನ್ನು ಅವರಿಗೆ ಕ್ಷಮಿಸಿ ಬಿಡಲಾಗುವುದು ಎಂದು ಸತ್ಯನಿಷೇಧಿಗಳೊಂದಿಗೆ ಹೇಳಿರಿ. ಇನ್ನು ಅವರು (ಸತ್ಯನಿಷೇಧದೆಡೆಗೇ) ಮರಳುವುದಾದರೆ ಪೂರ್ವಿಕರ ವಿಷಯದಲ್ಲಿ (ಅಲ್ಲಾಹುವಿನ) ಕ್ರಮವು ಈಗಾಗಲೇ ಗತಿಸಿಹೋಗಿದೆ."** [ಅಲ್-ಅನ್ಫಾಲ್:38]

ಅಲ್ಲಾಹನು ಕ್ರೈಸ್ತರನ್ನು ಪಶ್ಚಾತ್ತಾಪಪಡಲು ಆಹ್ವಾನಿಸಿದ್ದನು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ಅಲ್ಲಾಹನೆಡೆಗೆ ಪಶ್ಚಾತ್ತಾಪ ದೊಂದಿಗೆ ಮರಳುವುದಾಗಲಿ, ಅವನೊಂದಿಗೆ ಪಾಪಮುಕ್ತಿ ಬೇಡುವುದಾಗಲಿ ಮಾಡಲಾರರೇ? ಅಲ್ಲಾಹು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಅಲ್-ಮಾಇದ:74].

ಅಲ್ಲಾಹನು ಎಲ್ಲಾ ಪಾಪಿಗಳು ಮತ್ತು ಅವಿಧೇಯರನ್ನು ಪಶ್ಚಾತ್ತಾಪಪಡುವಂತೆ ಪ್ರೋತ್ಸಾಹಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಹೇಳಿರಿ: ಸ್ವತಃ ತಮ್ಮ ಮೇಲೆಯೇ ಅತಿಕ್ರಮವೆಸಗಿರುವ ಓ ನನ್ನ ದಾಸರೇ! ಅಲ್ಲಾಹನ ಕಾರುಣ್ಯದ ಬಗ್ಗೆ ನೀವು ನಿರಾಶರಾಗದಿರಿ. ಖಂಡಿತವಾಗಿಯೂ ಅಲ್ಲಾಹು ಪಾಪಗಳೆಲ್ಲವನ್ನೂ ಕ್ಷಮಿಸುವನು. ಖಂಡಿತವಾಗಿಯೂ ಅವನು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಅಝ್ಝುಮರ್:53]

ಆಮ್ರ್ ಇಬ್ನುಲ್-ಆಸ್ رضي الله عنه ರವರು ಇಸ್ಲಾಮ್ ಧರ್ಮ ಸ್ವೀಕರಿಸಲು ಬಯಸಿದಾಗ ಅವರು ಹಿಂದೆ ಮಾಡಿದ ಪಾಪಗಳನ್ನು ಅಲ್ಲಾಹನು ಕ್ಷಮಿಸುವನೋ ಇಲ್ಲವೋ ಎಂಬ ಭಯ ಅವರಲ್ಲಿ ಮೂಡಿತು. ಅಮ್ರ್ رضي الله عنه ತಮ್ಮ ಈ ಪರಿಸ್ಥಿತಿಯನ್ನು ವಿವರಿಸುತ್ತಾ ಹೇಳುತ್ತಾರೆ: "ಅಲ್ಲಾಹನು ನನ್ನ ಹೃದಯದಲ್ಲಿ ಇಸ್ಲಾಮನ್ನು ಹಾಕಿದಾಗ ನಾನು ಪ್ರವಾದಿ صلى الله عليه وسلم ರವರೊಂದಿಗೆ ಪ್ರತಿಜ್ಞೆ ಮಾಡುವ ಸಲುವಾಗಿ ಅವರ ಬಳಿಗೆ ಬಂದೆ. ಅವರು ತಮ್ಮ ಕೈಯನ್ನು ನನ್ನ ಬಳಿಗೆ ಚಾಚಿದಾಗ, "ಓ ಪ್ರವಾದಿಯವರೇ! ನನ್ನ ಹಿಂದಿನ ಪಾಪಗಳು ಕ್ಷಮಿಸಲಾಗುವವರೆಗೆ ನಾನು ನಿಮ್ಮೊಂದಿಗೆ ಪ್ರತಿಜ್ಞೆ ಮಾಡಲಾರೆ" ಎಂದು ನಾನು

ಹೇಳಿದೆ. ಆಗ ಪ್ರವಾದಿ صلى الله عليه وسلم ರವರು ಹೇಳಿದರು: **"ಓ ಅಮ್ರ್! ಖಂಡಿತವಾಗಿಯೂ ಹಿಜ್ರತ್ (ವಲಸೆ) ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುತ್ತದೆಂದು ನಿನಗೆ ತಿಳಿದಿಲ್ಲವೇ? ಓ ಅಮ್ರ್! ಇಸ್ಲಾಮ್ ಸ್ವೀಕಾರವು ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುತ್ತದೆಂದು ನಿನಗೆ ತಿಳಿದಿಲ್ಲವೇ?"** [ಈ ಹದೀಸನ್ನು ಇಮಾಮ್ ಮುಸ್ಲಿಮ್ (121) ಅದೇ ರೀತಿ ಧೀರ್ಘವಾಗಿ ವರದಿ ಮಾಡಿದ್ದಾರೆ. ಇದನ್ನು ಇಮಾಮ್ ಅಹ್ಮದ್ (17827) ಕೂಡ ವರದಿ ಮಾಡಿದ್ದಾರೆ. ಈ ಹದೀಸಿನ ಪದಗಳು ಇಮಾಮ್ ಅಹ್ಮದ್ ರವರದ್ದಾಗಿವೆ.]

## 43. ಇಸ್ಲಾಮಿನಲ್ಲಿ, ಮನುಷ್ಯ ಮತ್ತು ಅಲ್ಲಾಹನ ನಡುವೆ ನೇರ ಸಂಬಂಧವಿದೆ. ಆದುದರಿಂದ ನಿಮ್ಮ ಮತ್ತು ಅಲ್ಲಾಹನ ಮಧ್ಯೆ ಮಧ್ಯವರ್ತಿಯಾಗಿ ಯಾವುದೇ ವ್ಯಕ್ತಿಯ ಅಗತ್ಯವಿಲ್ಲ. ಮನುಷ್ಯರನ್ನು ದೇವರನ್ನಾಗಿ ಮಾಡಿಕೊಳ್ಳುವುದನ್ನು ಅಥವಾ ಅಲ್ಲಾಹನಿಗೆ ಅವನ ರುಬೂಬಿಯ್ಯತ್ತಿನಲ್ಲಿ (ಪ್ರಭುತ್ವದಲ್ಲಿ) ಅಥವಾ ಉಲೂಹಿಯ್ಯತ್ತಿನಲ್ಲಿ(ಆರಾಧನಾರ್ಹತೆಯಲ್ಲಿ) ಸಹಭಾಗಿಗಳನ್ನಾಗಿ ಮಾಡುವುದನ್ನು  ಇಸ್ಲಾಂ ಕಟ್ಟುನಿಟ್ಟಾಗಿ ವಿರೋಧಿಸುತ್ತದೆ.

ಇಸ್ಲಾಂ ಧರ್ಮದಲ್ಲಿ ಯಾವುದೇ ಮನುಷ್ಯನಿಗೆ ಇನ್ನೊಬ್ಬನ ಮುಂದೆ ತನ್ನ ಪಾಪಗಳನ್ನು ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲ. ಇಸ್ಲಾಮಿನಲ್ಲಿ, ಮನುಷ್ಯ ಮತ್ತು ಅಲ್ಲಾಹನ ನಡುವೆ ನೇರ ಸಂಬಂಧವಿದೆ. ಆದುದರಿಂದ ನಿಮ್ಮ ಮತ್ತು ಅಲ್ಲಾಹನ ಮಧ್ಯೆ ಮಧ್ಯವರ್ತಿಯಾಗಿ ಯಾವುದೇ ವ್ಯಕ್ತಿಯ ಅಗತ್ಯವಿಲ್ಲ. ಶೀರ್ಷಿಕೆ ಸಂಖ್ಯೆ (36) ನಲ್ಲಿ ಹೇಳಲಾಗಿರುವಂತೆ ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಜನರನ್ನು ಪಶ್ಚಾತ್ತಾಪ ಪಡುವಂತೆ ಮತ್ತು ಅವನ ಬಳಿ ಮರಳುವಂತೆ ಆಹ್ವಾನಿಸಿದ್ದಾನೆ. ಅದೇ ರೀತಿ ಅವನ ಮತ್ತು ಅವನ ದಾಸರ ನಡುವೆ ಮಧ್ಯವರ್ತಿಗಳಾಗಿ ಪ್ರವಾದಿಗಳನ್ನು ಅಥವಾ ಮಲಕ್‌ಗಳನ್ನು ಮಾಡಿಕೊಳ್ಳುವುದನ್ನು ವಿರೋಧಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ನೀವು ಮಲಕ್‌ಗಳನ್ನು ಮತ್ತು ಪ್ರವಾದಿಗಳನ್ನು ಪ್ರಭುಗಳನ್ನಾಗಿ ಮಾಡಿಕೊಳ್ಳಿರಿ ಎಂದು ಅವನು ನಿಮ್ಮೊಂದಿಗೆ ಆದೇಶಿಸಲಾರನು. ನೀವು ಮುಸ್ಲಿಮರಾದ ಬಳಿಕ ಅವನು ನಿಮ್ಮೊಂದಿಗೆ ಅವಿಶ್ವಾಸಿಗಳಾಗಲು ಆದೇಶಿಸುವನು (ಎಂದು ನೀವು ಭಾವಿಸುವಿರಾ)?" [ಆಲಿ ಇಮ್ರಾನ್:೮೦].

ಇಸ್ಲಾಮ್ ಧರ್ಮವು – ನೀವೇ ನೋಡುವಂತೆ – ಅಲ್ಲಾಹನಿಗೆ ಅವನ ರುಬೂಬಿಯ್ಯತ್ತಿನಲ್ಲಿ (ಪ್ರಭುತ್ವದಲ್ಲಿ) ಅಥವಾ ಉಲೂಹಿಯ್ಯತ್ತಿನಲ್ಲಿ (ಆರಾಧನಾರ್ಹತೆಯಲ್ಲಿ) ಮನುಷ್ಯರನ್ನು ಸಹಭಾಗಿಗಳನ್ನಾಗಿ ಮಾಡುವುದನ್ನು ಇಸ್ಲಾಂ ಕಟ್ಟುನಿಟ್ಟಾಗಿ ವಿರೋಧಿಸುತ್ತದೆ. ಸರ್ವಶಕ್ತನಾದ ಅಲ್ಲಾಹನು ಕ್ರೈಸ್ತರ ಕುರಿತು ಹೇಳುತ್ತಾನೆ: "ಅವರು ಅಲ್ಲಾಹನ ಹೊರತು ತಮ್ಮ ವಿದ್ವಾಂಸರನ್ನೂ, ಪುರೋಹಿತರನ್ನೂ, ಮರ್ಯಮ್‌ರ ಮಗನಾದ ಮಸೀಹರನ್ನೂ ಪ್ರಭುಗಳನ್ನಾಗಿ ಮಾಡಿಕೊಂಡರು. ಆದರೆ ಏಕೈಕ ಆರಾಧ್ಯನನ್ನು ಮಾತ್ರ ಆರಾಧಿಸಬೇಕು ಎಂಬುದನ್ನಲ್ಲದೆ ಬೇರೇನನ್ನೂ ಅವರೊಂದಿಗೆ ಆದೇಶಿಸಲಾಗಿರಲಿಲ್ಲ. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವರು ಸಹಭಾಗಿತ್ವ ಮಾಡುವುದರಿಂದ ಅವನು ಎಷ್ಟೋ ಪರಿಶುದ್ಧನಾಗಿರುವನು." [ಅತ್ತೌಬಾ:31]

ತಮ್ಮ ಮತ್ತು ಅಲ್ಲಾಹನ ನಡುವೆ ಮಧ್ಯವರ್ತಿಗಳನ್ನು ಮಾಡುವ ಸತ್ಯನಿಷೇಧಿಗಳ ಧೋರಣೆಯನ್ನು ಅಲ್ಲಾಹನು ಖಂಡಿಸಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅರಿಯಿರಿ! ನಿಷ್ಕಳಂಕವಾದ ಶರಣಾಗತಿಯು ಅಲ್ಲಾಹನಿಗೆ ಮಾತ್ರ ಅರ್ಹವಾದುದಾಗಿದೆ. ಅವನ ಹೊರತು ಅನ್ಯರನ್ನು ರಕ್ಷಕರನ್ನಾಗಿ ಮಾಡಿಕೊಂಡವರು (ಹೇಳುವರು): ನಮ್ಮನ್ನು ಅಲ್ಲಾಹನೆಡೆಗೆ ಹತ್ತಿರಗೊಳಿಸುವ ಸಲುವಾಗಿಯೇ ಹೊರತು ನಾವು ಅವರನ್ನು ಆರಾಧಿಸುತ್ತಿಲ್ಲ. ಅವರು ಯಾವ ವಿಷಯದಲ್ಲಿ ಭಿನ್ನರಾಗಿರುವರೋ ಆ ವಿಷಯದಲ್ಲಿ ಖಂಡಿತವಾಗಿಯೂ ಅಲ್ಲಾಹು ಅವರ ಮಧ್ಯೆ ತೀರ್ಪು ನೀಡುವನು. ಖಂಡಿತವಾಗಿಯೂ ಸುಳ್ಳು ನುಡಿಯುವವನೂ, ಕೃತಘ್ನನೂ ಆಗಿರುವ ಯಾರನ್ನೂ ಅಲ್ಲಾಹು ಸನ್ಮಾರ್ಗಕ್ಕೆ ಸೇರಿಸಲಾರನು." [ಅಝ್ಝುಮರ್:3]

ಅಜ್ಞಾನ ಕಾಲದಲ್ಲಿ ವಿಗ್ರಹಾರಾಧಕರು ತಮ್ಮ ಮತ್ತು ಅಲ್ಲಾಹನ ನಡುವೆ ಮಧ್ಯವರ್ತಿಗಳನ್ನು ಮಾಡಿಕೊಳ್ಳುತ್ತಿದ್ದರು ಎಂದು ಅಲ್ಲಾಹನು ವಿವರಿಸಿದ್ದಾನೆ. ಅವರು ಹೇಳುತ್ತಿದ್ದರು: "ಅವು ನಮ್ಮನ್ನು ಅಲ್ಲಾಹನಿಗೆ ಸಮೀಪಗೊಳಿಸುತ್ತವೆ." ಸಂದೇಶವಾಹಕರು ಅಥವಾ ಮಲಕ್‌ಗಳನ್ನೇ ಅಲ್ಲಾಹನು ಅವನ ಮತ್ತು ಅವನ ದಾಸರ ಮಧ್ಯೆ ಮಧ್ಯವರ್ತಿಗಳನ್ನಾಗಿ ಮಾಡುವುದನ್ನು ವಿರೋಧಿಸಿರುವಾಗ ಇತರರ ಈ ವಿರೋಧಕ್ಕೆ ಹೆಚ್ಚು ಅರ್ಹರಾಗಿದ್ದಾರೆ. ಅವರು ಸಂದೇಶವಾಹಕರು ಮತ್ತು ಪ್ರವಾದಿಗಳನ್ನು ಮಧ್ಯವರ್ತಿಗಳನ್ನಾಗಿ ಮಾಡಲು ಹೇಗೆ ಸಾಧ್ಯ? ಸ್ವತಃ ಅವರೇ ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಅವಸರಪಡುತ್ತಿದ್ದಾರೆ. ಅಲ್ಲಾಹನು ಪ್ರವಾದಿಗಳು ಮತ್ತು ಸಂದೇಶವಾಹಕರ عليهم السلام ಸ್ಥಿತಿಯನ್ನು ತಿಳಿಸುತ್ತಾ ಹೇಳುತ್ತಾನೆ: **"ಖಂಡಿತವಾಗಿಯೂ ಇವರು (ಪ್ರವಾದಿಗಳು) ಸತ್ಕರ್ಮಗಳೆಡೆಗೆ ಧಾವಂತದಿಂದ ಮುನ್ನುಗ್ಗುವವರೂ, ನಿರೀಕ್ಷೆ ಮತ್ತು ಭಯದಿಂದ ನಮ್ಮೊಂದಿಗೆ ಪ್ರಾರ್ಥಿಸುವವರೂ ಆಗಿದ್ದರು. ಅವರು ನಮ್ಮೊಂದಿಗೆ ವಿಧೇಯತೆಯುಳ್ಳವರಾಗಿದ್ದರು."** [ಅಲ್-ಅಂಬಿಯಾ:೯೦]

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅವರು ಯಾರನ್ನು ಕರೆದು ಪ್ರಾರ್ಥಿಸುತ್ತಿರುವರೋ ಅವರು ಸ್ವತಃ ತಮ್ಮ ಪ್ರಭುವಿನೆಡೆಗೆ ಹತ್ತಿರವಾಗಲು ಮಾರ್ಗಗಳನ್ನು ಅರಸುತ್ತಿರುವರು. ಅವರ ಪೈಕಿ ಅಲ್ಲಾಹನೊಂದಿಗೆ ಅತ್ಯಂತ ನಿಕಟವಾಗಿರುವವರು ಸಹ. ಅವರು ಅವನ ದಯೆಯನ್ನು ಆಶಿಸುತ್ತಿರುವರು ಮತ್ತು ಅವನ ಶಿಕ್ಷೆಯನ್ನು ಭಯಪಡುತ್ತಿರುವರು. ಖಂಡಿತವಾಗಿಯೂ ತಮ್ಮ ಪ್ರಭುವಿನ ಶಿಕ್ಷೆಯು ಭಯಪಡಬೇಕಾದುದೇ ಆಗಿದೆ."** [ಅಲ್-ಇಸ್ರಾ:57]

ಅರ್ಥಾತ್ ಅಲ್ಲಾಹನ ಹೊರತು ನೀವು ಕರೆದು ಪ್ರಾರ್ಥಿಸುವ ಪ್ರವಾದಿಗಳು ಮತ್ತು ಸಜ್ಜನರು ಸ್ವತಃ ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ ಮತ್ತು ಅವನ ಕರುಣೆಯ ನಿರೀಕ್ಷೆಯಲ್ಲಿದ್ದಾರೆ. ಅವರು ಅವನ ಶಿಕ್ಷೆಯನ್ನು ಭಯಪಡುತ್ತಿದ್ದಾರೆ. ಹೀಗಿರುವಾಗ ಅಲ್ಲಾಹನ ಹೊರತು ಅವರನ್ನು ಹೇಗೆ ಕರೆದು ಪ್ರಾರ್ಥಿಸುವುದು ಹೇಗೆ ಸಾಧ್ಯ?

44. ಈ ಪ್ರಬಂಧದ ಕೊನೆಯಲ್ಲಿ ನಾನು ಹೇಳುವುದೇನೆಂದರೆ: ಜನರು ಕಾಲ, ರಾಷ್ಟ್ರೀಯತೆ ಮತ್ತು ನಾಗರಿಕತೆಗಳಲ್ಲಿ ವಿಂಗಡಣೆಯಾಗಿದ್ದಾರೆ. ಮಾತ್ರವಲ್ಲ, ಇಡೀ ಮಾನವ ಸಮಾಜವು ಆಲೋಚನೆಗಳು ಮತ್ತು ಉದ್ದೇಶಗಳಲ್ಲಿ ವಿಭಿನ್ನವಾಗಿವೆ. ಪರಿಸರ ಮತ್ತು ಕೆಲಸ-ಕಾರ್ಯಗಳಲ್ಲಿ ಬೇರೆ ಬೇರೆಯಾಗಿವೆ. ಅವರೆಲ್ಲರಿಗೂ ಒಬ್ಬ ಮಾರ್ಗದರ್ಶಕನ, ಅವರನ್ನು ಒಟ್ಟುಗೂಡಿಸುವ ಒಂದು ವ್ಯವಸ್ಥೆಯ, ಅವರನ್ನು ಕಾಪಾಡುವ ಒಬ್ಬ ಆಡಳಿತಗಾರನ ಅಗತ್ಯವಿದೆ. ಗೌರವಾವನ್ವಿತ ಪ್ರವಾದಿಗಳು ಈ ಕರ್ತವ್ಯವನ್ನು ಅಲ್ಲಾಹನ ವತಿಯಿಂದ ಬಂದ ದಿವ್ಯ ವಾಣಿಯ ಬೆಳಕಿನಲ್ಲಿ ನಿರ್ವಹಿಸುತ್ತಿದ್ದರು. ಅವರು ಜನರಿಗೆ ಸರಿಯಾದ ಹಾಗೂ ನೇರ ಮಾರ್ಗವನ್ನು ತೋರಿಸುತ್ತಿದ್ದರು. ಅವರನ್ನು ಅಲ್ಲಾಹನ ನಿಯಮದ ಆಧಾರದಲ್ಲಿ ಒಟ್ಟುಗೂಡಿಸುತ್ತಿದ್ದರು ಮತ್ತು ಅವರ ಮಧ್ಯೆ ಸತ್ಯದೊಂದಿಗೆ ತೀರ್ಪು ನೀಡುತ್ತಿದ್ದರು. ಜನರು ಈ ಪ್ರವಾದಿಗಳು ಮತ್ತು ಸಂದೇಶವಾಹಕರನ್ನು ಯಾವ ಪ್ರಕಾರ ಅನುಸರಿಸುತ್ತಿದ್ದರೋ ಅದೇ ಪ್ರಕಾರ, ಅವರ ವ್ಯವಹಾರಗಳು ಸರಿಯಾಗಿ ನಡೆಯುತ್ತಿದ್ದವು. ಅದೇ ರೀತಿ ಯಾರಿಗೆ ದೈವಿಕ ಸಂದೇಶಗಳ ಕಾಲವು ಎಷ್ಟು ಹತ್ತಿರವಾಗುತ್ತಿತ್ತೋ ಅವನು ಅಷ್ಟೇ ನೇರ ಮಾರ್ಗವನ್ನು ಅನುಸರಿಸುತ್ತಿದ್ದರು. ಆದರೆ ಈಗ ಸರ್ವಶಕ್ತನಾದ ಅಲ್ಲಾಹನು ಮುಹಮ್ಮದ್ صلي الله عليه وسلم ರ ಸಂದೇಶವಾಹಕತ್ವದೊಂದಿಗೆ ಸಂದೇಶವಾಹಕರು ಮತ್ತು ಪ್ರವಾದಿಗಳ ಸರಪಳಿಯನ್ನು ಕೊನೆಗೊಳಿಸಿದ್ದಾನೆ. ಅದನ್ನು ಶಾಶ್ವತಗೊಳಿಸಿದ್ದಾನೆ ಮತ್ತು ಅವರನ್ನು ಜನರಿಗೆ ಮಾರ್ಗದರ್ಶನ, ಕರುಣೆ, ಪ್ರಕಾಶ ಮತ್ತು

## ಅಲ್ಲಾಹನವರೆಗೆ ತಲುಪಿಸುವ ಮಾರ್ಗದ ಏಕೈಕ ಮಾರ್ಗದರ್ಶಕನನ್ನಾಗಿ ಮಾಡಿದ್ದಾನೆ.

ಈ ಪ್ರಬಂಧದ ಕೊನೆಯಲ್ಲಿ ನಾನು ಹೇಳುವುದೇನೆಂದರೆ, ಜನರು ಕಾಲ, ರಾಷ್ಟ್ರೀಯತೆ ಮತ್ತು ನಾಗರಿಕತೆಗಳಲ್ಲಿ ವಿಂಗಡಣೆಯಾಗಿದ್ದಾರೆ. ಮಾತ್ರವಲ್ಲ, ಇಡೀ ಮಾನವ ಸಮಾಜವು ಆಲೋಚನೆಗಳು ಮತ್ತು ಉದ್ದೇಶಗಳಲ್ಲಿ ವಿಭಿನ್ನವಾಗಿವೆ. ಪರಿಸರ ಮತ್ತು ಕೆಲಸ-ಕಾರ್ಯಗಳಲ್ಲಿ ಬೇರೆ ಬೇರೆಯಾಗಿವೆ. ಅವರೆಲ್ಲರಿಗೂ ಒಬ್ಬ ಮಾರ್ಗದರ್ಶಕನ, ಅವರನ್ನು ಒಟ್ಟುಗೂಡಿಸುವ ಒಂದು ವ್ಯವಸ್ಥೆಯ, ಅವರನ್ನು ಕಾಪಾಡುವ ಒಬ್ಬ ಆಡಳಿತಗಾರನ ಅಗತ್ಯವಿದೆ. ಗೌರವಾವನ್ವಿತ ಪ್ರವಾದಿಗಳು ಈ ಕರ್ತವ್ಯವನ್ನು ಅಲ್ಲಾಹನ ವತಿಯಿಂದ ಬಂದ ದಿವ್ಯ ವಾಣಿಯ ಬೆಳಕಿನಲ್ಲಿ ನಿರ್ವಹಿಸುತ್ತಿದ್ದರು. ಅವರು ಜನರಿಗೆ ಸರಿಯಾದ ಹಾಗೂ ನೇರ ಮಾರ್ಗವನ್ನು ತೋರಿಸುತ್ತಿದ್ದರು. ಅವರನ್ನು ಅಲ್ಲಾಹನ ನಿಯಮದ ಆಧಾರದಲ್ಲಿ ಒಟ್ಟುಗೂಡಿಸುತ್ತಿದ್ದರು ಮತ್ತು ಅವರ ಮಧ್ಯೆ ಸತ್ಯದೊಂದಿಗೆ ತೀರ್ಪು ನೀಡುತ್ತಿದ್ದರು. ಜನರು ಈ ಪ್ರವಾದಿಗಳು ಮತ್ತು ಸಂದೇಶವಾಹಕರನ್ನು ಯಾವ ಪ್ರಕಾರ ಅನುಸರಿಸುತ್ತಿದ್ದರೋ ಅದೇ ಪ್ರಕಾರ, ಅವರ ವ್ಯವಹಾರಗಳು ಸರಿಯಾಗಿ ನಡೆಯುತ್ತಿದ್ದವು. ಅದೇ ರೀತಿ ಯಾರಿಗೆ ದೈವಿಕ ಸಂದೇಶಗಳ ಕಾಲವು ಎಷ್ಟು ಹತ್ತಿರವಾಗುತ್ತಿತ್ತೋ ಅವನು ಅಷ್ಟೇ ನೇರ ಮಾರ್ಗವನ್ನು ಅನುಸರಿಸುತ್ತಿದ್ದರು. ಆದರೆ ಪಥಭ್ರಷ್ಟತೆಯು ಹೆಚ್ಚಾದಾಗ, ಅಜ್ಞಾನವು ವ್ಯಾಪಕವಾದಾಗ ಮತ್ತು ವಿಗ್ರಹಗಳನ್ನು ಆರಾಧಿಸಲಾದಾಗ ಜನರನ್ನು ಸತ್ಯನಿಷೇಧ, ಅಜ್ಞಾನ ಮತ್ತು ವಿಗ್ರಹಾರಾಧನೆಯ ಅಂಧಕಾರಗಳಿಂದ ಸತ್ಯವಿಶ್ವಾಸ ಮತ್ತು ಸನ್ಮಾರ್ಗದೆಡೆಗೆ ಹೊರತೆಗೆಯಲಿಕ್ಕೆ ಅಲ್ಲಾಹನು ತನ್ನ ಪ್ರವಾದಿ ಮುಹಮ್ಮದ್ صلى الله عليه وسلم ರವರನ್ನು ಸನ್ಮಾರ್ಗ ಮತ್ತು ಸತ್ಯ ಧರ್ಮದೊಂದಿಗೆ ಕಳುಹಿಸಿದನು.

45. ಆದುದರಿಂದ ಓ ಮನುಷ್ಯನೇ! ಸಂಪ್ರದಾಯ ಮತ್ತು ಮೂಢನಂಬಿಕೆಗಳ ಸಂಕೋಲೆಗಳನ್ನು ಕಳಚಿ ನಿಜವಾದ ಹೃದಯ ಮತ್ತು ನಿಜವಾದ ಮನಸ್ಸಿನಿಂದ ಸರ್ವಶಕ್ತನಾದ ಅಲ್ಲಾಹನಿಗಾಗಿ ನಿಲ್ಲುವಂತೆ ನಾನು ನಿನ್ನನ್ನು  ಪ್ರಾಮಾಣಿಕವಾಗಿ ಆಹ್ವಾನಿಸುತ್ತೇನೆ. ಮರಣಾನಂತರ ನೀನು ನಿನ್ನ ಪ್ರಭುವಿನ ಕಡೆಗೆ ಹಿಂತಿರುಗುವೆ ಎಂದು ನಿನಗೆ ತಿಳಿದಿದೆ. ನೀನು ನಿನ್ನ ದೇಹದ ಬಗ್ಗೆ ಯೋಚಿಸಿ ನೋಡಬೇಕೆಂದು ಮತ್ತು ನಿನ್ನ ಸುತ್ತಮುತ್ತಲಿನ  ಪ್ರಪಂಚದ ಬಗ್ಗೆ ಚಿಂತಿಸಬೇಕೆಂದು ನಾನು ವಿನಂತಿಸುತ್ತೇನೆ. ನೀನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ ನೀನು ಇಹಲೋಕ ಮತ್ತು ಪರಲೋಕಗಳ ಸೌಭಾಗ್ಯ ಮತ್ತು ಆನಂದವನ್ನು ಪಡೆಯುವೆ. ನೀನು ಇಸ್ಲಾಮ್ ಧರ್ಮ ಸ್ವೀಕರಿಸಲು ಬಯಸಿದರೆ, ನೀನು ಮಾಡಬೇಕಾಗಿರುವುದು ಇಷ್ಟೇ: ಅಲ್ಲಾಹನ ಹೊರತು ಅನ್ಯ ನೈಜ ಆರಾಧ್ಯನಿಲ್ಲ ಮತ್ತು ಮುಹಮ್ಮದ್ صلي الله عليه وسلم ಅಲ್ಲಾಹನ ಸಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ನುಡಿಯುತ್ತೇನೆಂದು ಹೇಳುವುದು. ನಂತರ ನೀನು ಅಲ್ಲಾಹನ ಹೊರತು ಆರಾಧಿಸಲ್ಪಡುವ ಎಲ್ಲವನ್ನೂ ತ್ಯಜಿಸಬೇಕು. ಪುನರುತ್ಥಾನ  ದಿನದಂದು ಅಲ್ಲಾಹನು ಎಲ್ಲಾ ಜನರನ್ನು ಅವರ ಸಮಾಧಿಗಳಿಂದ ಜೀವಂತ ಎಬ್ಬಿಸುತ್ತಾನೆಂದು ಮತ್ತು ಪರಲೋಕದ ವಿಚಾರಣೆ ಹಾಗೂ ಪ್ರತಿಫಲವು ಸತ್ಯವಾಗಿದೆ ಎಂದು ವಿಶ್ವಾಸವಿಡಬೇಕು. ಇಷ್ಟು ಮಾಡುವುದರಿಂದ ನೀನು ಮುಸಲ್ಮಾನನಾಗುವೆ. ಅದರ ನಂತರ  ಅಲ್ಲಾಹನು ಕಡ್ಡಾಯಗೊಳಿಸಿದ ನಮಾಜ್, ಝಕಾತ್, ಉಪವಾಸ, ಸಾಮರ್ಥ್ಯವಿದ್ದರೆ ಹಜ್ಜ್ ಎಂಬ

## ಆರಾಧನೆಗಳೊಂದಿಗೆ ಅಲ್ಲಾಹನನ್ನು ಆರಾಧಿಸುವುದು ನಿನ್ನ ಮೇಲೆ ಕಡ್ಡಾಯವಾಗಿದೆ.

ಆದುದರಿಂದ ಓ ಮನುಷ್ಯನೇ! ಸಂಪ್ರದಾಯ ಮತ್ತು ಮೂಢನಂಬಿಕೆಗಳ ಸಂಕೋಲೆಗಳನ್ನು ಕಳಚಿ ನಿಜವಾದ ಹೃದಯ ಮತ್ತು ನಿಜವಾದ ಮನಸ್ಸಿನಿಂದ ಸರ್ವಶಕ್ತನಾದ ಅಲ್ಲಾಹನಿಗಾಗಿ ನಿಲ್ಲುವಂತೆ ನಾನು ನಿನ್ನನ್ನು ಪ್ರಾಮಾಣಿಕವಾಗಿ ಆಹ್ವಾನಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ಈ ಕೆಳಗಿನ ವಚನದಲ್ಲಿ ನಿನ್ನನ್ನು ಆಹ್ವಾನಿಸಿದಂತೆ: **"ಹೇಳಿರಿ: ನಾನು ನಿಮಗೆ ಒಂದು ವಿಷಯವನ್ನು ಮಾತ್ರ ಉಪದೇಶ ಮಾಡುವೆನು. ನೀವು ಅಲ್ಲಾಹನಿಗೋಸ್ಕರ ಇಬ್ಬಿಬ್ಬರಾಗಿ ಅಥವಾ ಒಂಟಿಯಾಗಿ ನಿಲ್ಲಿರಿ. ತರುವಾಯ ಆಲೋಚಿಸಿರಿ. ನಿಮ್ಮ ಒಡನಾಡಿಗೆ (ಪ್ರವಾದಿಯವರಿಗೆ) ಯಾವುದೇ ಬುದ್ಧಿಭ್ರಮಣೆಯಿಲ್ಲ. ಅವರು ಭಯಾನಕವಾದ ಶಿಕ್ಷೆಯ ಮುಂದೆ ನಿಮಗೆ ಮುನ್ನೆಚ್ಚರಿಕೆ ನೀಡುವ ಒಬ್ಬ ವ್ಯಕ್ತಿ ಮಾತ್ರವಾಗಿರುವರು."** [ಸಬಅ್:46]

ಮರಣಾಂತರ ನೀನು ನಿನ್ನ ಪ್ರಭುವಿನ ಕಡೆಗೆ ಹಿಂತಿರುಗುವೆ ಎಂದು ನಿನಗೆ ತಿಳಿದಿದೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಮನುಷ್ಯನು ತಾನೇ ಪರಿಶ್ರಮಿಸಿದುದರ ಹೊರತು ಅವನಿಗೆ ಬೇರೇನೂ ಇಲ್ಲ.(39) ಮತ್ತು ಅವನ ಪರಿಶ್ರಮವನ್ನು ಸಾಧ್ಯವೇ ನೋಡಲಾಗುವುದು (40). ಆನಂತರ ಅವನ ಸಂಪೂರ್ಣ ಪ್ರತಿಫಲವನ್ನು ಕೊಡಲಾಗುವುದು (41) ಅಂತಿಮವಾಗಿ ತಲುಪಲಿಕ್ಕಿರುವುದು ನಿಮ್ಮ ಪ್ರಭುವಿನ ಕಡೆಗೇ ಆಗಿದೆ.(42)"** [ಅನ್ನಜ್ಮ್: 39-42]

ನೀನು ನಿನ್ನ ದೇಹದ ಬಗ್ಗೆ ಯೋಚಿಸಿ ನೋಡಬೇಕೆಂದು ಮತ್ತು ನಿನ್ನ ಸುತ್ತಮುತ್ತಲಿನ ಪ್ರಪಂಚದ ಬಗ್ಗೆ ಚಿಂತಿಸಬೇಕೆಂದು ನಾನು ವಿನಂತಿಸುತ್ತೇನೆ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ರಹಸ್ಯಗಳ ಬಗ್ಗೆ, ಅಲ್ಲಾಹು ಸೃಷ್ಟಿಸಿದ ಯಾವುದೇ ವಸ್ತುವಿನ ಬಗ್ಗೆ, ಅವರ ಅವಧಿಯು**

**ಸಮೀಪಿಸಿರಬಹುದು ಎಂಬುದರ ಬಗ್ಗೆ ಅವರು ಚಿಂತಿಸಿ ನೋಡಲಾರರೇ? ಇದರ (ಕುರ್‌ಆನ್) ಬಳಿಕ ಅವರು ಯಾವ ವೃತ್ತಾಂತದಲ್ಲಿ ವಿಶ್ವಾಸವಿಡುವರು?"** [ಅಲ್-ಅಲ್‌ರಾಫ್:185]

ನೀನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ ನೀನು ಇಹಲೋಕ ಮತ್ತು ಪರಲೋಕಗಳ ಸೌಭಾಗ್ಯ ಮತ್ತು ಆನಂದವನ್ನು ಪಡೆಯುವೆ. ನೀನು ಇಸ್ಲಾಮ್ ಧರ್ಮ ಸ್ವೀಕರಿಸಲು ಬಯಸಿದರೆ, ನೀನು ಮಾಡಬೇಕಾಗಿರುವುದು ಇಷ್ಟೇ: ಅಲ್ಲಾಹನ ಹೊರತು ಅನ್ಯ ನೈಜ ಆರಾಧ್ಯನಿಲ್ಲ ಮತ್ತು ಮುಹಮ್ಮದ್ صلي الله عليه وسلم ಅಲ್ಲಾಹನ ಸಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ನುಡಿಯುತ್ತೇನೆಂದು ಹೇಳುವುದು. ಪ್ರವಾದಿ صلي الله عليه وسلم ರವರು ಮುಆದ್ رضي الله عنه ರನ್ನು ಜನರನ್ನು ಇಸ್ಲಾಮಿಗೆ ಕರೆಯಲು ಯಮನ್‌ಗೆ ಕಳುಹಿಸುವಾಗ ಹೀಗೆ ಹೇಳಿದರು: **"ಖಂಡಿತವಾಗಿಯೂ ನೀವು ಗ್ರಂಥದವರ ಬಳಿಗೆ ಹೋಗುತ್ತಿದ್ದೀರಿ. ಆದ್ದರಿಂದ ನೀವು ಅವರನ್ನು "ಅಲ್ಲಾಹನ ಹೊರತು ಅನ್ಯ ನೈಜ ಆರಾಧ್ಯನಿಲ್ಲ ಮತ್ತು ನಾನು ಅಲ್ಲಾಹನ ಸಂದೇಶವಾಹಕನಾಗಿದ್ದೇನೆಂದು" ಸಾಕ್ಷ್ಯ ವಹಿಸಲು ಆಹ್ವಾನಿಸಿರಿ. ಅವರು ಅದನ್ನು ಅನುಸರಿಸಿದರೆ, ಅಲ್ಲಾಹನು ಅವರ ಮೇಲೆ ಹಗಲು ರಾತ್ರಿಯಲ್ಲಿ ಐದು ನಮಾಝ್‌ಗಳನ್ನು ಕಡ್ಡಾಯಗೊಳಿಸಿದ್ದಾನೆಂದು ತಿಳಿಸಿರಿ. ಅವರು ಅದನ್ನೂ ಅನುಸರಿಸಿದರೆ, ಅಲ್ಲಾಹನು ಅವರ ಮೇಲೆ ಝಕಾತನ್ನು ಕಡ್ಡಾಯಗೊಳಿಸಿದ್ದಾನೆಂದು ಹೇಳಿರಿ. ಅದು ಅವರ ಪೈಕಿ ಶ್ರೀಮಂತರಿಂದ ತೆಗೆದುಕೊಳ್ಳಲಾಗುತ್ತದೆ ಮತ್ತು ಅವರ ಪೈಕಿ ಬಡವರಿಗೆ ನೀಡಲಾಗುತ್ತದೆ. ಅವರು ಅದನ್ನೂ ಅನುಸರಿಸಿದರೆ, ಅವರ ಅತ್ಯುತ್ತಮ ಸಂಪತ್ತಿನ ಬಗ್ಗೆ ಎಚ್ಚರಿಕೆ ವಹಿಸಿರಿ. (ಅದನ್ನು ವಶಪಡಿಸಬೇಡಿ)."** [ಸಹೀಹ್ ಮುಸ್ಲಿಮ್: 19.]

ನಂತರ ನೀನು ಅಲ್ಲಾಹನ ಹೊರತು ಆರಾಧಿಸಲ್ಪಡುವ ಎಲ್ಲವನ್ನೂ ತ್ಯಜಿಸಬೇಕು ಮತ್ತು ಅಲ್ಲಾಹನ ಹೊರತು ಆರಾಧಿಸಲ್ಪಡುವ ಎಲ್ಲವನ್ನೂ ತ್ಯಜಿಸುವುದೇ ಋಜುವಾದ ಇಬ್ರಾಹೀಮ್ عليه السلام ರ ಮಾರ್ಗ.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ನಿಮಗೆ ಇಬ್ರಾಹೀಮ್‌ರಲ್ಲಿ ಮತ್ತು ಅವರ ಜೊತೆಗಿದ್ದವರಲ್ಲಿ ಒಂದು ಉತ್ತಮ ಮಾದರಿಯಿದೆ. ಅವರು ತಮ್ಮ ಜನರೊಂದಿಗೆ ಹೇಳಿದ**

**ಸಂದರ್ಭ: ಖಂಡಿತವಾಗಿಯೂ ನಾವು ನಿಮ್ಮಿಂದ ಮತ್ತು ಅಲ್ಲಾಹನ ಹೊರತು ನೀವು ಆರಾಧಿಸುತ್ತಿರುವವುಗಳಿಂದ ಸಂಪೂರ್ಣ ವಿಮುಕ್ತರಾಗಿರುವೆವು. ನಾವು ನಿಮ್ಮಲ್ಲಿ ಅವಿಶ್ವಾಸವಿಟ್ಟಿರುವೆವು. ನೀವು ಅಲ್ಲಾಹನಲ್ಲಿ ಮಾತ್ರ ವಿಶ್ವಾಸವಿಡುವ ತನಕ ಎಂದೆಂದಿಗೂ ನಮ್ಮ ಮತ್ತು ನಿಮ್ಮ ನಡುವೆ ಶತ್ರುತ್ವ ಹಾಗೂ ವಿದ್ವೇಷವು ಬಹಿರಂಗವಾಗಿಬಿಟ್ಟಿದೆ."** [ಅಲ್-ಮುಮ್ತಹನ:4]

ಪುನರುತ್ಥಾನ ದಿನದಂದು ಅಲ್ಲಾಹನು ಎಲ್ಲಾ ಜನರನ್ನು ಅವರ ಸಮಾಧಿಗಳಿಂದ ಜೀವಂತ ಎಬ್ಬಿಸುತ್ತಾನೆಂದು ವಿಶ್ವಾಸವಿಡಬೇಕು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅದು ಏಕೆಂದರೆ ಅಲ್ಲಾಹು ಸತ್ಯವಾಗಿರುವನು, ಖಂಡಿತವಾಗಿಯೂ ಅವನು ಮರಣಹೊಂದಿದವರಿಗೆ ಜೀವ ನೀಡುವನು ಮತ್ತು ಅವನು ಸಕಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿರುವನು ಎಂಬುದರಿಂದಾಗಿದೆ.(6) ಅಂತ್ಯಘಳಿಗೆಯು ಖಂಡಿತವಾಗಿಯೂ ಬರುವುದು. ಅದರಲ್ಲಿ ಸಂದೇಹವೇ ಇಲ್ಲ. ಗೋರಿಗಳಲ್ಲಿರುವವರನ್ನು ಅಲ್ಲಾಹು ಪುನರುತ್ಥಾನಗೊಳಿಸುವನು.(7)"** [ಅಲ್-ಹಜ್ಜ್: 6- 7]

ಪರಲೋಕದ ವಿಚಾರಣೆ ಹಾಗೂ ಪ್ರತಿಫಲವು ಸತ್ಯವಾಗಿದೆ ಎಂದೂ ವಿಶ್ವಾಸವಿಡಬೇಕು.

ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹು ಆಕಾಶಗಳನ್ನು ಮತ್ತು ಭೂಮಿಯನ್ನು ಸತ್ಯದೊಂದಿಗೆ ಸೃಷ್ಟಿಸಿರುವನು. ಅದು ಪ್ರತಿಯೊಬ್ಬನಿಗೂ ಅವನು ಮಾಡಿಕೊಂಡಿರುವುದಕ್ಕಿರುವ ಪ್ರತಿಫಲವನ್ನು ನೀಡುವ ಸಲುವಾಗಿದೆ. ಅವರೊಂದಿಗೆ ಅನ್ಯಾಯವೆಸಗಲಾಗದು."** [ಅಲ್-ಜಾಸಿಯ:22].

ಈ ಸಾಕ್ಷ್ಯಗಳನ್ನು ನೀನು ನುಡಿದಾಗ ನೀನು ಮುಸಲ್ಮಾನನಾಗುವೆ ಅದರ ನಂತರ ಅಲ್ಲಾಹನು ಕಡ್ಡಾಯಗೊಳಿಸಿದ ನಮಾಜ್, ಝುಕಾತ್, ಉಪವಾಸ, ಸಾಮರ್ಥ್ಯವಿದ್ದರೆ ಹಜ್ಜ್ ಎಂಬ ಆರಾಧನೆಗಳೊಂದಿಗೆ ಅಲ್ಲಾಹನನ್ನು ಆರಾಧಿಸುವುದು ನಿನ್ನ ಮೇಲೆ ಕಡ್ಡಾಯವಾಗಿದೆ.

19-11-1441ರಂದು ಪುಸ್ತಕದ ಹಸ್ತಪ್ರತಿ ಪೂರ್ಣಗೊಂಡಿದೆ.

**ಲೇಖಕರು: ಪ್ರೊಫೆಸರ್ ಡಾ. ಮುಹಮ್ಮದ್ ಬಿನ್ ಅಬ್ದುಲ್ಲಾ ಅಸ್ಸುಹೈಮ್.**

ಮಾಜಿ ಅಧ್ಯಾಪಕರು ಇಸ್ಲಾಮಿಕ್ ಸ್ಟಡೀಸ್ ವಿಭಾಗ (ಅಖೀದಾ)

ಕುಲ್ಲಿಯತುತ್ತರ್ಬಿಯಾ, ಕಿಂಗ್ ಸವೂದ್ ವಿಶ್ವವಿದ್ಯಾಲಯ.

ರಿಯಾದ್, ಸೌದಿ ಅರೇಬಿಯಾ

# ವಿಷಯಸೂಚಿ

1. ಇಸ್ಲಾಮ್ ಧರ್ಮವು ಮಾನವಕುಲಕ್ಕಿರುವ ಅಲ್ಲಾಹನ ಸಂದೇಶವಾಗಿದೆ. ಅದು ಶಾಶ್ವತವಾದ ದೈವಿಕ ಸಂದೇಶವಾಗಿದ್ದು ದೈವಿಕ ಸಂದೇಶಗಳಲ್ಲೇ ಕೊನೆಯದ್ದಾಗಿದೆ:.......3

2. ಇಸ್ಲಾಮ್ ಧರ್ಮವು ಯಾವುದೇ ಒಂದು ಕುಲಕ್ಕೆ ಅಥವಾ ಜನತೆಗೆ ಸೀಮಿತವಾದ ಧರ್ಮವಲ್ಲ. ಬದಲಾಗಿ ಅದು ಸರ್ವ ಜನರಿಗಿರುವ ಅಲ್ಲಾಹನ ಧರ್ಮವಾಗಿದೆ:..................4

3. ಇಸ್ಲಾಮ್ ಧರ್ಮವು ಗತ ಪ್ರವಾದಿಗಳು ಮತ್ತು ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಶಾಂತಿ ಇರಲಿ) ತಮ್ಮ ಸಮುದಾಯಗಳಿಗೆ ಬೋಧಿಸಿದ ಸಂದೇಶಗಳನ್ನು ಪೂರ್ತಿಗೊಳಿಸುವುದಕ್ಕಾಗಿ ಬಂದ ದೈವಿಕ ಸಂದೇಶವಾಗಿದೆ.....................................5

4. ಎಲ್ಲಾ ಸಂದೇಶವಾಹಕರ ಧರ್ಮವು ಒಂದೇ ಆಗಿದೆ. ಆದರೆ ಅವರ ಧಾರ್ಮಿಕ ಶಾಸನಗಳು ವಿಭಿನ್ನವಾಗಿವೆ: .............................................................................7

5. ನೂಹ್,ಇಬ್ರಾಹೀಮ್,ಮೂಸಾ, ಸುಲೈಮಾನ್, ದಾವೂದ್, ಈಸಾ عليهم السلام ಮುಂತಾದ ಸಂದೇಶವಾಹಕರೆಲ್ಲರೂ ಆಮಂತ್ರಿಸಿದಂತೆ ಇಸ್ಲಾಮ್ ಧರ್ಮವು ಕೂಡ, ಸರ್ವಲೋಕಗಳ ಪರಿಪಾಲಕನು ಅಲ್ಲಾಹನು ಮಾತ್ರ, ಅವನೇ ಸೃಷ್ಟಿಕರ್ತನು, ಅನ್ನದಾತನು, ಜೀವ ನೀಡುವವನು, ಮರಣ ನೀಡುವವನು, ಆಧಿಪತ್ಯದ ಒಡೆಯನು ಮತ್ತು ಅವನೇ ಕಾರ್ಯಗಳನ್ನು ನಿಯಂತ್ರಿಸುವವನು, ಮತ್ತು ಅವನೇ ಅಪಾರ ದಯೆಯುಳ್ಳವನು, ಅತ್ಯಧಿಕ ಕರುಣೆ ತೋರುವವನು ಎಂಬ ವಿಶ್ವಾಸದೆಡೆಗೆ ಆಮಂತ್ರಿಸುತ್ತದೆ. ................................8

6. ಸರ್ವಶಕ್ತನಾದ ಅಲ್ಲಾಹನೇ ಸೃಷ್ಟಿಕರ್ತನು. ಆರಾಧನೆಗೆ ಅವನು ಮಾತ್ರ ಅರ್ಹನು. ಅವನೊಡನೆ ಇತರ ಯಾರನ್ನೂ ಆರಾಧಿಸುವಂತಿಲ್ಲ...............................................13

7. ಜಗತ್ತಿನಲ್ಲಿ ನಾವು ಕಾಣುತ್ತಿರುವ ಮತ್ತು ಕಾಣದೇ ಇರುವ ಎಲ್ಲದರ ಸೃಷ್ಟಿಕರ್ತ ಅಲ್ಲಾಹನಾಗಿದ್ದಾನೆ. ಅವನ ಹೊರತು ಇತರ ಎಲ್ಲವೂ ಅವನ ಸೃಷ್ಟಿಗಳಾಗಿವೆ. ಅಲ್ಲಾಹನು ಆರು ದಿನಗಳಲ್ಲಿ ಭೂಮಿ ಮತ್ತು ಆಕಾಶಗಳನ್ನು ಸೃಷ್ಟಿಸಿದನು.................................20

8. ಸರ್ವಶಕ್ತನಾದ ಅಲ್ಲಾಹನಿಗೆ ಅವನ ಆಧಿಪತ್ಯದಲ್ಲಿ, ಅವನ ಸೃಷ್ಟಿಯಲ್ಲಿ, ಅವನ ಕಾರ್ಯನಿಯಂತ್ರಣದಲ್ಲಿ ಅಥವಾ ಅವನ ಆರಾಧನೆಯಲ್ಲಿ ಯಾವುದೇ ಭಾಗೀದಾರರಿಲ್ಲ. ....21

9. ಪರಮ ಪಾವನನಾದ ಅಲ್ಲಾಹನು ಯಾರಿಂದಲೂ ಜನಿಸಿಲ್ಲ ಮತ್ತು ಯಾರಿಗೂ ಜನ್ಮ ನೀಡಿಲ್ಲ. ಅವನಿಗೆ ಸರಿಸಮಾನರಾಗಿ, ಸರಿಸಾಟಿಯಾಗಿ ಯಾರೂ ಇಲ್ಲ. ..................... 25

10. ಸರ್ವಶಕ್ತನಾದ ಅಲ್ಲಾಹನು ಯಾವ ವಸ್ತುವಿನಲ್ಲೂ ಅವತರಿಸುವುದಿಲ್ಲ. ಅವನ ಸೃಷ್ಟಿಯಲ್ಲಿ ಯಾವ ರೂಪದಲ್ಲೂ ಅವನು ಪ್ರತ್ಯಕ್ಷನಾಗುವುದಿಲ್ಲ. .............................................. 26

11. ಸರ್ವಶಕ್ತನಾದ ಅಲ್ಲಾಹನು ತನ್ನ ದಾಸರೊಂದಿಗೆ ಅತ್ಯಧಿಕ ದಯೆಯುಳ್ಳವನೂ, ಅಪಾರ ಕರುಣೆಯುಳ್ಳವನೂ ಆಗಿರುವನು. ಈ ಕಾರಣದಿಂದಲೇ ಅವನು ಸಂದೇಶವಾಹಕರನ್ನು ಕಳುಹಿಸಿದನು ಮತ್ತು ಗ್ರಂಥಗಳನ್ನು ಅವತೀರ್ಣಗೊಳಿಸಿದನು. ................................. 29

12. ಅಲ್ಲಾಹು ಮಹಾ ಕರುಣಾಮಯಿಯಾದ ಪ್ರಭು. ಪುನರುತ್ಥಾನದ ದಿನ ಎಲ್ಲಾ ಸೃಷ್ಟಿಗಳನ್ನು ಅವರ ಸಮಾಧಿಗಳಿಂದ ಎಬ್ಬಿಸಿದಾಗ ಅವನೊಬ್ಬನೇ ಅವರನ್ನು ವಿಚಾರಣೆ ಮಾಡುವನು. ನಂತರ ಪ್ರತಿಯೊಬ್ಬರಿಗೂ ಅವರು ಮಾಡಿರುವ ಒಳಿತು ಅಥವಾ ಕೆಡುಕಿನ ಪ್ರತಿಫಲ ನೀಡುವನು. ಯಾರು ಸತ್ಯವಿಶ್ವಾಸಿಯಾಗಿರುತ್ತಾ ಸತ್ಕಾರ್ಯವೆಸಗುತ್ತಾನೋ ಅವನಿಗೆ ಶಾಶ್ವತವಾದ ಸ್ವರ್ಗೋದ್ಯಾನಗಳಿವೆ ಮತ್ತು ಯಾರು ಸತ್ಯವಿಶ್ವಾಸವನ್ನು ನಿರಾಕರಿಸಿ ದುಷ್ಕೃತ್ಯಗಳನ್ನು ಮಾಡುತ್ತಾನೋ ಅವನಿಗೆ ಪರಲೋಕದಲ್ಲಿ ಭಯಾನಕ ಶಿಕ್ಷೆ ಇದೆ.........31

13. ಸರ್ವಶಕ್ತನಾದ ಅಲ್ಲಾಹನು ಆದಮರನ್ನು ಮಣ್ಣಿನಿಂದ ಸೃಷ್ಟಿಸಿದನು. ಅವರ ನಂತರ ಅವರ ಸಂತತಿಯು ಅಭಿವೃದ್ಧಿಯಾಗುವಂತೆ ಮಾಡಿದನು. ಆದ್ದರಿಂದ ಎಲ್ಲಾ ಮಾನವರು ತಮ್ಮ ಮೂಲದಲ್ಲಿ ಸಮಾನರು. ಯಾವುದೇ ಒಂದು ವರ್ಗಕ್ಕೆ ಇನ್ನೊಂದು ವರ್ಗಕ್ಕಿಂತ, ಯಾವುದೇ ಒಂದು ಜನತೆಗೆ ಇನ್ನೊಂದು ಜನತೆಗಿಂತ ಶ್ರೇಷ್ಠತೆಯಿಲ್ಲ, ಧರ್ಮನಿಷ್ಠೆಯನ್ನು ಹೊರತುಪಡಿಸಿ. ................................................................................................. 34

14. ಪ್ರತಿಯೊಂದು ಮಗುವೂ ಪ್ರಕೃತಿಯಲ್ಲೇ ಹುಟ್ಟುತ್ತದೆ. ....................................... 36

15. ಮನುಷ್ಯರಲ್ಲಿ ಯಾರು ತಪ್ಪು ಮಾಡುವವನಾಗಿ ಅಥವಾ ಇತರರ ತಪ್ಪಿಗೆ ಹೊಣೆಗಾರನಾಗಿ ಹುಟ್ಟುವುದಿಲ್ಲ:........................................................................................... 38

16. ಮನುಷ್ಯರನ್ನು ಸೃಷ್ಟಿಸಿದ ಪರಮೋಚ್ಛ ಉದ್ದೇಶ: ಅಲ್ಲಾಹನನ್ನು ಮಾತ್ರ ಆರಾಧಿಸುವುದಾಗಿದೆ: ........................................................................................40

17. ಇಸ್ಲಾಂ ಧರ್ಮವು ಮನುಷ್ಯನನ್ನು -ಸ್ತ್ರೀ ಪುರುಷರನ್ನು- ಗೌರವಿಸಿದೆ. ಅವನ ಎಲ್ಲಾ ಹಕ್ಕುಗಳ ಸಂಪೂರ್ಣ ಹೊಣೆಯನ್ನು ವಹಿಸಿಕೊಂಡಿದೆ. ಅವನ ಎಲ್ಲಾ ಆಯ್ಕೆಗಳು, ಕೆಲಸಗಳು ಮತ್ತು ವ್ಯವಹಾರಗಳಿಗೆ ಅವನನ್ನು ಜವಾಬ್ದಾರನನ್ನಾಗಿ ಮಾಡಿದೆ. ತನಗೆ ಹಾನಿ ಮಾಡುವ ಅಥವಾ ಇತರರಿಗೆ ಹಾನಿ ಮಾಡುವ ಯಾವುದೇ ಕಾರ್ಯಕ್ಕೆ ಅವನನ್ನು ಹೊಣೆಗಾರನನ್ನಾಗಿ ಮಾಡುತ್ತದೆ. ...........................................................................................40

18. ಕರ್ಮ, ಹೊಣೆಗಾರಿಕೆ, ಪ್ರತಿಫಲ ಮತ್ತು ಬಹುಮಾನದ ವಿಷಯದಲ್ಲಿ ಇಸ್ಲಾಂ ಸ್ತ್ರೀ-ಪುರುಷರನ್ನು ಸಮಾನವಾಗಿ ವೀಕ್ಷಿಸುತ್ತದೆ. ........................................................ 45

19. ಇಸ್ಲಾಮ್ ಧರ್ಮವು ಮಹಿಳೆಯನ್ನು ಗೌರವಿಸುತ್ತದೆ. ಮಹಿಳೆಯರನ್ನು ಪುರುಷರ ಸಮಾನಾರ್ಧವೆಂದು ಪರಿಗಣಿಸುತ್ತದೆ. ಪುರುಷನು ಸಾಮರ್ಥ್ಯವುಳ್ಳವನಾಗಿದ್ದರೆ ಖರ್ಚು ಮಾಡುವುದನ್ನು ಅವನಿಗೆ ಕಡ್ಡಾಯಗೊಳಿಸುತ್ತದೆ. ಮಗಳ ಖರ್ಚು-ವೆಚ್ಚಗಳನ್ನು ತಂದೆ ಭರಿಸುವುದು, ತಾಯಿಯ ಖರ್ಚು-ವೆಚ್ಚಗಳನ್ನು ಮಗನು, ಅವನು ಪ್ರೌಢನಾಗಿದ್ದರೆ, ಭರಿಸುವುದು ಮತ್ತು ಹೆಂಡತಿಯ ಖರ್ಚು-ವೆಚ್ಚಗಳನ್ನು ಗಂಡ ಭರಿಸುವುದು ಕಡ್ಡಾಯವಾಗಿದೆ. ........................................................................................... 47

20. ಮರಣ ಎಂದರೆ ಶಾಶ್ವತ ವಿನಾಶವಲ್ಲ. ಬದಲಾಗಿ ಅದು ಕರ್ಮಭೂಮಿಯಿಂದ ಪ್ರತಿಫಲದ ಭೂಮಿಗೆ ಸಾಗುವುದಾಗಿದೆ. ಮರಣವು ದೇಹ ಮತ್ತು ಆತ್ಮವನ್ನು ಒಳಗೊಂಡಿದೆ. ಆತ್ಮದ ಮರಣ ಎಂದರೆ ಆತ್ಮವು ದೇಹದಿಂದ ಬೇರ್ಪಟ್ಟು ಪುನರುತ್ಥಾನದ ದಿನದಂದು ಪುನರ್ಜೀವಗೊಳ್ಳುವಾಗ ದೇಹಕ್ಕೆ ಮರಳುತ್ತದೆ. ಮರಣದ ನಂತರ ಆತ್ಮವು ಮತ್ತೊಂದು ದೇಹಕ್ಕೆ ಸಾಗುವುದಿಲ್ಲ. ಅಥವಾ ಇನ್ನೊಂದು ದೇಹದ ಆತ್ಮವಾಗಿ ಮಾರ್ಪಡುವುದಿಲ್ಲ. ......51

21. ಇಸ್ಲಾಂ ಧರ್ಮವು ಸತ್ಯವಿಶ್ವಾಸದ ಪ್ರಮುಖ ಮೂಲಭೂತ ತತ್ವಗಳ ಮೇಲೆ ವಿಶ್ವಾಸವಿಡಬೇಕೆಂದು ಆಹ್ವಾನಿಸುತ್ತದೆ. ಅವು ಅಲ್ಲಾಹನಲ್ಲಿ ವಿಶ್ವಾಸವಿಡುವುದು, ಅವನ ಮಲಕ್‌ಗಳಲ್ಲಿ (ದೇವಚರರು) ವಿಶ್ವಾಸವಿಡುವುದು, ವಿರೂಪಗೊಳ್ಳುವುದಕ್ಕೆ ಮುಂಚಿನ ಸ್ಥಿತಿಯಲ್ಲಿದ್ದ ತೌರಾತ್, ಇಂಜೀಲ್ ಮತ್ತು ಝಬೂರ್ ಮುಂತಾದ ದೈವಿಕ ಗ್ರಂಥಗಳಲ್ಲಿ

ವಿಶ್ವಾಸವಿಡುವುದು, ಕುರ್‌ಆನ್‌ನಲ್ಲಿ ವಿಶ್ವಾಸವಿಡುವುದು, ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು, ಅವರಲ್ಲಿ ಕೊನೆಯವರಾದ ಅಂದರೆ ಪ್ರವಾದಿಗಳಲ್ಲಿ ಮತ್ತು ಸಂದೇಶವಾಹಕರಲ್ಲಿ ಅಂತಿಮರಾದ ಪ್ರವಾದಿ ಮುಹಮ್ಮದ್‌ರಲ್ಲಿ ವಿಶ್ವಾಸವಿಡುವುದು ಮತ್ತು ಅಂತ್ಯದಿನದಲ್ಲಿ ವಿಶ್ವಾಸವಿಡುವುದು. ಇಹಲೋಕದಲ್ಲೇ ಎಲ್ಲವೂ ಕೊನೆಗೊಳ್ಳುವುದಾಗಿದ್ದರೆ ನಮ್ಮ ಜೀವನ ಮತ್ತು ಅಸ್ತಿತ್ವವೆಲ್ಲವೂ ಅಸಂಬದ್ಧವಾಗಿರುತ್ತಿತ್ತು ಎಂದು ನಮಗೆ ತಿಳಿದಿದೆ. ಅದೇ ರೀತಿ ವಿಧಿ ಮತ್ತು ನಿರ್ಣಯದಲ್ಲಿ ವಿಶ್ವಾಸವಿಡುವುದು. .... 53

22. ಸಂದೇಶವಾಹಕರು عليهم السلام ಅಲ್ಲಾಹನ ವತಿಯ ಸಂದೇಶಗಳನ್ನು ತಲುಪಿಸುವ ವಿಷಯದಲ್ಲಿ ಪ್ರಮಾದಮುಕ್ತರಾಗಿದ್ದಾರೆ. ಬುದ್ಧಿಗೆ ವಿರುದ್ಧವಾದ ಅಥವಾ ಆರೋಗ್ಯಪೂರ್ಣವಾದ ಗುಣಗಳನ್ನು ತಿರಸ್ಕರಿಸುವ ವಿಷಯಗಳಿಂದ ದೋಷಮುಕ್ತರಾಗಿದ್ದಾರೆ. ಅಲ್ಲಾಹನ ದಾಸರಿಗೆ ಅವನ ಆಜ್ಞೆಗಳನ್ನು ತಲುಪಿಸುವ ಹೊಣೆಯನ್ನು ಸಂದೇಶವಾಹಕರಿಗೆ ವಹಿಸಿಕೊಡಲಾಗಿದೆ. ಅಲ್ಲಾಹನ ರುಬೂಬಿಯ್ಯತ್ (ಪ್ರಭುತ್ವ) ಅಥವಾ ಉಲೂಹಿಯ್ಯತ್ (ಆರಾಧನೆ)ನ ವಿಶೇಷತೆಗಳಲ್ಲಿ ಸಂದೇಶವಾಹಕರಿಗೆ ಯಾವ ಪಾಲಿಲ್ಲ. ಬದಲಾಗಿ ಅವರು ಇತರೆಲ್ಲಾ ಮನುಷ್ಯರಂತೆ ಮನುಷ್ಯರಾಗಿದ್ದಾರೆ. ಅಲ್ಲಾಹನು ತನ್ನ ಸಂದೇಶಗಳನ್ನು ಅವರಿಗೆ ಅವತೀರ್ಣಗೊಳಿಸುತ್ತಾನೆ. ....................................................................... 68

23. ಇಸ್ಲಾಂ ಧರ್ಮವು ಆರಾಧನೆಯ ಮಹಾ ಮೂಲತತ್ವಗಳೊಂದಿಗೆ ಅಲ್ಲಾಹನನ್ನು ಮಾತ್ರ ಆರಾಧಿಸಲು ಕರೆ ನೀಡುತ್ತದೆ. ಅವು: 1. ನಮಾಝ್. ಅದು ಕಿಯಾಮ್ (ನಿಂತುಕೊಳ್ಳುವುದು), ರುಕೂ (ಬಾಗುವುದು), ಸುಜೂದ್(ಸಾಷ್ಟಾಂಗವೆರಗುವುದು), ಅಲ್ಲಾಹನ ಸ್ಮರಣೆ ಮತ್ತು ಪ್ರಶಂಸೆ ಹಾಗೂ ಪ್ರಾರ್ಥನೆಗಳನ್ನು ಒಳಗೊಂಡಿದೆ. ಒಬ್ಬ ವ್ಯಕ್ತಿ ದಿನಕ್ಕೆ ಐದು ಬಾರಿ ಅದನ್ನು ನಿರ್ವಹಿಸುತ್ತಾನೆ. ಅದರಲ್ಲಿ ಎಲ್ಲಾ ತರಹದ ಭೇದ-ಭಾವಗಳು ನಿವಾರಣೆಯಾಗುತ್ತವೆ. ಶ್ರೀಮಂತರು, ಬಡವರು, ಮುಖಂಡರು, ಅನುಯಾಯಿಗಳು ಎಲ್ಲರೂ ನಮಾಜಿನಲ್ಲಿ ಒಂದೇ ಸಾಲಿನಲ್ಲಿ ನಿಲ್ಲುತ್ತಾರೆ. 2. ಝಕಾತ್. ಅದು ಸಂಪತ್ತಿನ ಒಂದು ಸಣ್ಣ ಮೊತ್ತವಾಗಿದ್ದು, ಕೆಲವು ಷರತ್ತುಗಳು ಮತ್ತು ಅಲ್ಲಾಹನು ನಿರ್ಣಯಿಸಿದ ಕೆಲವು ನಿರ್ಣಯಗಳಿಗೆ ಅನುಗುಣವಾಗಿ, ಶ್ರೀಮಂತರ ಸಂಪತ್ತಿನಲ್ಲಿ ಕಡ್ಡಾಯಗೊಳಿಸಲಾಗಿದೆ. ಅದನ್ನು ಬಡವರು ಮುಂತಾದವರಿಗೆ ಹಂಚಲಾಗುತ್ತದೆ. ಅದನ್ನು ವರ್ಷಕ್ಕೊಮ್ಮೆ ನೀಡಬೇಕಾಗಿದೆ. 3. ಉಪವಾಸ. ಅದು ರಮದಾನ್ ತಿಂಗಳಿನ ಹಗಲಿನಲ್ಲಿ ಉಪವಾಸವನ್ನು ಅಸಿಂಧುಗೊಳಿಸುವ ಕಾರ್ಯಗಳಿಂದ ತನ್ನನ್ನು

ತಡೆದುಕೊಳ್ಳುವುದಾಗಿದೆ. ಅದು ಮನಸ್ಸಿನಲ್ಲಿ ಇಚ್ಛಾಶಕ್ತಿ ಮತ್ತು ಸಹನೆಯನ್ನು ಬೆಳೆಸುತ್ತದೆ. 4. ಹಜ್ಜ್ : ಅದು ಸಾಮರ್ಥ್ಯವಿದ್ದವನಿಗೆ ಜೀವಮಾನದಲ್ಲಿ ಒಂದು ಬಾರಿ ಮಕ್ಕಾ ಮುಕರ್ರಮದಲ್ಲಿರುವ ಅಲ್ಲಾಹನ ಭವನದ ಕಡೆ ಯಾತ್ರೆ ಕೈಗೊಳ್ಳುವುದಾಗಿದೆ. ಈ ಹಜ್ಜ್ ಯಾತ್ರೆಯಲ್ಲಿ ಸೃಷ್ಟಿಕರ್ತನ ಕಡೆಗೆ ತಿರುಗುವಲ್ಲಿ ಎಲ್ಲರೂ ಸಮಾನರಾಗಿದ್ದಾರೆ. ಅದರಲ್ಲಿ ಎಲ್ಲಾ ರೀತಿಯ ಬೇಧ-ಭಾವಗಳು ಮತ್ತು ಸಂಬಂಧಗಳು ನಿವಾರಣೆಯಾಗುತ್ತವೆ. .................. 76

24. ಇಸ್ಲಾಮಿನ ಆರಾಧನಾ ಕ್ರಮಗಳ ಒಂದು ದೊಡ್ಡ ವಿಶೇಷತೆಯೇನೆಂದರೆ ಅವುಗಳ ವಿಧಾನ, ಸಮಯ ಮತ್ತು ಷರತ್ತುಗಳನ್ನು ಸರ್ವಶಕ್ತನಾದ ಅಲ್ಲಾಹನೇ ನಿಯಮಿಸಿದ್ದಾನೆ ಮತ್ತು ಅವುಗಳನ್ನು ಪ್ರವಾದಿ صلي الله عليه وسلم ರವರು ತಲುಪಿಸಿಕೊಟ್ಟಿದ್ದಾರೆ. ಇಂದಿನವರೆಗೂ ಮಾನವರು ಅದರಲ್ಲಿ ಯಾವುದೇ ಸೇರ್ಪಡೆ ಅಥವಾ ಕಡಿತ ಮಾಡುವ ಮೂಲಕ ಹಸ್ತಕ್ಷೇಪ ಮಾಡಿಲ್ಲ. ಎಲ್ಲಾ ಪ್ರವಾದಿಗಳು عليهم السلام ಈ ಮಹಾ ಆರಾಧನೆಗಳ ಕಡೆಗೆ ಆಹ್ವಾನಿಸಿದ್ದಾರೆ. ................................................................................................. 82

25. ಅಬ್ದುಲ್ಲಾರ ಮಗ ಮುಹಮ್ಮದ್ ಇಸ್ಲಾಮಿನ ಸಂದೇಶವಾಹಕರು. ಇವರು ಇಸ್ಮಾಈಲ್ ಬಿನ್ ಇಬ್ರಾಹೀಮರ ಸಂತಾನದಲ್ಲಿ ಸೇರಿದವರು. ಇವರು ಕ್ರಿ.ಶ. 571 ರಲ್ಲಿ ಮಕ್ಕಾ ನಗರದಲ್ಲಿ ಜನಿಸಿದರು ಮತ್ತು ಅಲ್ಲೇ ಪ್ರವಾದಿಯಾಗಿ ನಿಯೋಗಿಸಲ್ಪಟ್ಟರು. ನಂತರ ಅವರು ಮದೀನಾಕ್ಕೆ ವಲಸೆ ಹೋದರು. ವಿಗ್ರಹಾರಾಧನೆಯಲ್ಲಿ ಅವರು ತಮ್ಮ ಜನತೆಯೊಡನೆ ಸಹಕರಿಸಲಿಲ್ಲ. ಆದರೆ ಅವರು ದೊಡ್ಡ ದೊಡ್ಡ ಕಾರ್ಯಗಳಲ್ಲಿ ತಮ್ಮ ಜನತೆಯೊಂದಿಗೆ ಸಹಕರಿಸುತ್ತಿದ್ದರು. ಅವರು ಪ್ರವಾದಿಯಾಗುವ ಮುಂಚಿನಿಂದಲೇ ಅತ್ಯುತ್ತಮ ಸ್ವಭಾವದವರಾಗಿದ್ದರು. ಅವರ ಜನತೆ ಅವರನ್ನು "ಅಲ್-ಅಮೀನ್" (ಪ್ರಾಮಾಣಿಕ) ಎಂದು ಕರೆಯುತ್ತಿದ್ದರು. ಅವರಿಗೆ 40 ವರ್ಷ ಪ್ರಾಯವಾದಾಗ, ಅಲ್ಲಾಹನು ಅವರನ್ನು ಪ್ರವಾದಿಯನ್ನಾಗಿ ನಿಯೋಗಿಸಿದನು ಮತ್ತು ದೊಡ್ಡ ದೊಡ್ಡ ದೃಷ್ಟಾಂತಗಳೊಂದಿಗೆ [ಪವಾಡಗಳು] ಅವರನ್ನು ಬೆಂಬಲಿಸಿದನು. ಅವುಗಳಲ್ಲಿ ಅತಿದೊಡ್ಡದು ಪವಿತ್ರ ಕುರ್‌ಆನ್. ಅದು ಪ್ರವಾದಿಗಳಿಗೆ ನೀಡಲ್ಪಟ್ಟ ದೃಷ್ಟಾಂತಗಳಲ್ಲೇ ಅತಿದೊಡ್ಡದಾಗಿದ್ದು, ಪ್ರವಾದಿಗಳಿಗೆ ನೀಡಲಾದ ದೃಷ್ಟಾಂತಗಳಲ್ಲಿ ಇಂದಿನ ತನಕ ಬಾಕಿಯುಳಿದ ದೃಷ್ಟಾಂತವಾಗಿದೆ. ಅಲ್ಲಾಹನು ಪ್ರವಾದಿಯವರಿಗೆ ಧರ್ಮವನ್ನು ಪೂರ್ತೀಕರಿಸಿ ಕೊಟ್ಟು, ಪ್ರವಾದಿ صلي الله عليه وسلم ರವರು ಸಂಪೂರ್ಣ ಜವಾಬ್ದಾರಿಯೊಂದಿಗೆ ಆ ಧರ್ಮವನ್ನು (ಜನರಿಗೆ) ತಲುಪಿಸಿದ ನಂತರ ತಮ್ಮ 63ನೇ ವಯಸ್ಸಿನಲ್ಲಿ ನಿಧನರಾದರು.

ಅವರನ್ನು ಮದೀನಾ ನಗರದಲ್ಲಿ ದಫನ ಮಾಡಲಾಯಿತು. ಪ್ರವಾದಿ ಮುಹಮ್ಮದ್ صلي الله عليه وسلم ರವರು ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ಕಟ್ಟಕಡೆಯವರಾಗಿದ್ದಾರೆ. ಅಲ್ಲಾಹನು ಅವರನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದನು. ಜನರನ್ನು ಬಹುದೇವರಾಧನೆ, ಸತ್ಯನಿಷೇಧ ಮತ್ತು ಅಜ್ಞಾನಗಳೆಂಬ ಕಾರ್ಗತ್ತಲೆಗಳಿಂದ ಏಕದೇವತ್ವ ಮತ್ತು ಸತ್ಯವಿಶ್ವಾಸವೆಂಬ ಬೆಳಕಿನ ಕಡೆಗೆ ಹೊರತರುವುದಕ್ಕಾಗಿ (ಅವರನ್ನು ಕಳುಹಿಸಲಾಗಿದೆ). ಅಲ್ಲಾಹನು ಅವರನ್ನು ಅವನ ಆಜ್ಞೆಯಿಂದ ಅವನೆಡೆಗೆ ಆಹ್ವಾನಿಸುವವರನ್ನಾಗಿ ಮಾಡಿ ಕಳುಹಿಸಿದ್ದಾನೆಂದು ಸಾಕ್ಷಿ ನೀಡಿದ್ದಾನೆ. ...................... 85

26. ಪ್ರವಾದಿ ಮುಹಮ್ಮದ್ صلي الله عليه وسلم ರವರು ತಂದ ಇಸ್ಲಾಮಿನ ಷರೀಅತ್ ದೈವಿಕ ಸಂದೇಶಗಳ ಪೈಕಿ ಮತ್ತು ದೈವಿಕ ಷರೀಯತ್ ಗಳ ಪೈಕಿ ಕಟ್ಟಕಡೆಯದ್ದಾಗಿದೆ. ಅದು ಪರಿಪೂರ್ಣ ಷರೀಅತ್ ಆಗಿದೆ. ಜನರ ಧಾರ್ಮಿಕ ಮತ್ತು ಐಹಿಕ ಒಳಿತು ಅದರಲ್ಲಿ ಅಡಗಿದೆ. ಅದು ಜನರ ಧರ್ಮ, ಅವರ ರಕ್ತ, ಅವರ ಸಂಪತ್ತು, ಅವರ ಬುದ್ಧಿ ಮತ್ತು ಅವರ ಸಂತತಿಗಳನ್ನು ಮೊದಲನೇ ಸ್ಥಾನದಲ್ಲಿಟ್ಟು ಸಂರಕ್ಷಿಸುತ್ತದೆ. ಹಿಂದಿನ ಷರೀಅತ್‌ಗಳು ಒಂದು ಇನ್ನೊಂದನ್ನು ರದ್ದುಗೊಳಿಸಿದಂತೆ, ಅದು (ಇಸ್ಲಾಂ) ಹಿಂದಿನ ಎಲ್ಲಾ ಷರೀಅತ್‌ಗಳನ್ನು ರದ್ದುಗೊಳಿಸುತ್ತದೆ. 91

27. ಸರ್ವಶಕ್ತನಾದ ಅಲ್ಲಾಹನು ಪ್ರವಾದಿ ಮುಹಮ್ಮದ್ صلي الله عليه وسلم ರವರು ತಂದ ಇಸ್ಲಾಮ್ ಧರ್ಮವನ್ನು ಹೊರತುಪಡಿಸಿ ಬೇರೆ ಯಾವ ಧರ್ಮವನ್ನೂ ಸ್ವೀಕರಿಸುವುದಿಲ್ಲ. ಯಾರಾದರೂ ಇಸ್ಲಾಮ್ ಧರ್ಮವನ್ನು ಹೊರತುಪಡಿಸಿ ಬೇರೆ ಯಾವುದಾದರೂ ಧರ್ಮವನ್ನು ಸ್ವೀಕರಿಸಿದರೆ ಅವನಿಂದ ಅದನ್ನು ಎಂದಿಗೂ ಸ್ವೀಕರಿಸಲಾಗುವುದಿಲ್ಲ......................... 93

28. ಪವಿತ್ರ ಕುರ್‌ಆನ್ ಅಲ್ಲಾಹನು ಪ್ರವಾದಿ ಮುಹಮ್ಮದ್ صلي الله عليه وسلم ರಿಗೆ ಅವತೀರ್ಣಗೊಳಿಸಿದ ಗ್ರಂಥವಾಗಿದೆ. ಅದು ಸರ್ವ ಲೋಕಗಳ ಪರಿಪಾಲಕ ಪ್ರಭುವಿನ ವಚನವಾಗಿದೆ. ಅದರಂತಿರುವ ಒಂದು ಗ್ರಂಥವನ್ನು, ಅಥವಾ ಅದರಂತಿರುವ ಒಂದು ಅಧ್ಯಾಯವನ್ನು ರಚಿಸಿ ತರಲು ಅಲ್ಲಾಹನು ಮನುಷ್ಯರು ಮತ್ತು ಜಿನ್ನ್‌ಗಳಿಗೆ ಸವಾಲು ಹಾಕಿದ್ದಾನೆ. ಈ ಸವಾಲು ಇಂದು ಕೂಡ ಅಸ್ತಿತ್ವದಲ್ಲಿದೆ. ಮಿಲಿಯನ್‌ಗಟ್ಟಲೆ ಜನರನ್ನು ದಿಗ್ಭ್ರಮೆಗೊಳಿಸುವ ಪ್ರಮುಖ ಪ್ರಶ್ನೆಗಳಿಗೆ ಪವಿತ್ರ ಕುರ್‌ಆನ್ ಉತ್ತರಿಸುತ್ತದೆ. ಪವಿತ್ರ ಕುರ್‌ಆನನ್ನು ಅದು ಅವತೀರ್ಣಗೊಂಡ ಅರಬೀ ಭಾಷೆಯಲ್ಲಿ ಇಂದಿನವರೆಗೂ ಸಂರಕ್ಷಿಸಲಾಗಿದೆ. ಅದರಿಂದ ಒಂದು ಅಕ್ಷರವೂ ಕಳೆದುಹೋಗಿಲ್ಲ. ಅದನ್ನು

ಮುದ್ರಿಸಲಾಗುತ್ತದೆ ಹಾಗೂ ಪ್ರಕಟಿಸಲಾಗುತ್ತದೆ. ಅದೊಂದು ಅದ್ಭುತ ಪವಾಡವಾಗಿದ್ದು, ಓದಲಿಕ್ಕೆ ಅಥವಾ ಅದರ ಅರ್ಥಾನುವಾದವನ್ನು ಓದಲಿಕ್ಕೆ ಯೋಗ್ಯವಾದ ಗ್ರಂಥವಾಗಿದೆ. ಇದೇ ರೀತಿ ಪ್ರವಾದಿ ಮುಹಮ್ಮದ್ صلي الله عليه وسلم ರವರ ವಚನ ಮತ್ತು ಅವರ ಬೋಧನೆ ಹಾಗೂ ಚರಿತ್ರೆ ವಿಶ್ವಾಸಾರ್ಹ ವರದಿಗಾರರ ಸರಪಳಿಯ ಪ್ರಕಾರ ಸಂರಕ್ಷಿಸಲಾಗಿದೆ ಮತ್ತು ವರ್ಗಾಯಿಸಲಾಗಿದೆ. ಅದು ಪ್ರವಾದಿ ಮುಹಮ್ಮದ್ صلي الله عليه وسلم ರವರು ಮಾತನಾಡಿದ ಅರಬೀ ಭಾಷೆಯಲ್ಲೇ ಮುದ್ರಿಸಲಾಗಿವೆ. ಅದನ್ನು ಹಲವಾರು ಭಾಷೆಗಳಲ್ಲಿ ಅನುವಾದಿಸಲಾಗಿದೆ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿರವರ ವಚನಗಳು ಇಸ್ಲಾಮಿನ ನಿಯಮಗಳ ಮತ್ತು ಅದರ ಧರ್ಮಶಾಸ್ತ್ರದ ಏಕೈಕ ಮೂಲವಾಗಿದೆ. ಇಸ್ಲಾಮ್ ಧರ್ಮವು ಅದರೊಂದಿಗೆ ಸಂಬಂಧವಿರುವ ಜನರ ನಡವಳಿಕೆಯಿಂದ ಸ್ವೀಕರಿಸುವಂತದ್ದಲ್ಲ. ಬದಲಿಗೆ ಅದು ಅಲ್ಲಾಹನ ದಿವ್ಯಸಂದೇಶದಿಂದ – ಪವಿತ್ರ ಕುರ್‌ಆನ್ ಮತ್ತು ಪ್ರವಾದಿರವರ ಸುನ್ನತ್ತಿನಿಂದ – ಸ್ವೀಕರಿಸುವಂತದ್ದಾಗಿದೆ. ........ 96

29. ಇಸ್ಲಾಮ್ ಧರ್ಮವು ಮಾತಾಪಿತರೊಂದಿಗೆ ಸದ್ವರ್ತನೆಯಿಂದ ವರ್ತಿಸಬೇಕೆಂದು ಆಜ್ಞೆ ನೀಡುತ್ತದೆ. ಅವರು ಮುಸ್ಲಿಮೇತರರಾದರೂ ಸರಿ. ಅದೇ ರೀತಿ ಮಕ್ಕಳೊಂದಿಗೂ ಉತ್ತಮ ರೀತಿಯಿಂದ ವರ್ತಿಸಬೇಕೆಂದು ಆದೇಶಿಸುತ್ತದೆ. ........ 102

30. ಇಸ್ಲಾಮ್ ಧರ್ಮವು ಶತ್ರುಗಳೊಂದಿಗೂ ಮಾತು ಮತ್ತು ವ್ಯವಹಾರದಲ್ಲಿ ನ್ಯಾಯ ಪಾಲಿಸಬೇಕೆಂದು ಆದೇಶಿಸುತ್ತದೆ. ........ 107

31. ಇಸ್ಲಾಮ್ ಧರ್ಮವು ಎಲ್ಲಾ ಸೃಷ್ಟಿಗಳೊಂದಿಗೆ ಸದ್ವರ್ತನೆಯಿಂದ ವರ್ತಿಸಬೇಕೆಂದು ಆದೇಶಿಸುತ್ತದೆ. ಅತ್ಯುತ್ತಮ ಸ್ವಭಾವಗಳನ್ನು ಅಳವಡಿಸಿಕೊಳ್ಳಬೇಕೆಂದು ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡಬೇಕೆಂದು ಆಹ್ವಾನಿಸುತ್ತದೆ. ........ 110

32. ಇಸ್ಲಾಮ್ ಧರ್ಮವು ಸತ್ಯ, ಪ್ರಾಮಾಣಿಕತೆ, ಗುಣಶೀಲತೆ, ಸಭ್ಯತೆ, ಧೈರ್ಯ, ಔದಾರ್ಯ, ಉದಾರತನ, ನಿರ್ಗತಿಕರಿಗೆ ಸಹಾಯ ಮಾಡುವುದು, ದುಃಖಿತರಿಗೆ ನೆರವು ನೀಡುವುದು, ಹಸಿದವರಿಗೆ ಆಹಾರ ನೀಡುವುದು, ನೆರೆಹೊರೆಯವರೊಂದಿಗೆ ಸದ್ವರ್ತನೆ ತೋರುವುದು, ಸಂಬಂಧಗಳನ್ನು ಜೋಡಿಸುವುದು, ಪ್ರಾಣಿಗಳ ಮೇಲೆ ದಯೆ ತೋರುವುದು ಮುಂತಾದ ಸ್ತುತ್ಯರ್ಹ ಗುಣಸ್ವಭಾವಗಳನ್ನು ಅಳವಡಿಸಿಕೊಳ್ಳಲು ಆದೇಶಿಸುತ್ತದೆ. ........ 113

33. ಇಸ್ಲಾಮ್ ಧರ್ಮವು ಆಹಾರ ಮತ್ತು ಪಾನೀಯಗಳಲ್ಲಿ ಉತ್ತಮ ವಸ್ತುಗಳನ್ನು ಧರ್ಮಸಮ್ಮತಗೊಳಿಸಿದೆ. ಹೃದಯ, ದೇಹ ಮತ್ತು ಮನೆಯನ್ನು ಸ್ವಚ್ಛಗೊಳಿಸಬೇಕೆಂದು ಆದೇಶಿಸುತ್ತದೆ. ಈ ಕಾರಣದಿಂದಲೇ ಇಸ್ಲಾಮ್ ಧರ್ಮವು ವಿವಾಹವನ್ನು ಧರ್ಮಸಮ್ಮತಗೊಳಿಸಿದೆ. ಪ್ರವಾದಿಗಳು عليهم السلام ಇದನ್ನು ಆದೇಶಿಸಿದ್ದಾರೆ. ಅವರು ಪ್ರತಿಯೊಂದು ಉತ್ತಮ ಕಾರ್ಯವನ್ನು ಆದೇಶಿಸುತ್ತಿದ್ದರು. ....................................119

34. ಅಲ್ಲಾಹನೊಂದಿಗೆ ಸಹಭಾಗಿತ್ವ (ಶಿರ್ಕ್), ಸತ್ಯ ನಿಷೇಧ (ಕುಫ್ರ್), ವಿಗ್ರಹಾರಾಧನೆ, ಅರಿವಿಲ್ಲದೆ ಅಲ್ಲಾಹನ ಬಗ್ಗೆ ಹೇಳುವುದು, ಮಕ್ಕಳನ್ನು ಕೊಲ್ಲುವುದು, ಪವಿತ್ರ ಜೀವವನ್ನು ಕೊಲ್ಲುವುದು, ಭೂಮಿಯಲ್ಲಿ ಕ್ಷೋಭೆಯನ್ನುಂಟುಮಾಡುವುದು, ಮಾಟ ಮಂತ್ರ, ಪ್ರತ್ಯಕ್ಷವಾಗಿರುವ ಮತ್ತು ಪರೋಕ್ಷವಾಗಿರುವ ನೀಚಕೃತ್ಯಗಳು, ವ್ಯಭಿಚಾರ, ಸಲಿಂಗರತಿ ಮುಂತಾದ ನಿಷಿದ್ಧಗಳ ಮೂಲಗಳನ್ನೇ ಇಸ್ಲಾಂ ಧರ್ಮವು ನಿಷೇಧಿಸಿದೆ. ಅದೇ ರೀತಿ ಬಡ್ಡಿ ತಿನ್ನುವುದನ್ನು, ಸತ್ತ ಪ್ರಾಣಿಗಳನ್ನು ತಿನ್ನುವುದನ್ನು, ವಿಗ್ರಹಗಳಿಗೆ ಮತ್ತು ಮೂರ್ತಿಗಳಿಗೆ ಬಲಿಯರ್ಪಿಸಲಾಗಿರುವುದನ್ನು ತಿನ್ನುವುದನ್ನು ಇಸ್ಲಾಂ ಧರ್ಮವು ನಿಷೇಧಿಸಿದೆ. ಹಂದಿಮಾಂಸ, ಮತ್ತು ಎಲ್ಲಾ ರೀತಿಯ ಹೊಲಸುಗಳನ್ನು ನಿಷೇಧಿಸಿದೆ. ಅನಾಥರ ಸಂಪತ್ತನ್ನು ಕಬಳಿಸುವುದನ್ನು, ಅಳತೆ ಮತ್ತು ತೂಕದಲ್ಲಿ ಮೋಸ ಮಾಡುವುದನ್ನು, ಮತ್ತು ಸಂಬಂಧಗಳನ್ನು ಕಡಿಯುವುದನ್ನು ಇಸ್ಲಾಮ್ ಧರ್ಮವು ನಿಷೇಧಿಸಿದೆ. ಇವೆಲ್ಲವೂ ನಿಷಿದ್ಧವಾಗಿವೆ ಎಂಬ ವಿಷಯದಲ್ಲಿ ಎಲ್ಲಾ ಪ್ರವಾದಿಗಳು عليهم السلام ಏಕಾಭಿಪ್ರಾಯವನ್ನು ಹೊಂದಿದ್ದಾರೆ. .......122

35.ಇಸ್ಲಾಮ್ ಧರ್ಮವು ಸುಳ್ಳು, ವಂಚನೆ, ದ್ರೋಹ, ಮೋಸ, ಕಾಪಟ್ಯ, ಅಸೂಯೆ, ಕುತಂತ್ರ, ಕಳ್ಳತನ, ಅತಿಕ್ರಮ ಮತ್ತು ಅನ್ಯಾಯದಂತಹ ಕೆಟ್ಟ ಸ್ವಭಾವಗಳನ್ನು ವಿರೋಧಿಸುತ್ತದೆ ಮತ್ತು ಎಲ್ಲಾ ರೀತಿಯ ಕೆಟ್ಟ ಗುಣಗಳನ್ನು ನಿಷೇಧಿಸುತ್ತದೆ............................................128

36. ಬಡ್ಡಿ ಅಥವಾ ಯಾರಿಗಾದರೂ ಹಾನಿ, ವಂಚನೆ, ಅನ್ಯಾಯ ಅಥವಾ ಮೋಸವನ್ನು ಒಳಗೊಂಡಿರುವ, ಅಥವಾ ವಿಪತ್ತುಗಳಿಗೆ ಕಾರಣವಾಗುವ ಮತ್ತು ಸಮಾಜಕ್ಕೆ, ಸಮುದಾಯಕ್ಕೆ ಹಾಗೂ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಹಾನಿ ಉಂಟುಮಾಡುವ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ಇಸ್ಲಾಮ್ ವಿರೋಧಿಸುತ್ತದೆ..................................................136

37. ಇಸ್ಲಾಮ್ ಧರ್ಮವು ಬುದ್ಧಿಯನ್ನು ಸಂರಕ್ಷಿಸುತ್ತದೆ. ಅದನ್ನು ಹಾನಿಗೊಳಿಸುವ ಮದ್ಯ ಮುಂತಾದ ಎಲ್ಲವನ್ನೂ ನಿಷೇಧಿಸುತ್ತದೆ. ಅದು ಬುದ್ಧಿಯ ಮಹಿಮೆಯನ್ನು ಉತ್ತುಂಗಕ್ಕೇರಿಸಿ

ಅದನ್ನು ಶರಿಯತ್ತಿನ ಎಲ್ಲಾ ಹೊಣೆಗಾರಿಕೆಯ ಆಧಾರವನ್ನಾಗಿ ಮಾಡಿದೆ. ಅದನ್ನು ಮೂಢನಂಬಿಕೆ ಮತ್ತು ವಿಗ್ರಹಾರಾಧನೆಯ ಸಂಕೋಲೆಗಳಿಂದ ಮುಕ್ತಗೊಳಿಸಿದೆ. ಇಸ್ಲಾಮ್ ಧರ್ಮದಲ್ಲಿ ಒಂದು ವರ್ಗಕ್ಕೆ ಮಾತ್ರ ಸೀಮಿತವಾದ ಯಾವುದೇ ನಿಯಮಗಳು ಮತ್ತು ರಹಸ್ಯಗಳಿಲ್ಲ. ಇಸ್ಲಾಂ ಧರ್ಮದ ಎಲ್ಲಾ ಆದೇಶಗಳು ಮತ್ತು ಕಾನೂನುಗಳು ಬುದ್ಧಿಗೆ ನಿಲುಕುವಂತದ್ದಾಗಿವೆ. ಅವು ನ್ಯಾಯ ಹಾಗೂ ಯುಕ್ತಿಯ ಬೇಡಿಕೆಗಳಿಗೆ ಅನುಗುಣವಾಗಿವೆ. ..........................................................................................140

38. ಮಿಥ್ಯ ಧರ್ಮಗಳ ಅನುಯಾಯಿಗಳು ತಮ್ಮ ಧರ್ಮಗಳಲ್ಲಿ ಕಂಡುಬರುವ ವಿರೋಧಾಭಾಸಗಳು ಮತ್ತು ಬುದ್ಧಿಯು ತಿರಸ್ಕರಿಸುವ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡುವುದಿಲ್ಲ. ಏಕೆಂದರೆ ಧರ್ಮದ ಮುಖಂಡರು ಧರ್ಮವು ಬುದ್ಧಿ ಮತ್ತು ವಿವೇಚನವನ್ನು ಮೀರಿದೆ ಮತ್ತು ಧರ್ಮವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಬುದ್ಧಿಗೆ ಯಾವುದೇ ಸ್ಥಾನವಿಲ್ಲ ಎನ್ನುತ್ತಾರೆ. ಆದುದರಿಂದ ಇಸ್ಲಾಮ್ ಬುದ್ಧಿಗೆ ಅದರ ಮಾರ್ಗವನ್ನು ಬೆಳಗಿಸುವ ಪ್ರಕಾಶದ ರೂಪದಲ್ಲಿ ಧರ್ಮವನ್ನು ಕಾಣುತ್ತದೆ. ಮಿಥ್ಯ ಧರ್ಮಗಳ ಮುಖಂಡರು ಮನುಷ್ಯನು ತನ್ನ ಬುದ್ಧಿಯನ್ನು ಉಪಯೋಗಿಸುವುದನ್ನು ತೊರೆದು ಕೇವಲ ಅವರನ್ನು ಅನುಸರಿಸಬೇಕೆಂದು ಬಯಸುತ್ತಾರೆ. ಆದರೆ ಇಸ್ಲಾಮ್ ಮನುಷ್ಯನು ತನ್ನ ಬುದ್ಧಿಯನ್ನು ಜಾಗೃತಗೊಳಿಸಿ ವಿಷಯಗಳ ವಾಸ್ತವಾಂಶಗಳನ್ನು ಅದರ ನಿಜವಾದ ರೂಪದಲ್ಲಿ ನೋಡಬೇಕೆಂದು ಬಯಸುತ್ತದೆ. ..........................................................................................144

39. ಇಸ್ಲಾಮ್ ಧರ್ಮವು ಸರಿಯಾದ ಜ್ಞಾನವನ್ನು ಗೌರವಿಸುತ್ತದೆ ಮತ್ತು ದೆಹೇಚ್ಛೆಗಳಿಲ್ಲದ ವೈಜ್ಞಾನಿಕ ಸಂಶೋಧನೆಯನ್ನು ಪ್ರೇರೇಪಿಸುತ್ತದೆ. ನಮ್ಮ ದೇಹದ ಬಗ್ಗೆ ಮತ್ತು ನಮ್ಮ ಸುತ್ತಮುತ್ತಲ ಜಗತ್ತಿನ ಬಗ್ಗೆ ಆಲೋಚಿಸಲು ಆಹ್ವಾನಿಸುತ್ತದೆ. ಸರಿಯಾದ ವೈಜ್ಞಾನಿಕ ಸಂಶೋಧನೆಯ ಫಲಿತಾಂಶಗಳು ಇಸ್ಲಾಮ್ ಧರ್ಮದೊಂದಿಗೆ ಸಂಘರ್ಷಿಸುವುದಿಲ್ಲ.......146

40. ಅಲ್ಲಾಹನ ಮೇಲೆ ವಿಶ್ವಾಸವಿಟ್ಟು ಅವನಿಗೆ ವಿಧೇಯನಾಗಿ ಜೀವಿಸಿದ ಮತ್ತು ಅವನ ಸಂದೇಶವಾಹಕರನ್ನು ಧೃಡೀಕರಿಸಿದ ವ್ಯಕ್ತಿಯ ಸತ್ಕರ್ಮಗಳನ್ನು ಮಾತ್ರ ಅಲ್ಲಾಹನು ಸ್ವೀಕರಿಸುತ್ತಾನೆ ಮತ್ತು ಪರಲೋಕದಲ್ಲಿ ಅದರ ಪ್ರತಿಫಲವನ್ನು ನೀಡುತ್ತಾನೆ. ಅಲ್ಲಾಹನು ಧರ್ಮದಲ್ಲಿ ಸೇರಿಸಿದ ಆರಾಧನೆಗಳನ್ನು ಮಾತ್ರ ಅವನು ಸ್ವೀಕರಿಸುತ್ತಾನೆ. ಒಬ್ಬ ವ್ಯಕ್ತಿ ಅಲ್ಲಾಹನನ್ನು ನಿಷೇಧಿಸುತ್ತಾ ಅವನಿಂದ ಪ್ರತಿಫಲವನ್ನು ನಿರೀಕ್ಷಿಸಲು ಹೇಗೆ ಸಾಧ್ಯ? ಒಬ್ಬ ವ್ಯಕ್ತಿ

ಎಲ್ಲಾ ಪ್ರವಾದಿಗಳು ಮತ್ತು ಪ್ರವಾದಿ ಮುಹಮ್ಮದ್ صلي الله عليه وسلم ರವರ ಪ್ರವಾದಿತ್ವದ ಮೇಲೆ ಸತ್ಯವಿಶ್ವಾಸವಿರಿಸಿದಾಗ ಮಾತ್ರ ಅಲ್ಲಾಹನು ಅವನ ವಿಶ್ವಾಸವನ್ನು ಸ್ವೀಕರಿಸುತ್ತಾನೆ. ............ 150

41. ಸತ್ಯಧರ್ಮವು ಮನುಷ್ಯನಲ್ಲಿ ನೆಲೆನಿಂತು ಅವನು ಸರ್ವ ಲೋಕಗಳ ಸೃಷ್ಟಿಕರ್ತನಾದ ಅಲ್ಲಾಹನ ನೈಜ ದಾಸನಾಗುವುದು ಮತ್ತು ಅವನನ್ನು ಮನುಷ್ಯರ, ಭೌತಿಕತೆಯ ಹಾಗೂ ಅಂಧವಿಶ್ವಾಸಗಳ ದಾಸ್ಯದಿಂದ ಸ್ವತಂತ್ರಗೊಳಿಸುವುದು ಎಲ್ಲಾ ದೈವಿಕ ಸಂದೇಶಗಳ ಗುರಿಯಾಗಿದೆ. ಇಸ್ಲಾಮ್ ಧರ್ಮದಲ್ಲಿ - ನೀವು ಈಗಾಗಲೇ ನೋಡಿದಂತೆ - ವ್ಯಕ್ತಿಗಳನ್ನು ಪವಿತ್ರಗೊಳಿಸುವುದಾಗಲಿ, ಅವರನ್ನು ಅವರ ಸ್ಥಾನಮಾನಕ್ಕಿಂತ ಮೇಲಕ್ಕೇರಿಸುವುದಾಗಲಿ, ಅಥವಾ ಅವರನ್ನು ಪ್ರಭುಗಳು ಮತ್ತು ದೇವರುಗಳನ್ನಾಗಿ ಮಾಡುವುದಾಗಲಿ ಇಲ್ಲ......... 153

42. ಅಲ್ಲಾಹನು ಇಸ್ಲಾಮಿನಲ್ಲಿ ಪಶ್ಚಾತ್ತಾಪವನ್ನು ನಿರ್ದೇಶಿಸಿದ್ದಾನೆ. ಪಶ್ಚಾತ್ತಾಪವೆಂದರೆ: ಒಬ್ಬ ವ್ಯಕ್ತಿಯು ತನ್ನ ಪ್ರಭುವಿನೆಡೆಗೆ ಮರಳುವುದು ಮತ್ತು ಪಾಪವನ್ನು ತ್ಯಜಿಸುವುದಾಗಿದೆ. ಇಸ್ಲಾಮ್ ಸ್ವೀಕರಿಸುವುದರಿಂದ ಹಿಂದಿನ ಎಲ್ಲಾ ಪಾಪಗಳು ನಾಶವಾಗುತ್ತವೆ. ಪಶ್ಚಾತ್ತಾಪವು ಹಿಂದಿನ ಎಲ್ಲಾ ಪಾಪಗಳನ್ನು ತೊಳೆದುಬಿಡುತ್ತದೆ. ಆದ್ದರಿಂದ ಯಾವುದೇ ಮನುಷ್ಯನಿಗೆ ಇನ್ನೊಬ್ಬನ ಮುಂದೆ ತನ್ನ ಪಾಪಗಳನ್ನು ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲ. ................................ 156

43. ಇಸ್ಲಾಮಿನಲ್ಲಿ, ಮನುಷ್ಯ ಮತ್ತು ಅಲ್ಲಾಹನ ನಡುವೆ ನೇರ ಸಂಬಂಧವಿದೆ. ಆದುದರಿಂದ ನಿಮ್ಮ ಮತ್ತು ಅಲ್ಲಾಹನ ಮಧ್ಯೆ ಮಧ್ಯವರ್ತಿಯಾಗಿ ಯಾವುದೇ ವ್ಯಕ್ತಿಯ ಅಗತ್ಯವಿಲ್ಲ. ಮನುಷ್ಯರನ್ನು ದೇವರನ್ನಾಗಿ ಮಾಡಿಕೊಳ್ಳುವುದನ್ನು ಅಥವಾ ಅಲ್ಲಾಹನಿಗೆ ಅವನ ರುಬೂಬಿಯ್ಯತ್ತಿನಲ್ಲಿ (ಪ್ರಭುತ್ವದಲ್ಲಿ) ಅಥವಾ ಉಲೂಹಿಯ್ಯತ್ತಿನಲ್ಲಿ(ಆರಾಧನಾರ್ಹತೆಯಲ್ಲಿ) ಸಹಭಾಗಿಗಳನ್ನಾಗಿ ಮಾಡುವುದನ್ನು ಇಸ್ಲಾಂ ಕಟ್ಟುನಿಟ್ಟಾಗಿ ವಿರೋಧಿಸುತ್ತದೆ. ............ 159

44. ಈ ಪ್ರಬಂಧದ ಕೊನೆಯಲ್ಲಿ ನಾನು ಹೇಳುವುದೇನೆಂದರೆ: ಜನರು ಕಾಲ, ರಾಷ್ಟ್ರೀಯತೆ ಮತ್ತು ನಾಗರಿಕತೆಗಳಲ್ಲಿ ವಿಂಗಡಣೆಯಾಗಿದ್ದಾರೆ. ಮಾತ್ರವಲ್ಲ, ಇಡೀ ಮಾನವ ಸಮಾಜವು ಆಲೋಚನೆಗಳು ಮತ್ತು ಉದ್ದೇಶಗಳಲ್ಲಿ ವಿಭಿನ್ನವಾಗಿವೆ. ಪರಿಸರ ಮತ್ತು ಕೆಲಸ-ಕಾರ್ಯಗಳಲ್ಲಿ ಬೇರೆ ಬೇರೆಯಾಗಿವೆ. ಅವರೆಲ್ಲರಿಗೂ ಒಬ್ಬ ಮಾರ್ಗದರ್ಶಕನ, ಅವರನ್ನು ಒಟ್ಟುಗೂಡಿಸುವ ಒಂದು ವ್ಯವಸ್ಥೆಯ, ಅವರನ್ನು ಕಾಪಾಡುವ ಒಬ್ಬ ಆಡಳಿತಗಾರನ ಅಗತ್ಯವಿದೆ. ಗೌರವಾವನ್ವಿತ ಪ್ರವಾದಿಗಳು ಈ ಕರ್ತವ್ಯವನ್ನು ಅಲ್ಲಾಹನ ವತಿಯಿಂದ ಬಂದ ದಿವ್ಯ

ವಾಣಿಯ ಬೆಳಕಿನಲ್ಲಿ ನಿರ್ವಹಿಸುತ್ತಿದ್ದರು. ಅವರು ಜನರಿಗೆ ಸರಿಯಾದ ಹಾಗೂ ನೇರ ಮಾರ್ಗವನ್ನು ತೋರಿಸುತ್ತಿದ್ದರು. ಅವರನ್ನು ಅಲ್ಲಾಹನ ನಿಯಮದ ಆಧಾರದಲ್ಲಿ ಒಟ್ಟುಗೂಡಿಸುತ್ತಿದ್ದರು ಮತ್ತು ಅವರ ಮಧ್ಯೆ ಸತ್ಯದೊಂದಿಗೆ ತೀರ್ಪು ನೀಡುತ್ತಿದ್ದರು. ಜನರು ಈ ಪ್ರವಾದಿಗಳು ಮತ್ತು ಸಂದೇಶವಾಹಕರನ್ನು ಯಾವ ಪ್ರಕಾರ ಅನುಸರಿಸುತ್ತಿದ್ದರೋ ಅದೇ ಪ್ರಕಾರ, ಅವರ ವ್ಯವಹಾರಗಳು ಸರಿಯಾಗಿ ನಡೆಯುತ್ತಿದ್ದವು. ಅದೇ ರೀತಿ ಯಾರಿಗೆ ದೈವಿಕ ಸಂದೇಶಗಳ ಕಾಲವು ಎಷ್ಟು ಹತ್ತಿರವಾಗುತ್ತಿತ್ತೋ ಅವನು ಅಷ್ಟೇ ನೇರ ಮಾರ್ಗವನ್ನು ಅನುಸರಿಸುತ್ತಿದ್ದರು. ಆದರೆ ಈಗ ಸರ್ವಶಕ್ತನಾದ ಅಲ್ಲಾಹನು ಮುಹಮ್ಮದ್ صلي الله عليه وسلم ರ ಸಂದೇಶವಾಹಕತ್ವದೊಂದಿಗೆ ಸಂದೇಶವಾಹಕರು ಮತ್ತು ಪ್ರವಾದಿಗಳ ಸರಪಳಿಯನ್ನು ಕೊನೆಗೊಳಿಸಿದ್ದಾನೆ. ಅದನ್ನು ಶಾಶ್ವತಗೊಳಿಸಿದ್ದಾನೆ ಮತ್ತು ಅವರನ್ನು ಜನರಿಗೆ ಮಾರ್ಗದರ್ಶನ, ಕರುಣೆ, ಪ್ರಕಾಶ ಮತ್ತು ಅಲ್ಲಾಹನವರೆಗೆ ತಲುಪಿಸುವ ಮಾರ್ಗದ ಏಕೈಕ ಮಾರ್ಗದರ್ಶಕನನ್ನಾಗಿ ಮಾಡಿದ್ದಾನೆ.........................................................162

45. ಆದುದರಿಂದ ಓ ಮನುಷ್ಯನೇ! ಸಂಪ್ರದಾಯ ಮತ್ತು ಮೂಢನಂಬಿಕೆಗಳ ಸಂಕೋಲೆಗಳನ್ನು ಕಳಚಿ ನಿಜವಾದ ಹೃದಯ ಮತ್ತು ನಿಜವಾದ ಮನಸ್ಸಿನಿಂದ ಸರ್ವಶಕ್ತನಾದ ಅಲ್ಲಾಹನಿಗಾಗಿ ನಿಲ್ಲುವಂತೆ ನಾನು ನಿನ್ನನ್ನು ಪ್ರಾಮಾಣಿಕವಾಗಿ ಆಹ್ವಾನಿಸುತ್ತೇನೆ. ಮರಣಾನಂತರ ನೀನು ನಿನ್ನ ಪ್ರಭುವಿನ ಕಡೆಗೆ ಹಿಂತಿರುಗುವೆ ಎಂದು ನಿನಗೆ ತಿಳಿದಿದೆ. ನೀನು ನಿನ್ನ ದೇಹದ ಬಗ್ಗೆ ಯೋಚಿಸಿ ನೋಡಬೇಕೆಂದು ಮತ್ತು ನಿನ್ನ ಸುತ್ತಮುತ್ತಲಿನ ಪ್ರಪಂಚದ ಬಗ್ಗೆ ಚಿಂತಿಸಬೇಕೆಂದು ನಾನು ವಿನಂತಿಸುತ್ತೇನೆ. ನೀನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ ನೀನು ಇಹಲೋಕ ಮತ್ತು ಪರಲೋಕಗಳ ಸೌಭಾಗ್ಯ ಮತ್ತು ಆನಂದವನ್ನು ಪಡೆಯುವೆ. ನೀನು ಇಸ್ಲಾಮ್ ಧರ್ಮ ಸ್ವೀಕರಿಸಲು ಬಯಸಿದರೆ, ನೀನು ಮಾಡಬೇಕಾಗಿರುವುದು ಇಷ್ಟೇ: ಅಲ್ಲಾಹನ ಹೊರತು ಅನ್ಯ ನೈಜ ಆರಾಧ್ಯನಿಲ್ಲ ಮತ್ತು ಮುಹಮ್ಮದ್ صلي الله عليه وسلم ಅಲ್ಲಾಹನ ಸಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ನುಡಿಯುತ್ತೇನೆಂದು ಹೇಳುವುದು. ನಂತರ ನೀನು ಅಲ್ಲಾಹನ ಹೊರತು ಆರಾಧಿಸಲ್ಪಡುವ ಎಲ್ಲವನ್ನೂ ತ್ಯಜಿಸಬೇಕು. ಪುನರುತ್ಥಾನ ದಿನದಂದು ಅಲ್ಲಾಹನು ಎಲ್ಲಾ ಜನರನ್ನು ಅವರ ಸಮಾಧಿಗಳಿಂದ ಜೀವಂತ ಎಬ್ಬಿಸುತ್ತಾನೆಂದು ಮತ್ತು ಪರಲೋಕದ ವಿಚಾರಣೆ ಹಾಗೂ ಪ್ರತಿಫಲವು ಸತ್ಯವಾಗಿದೆ ಎಂದು ವಿಶ್ವಾಸವಿಡಬೇಕು. ಇಷ್ಟು ಮಾಡುವುದರಿಂದ ನೀನು ಮುಸಲ್ಮಾನನಾಗುವೆ. ಅದರ ನಂತರ ಅಲ್ಲಾಹನು ಕಡ್ಡಾಯಗೊಳಿಸಿದ ನಮಾಜ್, ಝಕಾತ್, ಉಪವಾಸ, ಸಾಮರ್ಥ್ಯವಿದ್ದರೆ ಹಜ್ಜ್

ಎಂಬ ಆರಾಧನೆಗಳೊಂದಿಗೆ  ಅಲ್ಲಾಹನನ್ನು ಆರಾಧಿಸುವುದು ನಿನ್ನ ಮೇಲೆ ಕಡ್ಡಾಯವಾಗಿದೆ.

..........................................................................................164